ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗಡಿ ಒಪ್ಪಂದಕ್ಕೆ ಮೋದಿ, ಷಿ ಒಪ್ಪಿಗೆ

ಬ್ರಿಕ್ಸ್ ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಲಡಾಖ್‌ನ ಗಡಿ ವಿವಾದ ಪರಿಹರಿಸುವುದಕ್ಕೆ ಸಂಬಂಧಿಸಿದ ಒಪ್ಪಂದವನ್ನು ಅನುಮೋದಿಸಿದರು.

ಪುಟ ತೆರೆದಂತೆ...

ರಾಜಕಾರಣಕ್ಕಿಂತ ಹೊಲಸಾದ ರಾಜ್ಯೋತ್ಸವ, ನೊಬೆಲ್ ಎಂಬ ಪ್ರಶಸ್ತಿಕಾರಣ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಒಂದು ನಗರ ಸಾಯುವುದು ಹೇಗೆ?

ಕಾಡುದಾರಿ
ಹರೀಶ್ ಕೇರ
ಸಂ.ಗಮ | 7

ಕಮಲಕ್ಕೆ ಕೈ ಕೊಟ್ಟು ಕಾಂಗ್ರೆಸ್‌ಗೆ ಜೈ ಎಂದ ಯೋಗಿ

ಕಾಂಗ್ರೆಸ್‌ಗೆ ಸೈನಿಕ

ಬೆಂಗಳೂರು: ಉಪಚುನಾವಣೆಯ ಅಖಾಡ ಕಾವೇರಿದ್ದು, ಜಿದ್ದಾಜಿದ್ದಿನ ಕ್ಷೇತ್ರವಾದ ಚನ್ನಪಟ್ಟಣದಲ್ಲಿ ಮೈತ್ರಿಗೆ ಕೈ ಕೊಟ್ಟಿರುವ ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ. ಇತ್ತ ಮೈತ್ರಿ ಪಕ್ಷಕ್ಕೆ ಅಭ್ಯರ್ಥಿಯ ಕೊರತೆ ಕಾಣುತ್ತಿದ್ದರೂ ಮಹಿಳಾ ಅಭ್ಯರ್ಥಿಯೊಬ್ಬರು ಅಖಾಡಕ್ಕೆ ಇಳಿಯುವ ಸೂಚನೆ ದೊರೆತಿದೆ. ಮೂರೂ ಕ್ಷೇತ್ರಗಳಲ್ಲಿ ಪಕ್ಷಗಳ ಅಭ್ಯರ್ಥಿಗಳು ಇಂದು ನಾಮಪತ್ರ ಸಲ್ಲಿಸುವ ಸಾಧ್ಯತೆ ಇದೆ.

ಮೈತ್ರಿಯಲ್ಲಿದ್ದ ಸಿ.ಪಿ.ಯೋಗೇಶ್ವರ್ ಅವರನ್ನು ಮಿಂಚಿನ ಕಾರ್ಯಾಚರಣೆಯಲ್ಲಿ ಕಾಂಗ್ರೆಸ್ ತನ್ನ ಬುಟ್ಟಿಗೆ ಹಾಕಿಕೊಂಡಿದೆ. ಕೆಪಿಸಿಸಿ ಕಚೇರಿಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಯೋಗೇಶ್ವರ್ ಅವರನ್ನು ಕಾಂಗ್ರೆಸ್‌ಗೆ ಬರಮಾಡಿಕೊಂಡರು.

ಈ ವೇಳೆ ಮಾತನಾಡಿದ ಸಿ.ಪಿ.ಯೋಗೇಶ್ವರ್, ನಾನು ಯಾವುದೇ ಒತ್ತಡವಿಲ್ಲದೆ, ಷರತ್ತು ವಿಧಿಸದೆ ಕಾಂಗ್ರೆಸ್ ಸೇರಿದ್ದೇನೆ. ತುಂಬಾ ವರ್ಷದಿಂದ ಕಾಂಗ್ರೆಸ್‌ನಲ್ಲೇ ಇದ್ದವನು. ಕಾಂಗ್ರೆಸ್‌ನಿಂದ ಹೋಗಿ ಮತ್ತೆ ಪಕ್ಷಕ್ಕೆ ವಾಪಸ್ ಬಂದಿದ್ದೇನೆ. ನಾವು ಕಟ್ಟಿದ ಮನೆಯಲ್ಲಿ ಒಮ್ಮೊಮ್ಮೆ ವಾಸ ಮಾಡಲು ಆಗಲ್ಲ. ಆದರೆ ಬಿಜೆಪಿಯಲ್ಲಿ ಪೂರಕ ವಾತಾವರಣ ಇರಲಿಲ್ಲ. ಹೀಗಾಗಿ ಕಾಂಗ್ರೆಸ್ ಸೇರಿದೆ. ಅಲ್ಲದೆ ಜಿಲ್ಲೆಯಲ್ಲಿ ಅಭಿವೃದ್ಧಿ ಮಾಡಬೇಕು. ಕಾಂಗ್ರೆಸ್ ಸರಕಾರದ ಯೋಜನೆಗಳು ನನ್ನನ್ನು ಪ್ರೇರೇಪಿಸಿವೆ ಎಂದರು. → 4

ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದ ಸಿ.ಪಿ.ಯೋಗೇಶ್ವರ್.

> ಯೋಗೇಶ್ವರ್ ಮತ್ತೆ ಮರಳಿ ಗೂಡಿಗೆ ಬಂದಿದ್ದಾರೆ. ಎಸ್‌ಪಿ, ಬಿಜೆಪಿ, ಸ್ವತಂತ್ರ ಅಭ್ಯರ್ಥಿಯಾಗಿ ಕೆಲಸ ಮಾಡಿದ್ದು, ರಾಜಕೀಯ ಸನ್ನಿವೇಶ ಬದಲಾದ ಕಾರಣಕ್ಕೆ ಮತ್ತೆ ನಮ್ಮೊಡನೆ ಕೈಜೋಡಿಸಿದ್ದಾರೆ.
> **ಡಿ.ಕೆ.ಶಿವಕುಮಾರ್**, ಡಿಸಿಎಂ

ಅನಸೂಯ ಇಲ್ಲವೇ ಅನಿತಾ ಕಣಕ್ಕೆ?

ಯೋಗೇಶ್ವರ್ ಎದುರು ಜೆಡಿಎಸ್ ಮಹಿಳಾ ಅಭ್ಯರ್ಥಿ ಕಣಕ್ಕಿಳಿಸುವ ಸಾಧ್ಯತೆ ಇದೆ. ಡಿ.ಕೆ.ಸುರೇಶ್ ಅವರನ್ನು ಡಾ.ಸಿ.ಎನ್.ಮಂಜುನಾಥ್ ಅವರ ಮೂಲಕ ಮಣಿಸಿ ಗೆದ್ದಿರುವ ಮೈತ್ರಿಕೂಟ, ಇದೇ ತಂತ್ರ ಚನ್ನಪಟ್ಟಣದಲ್ಲೂ ಮುಂದುವರಿಸುವ ಸಾಧ್ಯತೆ ಇದೆ. ಸಿ.ಎನ್.ಮಂಜುನಾಥ್ ಅವರ ಪತ್ನಿ ಅನಸೂಯ ಅವರನ್ನು ಚನ್ನಪಟ್ಟಣದಿಂದ ಕಣಕ್ಕಿಳಿಸುವ ಸಾಧ್ಯತೆ ಇದೆ. ಮತ್ತೊಂದೆಡೆ ಅನಸೂಯ ಅವರ ಸ್ಪರ್ಧೆ ಬಗ್ಗೆ ಪತಿ ಡಾ.ಮಂಜುನಾಥ್ ಅವರು ನಿರಾಕರಿಸಿದ್ದಾರೆ. ನನ್ನ ಪತ್ನಿ ಅನಸೂಯ ಅವರು ಸ್ಪರ್ಧೆ ಮಾಡುವುದಿಲ್ಲ. ಅವರು ಚನ್ನಪಟ್ಟಣದಲ್ಲಿ ನಿಲ್ಲುತ್ತಾರೆ ಎನ್ನುವುದು ಸುಳ್ಳು ಎಂದು ಹೇಳಿದ್ದಾರೆ. ಆದರೆ, ದೇವೇಗೌಡರು ಮಹಿಳಾ ಅಭ್ಯರ್ಥಿಯ ಅಸ್ತ್ರ ಬಿಟ್ಟಿದ್ದು, ಕೊನೆ ಕ್ಷಣದಲ್ಲಿ ಅನಸೂಯ ಅವರ ಹೆಸರು ಅಲ್ಲದಿದ್ದರೂ ಅನಿತಾ ಕುಮಾರಸ್ವಾಮಿ ಹೆಸರು ಘೋಷಣೆ ಮಾಡುವ ಸಾಧ್ಯತೆ ಇದೆ.

ಇದುವರೆಗೂ 13 ಮಂದಿ ರಕ್ಷಣೆ | ಕಟ್ಟಡದ ಮಾಲೀಕ, ಗುತ್ತಿಗೆದಾರನ ಬಂಧನ

ಕಟ್ಟಡ ಕುಸಿತ: ಸಾವಿನ ಸಂಖ್ಯೆ 8ಕ್ಕೆ ಏರಿಕೆ

ಬೆಂಗಳೂರು: ನಗರದ ಬಾಬುಸಾಬ್ ಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡ ಕುಸಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತಪಟ್ಟವರ ಸಂಖ್ಯೆ 8ಕ್ಕೆ ಏರಿಕೆಯಾಗಿದೆ.

ಬಿಹಾರ ಮೂಲದ ಕಾರ್ಮಿಕ ಮೊಹಮ್ಮದ್ ಸಾಹಿಲ್, ತಿರುಪಾಲಿ, ಅರ್ಮಾನ್, ಶಂಕರ್, ಸತ್ಯರಾಜ್, ಸೋಲೋ ಪಾಸ್ವಾನ್ ಎಂಬುವವರ ಮೃತದೇಹಗಳು ಬುಧವಾರ ಪತ್ತೆ ಯಾಗಿವೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮತ್ತು ಅಗ್ನಿಶಾಮಕ ಸಿಬ್ಬಂದಿಯಿಂದ ಕಾರ್ಯಾಚರಣೆ ಮುಂದು ವರಿದಿದ್ದು, ಇದುವರೆಗೂ 13 ಜನ ಕಾರ್ಮಿಕರನ್ನು ರಕ್ಷಣೆ ಮಾಡಲಾಗಿದೆ.

ಕಳಪೆ ಕಾಮಗಾರಿಯೇ ಘಟನೆಗೆ ಕಾರಣ: ಬಾಬುಸಾಬ್ ಪಾಳ್ಯದಲ್ಲಿ ಕಳೆದ ಎಂಟು ತಿಂಗಳಿಂದ ನಿರ್ಮಾಣ ಹಂತದ ಲ್ಲಿದ್ದ ಆರು ಅಂತಸ್ತಿನ ಕಟ್ಟಡವೊಂದು ಮಂಗಳವಾರ ಮಧ್ಯಾಹ್ನ ಕುಸಿದುಬಿದ್ದಿತ್ತು. ಈ ಕಟ್ಟಡ ನಿರ್ಮಾಣದಲ್ಲಿ ಪಿಲ್ಲರ್ ರಾಡ್ 28-30 ಎಂಎಂ ರಾಡ್ ಹಾಕಬೇಕಿತ್ತು. ಆದರೆ 18-20 ಎಂಎಂ ರಾಡ್ ಬಳಸಿದ್ದಾರೆ. 14-16 ರಾಡ್ ಹಾಕಿ ಮೋಲ್ಡಿಂಗ್ ಮಾಡಬೇಕಿತ್ತು, ಆದರೆ 8-10 ಎಂಎಂ ರಾಡ್ ಬಳಸಿದ್ದಾರೆ. ಎಂಸ್ಯಾಂಡ್ ಹೆಚ್ಚು ಬಳಸಿ, ಸಿಮೆಂಟ್ ಕಡಿಮೆ ಬಳಸಿ ರುವ ಶಂಕೆ ವ್ಯಕ್ತವಾಗಿದೆ. ಘಟನೆಗೆ ಕಳಪೆ ಕಾಮಗಾರಿಯೇ ಕಾರಣ ಎಂದು ಮೇಲ್ನೋಟಕ್ಕೆ ತಿಳಿದು ಬಂದಿದೆ. → 4

ಕಟ್ಟಡದ ಅವಶೇಷಗಳಡಿ ಸಿಲುಕಿದವರನ್ನು ರಕ್ಷಣೆ ಮಾಡುತ್ತಿರುವ ಎನ್‌ಡಿಆರ್‌ಎಫ್ ತಂಡ.

- ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ ಜಿ.ಹೊಸಹಳ್ಳಿ ಗ್ರಾಮದಲ್ಲಿ ಮನೆ ಗೋಡೆ ಕುಸಿದು ಮಹಿಳೆಯೊಬ್ಬರು ಸಾವು
- ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಅಣೆಚನ್ನಾಪುರ ದಲ್ಲಿ ಕೆರೆ ಕೋಡಿಗೆ ಕೊಚ್ಚಿ ಹೋಗಿ ಬೈಕ್ ಸವಾರ ಸಾವು
- ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕಿನ ಉಪ್ಪಿನಹಳ್ಳಿ, ಬಿಸಿಲೇಹಳ್ಳಿ ಯಲ್ಲಿ ತಲಾ ಒಂದು ಹಸು, ಜೋಡಿ ತಿಮ್ಮಾಪುರದಲ್ಲಿ 2 ಹಸು ಸಾವು

> ಮನೆಗೆ ನೀರು ನುಗ್ಗಿ ತೊಂದರೆ ಎದುರಿಸುತ್ತಿರುವವರಿಗೆ ತಲಾ 10,000 ಸಾವಿರ ಪರಿಹಾರ, ವಸತಿ ಇಲ್ಲದವರಿಗೆ ವಾಸಿಸಲು ತಾತ್ಕಾಲಿಕ ವಸತಿ ಹಾಗೂ ಊಟದ ವ್ಯವಸ್ಥೆ ಕಲ್ಪಿಸಲಾಗುವುದು. ನಗರದಾದ್ಯಂತ ಮುಲಾಜಿಲ್ಲದೆ ರಾಜಕಾಲುವೆ ಒತ್ತುವರಿ ತೆರವಿಗೆ ಸೂಚನೆ ನೀಡಲಾಗಿದೆ.
> **ಡಿ.ಕೆ.ಶಿವಕುಮಾರ್** ಡಿಸಿಎಂ

ಕುಂಭಕೋಣಂನಲ್ಲಿ 1,500 ವರ್ಷಗಳ ಹಿಂದಿನ ದೇವಸ್ಥಾನ ಜೀರ್ಣೋದ್ಧಾರ

ಪಾಳುಬಿದ್ದ ಶಿವಲಿಂಗಕ್ಕೆ ಮಂದಿರ ನಿರ್ಮಿಸಿದ ಸುಧಮ್ಮ

ಬೆಂಗಳೂರು: ಇನ್ಫೊಸಿಸ್ ಪ್ರತಿಷ್ಠಾನದ ಸಂಸ್ಥಾಪಕಿ, ಜನಪ್ರಿಯ ಲೇಖಕಿ ಮತ್ತು ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ ಅವರು ತಮಿಳುನಾಡಿನ ಕುಂಭಕೋಣಂನಲ್ಲಿ ಶಿವನ ದೇವಾಲಯ ನಿರ್ಮಿಸಿದ್ದಾರೆ. ವಿಶೇಷವೆಂದರೆ ಇಲ್ಲಿಯ ಶಿವಲಿಂಗ ಸುಮಾರು 1,500 ವರ್ಷಗಳಷ್ಟು ಹಳೆಯದು. ಆದರೆ ಸೂಕ್ತ ಮಂದಿರದ ಆಸರೆ ಇಲ್ಲದೆ ಈ ವಿಗ್ರಹ ಪಾಳು ಬಿದ್ದಿತ್ತು. ಶೀ ವೈದ್ಯನಾಥ ಸ್ವಾಮಿ ಹೆಸರಿನ ಈ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ಇತ್ತೀಚೆಗೆ ಸುಧಾಮೂರ್ತಿಯವರ ನೇತೃತ್ವದಲ್ಲಿ ಅದ್ಧೂರಿಯಾಗಿ ಮತ್ತು ವಿಧಿವತ್ತಾಗಿ ನಡೆಯಿತು. → 4

> ಕುಂಭಕೋಣಂನಲ್ಲಿ ಪಾಳು ಬಿದ್ದ ದೇವಾಲಯವೊಂದು ಇರುವುದನ್ನು ಅಲ್ಲಿಯ ಜನ ನನ್ನ ಗಮನಕ್ಕೆ ತಂದು ನೆರವು ಕೋರಿದರು. ಸಾವಿರಾರು ವರ್ಷಗಳ ಹಿಂದಿನ ಶಿವಲಿಂಗ ಇರುವುದಾಗಿಯೂ ತಿಳಿಸಿದರು. ನಾನು ಅಲ್ಲಿ ಹೋಗಿ ನೋಡಿದಾಗ ಶಿವಲಿಂಗ ಬಿಟ್ಟು ಬೇರೇನೂ ಇರಲಿಲ್ಲ. 2 ಕೋಟಿ ರು. ವೆಚ್ಚದಲ್ಲಿ ದೇವಾಲಯ ನಿರ್ಮಿಸಿದ್ದೇನೆ.
> – **ಸುಧಾಮೂರ್ತಿ**, ರಾಜ್ಯಸಭೆ ಸದಸ್ಯೆ

ಮಾಲತಿ ಪಟ್ಟಣಶೆಟ್ಟಿ, ವೀಣಾ ಶಾಂತೇಶ್ವರ, ವೈದೇಹಿ, ಬಿ.ಟಿ.ಲಲಿತಾ ನಾಯಕ್ ಹೆಸರು ಮುಂಚೂಣಿಯಲ್ಲಿ

ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಮಹಿಳೆಗೆ?

ಹರೀಶ್ ಕೇರ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಗೆ ಮಹಿಳಾ ಸಾಹಿತಿಯೊಬ್ಬರನ್ನು ಆಯ್ಕೆ ಮಾಡಲು ಕನ್ನಡ ಸಾಹಿತ್ಯ ಪರಿಷತ್ತು ನಿರ್ಧರಿಸಿದ್ದು, ಇದೇ ತಿಂಗಳ 28ರೊಳಗೆ ಹೆಸರು ಅಂತಿಮವಾಗಲಿದೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಕೆಲವು ಹಿರಿಯ ಲೇಖಕಿಯರ ಹೆಸರುಗಳು ಸಂಭಾವ್ಯ ಅಧ್ಯಕ್ಷತೆಗೆ ಸಂಬಂಧಿಸಿ ಹರಿದಾಡುತ್ತಿವೆ.

2024ರ ಡಿಸೆಂಬರ್ 20ರಿಂದ ಮೂರು ದಿನ ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧತೆಗಳು ಭರದಿಂದ ನಡೆದಿವೆ. ಈ ಸಮ್ಮೇಳನದ ಅಧ್ಯಕ್ಷತೆಗೆ ಸಾಹಿತ್ಯೇತರ ಕ್ಷೇತ್ರಗಳ ಹಿರಿಯ ಸಾಧಕರನ್ನು ಆಯ್ಕೆ ಮಾಡುವ ಬೇಡಿಕೆಯಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಈ ಹಿಂದೆ ಹೇಳಿದ್ದರು. → 4

- 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಭರದ ಸಿದ್ಧತೆ
- ಡಿ.20ರಿಂದ ಮೂರು ದಿನ ಮಂಡ್ಯದಲ್ಲಿ ಸಾಹಿತ್ಯ ಸಮ್ಮೇಳನ

ಈವರೆಗೆ ನಾಲ್ವರು ಮಹಿಳೆಯರಿಗಷ್ಟೇ ಸ್ಥಾನ

ಇದುವರೆಗಿನ ಸಾಹಿತ್ಯ ಸಮ್ಮೇಳನ ಚರಿತ್ರೆಯಲ್ಲಿ ನಾಲ್ವರು ಲೇಖಕಿಯರು ಮಾತ್ರ ಅಧ್ಯಕ್ಷರಾಗಿದ್ದಾರೆ. ಇಲ್ಲಿಯವರೆಗೆ ನಡೆದ 86 ಸಮ್ಮೇಳನಗಳಲ್ಲಿ ಕೇವಲ ನಾಲ್ಕು ಮಹಿಳೆಯರು- ಜಯದೇವಿತಾಯಿ ಲಿಗಾಡೆ (1974), ಶಾಂತಾದೇವಿ ಮಾಳವಾಡ (2000), ಕಮಲಾ ಹಂಪನಾ (2003) ಮತ್ತು ಗೀತಾ ನಾಗಭೂಷಣ (2010) ಅಧ್ಯಕ್ಷರಾಗಿದ್ದಾರೆ. ಹೀಗಾಗಿ, ಈ ಬಾರಿ ಮಹಿಳೆಯೊಬ್ಬರನ್ನು ಆಯ್ಕೆ ಮಾಡಲೇಬೇಕು ಎಂಬ ಒತ್ತಾಯ ಲೇಖಕಿಯರ ವಲಯದಿಂದಲೂ ಇದೆ.

ದಾರಿದೀಪೋಕ್ತಿ

ಏನೇ ಮಾಡಿದರೂ ಒಳ್ಳೆಯ ಮನಸ್ಸಿನಿಂದ, ಒಳ್ಳೆಯ ಭಾವನೆಯಿಂದ ಮಾಡಬೇಕು. ಯಾವುದೇ ಪ್ರತಿಫಲಾಪೇಕ್ಷೆಯನ್ನು ಇಟ್ಟುಕೊಳ್ಳಬಾರದು. ಯಾರೋ ಬಂದು ನಮಗೆ ಉಪಕಾರ ಮಾಡಬೇಕು ಎಂದು ಬಯಸಬಾರದು. ಆಗ ನಮಗೆ ಯಾರೂ ಬೇಸರ, ನಿರಾಸೆಯನ್ನು ಮಾಡಲಾರರು.

ವಕ್ರತುಂಡೋಕ್ತಿ

ಕೆಲವರು ರಾಣಿಯರಂತೆ ವರ್ತಿಸುತ್ತಾರೆ. ಅವರಿಗೆ ಒಳ್ಳೆಯ ಡ್ರೆಸ್ ಮಾಡಿಕೊಂಡು, ತಮ್ಮನ್ನು ಆಳುವುದು ಹೇಗೆ ಎಂಬುದು ಗೊತ್ತಿರುತ್ತದೆ.

ನಾಮಪತ್ರ ಸಲ್ಲಿಸಿದ ಪ್ರಿಯಾಂಕಾ ಗಾಂಧಿ

ವಯನಾಡ್: ವಯನಾಡ್ ಲೋಕಸಭಾ ಕ್ಷೇತ್ರದ ಉಪಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಪ್ರಿಯಾಂಕಾ ಗಾಂಧಿ ವಾದ್ರಾ ನಾಮಪತ್ರ ಸಲ್ಲಿಸಿದರು. ಮಂಗಳವಾರ ರಾತ್ರಿಯೇ ಕಾಲಪೆಟ್ಟಾಗೆ ಆಗಮಿಸಿದ ಪ್ರಿಯಾಂಕಾಗೆ ಸಾವಿರಾರು ಕಾರ್ಯಕರ್ತರು ಮತ್ತು ಯುಡಿಎಫ್ ಸದಸ್ಯರು ಭರ್ಜರಿ ಸ್ವಾಗತ ನೀಡಿದರು. ತಾಯಿ ಸೋನಿಯಾ ಗಾಂಧಿ ಮತ್ತು ಸಹೋದರ ರಾಹುಲ್ ಗಾಂಧಿ ಜತೆ ತೆರೆದ ವಾಹನದಲ್ಲಿ ಭರ್ಜರಿ ರೋಡ್ ಶೊ ನಡೆಸಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ರಾಷ್ಟ್ರೀಯ ಸ್ವಾಸ್ಥ್ಯ ಮಿಶನ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಹಾಗೂ ನಿರ್ವಹಣೆಯ ಮಹತ್ವಾಕಾಂಕ್ಷಿ "ಗೃಹ ಆರೋಗ್ಯ" ಯೋಜನೆಗೆ ಶ್ರೀ ಸಿದ್ದರಾಮಯ್ಯ ಸನ್ಮಾನ್ಯ ಮುಖ್ಯಮಂತ್ರಿಗಳು ರವರಿಂದ ಚಾಲನೆ

ದಿನಾಂಕ: 24-10-2024 | ಸಮಯ: ಮಧ್ಯಾಹ್ನ 03:00 ಕ್ಕೆ | ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನ ಸೌಧ, ಬೆಂಗಳೂರು.
ವಿಡಿಯೋ ಕಾನ್ಫರೆನ್ಸ್ ಮುಖಾಂತರ ಫಲಾನುಭವಿಗಳೊಂದಿಗೆ ಸಂವಾದ, ಜಿಲ್ಲಾಧಿಕಾರಿಗಳ ಸಭಾಂಗಣ, ಕೋಲಾರ ಜಿಲ್ಲೆ.

ಗೃಹ ಆರೋಗ್ಯ ಯೋಜನೆಯ ಪ್ರಮುಖ ಅಂಶಗಳು:

ಆರೋಗ್ಯ ಕಾರ್ಯಕರ್ತರ ತಂಡ ಗ್ರಾಮೀಣ ಭಾಗದ 30 ವರ್ಷ ಮೇಲ್ಪಟ್ಟ ಎಲ್ಲಾ ನಾಗರೀಕರ ಮನೆಗಳಿಗೆ ಭೇಟಿ ನೀಡಿ ಪ್ರಮುಖ 6 ಅಸಾಂಕ್ರಾಮಿಕ ರೋಗಗಳಾದ ಮಧುಮೇಹ (ಸಕ್ಕರೆ ಕಾಯಿಲೆ), ಅಧಿಕ ರಕ್ತದೊತ್ತಡ (BP) ಸಂಬಂಧ ಪರೀಕ್ಷೆ ಮತ್ತು ಬಾಯಿ, ಸ್ತನ, ಗರ್ಭಕಂಠದ ಕ್ಯಾನ್ಸರ್ ಹಾಗೂ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಹಂತದ ತಪಾಸಣೆ →
ಅಸಾಂಕ್ರಾಮಿಕ ರೋಗಗಳಿಗೆ ಪ್ರಮುಖ ಕಾರಣಗಳಾದ - ಸ್ಲೀಪ್ ಅಪ್ನಿಯಾ (ನಿದ್ರೆಯಲ್ಲಿ ಉಸಿರುಕಟ್ಟುವಿಕೆ), BMI ಅಸಮತೋಲನ, ಧೂಮಪಾನ ಮತ್ತು ಮದ್ಯಪಾನ, ವ್ಯಸನ ಮುಕ್ತದ ಬಗ್ಗೆ ಆರೋಗ್ಯ ಶಿಕ್ಷಣ ಮತ್ತು ಆಪ್ತ ಸಮಾಲೋಚನೆಯ ಮುಖಾಂತರ ನಿಯಂತ್ರಣಕ್ಕೆ ಕ್ರಮ

ಆಯುಷ್ ಪದ್ಧತಿಯ ಸಂವರ್ಧನೆ ಮೂಲಕ ಜೀವನಶೈಲಿ ಮಾರ್ಪಾಡು ಹಾಗೂ ಚಿಕಿತ್ಸಾ ಕ್ರಮಗಳಿಂದ ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಹಾಗೂ ನಿರ್ವಹಣೆ →
ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಕಾಯಿಲೆಗಳಿಗೆ ವೈದ್ಯರ ಸಲಹೆಯಂತೆ ನಿರಂತರ ಉಚಿತ ಔಷಧಿಗಳ ವಿತರಣೆ →
ಅಸಾಂಕ್ರಾಮಿಕ ರೋಗಗಳನ್ನು ಪ್ರಾರಂಭಿಕ ಹಂತದಲ್ಲೇ ಪತ್ತೆ ಹಚ್ಚಿ, ನಿರಂತರ ಉಚಿತ ತಪಾಸಣೆ ಹಾಗೂ ಚಿಕಿತ್ಸೆಯ ಮೂಲಕ ಅಡ್ಡ ಪರಿಣಾಮ ಮತ್ತು ಅಕಾಲಿಕ ಮರಣ ತಡೆಗಟ್ಟುವುದು ಯೋಜನೆಯ ಪ್ರಮುಖ ಉದ್ದೇಶ

ಗೃಹ ಆರೋಗ್ಯ
ಆರೋಗ್ಯ ಸೇವೆ ಮನೆ ಬಾಗಿಲಿಗೆ

ಪ್ರಾರಂಭಿಕವಾಗಿ ಕೋಲಾರ ಜಿಲ್ಲೆಯಲ್ಲಿ ಜಾರಿ
ಜನವರಿ 2025 ರಿಂದ ರಾಜ್ಯಾದ್ಯಂತ ವಿಸ್ತರಣೆ

ಸನ್ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಸಿದ್ದರಾಮಯ್ಯ ರವರು ಹಾಗೂ ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಆರೋಗ್ಯ ಸಚಿವರು ಇಲಾಖಾ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು

"ದೇಶದ ಕಾಡು, ವನ್ಯಜೀವಿ, ನದಿಗಳು ಒಳಗೊಂಡಂತೆ ಪರಿಸರ ಉಳಿಸಿ ಬೆಳೆಸುವುದು" - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ | ನಿಮ್ಮ ಆರೋಗ್ಯ, ನಮ್ಮ ಆದ್ಯತೆ.

ಸಮಾಚಾರ ಸಣ್ಣದಲ್ಲ

ಶಿಗ್ಗಾಂವ; ಮೂರು ನಾಮಪತ್ರ ಸಲ್ಲಿಕೆ

ಹಾವೇರಿ: ಶಿಗ್ಗಾಂವ ಕ್ಷೇತ್ರದ ಉಪ ಚುನಾವಣೆಗೆ ಬುಧವಾರ ಪಕ್ಷೇತರ ಅಭ್ಯರ್ಥಿಗಳಾಗಿ ಶ್ರೀಕಾಂತಗೌಡ ಪೊಲೀಸಗೌಡ್ರ, ರಾಜು ನಾಯಕವಾಡಿ ಹಾಗೂ ಶಂಕ್ರಪ್ಪ ಹುಲಸೋಗಿ ಅವರು ತಲಾ ಒಂದರಂತೆ ಮೂರು ನಾಮಪತ್ರ ಸಲ್ಲಿಸಿದ್ದಾರೆ. ಶಿಗ್ಗಾಂವ ತಹಶೀಲ್ದಾರ ಕಚೇರಿಯಲ್ಲಿ ಸವಣೂರ ಉಪ ವಿಭಾಗಾಧಿಕಾರಿ ಹಾಗೂ ಚುನಾವಣಾಧಿಕಾರಿ ಮಹ್ಮದ್ ಖಿಜರ್ ಅವರಿಗೆ ನಾಮಪತ್ರ ಸಲ್ಲಿಸಿದರು. ತಹಶೀಲ್ದಾರ ಹಾಗೂ ಸಹಾಯಕ ಚುನಾವಣಾಧಿಕಾರಿ ಸಂತೋಷ ಹಿರೇಮಠ ಅವರು ಉಪಸ್ಥಿತರಿದ್ದರು. ಈವರೆಗೆ ಆರು ಅಭ್ಯರ್ಥಿಗಳಿಂದ 13 ನಾಮಪತ್ರ ಸಲ್ಲಿಕೆಯಾಗಿವೆ. ಅ.25 ರಂದು ನಾಮಪತ್ರ ಸಲ್ಲಿಕೆಗೆ ಕೊನೆಯ ದಿನಾಂಕವಾಗಿದೆ. ಅ.28 ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ ಹಾಗೂ ಅ.30 ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನಾಂಕವಾಗಿದೆ.

ಬಿಜೆಪಿಗೆ ಯಾವುದೇ ಬಂಡಾಯವಿಲ್ಲ

ಹಾವೇರಿ: ಶಿಗ್ಗಾಂವ ಕ್ಷೇತ್ರದಲ್ಲಿ ಬಿಜೆಪಿಗೆ ಯಾವುದೇ ರೀತಿಯ ಬಂಡಾಯ ಇಲ್ಲ. ಚುನಾವಣೆ ಸಂದರ್ಭದಲ್ಲಿ ಈ ರೀತಿಯ ಬೆಳವಣಿಗೆಗಳು ನಡೆಯುತ್ತವೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಶಿಗ್ಗಾಂವ ಯಲ್ಲಿ ಮಾಧ್ಯಮ ಗಳೊಂದಿಗೆ ಮಾತನಾಡಿದ ಅವರು, ಶಿಗ್ಗಾವಿ ಕ್ಷೇತ್ರದಲ್ಲಿ ಬಿಜೆಪಿಗೆ ಬಂಡಾಯ ಎದುರಾಗಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿಗೆ ಯಾವುದೇ ರೀತಿಯ ಬಂಡಾಯ ಇಲ್ಲ. ಚುನಾವಣೆಯ ಸಂದರ್ಭದಲ್ಲಿ ಈ ರೀತಿಯ ಬೆಳವಣಿಗೆಗಳು ನಡೆಯುತ್ತವೆ. ಕಾಂಗ್ರೆಸ್ ಅಭ್ಯರ್ಥಿ ಯಾರೇ ನಿಂತರೂ ಕೂಡ ನಾವು ಚುನಾವಣೆಯನ್ನು ಅತ್ಯಂತ ಸ್ಪರ್ಧಾತ್ಮಕವಾಗಿ ಮಾಡುತ್ತೇವೆ.

ಸೌಹಾರ್ದಯುತವಾಗಿ ಚುನಾವಣೆ ಮಾಡುತ್ತೇವೆ ಎಂದು ಹೇಳಿದರು. ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ನಾಮಪತ್ರ ಸಲ್ಲಿಕೆಯ ದಿನ ಬಿಜೆಪಿ ರಾಜ್ಯ ನಾಯಕರಾದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಹಿರಿಯ ನಾಯಕರು ಆಗಮಿಸಲಿದ್ದಾರೆ ಎಂದು ಹೇಳಿದರು. ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಸೇರಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಿ.ಪಿ ಯೋಗೇಶ್ವರ ಅವರನ್ನು ಪಕ್ಷದಲ್ಲಿ ಉಳಿಸಿಕೊಳ್ಳಲು ಬಹಳ ಪ್ರಯತ್ನ ಮಾಡಿದ್ದೇವೆ. ಅವರು ಕಾಂಗ್ರೆಸ್ ಸೇರಿರುವುದು ದೊಡ್ಡ ದುರಂತ. ಕಾಂಗ್ರೆಸ್‌ಗೆ ಯಾರೂ ಅಭ್ಯರ್ಥಿ ಇರಲಿಲ್ಲ. ಅಲ್ಲಿ ಸುಲಭವಾಗಿ ಎನ್‌ಡಿಎ ಅಭ್ಯರ್ಥಿ ಗೆಲ್ಲಬಹುದು. ಈಗಲೂ ಆ ಕ್ಷೇತ್ರದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಪ್ರಭಾವ ಇದೆ. ಹಿಂದೆ ಬಿಜೆಪಿ ಜೆಡಿಎಸ್, ಕಾಂಗ್ರೆಸ್ ಮೂರು ಪಕ್ಷಗಳು ಸ್ಪರ್ಧೆ ಮಾಡಿ ತ್ರಿಕೋನ ಸ್ಪರ್ಧೆ ಇದ್ದಾಗಲೂ ಕುಮಾರಸ್ವಾಮಿಯವರು ಗೆಲುವು ಸಾಧಿಸಿದ್ದಾರೆ. ಈ ಉಪ ಚುನಾವಣೆಯಲ್ಲಿಯೂ ಜೆಡಿಎಸ್ ಅಭ್ಯರ್ಥಿಯೇ ಗೆಲ್ಲುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದು ಹೇಳಿದರು.

ಜೇನು ಕೃಷಿಯನ್ನೇ ಉದ್ಯಮವಾಗಿಸಬಹುದು

ತರಬೇತಿ ಕಾರ್ಯಾಗಾರದಲ್ಲಿ ಗ್ರಾಮೋದ್ಯೋಗ ಆಯೋಗದ ನಿರ್ದೇಶಕ ಬಸವರಾಜ್ ಅಭಿಪ್ರಾಯ

ಶಿರಸಿ: ವೈಜ್ಞಾನಿಕ ಪದ್ಧತಿಯಲ್ಲಿ ಜೇನು ಕೃಷಿ ಕಲಿತದೆ ಇದನ್ನು ದೊಡ್ಡ ಉದ್ಯಮವಾಗಿ ಬೆಳೆಸಬಹುದು ಎಂದು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ನಿರ್ದೇಶಕ ಬಸವರಾಜ್ ಹೇಳಿದರು.

ನಗರದ ಟಿಎಂಎಸ್ ಹಾಲ್ ನಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಹಾಗೂ ಸ್ಕೊಡ್ ವೆಸ್ ಸಂಯುಕ್ತ ಆಶ್ರಯದಲ್ಲಿ ಬುಧವಾರ ಹಮ್ಮಿಕೊಂಡ ರಾಜ್ಯಮಟ್ಟದ ಜೇನು ಕೃಷಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಜೇನು ಕೃಷಿ ಉದ್ಯಮವಾಗಿ ಮಾಡಿದರೆ ಸಾಕಷ್ಟು ಲಾಭದಾಯಕವಾಗಿದೆ. ಜೇನಿನಿಂದ ಎರಡು ಸಾವಿಕ್ಕೂ ಹೆಚ್ಚಿನ ಪ್ರಾಡಕ್ಟ್‌ಗಳು ತಯಾರಾಗುತ್ತವೆ. ಈ ಬಗ್ಗೆ ಹೆಚ್ಚಿನ ಜನರಿಗೆ ಗೊತ್ತೇ ಇಲ್ಲ. ಪಶ್ಚಿಮ ಘಟ್ಟದ ಜೇನು ಆರೋಗ್ಯಕಾರಿಯಾಗಿದ್ದು, ಇಲ್ಲಿನ ಜೇನು ತುಪ್ಪ ಸಾಕಷ್ಟು ಆರೋಗ್ಯಕರವಾಗಿದ್ದು, ಕ್ಯಾನ್ಸರ್‌ನಂಥ ರೋಗವನ್ನೂ ಗುಣಪಡಿಸುವ ಶಕ್ತಿ ಜೇನುತುಪ್ಪಕ್ಕಿದೆ ಎಂದರು.

ಪಶ್ಚಿಮ ಘಟ್ಟ ಪ್ರದೇಶದಲ್ಲಿ ಜೇನು ಕೃಷಿಯನ್ನು ಉತ್ತೇಜಿಸಲು ಖಾದಿ ಮತ್ತು ಗ್ರಾಮೋದ್ಯೋಗ ಪ್ರಯತ್ನ ಮಾಡುತ್ತಿದ್ದು, ಶಿರಸಿಯಲ್ಲಿ ಜೇನು

ಕೃಷಿಕರ ಕ್ಲಸ್ಟ್ ಆರಂಭಿಸಲು ಕೂಡ ಚಿಂತನೆ ನಡೆದಿದೆ. ಆಸಕ್ತ ಜೇನು ಕೃಷಿಕರಿಗೆ ಖಾದಿ ಗ್ರಾಮೋದ್ಯೋಗದಿಂದ ಒಬ್ಬರಿಗೆ 10 ಜೇನು ಪೆಟ್ಟಿಗೆ ನೀಡುವ ಯೋಜನೆ ತರಲಿದ್ದೇವೆ. ಈ ಹಿನ್ನೆಲೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗದಿಂದ ಜೇನು ಕಾರ್ಯಾಗಾರ ಹಮ್ಮಿಕೊಂಡಿದ್ದು, ಸ್ಕೊಡ್‌ವೆಸ್ ನಮಗೆ ಸಹಕಾರ ಮಾಡುತ್ತಿದೆ. ಕೇವಲ ಎರಡು ದಿನಗಳಲ್ಲಿ ಜೇನು ಕೃಷಿ ರಾಜ್ಯಮಟ್ಟದ ಜೇನು ಕಾರ್ಯಾಗಾರ ಹಮ್ಮಿಕೊಂಡು ಯಶಸ್ವಿಯಾಗಿಸಿದ ಶ್ರೇಯ ಸ್ಕೊಡ್ ವೆಸ್ ಸಂಸ್ಥೆಗೆ ಸಲ್ಲಬೇಕಿದೆ ಎಂದರು.

ಶಿರಸಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಅಜ್ಜಯ್ಯ ಮಾತನಾಡಿ, ಜೇನು ಕೃಷಿಯಿಂದ ನಮಗೆ ಉದ್ಯೋಗಾವಕಾಶದ ಜೊತೆಗೆ ಆದಾಯ ಮೂಲವನ್ನಾಗಿಯೂ ಮಾಡಿಕೊಳ್ಳಬಹುದು. ಜಿಲ್ಲೆಯಲ್ಲಿ ಅತ್ಯುತ್ತಮ ಅವಕಾಶವಿದೆ. ಜೇನು ಕೃಷಿ ಯೋಜನೆಗೆ ಜನರ ಸಹಭಾಗಿತ್ವ ಅತ್ಯಂತ ಮುಖ್ಯ. ಹಾಲು ಉತ್ಪಾದಕರ ಸಂಘದಂತೆ ಜೇನು ಕೃಷಿಯಲ್ಲೂ ಮಾಡಬಹುದಾಗಿದೆ ಎಂದರು.

ಅರಣ್ಯ ಮಹಾವಿದ್ಯಾಲಯದ ಡೀನ್ ಡಾ. ವಾಸುದೇವ ಮಾತನಾಡಿ, ಜೇನನ್ನು ಆಹಾರವಾಗಿ ಸ್ವೀಕರಿಸುವ ಪದ್ದತಿ ಮೊದಲು ನಮ್ಮಲ್ಲಿ ಇರಲಿಲ್ಲ. ಆಯುರ್ವೇದದ ಔಷಧವಾಗಿ ಜೇನು ಸ್ವೀಕರಿಸುತ್ತಿದ್ದೆವು. ಆದರೆ ಇತ್ತೀಚೆಗೆ ಜೇನಿಗೆ ವಿಶ್ವದಾದ್ಯಂತ ಬೇಡಿಕೆ ಹೆಚ್ಚುತ್ತಿದೆ. ಆದರೆ ಸಕ್ಕರೆ ಪಾಕ ನೀಡಿ ಜೇನು ಕಾಪಾಡುವ ಪರಿಸ್ಥಿತಿ ಬಂದಿದೆ. ಇಂಗ್ಲೆಂಡ್ ದೇಶ ಜೇನಿಗೆ ಬೇಕಾದ ಸಸ್ಯ ಪ್ರಬೇಧವನ್ನು ಬೆಳೆಸುವಂಥ ಕಾನೂನನ್ನೇ ತಂದಿದೆ. ಅಂಥ ನಿಯಮವನ್ನು ನಾವೂ ಅಳವಡಿಸಿಕೊಂಡರೆ ಇಲ್ಲಿಯೂ ಜೇನು ಕೃಷಿ ಯಶಸ್ವಿಗೊಳಿಸಲು ಸಾಧ್ಯ ಎಂದರು.

ಇದಕ್ಕೂ ಮುನ್ನ ಪ್ರಸ್ತಾವಿಕವಾಗಿ ಮಾತನಾಡಿದ ಸ್ಕೊಡ್‌ವೆಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶದ ಡಾ. ವೆಂಕಟೇಶ ನಾಯ್ಕ, ಜಿಲ್ಲೆಯಲ್ಲಿರು 80 ರಷ್ಟು ಅರಣ್ಯ ಕಡಿಮೆ ಆಗಿದೆ. ಅರಣ್ಯ ಉತ್ಪನ್ನಗಳು ಕಡಿಮೆಯಾಗಿದೆ. ಅರಣ್ಯ ಜೇನು ನಶಿಸಿಹೋಗುವ ಹಂತದಲ್ಲಿವೆ. ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸಲು ಕಾರ್ಯಾಗಾರ ಹಮ್ಮಿಕೊಳ್ಳಲಾಗುತ್ತಿದೆ. ಎಂದರು.

ಸ್ಕೊಡ್ ವೆಸ್ ಸಂಸ್ಥೆಯ ಕಾರ್ಯಕ್ರಮಾಧಿಕಾರಿ ನಾರಾಯಣ ಹೆಗಡೆ ಸ್ವಾಗತಿಸಿದರು. ಗಂಗಾಧರ ನಾಯ್ಕ ಕಾರ್ಯಕ್ರಮ ನಿರ್ವಹಣೆ ಮಾಡಿದರು. ವೇದಿಕೆಯಲ್ಲಿ ಕೆವಿಕೆ ಮುಖ್ಯಸ್ಥೆ ಡಾ. ರೂಪಾ ಪಾಟೀಲ್, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಸಹಾಯಕ ನಿರ್ದೇಶಕ ರಾಮದಾಸ್ ಘೋಮೆವಾಲೆ, ಖಾದಿ ಮತ್ತು ಗ್ರಾಮೋದ್ಯೋಗದ ಸಹಾಯಕ ನಿರ್ದೇಶಕ ರಾಜಣ್ಣ, ಸ್ಕೊಡ್‌ವೆಸ್ ಸಂಸ್ಥೆಯ ಕಾರ್ಯದರ್ಶಿ ಹಾಗೂ ಮುಖ್ಯಹಣಕಾಸು ಅಧಿಕಾರಿ ಸರಸ್ವತಿ ಎನ್. ರವಿ, ಸ್ಕೊಡ್‌ವೆಸ್ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಪ್ರೊ. ಕೆ.ಎನ್. ಹೊಸ್ಮನಿ ಇದ್ದರು.

ಹಲವರಿಗೆ ಸನ್ಮಾನ

ಈ ಕಾರ್ಯಕ್ರಮದಲ್ಲಿ ಜೇನು ಕೃಷಿ ತಜ್ಞ ಮಧುಕೇಶ್ವರ ಹೆಗಡೆ ಹಾಗೂ ಸ್ಕೊಡ್‌ವೆಸ್ ಕಾರ್ಯನಿರ್ವಾಹಕ ನಿರ್ದೇಶಕ ಡಾ. ವೆಂಕಟೇಶ ನಾಯ್ಕ ಅವರಿಗೆ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದಿಂದ ಸನ್ಮಾನಿಸಲಾಯಿತು. ವೇದಿಕೆ ಕಾರ್ಯಕ್ರಮದ ನಂತರ ಜೇನು ಕೃಷಿ ಹಾಗೂ ಅದರ ಮಹತ್ವದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಡಾ. ಡೈಸಿ ಥಾಮಸ್, ಹಾಗೂ ಮಧುಕೇಶ್ವರ ಹೆಗಡೆ ವಿಶೇಷ ಉಪನ್ಯಾಸ ನೀಡಿದರು.

ದೀಪಾವಳಿ ಹಬ್ಬ; ಜಾಗೃತಿ ಕಾರ್ಯಕ್ರಮ

ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಕಾರ್ಯಕ್ರಮ

ಕಾರವಾರ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ, ಕಾರವಾರ ಹಾಗೂ ಸಂಗಮ ಸೇವಾ ಸಂಸ್ಥೆ (ರಿ) ಅಂಕೋಲಾ ಹಾಗೂ ಶಿವಾಜಿ ಬಾಲಮಂದಿರ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಬಾಡ, ಕಾರವಾರ ಇವರ ಸಂಯುಕ್ತ ಆಶ್ರಯದಲ್ಲಿ ಶಿವಾಜಿ ಬಾಲಮಂದಿರ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಬಾಡ, ಕಾರವಾರದಲ್ಲಿ ಮಂಗಳವಾರ ದೀಪಾವಳಿ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸುವ ಕುರಿತು ಪರಿಸರ ಜಾಗೃತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಚೇರಿಯ ಪರಿಸರ ಅಧಿಕಾರಿ ಬಿ.ಕೆ. ಸಂತೋಷ, ಹಸಿರು ಪಟಾಕಿಯನ್ನು ಹೆಚ್ಚಾಗಿ ಬಳಸುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪಟಾಕಿ ಗಳಿಗೆ ಸಂಬಂಧಿಸಿದಂತೆ ಹಲವಾರು ನಿರ್ದೇಶನಗಳನ್ನು ನೀಡಿರುತ್ತದೆ.

ಈ ಆದೇಶದಲ್ಲಿ ಸರ್ವೋಚ್ಚ ನ್ಯಾಯಾಲ ಯವು ರಾತ್ರಿ 8 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಪಟಾಕಿಗಳನ್ನು ಸ್ಫೋಟಿಸಲು ಅವಕಾಶ ನೀಡಿದೆ. ಉಳಿದ ಸಮಯದಲ್ಲಿ ಪಟಾಕಿಗಳ ಸ್ಫೋಟವನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ಇದಲ್ಲದೆ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನಗಳಲ್ಲಿ ಅನುಮತಿಸಿರುವ ಹಸಿರು ಪಟಾಕಿಗಳನ್ನು ಬಿಟ್ಟು ಉಳಿದ ಯಾವುದೇ ಇತರೆ ಪಟಾಕಿಗಳ ಮಾರಾಟ ಹಾಗೂ ಬಳಕೆಯನ್ನು ಸಹ ನಿಷೇಧಿಸಿದೆ. ಹಸಿರು ಪಟಾಕಿಯ ಮೇಲೆ ಹಸಿರು ಬಣ್ಣದಲ್ಲಿ CSIR (Council of Scientific & Industrial Research)- NEERI (National Environmental Engineering Research Institute) ಚಿಹ್ನೆ ಮತ್ತು ಕ್ಯೂಆರ್ ಕೋಡ್‌ಗಳನ್ನು ಮುದ್ರಿಸಿದ್ದು, ಅಂತಹ ಪಟಾಕಿಗಳನ್ನು ಮಾತ್ರ ಮಾರಾಟ ಮಾಡಲು ಮತ್ತು ಸಾರ್ವಜನಿಕರು ಉಪಯೋಗಿಸಲು ಅವಕಾಶ ಇರುತ್ತದೆ ಎಂದು ತಿಳಿಸಿದರು. ಉಪ ಪರಿಸರ ಅಧಿಕಾರಿ ಡಾ. ಗಣಪತಿ ಹೆಗಡೆ, ವಿದ್ಯಾರ್ಥಿಗಳಿಗೆ ಪಟಾಕಿಯನ್ನು ಬಳಸುವುದರಿಂದ ಆಗುವ ಜಲ ಮಾಲಿನ್ಯ, ಶಬ್ದ ಮಾಲಿನ್ಯ ಹಾಗೂ ವಾಯು ಮಾಲಿನ್ಯ ಮತ್ತು ಸ್ಫೋಟದ ತೀವ್ರತೆಯಿಂದ ಆಗುವ ಅನಾಹುತಗಳ ಬಗ್ಗೆ ತಿಳಿಸಿದರು.

ಪಟಾಕಿಗಳಲ್ಲಿ ಭಾರ ಲೋಹವನ್ನು ಬಳಸುವುದರಿಂದ ಇದು ಮಾನವನ ಆರೋಗ್ಯದ ಮೇಲೆ ಹಾಗೂ ಇತರೇ ಪ್ರಾಣಿ ಪಕ್ಷಿಗಳ ಮೇಲೂ ದುಷ್ಪರಿಣಾಮ ಬೀರುವುದಲ್ಲದೇ ಕಣ್ಣು ಉರಿ, ಚರ್ಮ ಸಂಬಂಧ ರೋಗಗಳು ಅಸ್ತಮಾ, ಅಲರ್ಜಿಗಳು ಹೆಚ್ಚಾಗಿ ಬಾಧಿಸುತ್ತದೆ ಎಂದು ತಿಳಿಸಿ ಪ್ರತಿಜ್ಞಾ ವಿಧಿ ಬೋಧಿಸಿದರು.

ಬಾಡ ಶಿವಾಜಿ ಬಾಲಮಂದಿರ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಮುಖ್ಯೋಪಧ್ಯಾಯಕಿ ರೂಪಾ ಗಾಂವಕರ, ಸಂಗಮ ಸೇವಾ ಸಂಸ್ಥೆಯ ಅಧ್ಯಕ್ಷ ರವೀಂದ್ರ ಎನ್.ಶೆಟ್ಟಿ, ಶಿಕ್ಷಕಿಯರಾದ ರಾಜೇಶ್ವರಿ, ವಿಜಯಾ ನಾಯ್ಕ, ವಿದ್ಯಾರ್ಥಿಗಳು ಇದ್ದರು.

ಆಯುಧ ನವೀಕರಣಕ್ಕೆ ಅ.31 ಕೊನೆ

ಕಾರವಾರ: ಆಯುಧ ಅನುಜ್ಞಪ್ತಿ ಮುಕ್ತಾಯಗೊಳ್ಳುವ ಕನಿಷ್ಠ 60 ದಿನಗಳೊಳಗಾಗಿ ನವೀಕರಣಕ್ಕೆ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕಾಗಿದ್ದು ಡಿ.31 ರಂದು ನವೀಕರಣ ಅವಧಿ ಮುಕ್ತಾಯಗೊಳ್ಳಲಿರುವ ಅನುಜ್ಞಪ್ತಿದಾರರು ಅ.31 ರೊಳಗಾಗಿ ಆಯುಧ ನವೀಕರಣ ಗೊಳಿಸಿಕೊಳ್ಳಬೇಕಿದೆ.

ಮೂಲ ಆಯುಧ ಅನುಜ್ಞಪ್ತಿ, ನಮೂನೆ ಎ-3ಯಲ್ಲಿ ಅರ್ಜಿ, ನಮೂನೆ ಎಸ್-3 ಯಲ್ಲಿ ವೈದ್ಯಕೀಯ ಪ್ರಮಾಣ ಪತ್ರ, ನಮೂನೆ ಎಸ್-4 ದಲ್ಲಿ ಸ್ಥಳೀಯ ಪೊಲೀಸ್ ಠಾಣೆಯಿಂದ ಪಡೆದ ನಿರಾಕ್ಷೇಪಣಾ ಪತ್ರ, 5 ವರ್ಷಗಳ ಅವಧಿಗೆ ನವೀಕರಣ ಶುಲ್ಕ ರೂ.2.500/- ನ್ನು ಕೆ-2 ತಂತ್ರಾಂಶದಲ್ಲಿ ಚಲನ್ ಸೃಜಿಸಿ ಲೆಕ್ಕ ಶೀರ್ಷಿಕೆ ಸಂಖ್ಯೆ: 00-55-00-104-000-000 ಕ್ಕೆ ಭರಣ ಮಾಡಿದ ಮೂಲ ಚಲನ್, ಜಮೀನಿನ ಪಹಣಿ ಪತ್ರಿಕೆ, ಹಿಡುವಳಿ ಪ್ರಮಾಣ ಪತ್ರ ದಾಖಲೆಗಳೊಂದಿಗೆ (ಸ್ವರಕ್ಷಣೆ ಆಯುಧ ಅನುಜ್ಞಪ್ತಿದಾರರು ಸ್ಥಳೀಯ ಪೊಲೀಸ್ ಠಾಣೆಯಿಂದ ಪಡೆದ ನಿರಾಪೇಕ್ಷಣಾ ಪತ್ರವನ್ನು ಹೊರತುಪಡಿಸಿ ಮೇಲಿನ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು).

ನೇರವಾಗಿ ಜಿಲ್ಲಾಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಎಸ್‌ಎನ್‌ಎಲ್ ಗ್ರಾಹಕರನ್ನು ಡಿಜಿಟಲ್ ಮೋಡ್‌ನಲ್ಲಿ ಪರಿಶೀಲಿಸಿ

ಕಾರವಾರ: ದೂರ ಸಂಪರ್ಕ ಇಲಾಖೆಯ ಮೊಬೈಲ್ ಸಂಖ್ಯೆ (ಸಿಮ್) ತೆಗೆದುಕೊಂಡ ಎಲ್ಲಾ ಬಿಎಸ್‌ಎನ್‌ಎಲ್ ಗ್ರಾಹಕರನ್ನು ಡಿಜಿಟಲ್ ಮೋಡ್‌ನಲ್ಲಿ ಮರು ಪರಿಶೀಲಿಸುವಂತೆ ತಿಳಿಸಿದ್ದಾರೆ.

ಮರು-ಪರಿಶೀಲನೆಯು ಅಸ್ತಿತ್ವದಲ್ಲಿರುವ ಗ್ರಾಹಕರ ಗುರುತನ್ನು ದೃಢೀಕರಿಸುವ ಪ್ರಕ್ರಿಯೆಯಾಗಿದ್ದು, ಯಾವುದೇ ಬಿಎಸ್‌ಎನ್ ಎಲ್ ಸಿಎಸ್‌ಸಿಗಳು, ಬಿಎಸ್‌ಎನ್‌ಎಲ್ ಫ್ರಾಂಚೈಸಿ ಮತ್ತು ರಿಟೇಲರ್ ಅಂಗಡಿಗಳಲ್ಲಿ ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆಯನ್ನು (ಸಿಮ್) ಮರು ಪರಿಶೀಲಿಸಬಹುದು. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಗ್ರಾಹಕರು ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಅಥವಾ ಡ್ರೈವಿಂಗ್ ಲೈಸೆನ್ಸ್‌ನ ಮೂಲ ಗುರುತಿನ ಪುರಾವೆಯನ್ನು ಒದಗಿಸಬೇಕಾಗುತ್ತದೆ. ಮರು ಪರಿಶೀಲನ ಅಗತ್ಯವಿರುವ ಮೊಬೈಲ್ ಸಂಖ್ಯೆಗೆ ಒಟಿಪಿ ಬರುತ್ತದೆ. ಈ ಎಲ್ಲಾ ಗ್ರಾಹಕರು ಅ.31 ರೊಳಗಾಗಿ ಮರು ಪರಿಶೀಲನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಹತ್ತಿರದ ಬಿಎಸ್‌ಎನ್‌ಎಲ್ ಸಿಎಸ್‌ಸಿ ಅಥವಾ ಫ್ರಾಂಚೈಸಿ/ ರಿಟೇಲರ್ ಮಳಿಗೆಗೆ ಭೇಟಿ ನೀಡುವಂತೆ ಬಿಎಸ್‌ಎನ್‌ಎಲ್ ಕಾರ್ಯಾಚರಣಾ ಪ್ರದೇಶದ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರಿ.ಮಿ.ನಂ 189/2024
ಮಾನ್ಯ ದಿವಾಣಿ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ ಮುಂಡರಗಿ ಇವರಲ್ಲಿ

ಅರ್ಜಿದಾರರು : – 1) ಶ್ರೀಮತಿ ದೇವಕ್ಕ ಕೋಂ ಚಂದ್ರಪ್ಪ ಬಳ್ಳಾರಿ @ಮೋರನಾಳ ವಯಾ॥ 59 ವರ್ಷ ಉದ್ಯೋಗ ಮನೆಗೆಲಸ 2) ಶ್ರೀ ರಾಗಪ್ಪ ತಂದೆ ಚಂದ್ರಪ್ಪ ಬಳ್ಳಾರಿ @ಮೋರನಾಳ ವಯಾ॥ 45 ವರ್ಷ ಉದ್ಯೋಗ: ಶೇತ್ಕಿ ಇಬ್ಬರೂ ಸಾ॥ ಮುಂಡರಗಿ ಹಾಲಿವಸ್ತಿ ಕಡಕೋಳ ತಾ॥ಶಿರಹಟ್ಟಿ ಜಿ॥ಗದಗ 3) ಶ್ರೀಮತಿ ಮಂಜವ್ವ ಕೋಂ ಚಂದ್ರಪ್ಪ ಬಳ್ಳಾರಿ @ಮೋರನಾಳ ವಯಾ॥ 49 ವರ್ಷ ಉದ್ಯೋಗ ಶೇತ್ಕಿ 4) ಶ್ರೀ ಹುಚ್ಚಪ್ಪ ತಂದೆ ಚಂದ್ರಪ್ಪ ಬಳ್ಳಾರಿ @ಮೋರನಾಳ ವಯಾ॥ 24 ವರ್ಷ ಉದ್ಯೋಗ: ಶೇತ್ಕಿ 5) ಶ್ರೀಮತಿ ಗಂಗಮ್ಮ ಕೋಂ ಕೋಟೆಪ್ಪ ಮೋರನಾಳ ವಯಾ॥ 21 ವರ್ಷ ಉದ್ಯೋಗ: ಶೇತ್ಕಿ 6) ಶ್ರೀಮತಿ ಈರವ್ವ ಕೋಂ ಭೀಮಪ್ಪ ಹಳ್ಳಿ ವಯಾ॥ 64 ವರ್ಷ ಉದ್ಯೋಗ: ಶೇತ್ಕಿ 7) ಶ್ರೀಮತಿ ಅನ್ನಕ್ಕ ಕೋಂ ದುರಗಪ್ಪ ಬಳ್ಳಾರಿ ವಯಾ॥ 57 ವರ್ಷ ಉದ್ಯೋಗ: ಶೇತ್ಕಿ 8) ಶ್ರೀಮತಿ ಶ್ರೀಮತಿ ದೇವಕ್ಕ ಕೋಂ ಮರಿಯಪ್ಪ ಲೇಬಗೇರಿ ವಯಾ॥ 54 ವರ್ಷ ಉದ್ಯೋಗ: ಶೇತ್ಕಿ ಇಬ್ಬರೂ ಕೋಟೆಭಾಗ ಸಾ॥ ಮುಂಡರಗಿ ತಾ॥ ಮುಂಡರಗಿ ಜಿ॥ ಗದಗ.

ವಿರುದ್ಧ

ಎದುರುದಾರರು:– ಮಾನ್ಯ ಮುಖ್ಯಾಧಿಕಾರಿಗಳು ವ, ಜನನ ಮರಣ ನೋಂದಣಿ ಅಧಿಕಾರಿಗಳು ಪುರಸಭೆ ಕಾರ್ಯಾಲಯ ಮುಂಡರಗಿ ತಾ॥ ಮುಂಡರಗಿ ಜಿ॥ ಗದಗ.

ಪತ್ರಿಕಾ ಪ್ರಕಟಣೆಗಾಗಿ

ಇದರಲ್ಲಿ ಮೇಲ್ಕಾಣಿಸಿದ ಅರ್ಜಿದಾರರು ಗದಗ ಜಿಲ್ಲಾ ಮುಂಡರಗಿ ತಾಲೂಕ ಮುಂಡರಗಿ ಗ್ರಾಮದ ಖಾಯಂ ನಿವಾಸಿಯಾಗಿದ್ದು 1 ಮತ್ತು 3ನೇದವರ ಮಾವ 2,4,5ನೇದವರ ಅಜ್ಜ 6ರಿಂದ 8ನೇ ಅರ್ಜಿದಾರರ ತಂದೆಯಾದ ಕಪ್ಪತ್ತಪ್ಪ ತಂದೆ ಹನಮಪ್ಪ ಬಳ್ಳಾರಿ@ಮೋರನಾಳ ಇವರು ದಿನಾಂಕ 08-05-1992 ರಂದು ಮುಂಡರಗಿ ತಾಲೂಕ ಮುಂಡರಗಿ ಗ್ರಾಮದಲ್ಲಿ ಮರಣ ಹೊಂದಿದ್ದು ಸದರ 1 ಮತ್ತು 3ನೇ ಅರ್ಜಿದಾರರ ಮಾವ ಮತ್ತು 2 4 5ನೇ ಅರ್ಜಿದಾರರ ಅಜ್ಜ ಹಾಗೂ 6ರಿಂದ 8ನೇ ಅರ್ಜಿದಾರರ ತಂದೆಯ ಹೆಸರನ್ನು ಮುಂಡರಗಿ ಗ್ರಾಮದ ಮರಣ ದಾಖಲಾತಿಯಲ್ಲಿ ದಾಖಲಿಸಲು ಆದೇಶ ಪಡೆಯುವುದಕ್ಕಾಗಿ ಮಾನ್ಯ ದಿವಾಣಿ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ ಮುಂಡರಗಿ ಇವರಲ್ಲಿ ಎದುರುದಾರರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದು ಸದರ ಪ್ರಕರಣದ ವಿಚಾರಣೆಯ ಕುರಿತು ಮಾನ್ಯ ನ್ಯಾಯಾಲಯದವರು ದಿನಾಂಕ 25-11-2024 ರಂದು ಮುದ್ದತ್ತು ನಿಗದಿಪಡಿಸಿದ್ದು ಇರುತ್ತದೆ. ಆದ್ದರಿಂದ ಸದರ ದಿವಸ ಸದರ ಪ್ರಕರಣದಲ್ಲಿ ಯಾರಾದರೂ ತಕರಾರು ಸಲ್ಲಿಸುವವರು ಇದ್ದಲ್ಲಿ ತಾವಾಗಲಿ ಅಥವಾ ತಮ್ಮ ವಕೀಲರ ಮುಂಖಾತರವಾಗಲಿ ಮಾನ್ಯ ದಿವಾಣಿ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ ಮುಂಡರಗಿಯಲ್ಲಿ ಮುಂಜಾನೆ 10-45 ಘಂಟೆಗೆ ಹಾಜರಾಗಿ ತಕರಾರು ಸಲ್ಲಿಸಬೇಕು ಇಲ್ಲವಾದಲ್ಲಿ ಯಾರದೂ ತಕರಾರು ಇಲ್ಲವೆಂದು ಪರಿಗಣಿಸಿ ಮಾನ್ಯ ನ್ಯಾಯಾಲಯದವರು ಮುಂದಿನ ಆದೇಶವನ್ನು ಮಾಡುವವರು ಇರುತ್ತಾರೆ ತಿಳಿಯಿರಿ ಅಂತಾ ಕೊಟ್ಟ ಸಾರ್ವಜನಿಕ ಪತ್ರಿಕಾ ಪ್ರಕಟಣೆ.

ಈ ದಿವಸ ದಿನಾಂಕ 22-10-2024 ರಂದು ನಮ್ಮ ಸಹಿ ಹಾಗೂ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ದಿವಾಣಿ ಮತ್ತು ಜೆ.ಎಮ್.ಎಫ್.ಸಿ.
ನ್ಯಾಯಾಧೀಶರವರ, ಮುಂಡರಗಿ.
ಶ್ರೀ ಪಿ.ಎಸ್.ಕುಲಕರ್ಣಿ & ಶ್ರೀ ಎಸ್.ಬಿ.ನಾಡಗೌಡ
(ಅರ್ಜಿದಾರರ ಪರ ವಕೀಲರು.)
ಸ್ಥಳ :– ಮುಂಡರಗಿ ದಿನಾಂಕ:22-10-2024

ಬಂಗಾರಪ್ಪ ಜನ್ಮದಿನ 26 ಕ್ಕೆ

ಸಿದ್ದಾಪುರ: ಅ.26 ರಂದು ಎಸ್. ಬಂಗಾರಪ್ಪ ರ 92 ಜನ್ಮದಿನೋತ್ಸವ ಆಚರಣೆ ಕಾರ್ಯಕ್ರಮ ಸರಕಾರಿ ಆಸ್ಪತ್ರೆ ಸಿದ್ದಾಪುರದಲ್ಲಿ ನಡೆಯಲಿದೆ.

ಒಳರೋಗಿ ಗಳಿಗೆ ಹಣ್ಣು ಹಂಪಲು ವಿತರಣೆ, ಬೆಳಿಗ್ಗೆ 10 ಗಂಟೆಗೆ ಎಸ್ ಬಂಗಾರಪ್ಪ ಭಾವಚಿತ್ರ ಕ್ಕೆ ಮಾಲಾರ್ಪಣೆ, ಭಾಲಭವನದಲ್ಲಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಬಂಗಾರಪ್ಪ ಒಡನಾಡಿ ಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಶಿಕ್ಷಣ ಸಚಿವ ಮಧು ಬಂಗಾರಪ್ಪ ಉದ್ಘಾಟಿಸಲಿದ್ದಾರೆ. ಶಾಸಕ ಭೀಮಣ್ಣ ನಾಯ್ಕ ಅಧ್ಯಕ್ಷತೆ ವಹಿಸಿದ್ದಾರೆ.

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.537/2024

ಅರ್ಜಿದಾರರು : 1.ಶ್ರೀ. ರಂಗಪ್ಪ ತಂದೆ ಲೇಟ್ ರಂಗಪ್ಪ ವಯಸ್ಸು: 54 ವರ್ಷ. 2. ಶ್ರೀಮತಿ. ಕಾಳವ್ವ ತಂದೆ ಲೇಟ್ ರಂಗಪ್ಪ ವಯಸ್ಸು: 71 ವರ್ಷ. 3. ಶ್ರೀಮತಿ. ಅಂಜಿನಮ್ಮ ತಂದೆ ಲೇಟ್ ರಂಗಪ್ಪ, ವಯಸ್ಸು: 45 ವರ್ಷ. 4. ಶ್ರೀ. ಹನುಮಂತಪ್ಪ ತಂದೆ ಲೇಟ್ ರಂಗಪ್ಪ, ವಯಸ್ಸು: 36 ವರ್ಷ. 5. ಶ್ರೀ. ರಾಜಪ್ಪ ರಂಗಪ್ಪ ತಂದೆ ಲೇಟ್ ರಂಗಪ್ಪ, ವಯಸ್ಸು :41ವರ್ಷ. 6. ಶ್ರೀಮತಿ. ಜಿ.ಸಾಕಮ್ಮ ತಂದೆ ಲೇಟ್ ರಂಗಪ್ಪ, ವಯಸ್ಸು: 36 ವರ್ಷ. 7. ಶ್ರೀಮತಿ. ಕಮಲಮ್ಮ ದುಮ್ಮವ್ವರ ತಂದೆ ಲೇಟ್ ರಂಗಪ್ಪ ವಯಸ್ಸು: 47 ವರ್ಷ. 8. ಶ್ರೀಮತಿ. ದುರುಗಮ್ಮ ತಂದೆ ಲೇಟ್ ರಂಗಪ್ಪ ವಯಸ್ಸು: 57 ವರ್ಷ. ಎಲ್ಲರೂ ಹಿಂದೂಗಳು ವೃತ್ತಿ: ಕೃಷಿ ವಾಸ: ಹುರೇಮೆಗಳಗೆರೆ ಗ್ರಾಮ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : .1.ಮಾನ್ಯ ತಹಶಿಲ್ದಾರರು ಹರಪನಹಳ್ಳಿ, 2. ಗ್ರಾಮ ಲೇಕ್ಕಾಧಿಕಾರಿಗಳು ಹಿರೆಮೆಗಳಗೆರೆ ಗ್ರಾಮ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಸದರಿ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿದಾರರ ತಂದೆಯಾದ ರಂಗಪ್ಪ ರಂಗಪ್ಪ ತಂದೆ ಸಿದ್ದಪ್ಪ ಇವರು ದಿನಾಂಕ:12.08.1994 ರಂದು ಹರಪನಹಳ್ಳಿ ತಾಲೂಕು ಹಿರೇಮೆಗಳಗೆರೆ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 16.11.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11–00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ, ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ ಹರಪನಹಳ್ಳಿ
ಅರ್ಜಿದಾರರ ಪರ ವಕೀಲರು
ಶ್ರೀ. ಕೆ.ಎಸ್.ಮಂಜಾನಾಯ್ಕ ವಕೀಲರು
ಸ್ಥಳ: ಹರಪನಹಳ್ಳಿ
ದಿನಾಂಕ: 23/10/2024

ಕನ್ನಡ ಜ್ಯೋತಿ ರಥಕ್ಕೆ ಸ್ವಾಗತ

ಯಲ್ಲಾಪುರ: ಮೈಸೂರು ರಾಜ್ಯವು, ಕರ್ನಾಟಕ ಎಂದು ನಾಮಕರಣವಾಗಿ 50 ವರ್ಷ ಪೂರ್ಣಗೊಂಡಿರುವ ಪ್ರಯುಕ್ತ ರಾಜ್ಯದಾದ್ಯಂತ ಸಂಚರಿಸುತ್ತಿರುವ ಕರ್ನಾಟಕ ಸಂಭ್ರಮ 50 ಕನ್ನಡ ಜ್ಯೋತಿ ರಥಯಾತ್ರೆಯು ಬುಧವಾರ ತಾಲೂಕಿಗೆ ಆಗಮಿಸಿದ್ದು ಪಟ್ಟಣದ ವಿಶ್ವದರ್ಶನ ಶಿಕ್ಷಣ ಸಂಸ್ಥೆಯ ಬಳಿ ತಹಸೀಲ್ದಾರ್ ಯಲ್ಲಪ್ಪ ಗೋನೆಣ್ಣನವರ್ ಪೂಜೆ ಸಲ್ಲಿಸುವ ಮೂಲಕ ಬರಮಾಡಿಕೊಂಡರು.

ನಂತರ ಶಾಲಾ ವಿದ್ಯಾರ್ಥಿಗಳು, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ವಿವಿಧ ಸಂಘ ಸಂಸ್ಥೆಯ ಸದಸ್ಯರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಮೆರವಣಿಗೆಯ ಮೂಲಕ ಜ್ಯೋತಿಯನ್ನು ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ವಿಧಾನ ಪರಿಷತ ಸದಸ್ಯ ಶಾಂತಾರಾಮ ಸಿದ್ದಿ, ಗ್ರೇಡ್ 2 ತಹಸೀಲ್ದಾರ್ ಸಿ.ಜಿ. ನಾಯ್ಕ, ಪ.ಪಂ. ಮುಖ್ಯಾಧಿಕಾರಿ ಸುನಿಲ್ ಗಾವಡೆ, ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ಆರ್. ಹೆಗಡೆ, ಕ.ಸಾ.ಪ. ತಾಲೂಕಾಧ್ಯಕ್ಷ ಸುಬ್ರಹ್ಮಣ್ಯ ಭಟ್, ವಿವಿಧ ಇಲಾಖೆಯ ಅಧಿಕಾರಿಗಳು ಸಿಬ್ಬಂದಿ ಇದ್ದರು.

ಬೆಳೆವಿಮೆ, ಬೆಳೆನಷ್ಟ ಪರಿಹಾರಕ್ಕೆ ಆಗ್ರಹಿಸಿ ಎತ್ತು ಚಕ್ಕಡಿಗಳೊಂದಿಗೆ ಬೃಹತ್ ಪ್ರತಿಭಟನೆ

ಬ್ಯಾಡಗಿ: ಬೆಳೆವಿಮೆ, ಬೆಳೆನಷ್ಟ ಪರಿಹಾರಕ್ಕೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ತಾಲೂಕ ಘಟಕ ನೇತೃತ್ವದಲ್ಲಿ ಸಾವಿರಾರು ಕಾರ್ಯಕರ್ತರು ಮಂಗಳವಾರ ಎತ್ತು ಚಕ್ಕಡಿಗಳೊಂದಿಗೆ ಬೃಹತ್ ಪ್ರತಿಭಟನೆ ನಡೆಸಿದರಲ್ಲದೇ ಬಳಿಕ ತಹಸೀಲ್ದಾರ ಕಚೇರಿ ಎದುರು ಧರಣ ನಡೆಸಿ ಮನವಿ ಸಲ್ಲಿಸಿದರು.

ಸುಭಾಸ್ ವೃತ್ತದಿಂದ ಆರಂಭವಾದ ಪ್ರತಿಭಟನಾ ಮೆರವಣ ಗೆ ಮೋಟೆಬೆನ್ನೂರ ರಸ್ತೆಯಲ್ಲಿ ಸಂಚರಿಸಿ ಬಳಿಕ ತಹಶೀಲ್ದಾರ ಕಚೇರಿ ತಲುಪಿತು, ಮೆರವಣಗೆಯುದ್ದಕ್ಕೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗಳನ್ನು ಖಂಡಿಸಿ ಘೋಷಣೆಗಳನ್ನು ಕೂಗಿದರು.

ಬೆಲೆ ಕುಸಿತದಿಂದ ರೈತರು ಧೃತಿಗೆಡುವ ಸಂದರ್ಭ ಬಂದಾಗ ಸರ್ಕಾರಗಳ ಪಾತ್ರವೇನು. ಈ ಕುರಿತು ರೈತ ನಾಯಕ ದಿ.ನಂಜುಂಡಸ್ವಾಮಿ ಧ್ವನಿಯೆತ್ತಿ ಹೋರಾಟ ಆರಂಭಿದ್ದರು, ಇದಕ್ಕೆ ಪರಿಹಾರ ಹುಡುಕಲು ರೈತರಿಗೆ ಜಾಗೃತಿ ಮುಟ್ಟಿಸೋಣವೆಂದು ಪಣ ತೊಟ್ಟಿದ್ದರು, ಪ್ರಸ್ತುತ ಅಂತಹ ಅನುಭವ ನಮಗಾಗುತ್ತಿದೆ ಎಂದರು.

ಬದುಕಿಸಿದ್ದೇವೆ, ಇದಕ್ಕೆ ಬೆಲೆ ಇಲ್ಲವೇ. ಕರಷಿ ಮೇಲಿನ ನಷ್ಟವನ್ನು ಯಾವುದೇ ಸರ್ಕಾರಗಳು ಅಧ್ಯಯನ ನಡೆಸಿಲ್ಲ, ಶೇ.70 ರಷ್ಟಿದ್ದ ರೈತರು ಶೇ.47 ಬಂದು ನಿಂತಿವೆ, ಇಂತಹ ಪ್ರಮುಖ ಸಂಗತಿಗಳು ದೇಶದಲ್ಲಿ ಚರ್ಚೆಯಾಗುತ್ತಿಲ್ಲ, ಇದನ್ನೂ ನೋಡಿಯೂ ರೈತರು ಸುಮ್ಮನಿರಬೇಕೆ..? ಸರ್ಕಾರ ಯಾವುದೇ ಇರಲಿ ರೈತರ ಬೇಡಿಕೆಗಳನ್ನು ಹಗುರವಾಗಿ ಪರಿಗಣ ಸುವವರ ವಿರುದ್ಧ ಹೋರಾಟ ನಿರಂತರವಾಗಿರಲಿದೆ, ಸರ್ಕಾರಕ್ಕೆ ಆತ್ಮ ಗೌರವಿದ್ದಿದ್ದರೆ ನಮ್ಮನ್ನು ಬೀದಿಗೆ ತರಬಾರದಾಗಿತ್ತು ಎಂದರು.

ರುದ್ರಗೌಡ ಕಾಡನಗೌಡ್ರ ಮಾತನಾಡಿ, ಸರ್ಕಾರಗಳನ್ನು ನಡುಗಿಸುವ ತಾಕತ್ತು ರೈತ ಸಂಘಕ್ಕಿದೆ ನಮ್ಮ ಹಕ್ಕುಗಳನ್ನು ಪಡೆಯಲು ಒಗ್ಗಟ್ಟಾಗಿ ಹೋರಾಟ ನಡೆಸದೇ ಬಿಡುವುದಿಲ್ಲ, ಭವಿಷ್ಯದಲ್ಲಿ ರೈತರು ಬಹುದೊಡ್ಡ ಸವಾಲುಗಳನ್ನು ಎದುರಿಸಬೇಕಾಗಿದೆ ಸಣ್ಣಪುಟ್ಟ ಹೋರಾಟಗಳಿಗೆ ಸರ್ಕಾರ ಮಣ ಯುವುದಿಲ್ಲ ಗಟ್ಟಿ ಧ್ವನಿ ಇಲ್ಲದಿದ್ದಲ್ಲಿ ನ್ಯಾಯ ಸಿಗುವ ಭರವಸೆಯಿಲ್ಲ ಅತೀವೃಷ್ಟಿ ಹಾಗೂ ಅನಾವೃಷ್ಟಿ ಶೇ.70 ರಷ್ಟು ನಷ್ಟವಾಗಿದ್ದು ಕೂಡಲೇ ಪರಿಹಾರ ನೀಡುವಂತೆ ಆಗ್ರಹಿಸಿದರು.

ಅಂತೆಯೇ ಜಿಲ್ಲಾಧಿಕಾರಿಗಳ ಕಚೇರಿ ಎದುರು ಅಹೋರಾತ್ರಿ ಧರಣ ನಡೆಸದೇ ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸಾವಿರಾರು ಸಂಖ್ಯೆಯಲ್ಲಿ ರೈತರು ಜಮಾಯಿಸಿದ್ದರು.

ಕರ್ನಾಟಕ ಸರ್ಕಾರ
ಪುರಸಭಾ ಕಾರ್ಯಾಲಯ, ಹರಪನಹಳ್ಳಿ, ವಿಜಯನಗರ ಜಿಲ್ಲೆ.
ದೂರವಾಣಿ:08398–280258 ಇ–ಮೇಲ್: ka.harapanahalli.tmc@gmail.com
ಕ್ರ.ಸಂ:ಮಸ:ಹಹಳ್ಳಿ:/ತಾಂತ್ರಿಕ/10/2024–25 ದಿನಾಂಕ:22–10–2024

: ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪಕಟಣೆ :

ಎಸ್.ಬಿ.ಎಂ 2.0 ಮತ್ತು ಕೆ.ಕೆ.ಆರ್.ಡಿ.ಬಿ ಯೋಜನೆಯಡಿ ಈ ಕೆಳಗಿನ ಇಂಡೆಂಟ್‌ಗಳ ಟೆಂಡರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ತಿದ್ದುಪಡಿ ನಿಯಮಗಳು 2001ರ ಅನ್ವಯ ಕೆ.ಡಬ್ಲೂ–1 ಸ್ಟ್ಯಾಂಡರ್ಡ ಬಿಡ್ ಟೆಂಡರ್ ಡಾಕ್ಯುಮೆಂಟ್ ನಿಯಾಮವಳಿಯಂತೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ ಕರೆಯಲಾಗಿದ್ದು ಆಸಕ್ತಿಯುಳ್ಳ ಅರ್ಹ ಮತ್ತು ನೋಂದಾಯಿತ ಸರಬರಾಜುದಾರರು ನಿಬಂಧನೆಗಳನ್ನೊಳಗೊಂಡ ದಸ್ತಾವೇಜುಗಳನ್ನು ಮತ್ತು ವಿವರಗಳನ್ನು https://kppp.karnataka.gov.in/ನಿಂದ ಡೌನ್ ಲೋಡ ಮಾಡಿಕೊಳ್ಳಬಹುದಾಗಿದೆ.

ಕ್ರ. ಸಂ	ಕಾಮಗಾರಿ ವಿವಿರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಟೆಂಡರ ಸಲ್ಲಿಸಲು ಕೊನೆಯ ದಿನಾಂಕ
1	DMA/2023-24/OW/WORK INDENT8850/CALL-3	9.78	24450.00	30/10/2024
2	DMA/2024-25/OW/WORK_INDENT29854/CALL-2	5.00	12500.00	
3	DMA/2024-25/OW/WORK_INDENT31020	15.00	37500.00	

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.
ಸಹಿ/– ಆಡಳಿತಾಧಿಕಾರಿಗಳು ಪುರಸಭೆ, ಹರಪನಹಳ್ಳಿ.
ಸಹಿ/– ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ.

ರೈತರಿಗೆ ಪರಿಹಾರ ನೀಡುವಂತೆ ಮನವಿ

ಹಾವೇರಿ: ಕನಕಾಪುರ ಬಳಿ ನಿರ್ಮಾಣವಾಗಿರುವ ಯುಟಿಪಿ ಕಾಲುವೆ ನಿರಂತರ ಸುರಿದ ಮಳೆಗೆ ಒಡೆದು ಸಾವಿರಾರು ಎಕರೆ ಜಮೀನುಗಳಿಗೆ ನೀರು ನುಗ್ಗಿ ಕೋಟ್ಯಾಂತರ ಮೌಲ್ಯದ ಬೆಳೆ ಹಾನಿಯಾದ ರೈತರಿಗೆ ಪ್ರತಿ ಎಕರೆಗೆ ಒಂದು ಲಕ್ಷ ಪರಿಹಾರ ನೀಡುವಂತೆ ಒತ್ತಾಯಿಸಿ ಭೂಮಿ ಪುತ್ರ ರೈತ ಸಂಘ ಅಧ್ಯಕ್ಷ ಪಕ್ಕೀರಗೌಡ ಗಾಜೀಗೌಡ್ರ ಅವರು ಸ್ಥಳ ವಿಕ್ಷಣೆ ಆಗಮಿಸಿದ್ದ ಸಂಸದ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದರು. ನಂತರ ಮಾತನಾಡಿದ ಅವರು ರೈತರ ಜಮೀನಲ್ಲಿ ಹಾಯ್ದು ಹೋಗಿರುವ ಯುಟಿಪಿ ಕಾಲುವೆ ಕಳೆದ ಒಂದು ವಾರ ಹಿಂದೆ ನಿರಂತರ ಮಳೆಗೆ ಕಾಲುವೆ ಒಡೆದು ಸಾವಿರಾರು ಎಕರೆಯ ರೈತರ ಜಮೀನಿನಲ್ಲಿ ನೀರು ನುಗ್ಗಿ ಕೋಟ್ಯಂತರ ರೂಪಾಯಿ ಬೆಳೆ ನಷ್ಟ ಹಾಗೂ ಕುಷ್ಕಿ ಭೂಮಿ ಹಾಲಾಗಿದ್ದು ಕೇಂದ್ರದಿಂದ ಇಲ್ಲಿಯ ಸಂತ್ರಸ್ತ ರೈತರಿಗೆ ಪ್ರತಿ ಎಕರೆಗೆ 1ಲಕ್ಷ ರು.ಪರಿಹಾರ ಕೊಡಿಸುವ ಕೆಲಸವಾಗಬೇಕು ಕೃಷಿಯನ್ನೇ ಅವಲಂಬಿಸಿ ಈ ರೈತರಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು. ರೈತರು ತೀರಾ ಆರ್ಥಿಕ ನಷ್ಟ ಅನುಭವಿಸಿದ್ದಾರೆ.ಹಾನಿ ಅನುಭವಿಸಿರುವ ಸಂತ್ರಸ್ತ ರೈತರಿಗೆ ಆರ್ಥಿಕ ನಷ್ಟದಿಂದ ಕಾಪಾಡಲು ತಾವುಗಳು ಕೇಂದ್ರದ ವಿಶೇಷ ಅನುದಾನದಲ್ಲಿಪರಿಹಾರ ಕೊಡಿಸಿ ರೈತರಿಗೆ ಶಕ್ತಿ ನೀಡಬೇಕು. ಯುಟಿಪಿ ಅವರು ನಿರ್ಮಿಸಿದ ಈ ಕಾಲುವೆ ಅವೈಜ್ಞಾನಿಕ ವಾಗಿದೆ. ಇದನ್ನು ವೈಜ್ಞಾನಿಕ ವಾಗಿ ನಿರ್ಮಿಸಲು ಸಹಕಾರ ಮಾಡಬೇಕು. ಮತ್ತು ರಾಜ್ಯ ನೀರಾವರಿ ನಿಗಮ ಮಾಡಿರುವ ಒಡವಟ್ಟಿನಿಂದ ಇಲ್ಲಿನ ರೈತರು ಬಲಿಪಶು ಆಗಿದ್ದಾರೆ. ಕೂಡಲೇ ಯುಟಿಪಿ ಕಡೆಯಿಂದ ಬರುವ ಪರಿಹಾರವನ್ನ್ ನೀಡಲು ಒತ್ತಾಯ ಮಾಡಬೇಕು ಹೇಳಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅರುಣಕುಮಾರ ಪೂಜಾರ, ಅಶೋಕ ಬಣಕಾರ,ಮಾಲತೇಶ ಗಾಜಿ, ಹನುಮಂತಗೌಡ ಗಾಜೀಗೌಡ್ರ, ಗವಿಸಿದ್ದಪ್ಪ ದ್ಯಾಮಣ್ಣನವರ, ಪರಮೇಶ್ವರಪ್ಪ ಮೇಗಳಮನಿ ಉಪಸ್ಥಿತರಿದ್ದರು.



ಆಚರಣೆಯಾಗದ ಸ್ವಚ್ಛ ಭಾರತ ಪರಿಕಲ್ಪನೆ

ಕಂಡ ಕಂಡಲ್ಲಿ ಹಾಗೇ ಉಳಿದ ಕಸ | ಸ್ವಚ್ಛ ಭಾರತ ಅಭಿಯಾನಕ್ಕೆ ಶೇ. 30 ರಷ್ಟು ಅನುದಾನ | ಹಾಗೇ ಉಳಿದ ಗಾಂಧಿ ಕನಸು

ಮಾಳಿಂಗರಾಯ ಪೂಜಾರ

ಗದಗ: ಸ್ವಚ್ಛ ಭಾರತ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಕಷ್ಟು ಅನುದಾನ ನೀಡಿದರು ಆ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳದೆ ಇರುವದರಿಂದ ನಗರ ಹಾಗೂ ಪಟ್ಟಣ ಪ್ರದೇಶದಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ.

ಗದಗ ನಗರ ಹಾಗೂ ಜಿಲ್ಲೆಯ ಪಟ್ಟಣಗಳಲ್ಲಿನ ರಸ್ತೆ ಬದಿ, ಚರಂಡಿಗೆ ಪ್ಲಾಸ್ಟಿಕ್ ಸೇರಿದಂತೆ ಇತರೆ ತ್ಯಾಜ್ಯ ತುಂಬಿರುವುದು, ಎಲ್ಲೆಂದರಲ್ಲಿ ಬಯಲು ಪ್ರದೇಶದಲ್ಲಿ ಮಲ ಮೂತ್ರ ವಿಸರ್ಜನೆ ಮಾಡಿರುವುದು, ಮಾಂಸದ ಮಾರುಕಟ್ಟೆ ಪ್ರದೇಶ, ಸಾರ್ವಜನಿಕ ಸ್ಥಳ, ಪ್ರಮುಖ ರಸ್ತೆಗಳು ಹಾಗೂ ವಾರ್ಡ್‌ಗಳಲ್ಲಿ ಹಾಗೂ ಹೊಸ ಬಡಾವಣೆಗಳಲ್ಲಿ ನಿವೇಶನ ಹಿಡಿದು ಕೈ ಬಿಟ್ಟಿದ್ದು, ಅಂತಹ ಸ್ಥಳದಲ್ಲಿ ಮುಳ್ಳು, ಕಂಠಿ ಬೆಳೆದು ಅಲ್ಲಿ ಕಸ ಎಸೆದಿರುವುದು ಕಂಡು ಬರುತ್ತಿದ್ದು, ಅಲ್ಲದೆ ಕಸವನ್ನು ವಿಲೇವಾರಿ ಮಾಡದೇ ಇರುವದರಿಂದ ಎಲ್ಲಿ ನೋಡಿದರೂ ಕಸದ ರಾಶಿ ಕಾಣುತ್ತಿದೆ ಕಾಣುತ್ತಿದ್ದು,ಇದರಿಂದ ನಗರ ಮತ್ತು ಪಟ್ಟಣ ಸೌಂದರ್ಯಕ್ಕೆ ದಕ್ಕೆ ತರುವುದಲ್ಲದೆ ಸಾಂಕ್ರಾಮಿಕ ರೋಗಗಳು ಹೆಚ್ಚಾಗುತ್ತಿದೆ.

ಅಲ್ಲದೆ ಒಳಚರಂಡಿ ಇದ್ದರು ಅವುಗಳನ್ನು ಬಳಸದೆ ಇನ್ನೂ ಅವುಗಳಿಗೆ ಶೌಚ ನೀರು ಹರಿಯಲು ಜೋಡಣೆ ಮಾಡದ ಹಿನ್ನೆಲೆಯಲ್ಲಿ ಆ ನೀರನ್ನು ಚರಂಡಿಗಳಲ್ಲಿ ಕೊಳಚೆ ನೀರು ಮಡುಗಟ್ಟಿ, ದುರ್ನಾತ ಬೀರುತ್ತಿದ್ದನ್ನು ಕಂಡು ಬರುತ್ತಿದ್ದು, ಮೂಗು ಮುಚ್ಚಿಕೊಂಡು ಅಡ್ಡಾಡುವ ಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ಮಳೆ ಬಂದರೆ ಚರಂಡಿ ಎಲ್ಲ ತುಂಬಿ ತೆಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ನುಗ್ಗುವುದು ಸಾಮಾನ್ಯವಾಗಿದೆ.

ಗದಗ ನಗರದ ಭೀಷ್ಮ ಕೆರೆಯ ಸುತ್ತ ಎಲ್ಲೆಂದರಲ್ಲಿ ಕಸ ಬಿದ್ದಿರುವುದು.

ಸ್ವಚ್ಛಭಾರತ ಮಿಶನ್ ಯೋಜನೆಯ ಸ್ವಚ್ಛ ಭಾರತ ಅಭಿಯಾನ, ಸ್ವಚ್ಛಭಾರತ ಮಿಶನ್, ಸ್ವಚ್ಛ ಹಿ ಸೇವಾ, 15 ನೇ ಹಣಕಾಸು ಯೋಜನೆಯಲ್ಲಿ ಶೇ.30 ರಷ್ಟು ಅನುದಾನ ಹೀಗೆ ಹತ್ತು ಹಲವರು ಯೋಜನೆಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೋಟ್ಯಂತರ ರೂಪಾಯಿ ಬಿಡುಗಡೆ ಮಾಡುತ್ತದೆ ಅಲ್ಲದೆ ಸ್ವಚ್ಛನಗರ ಪ್ರಶಸ್ತಿ ನೀಡಿ ಅಂತಹ ನಗರಗಳಿಗೆ ಪ್ರಶಸ್ತಿ ಜೊತೆ ನಗದು ಸಹ ನೀಡುತ್ತದೆ ಇಷ್ಟೆಲ್ಲ ನೀಡಿದರು ನಗರಗಳಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ.

ಅಶುಚಿತ್ವ ಇರುವ ಗ್ರಾಮ, ನಗರ, ಪಟ್ಟಣಗಳು ಪ್ರಶಸ್ತಿ ತೆಗೆದುಕೊಂಡಿದ್ದನ್ನು ನಾವು ಕಾಣಬಹುದು ಕೇವಲ ಕಾಗದದಲ್ಲಿ ಸ್ವಚ್ಛತೆಯನ್ನು ತೋರಿಸಿ ಸರ್ಕಾರಗಳ ಕಣ್ಣಿಗೆ ಮಣ್ಣು ಎರೆಚಿ ಪ್ರಶಸ್ತಿಗಳನ್ನು ತೆಗೆದುಕೊಂಡಿವೆ ಎನ್ನುವ ಆರೋಪ ಸಾರ್ವಜನಿಕರಲ್ಲಿ ಕೇಳಿಬರುತ್ತಿದೆ.

ಗದಗ ನಗರದ ಭೀಷ್ಮ ಕೆರೆಯನ್ನು ಐತಿಹಾಸಿಕ ತಾಣವನ್ನಾಗಿ ಮಾಡಲು ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಬಸವಣ್ಣ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ ಆದರೆ ಕೆರೆಗೆ ಸುತ್ತಮುತ್ತ ಒಳಚರಂಡಿ ಹಾಗೂ ಚರಂಡಿ ನೀರು ಹರಿದು ಬರುತ್ತದೆ ಕೆರೆಯ ದಡದ ಸುತ್ತ ಎಲ್ಲೆಂದರಲ್ಲಿ ಕಸ ಚೆಲ್ಲುತ್ತಿದ್ದು ಹಾಗೂ ಮಾಂಸದ ಕಸ, ಸತ್ತ ಪ್ರಾಣಿಗಳನ್ನು ಒಗೆಯುತ್ತಿದ್ದು, ಇವೆಲ್ಲವನ್ನೂ ನೋಡಿದಾಗ ಸುಂದರ ನಗರ ಮಾಡುವಲ್ಲಿ ಗದಗ ಬೆಟಗೇರಿ ನಗರಸಭೆ ವಿಫಲವಾಗಿರುವುದು ಕಂಡು ಬರುತ್ತಿದೆಷ್ಟ

> ಗದಗ ಬೆಟಗೇರಿ ನಗರದಲ್ಲಿ ಸ್ವಚ್ಛತೆಯ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರು ಎಲ್ಲೆಂದರಲ್ಲಿ ಕಸವನ್ನು ಚೆಲ್ಲಬೇಡಿ ಕಸದ ವಾಹನಕ್ಕೆ ಕಸವನ್ನು ಹಾಕಬೇಕು ಸ್ವಚ್ಛತೆಗೆ ಸಹಕಾರ ನೀಡಬೇಕು.
> -ಆನಂದ ಬದಿಸ.ಕಾ.ನಿ ಅಭಿಯಂತರರು ಪರಿಸರ, ನಗರಸಭೆ ಗದಗ ಬೆಟಗೇರಿ

ಮಾಂಸದ ಮಾರುಕಟ್ಟೆ ಎಲ್ಲೆಂದರಲ್ಲಿ ಗುಂಪಿ ಗುಂಪಿ ಹಾಕಿ ತಿಪ್ಪೆಯಂತೆ ಮಾಡಿದ್ದು, ಇದಕ್ಕೆ ನಾಯಿಗಳು ಹಿಂಡು ಹಿಂಡಾಗಿ ನಿಂತಿರುತ್ತವೆ ಇದರಿಂದ ಬೀದಿ ನಾಯಿಗಳು ಹೆಚ್ಚಾಗಿವೆ ಹಾಗೂ ಬಾರ್ ಹಾಗೂ ರೆಸ್ಟೋರೆಂಟ್ ಗಳ ಕಸವನ್ನು ಪಕ್ಕದಲ್ಲಿಯೇ ಹಾಕಿದ್ದು, ಇದು ಕೊಳೆಯದ ವಸ್ತು ಆಗಿದೆ ಇದನ್ನು ವಿಲೇವಾರಿ ಮಾಡುವುದೇ ಸ್ಥಳೀಯ ಸಂಸ್ಥೆಗಳಿಗೆ ತಲೆ ನೋವಾಗಿದೆ.

ಇನ್ನೂ ಜಿಲ್ಲೆಯ ಗ್ರಾಮಗಳ ಸ್ಥಿತಿಯಂತೂ ಅಶುಚ್ಚತೆಯ ಆಗರವಾಗಿದೆ ಬಯಲು ಶೌಚ ಹಾಗೂ ಎಲ್ಲೆಂದರಲ್ಲಿ ರಸ್ತೆಯ ಪಕ್ಕದ ಬದಿಯಲ್ಲಿ ಕಸದ ತಿಪ್ಪೆಯ ರಾಶಿಗಳು ಕಾಣಬಹುದು ಪ್ರತಿವರ್ಷ ಇಂತಹ ಗ್ರಾಮಗಳಿಗೆ ಗಾಂಧಿ ಗ್ರಾಮ ಪುರಸ್ಕಾರ ಸಿಕ್ಕಿದ್ದನ್ನು ಕಾಣಬಹುದು.

ಗ್ರಾಮ, ನಗರ ಮತ್ತು ಪಟ್ಟಣದ ಹೊರವಲಯದಲ್ಲಿ ಘನ ರಾಜ್ಯ ವಿಲೇವಾರಿ ಘಟಕ ಮಾಡಿ ಅಲ್ಲಿ ಕಸ ಬೇರ್ಪಡಿಸಿ ಗೊಬ್ಬರ ಮಾಡುವ ಯೋಜನೆಯನ್ನು ಮಾಡುವ ಯೋಜನೆ ಇದೆ ಅದು ಕಳೆದ ಐದಾರು ವರ್ಷಗಳಾದರೂ ಕೆಲವು ಕಡೆ ಪ್ರಾರಂಭವಾಗಿಲ್ಲ ಎನ್ನಲಾಗುತ್ತಿದೆ.

ಇನ್ನೂ ಜಿಲ್ಲೆಯ ಬಸ್ ನಿಲ್ದಾಣದಲ್ಲಿ ಎಲ್ಲೆಂದರಲ್ಲಿ ಕಸ, ಬಯಲು ಶೌಚಾಲಯ ಇದ್ದು ಇದರಿಂದ ಬೇರೆ ನಗರದಿಂದ ಬಂದು ಬಸ್ಸುಗಳಿಂದ ಪ್ರಯಾಣಿಕರು ಇಳಿದು ನೀಡಿದರೆ ಕಸವೇ ಇವರನ್ನ ಸ್ವಾಗತ ಮಾಡುವಂತಿದೆ. ಇವುಗಳನ್ನು ಸ್ವಚ್ಛತೆ ಮಾಡುವದು ಸ್ಥಳೀಯ ಸಂಸ್ಥೆಗಳಿಗೆ ಗಳ ವ್ಯಾಪ್ತಿಗೆ ಬರುದಿಲ್ಲ ಎನ್ನುತ್ತಿದ್ದಾರೆ ಯಾರು ಇದನ್ನು ಸ್ವಚ್ಛತೆ ಮಾಡುವ ಜವಾಬ್ದಾರಿ ಹೊಂದಿರುತ್ತಾರೆ ಎನ್ನುವದು ಪ್ರಶ್ನೆಯಾಗಿ ಉಳಿದಿದೆ.

ಜನಪ್ರತಿನಿಧಿಗಳು ಕೇವಲ ಒಂದು ಗಾಂಧಿ ಜಯಂತಿ ದಿನ ಸ್ವಚ್ಛ ಸೇವಾ ಎಂದು ಅಂದು ಪೊರಕೆ ಹಿಡಿದು ಪೋಜು ಕೊಟ್ಟು ಪೋಟೋ ಕ್ಲಿಕ್ಕಿಸಿಕೊಂಡು ದೊಡ್ಡ ದೊಡ್ಡದಾಗಿ ಭಾಷಣ ಮಾಡಿ ನಂತರ ಮಾರನೇ ದಿನ ತಿರುಗಿ ನೋಡದೆ ಎಲ್ಲೆಂದರಲ್ಲಿ ಕಸವನ್ನು ಹಾಕುತ್ತಾರೆ. ನಮ್ಮ ಸುತ್ತಮುತ್ತ ಸ್ವಚ್ಛತೆಯ ಮಾಡುವದು ಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರ ಕರ್ತವ್ಯ ಅಲ್ಲ ನಮ್ಮೆಲ್ಲರ ಕರ್ತವ್ಯ ಅನ್ನುವದನ್ನು ಎಲ್ಲರೂ ಅರಿಕೊಳ್ಳಬೇಕು.

ಸಮಾಚಾರ ಸಣ್ಣದಲ್ಲ

ಮಕ್ಕಳ ರಕ್ಷಣಾ ಘಟಕದಿಂದ ಅರ್ಜಿ ಆಹ್ವಾನ

ಧಾರವಾಡ: ಪೋಕ್ಸೋ2012 ರ ಕಾಯ್ದೆಯಡಿ ಸೆಕ್ಷನ್39 ರ ಅನುಷ್ಠಾನ ಸಂಬಂಧ ಸಂತ್ರಸ್ತ ಮಕ್ಕಳಿಗೆ ಬೆಂಬಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಮಕ್ಕಳೊಂದಿಗೆ ಕೆಲಸ ಮಾಡುವಲ್ಲಿ ಕನಿಷ್ಠ 3 ವರ್ಷಗಳ ಅನುಭವದೊಂದಿಗೆ ಸಮಾಜ ಕಾರ್ಯ, ಸಮಾಜಶಾಸ್ತ್ರ ಮನ:ಶಾಸ್ತ್ರ ಅಥವಾ ಮಕ್ಕಳ ಅಭಿವೃದ್ಧಿ ವಿಷಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದಿರಬೇಕು. ಮಕ್ಕಳ ಆರೈಕೆ ಕೇಂದ್ರದಲ್ಲಿ ಮಕ್ಕಳೊಂದಿಗೆ ಕೆಲಸ ಮಾಡುವ ಅಧಿಕಾರಿಗಳು ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುವವರು ಕೂಡ ಅರ್ಜಿ ಸಲ್ಲಿಸಬಹುದು. ಅರ್ಹ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಸರ್ಕಾರಿ ವೀಕ್ಷಣಾಲಯ, ಡಿ.ಸಿ. ಕಂಪೌಂಡ, ಹಿಂದಿ ಪ್ರಚಾರ ಸಭಾ ಹತ್ತಿರದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿಯಿಂದ ಅರ್ಜಿ ಪಡೆದು, ಅ. 30 ,2024 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ. 0836-2742420 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನೀತಾ ವಾಡಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮರ ತೆರವಿಗೆ ಬಹಿರಂಗ ಹರಾಜು

ಧಾರವಾಡ: ಕಲಘಟಗಿ ವಲಯದ ಮುಂಡಗೋಡ ರಸ್ತೆಯ ಕೆಎಬಿ ಕಾಲೋನಿಯ ರಸ್ತೆ ಪಕ್ಕದಲ್ಲಿ ಬೆಳೆದ ಅಪಾಯಕಾರಿಯಾಗಿರುವ ಒಂದು ಬೇವು ಮರವು ಮಳೆ-ಗಾಳಿಗೆ ಟಿಪ್ಪರ ವಾಹನದ ಮೇಲೆ ಬಿದ್ದಿದ್ದು, ಇದ್ದ ಸ್ಥಿತಿಯಲ್ಲಿರುವ ಮರವನ್ನು ತೆರುವುಗೊಳಿಸಲು ಕಲಘಟಗಿ ವಲಯ ಅರಣ್ಯ ಅಧಿಕಾರಿ ಕಚೇರಿಯಲ್ಲಿ ಅ. 30, 2024 ರಂದು ಮಧ್ಯಾಹ್ನ 3 ಗಂಟೆಗೆ ಬಹಿರಂಗ ಹರಾಜು ಮಾಡಲಾಗುವುದು. ಮರ ಸಂರಕ್ಷಣಾ ಕಾಯ್ದೆ 1976 ರ ಸೆಕ್ಷನ್ 8 ರ ಸೆಕ್ಷನ್ ಗಳಲ್ಲಿ ಅಗತ್ಯ ಪಡಿಸಿರುವಂತೆ ಈ ಬಗ್ಗೆ ತಕರಾರು ಸಲ್ಲಿಸ ಬಯಸುವವರು ತಮ್ಮ ತಕರಾರನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಧಾರವಾಡ ಉಪ ವಿಭಾಗ, ಧಾರವಾಡ ಹಾಗೂ ಧಾರವಾಡದ ಕೆ.ಸಿ.ಪಾರ್ಕ ಎದುರು ಅರಣ್ಯ ಸಂಕೀರ್ಣದಲ್ಲಿರುವ ಮರ ಅಧಿಕಾರಿಯವರಿಗೆ ಲಿಖಿತ ರೂಪದಲ್ಲಿ ಅಕ್ಟೋಬರ್ 29, 2024 ರ ಒಳಗಾಗಿ ಸಲ್ಲಿಸಬಹುದಾಗಿದೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಲವು ಯೋಜನೆಗಳಿಗೆ ಅರ್ಜಿ ಆಹ್ವಾನ

ಧಾರವಾಡ: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ 2024-25 ನೇ ಸಾಲಿಗೆ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಉದ್ಯಮ ಶೀಲತಾ ಅಭಿವೃದ್ಧಿಯೋಜನೆ, ಉದ್ಯಮ ಶೀಲತಾ ಅಭಿವೃದ್ಧಿಸ್ವಾವಲಂಬಿ ಸಾರಥಿ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆ ಹಾಗೂ ಗಂಗಾ ಕಲ್ಯಾಣ ಯೋಜನೆಗಳಡಿ ಸಹಾಯಧನ ಮತ್ತು ಸಾಲ ಸೌಲಭ್ಯ ಒದಗಿಸಲು ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಹುಬ್ಬಳ್ಳಿ ಧಾರವಾಡ ಒನ್ ಕೇಂದ್ರಗಳಲ್ಲಿ ಸೇವಾ ಸಿಂಧು ಪೋರ್ಟಲ ಮೂಲಕ ನವೆಂಬರ 23, 2024 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಲ್ಯಾಣ ಮಿತ್ರ ಸಹಾಯವಾಣಿ ಸಂಖ್ಯೆ 9482300400 ಹಾಗೂ ನಿಗಮದ ವೆಬ್ ಸೈಟ್, ಜಿಲ್ಲಾ ವ್ಯವಸ್ಥಾಪಕರ ಕಛೇರಿಗಳನ್ನು ಸಂಪರ್ಕಿಸಬಹುದು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಚಿಕ್ಕನೆರ್ತಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ 3 ನೇ ತರಗತಿ ವಿದ್ಯಾರ್ಥಿನಿ ಆಲಿಯಾ ನದಾಫ್, ರಾಣಿ ಚೆನ್ನಮ್ಮ ಜಯಂತ್ಯುತ್ಸವದ ಅಂಗವಾಗಿ ಚೆನ್ನಮ್ಮನ ವೇಷಧರಿಸಿ ಗ್ರಾಮದ ಜನರ ಗಮನ ಸೆಳೆದಳು.

ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಚಿಕ್ಕನೆರ್ತಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಯಲ್ಲಿ ರಾಣಿ ಚೆನ್ನಮ್ಮ ಜಯಂತ್ಯುತ್ಸವದ ಅಂಗವಾಗಿ ಸಂಗೊಳ್ಳಿ ರಾಯಣ್ಣನ ವೇಷಧರಿಸಿ ಗ್ರಾಮದ ಜನರ ಗಮನ ಸೆಳೆದ ವಿದ್ಯಾರ್ಥಿ ಅಮಿತ್ ದೊಡ್ಡಮನಿ.

ಬೆಳೆ ಹಾನಿ ಪ್ರದೇಶಕ್ಕೆ ಸಚಿವ ಭೇಟಿ; ರೈತರ ಅಹವಾಲು ಆಲಿಕೆ

ಧಾರವಾಡ: ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ಅವರು ಜಿಲ್ಲೆಯ ಅಮ್ಮಿನಭಾವಿ ಹೋಬಳಿಯ ಗ್ರಾಮಗಳಿಗೆ ಭೇಟಿ ನೀಡಿ, ಜಿಲ್ಲೆಯ ಮಳೆ ಹಾನಿ ಕುರಿತು ಹಾನಿಯಾದ ಮನೆಗಳಿಗೆ ಹಾಗೂ ಜಮೀನುಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ರೈತರೊಂದಿಗೆ ಮಾತನಾಡಿದ ಸಚಿವರು, ಬೆಳೆ ಹಾನಿ ಕುರಿತು ಪ್ರತಿ ರೈತರ ಜಮೀನುಗಳನ್ನು ತಪ್ಪದೇ ನಿಖರವಾಗಿ ಸಮೀಕ್ಷೆ ಮಾಡಿ, ದಾಖಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸರ್ಕಾರಕ್ಕೆ ಜಿಲ್ಲೆಯ ಬೆಳೆ ಹಾನಿ ಕುರಿತು ವಿಶೇಷ ವರದಿ ಸಲ್ಲಿಸಿ, ಪರಿಹಾರ ಪಡೆಯಲು ಕ್ರಮವಹಿಸಲಾಗುವುದು ಎಂದರು.

ಈ ವಾರವೂ ಮಳೆ ಮುಂದುವರೆಯುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದು, ರೈತರಿಗೆ ಹಾಗೂ ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ತಕ್ಷಣ ಪರಿಹರಿಸಲು ಮತ್ತು ಗ್ರಾಮಗಳಲ್ಲಿಯ ಸ್ಥಾನಿಕ ಅಧಿಕಾರಿಗಳಿದ್ದು, ಜನರಿಗೆ ನೆರವಾಗಲು ಸೂಚಿಸಲಾಗಿದೆ. ಬೆಳೆ ನಷ್ಟ ಕುರಿತು ಬೇಗ ವರದಿ ಸಿದ್ದಪಡಿಸಲು ಹಾಗೂ ವಿಮೆ ಮಾಡಿರುವ ರೈತರಿಗೆ ತಕ್ಷಣದ ಪರಿಹಾರ ಸಿಗುವಂತೆ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ನಿರ್ದೇಶಿಸಲಾಗಿದೆ ಎಂದು ಅವರು ಹೇಳಿದರು.

ಅಕಾಲಿಕ ಮತ್ತು ಅತಿಯಾದ ಮಳೆಯಿಂದ ಆಗುವ ನಷ್ಟದಿಂದ ಪರಿಹಾರ ಪಡೆಯಲು ಬೆಳೆ ಸಮೀಕ್ಷೆ ಹಾಗೂ ಬೆಳೆ ವಿಮೆ ಮಾಡಿಸಬೇಕು. ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಬೆಳೆ ಆ್ಯಪ್ ಹಾಗೂ ಬೆಳೆ ವಿಮೆ ಕುರಿತು ವ್ಯಾಪಕ ಪ್ರಚಾರ ಮಾಡುವ ಮೂಲಕ ರೈತರಲ್ಲಿ ಜಾಗೃತಿ ಮೂಡಿಸಬೇಕು. ಈ ಕುರಿತು ಜಾಗೃತಿ ಅಭಿಯಾನ ಹಮ್ಮಿಕೊಳ್ಳುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ತಹಸೀಲ್ದಾರ್ ಡಿ.ಎಚ್.ಹೂಗಾರ ಅವರು ಮಳೆಯಿಂದಾಗಿ ಗ್ರಾಮದಲ್ಲಿ ಒಟ್ಟು 14 ಮನೆಗಳು ಹಾನಿಯಾಗಿವೆ ಎಂದು ತಿಳಿಸಿದರು.

ಅಕಾಲಿಕ ಮಳೆಯಿಂದಾಗಿ ಕೊಯ್ಲಿಗೆ ಬಂದಿದ್ದ ಅಮ್ಮಿನಭಾವಿ ಗ್ರಾಮದ ರೈತ ಬಸಪ್ಪ ಧರ್ಮಪ್ಪ. ರಸಾಳೆ ಅವರ ಈರುಳ್ಳಿ ತೋಟಕ್ಕೆ ಭೇಟಿ ನೀಡಿದ ಸಚಿವರು ಸ್ವತಃ ಈರುಳ್ಳಿ ಬೆಳೆ ಹಾಳಾಗಿರುವುದನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ರೈತ ಬಸಪ್ಪ ಮಾತನಾಡಿ, ತಮ್ಮ ಪಾಲಿಗೆ ಇರುವ ಎರಡು ಎಕರೆ ಜಮೀನಿನಲ್ಲಿ ಮಳೆ ಆಶ್ರಿತ ಬೆಳೆಯಾಗಿ ಈರುಳ್ಳಿಯನ್ನು ಬೆಳೆದಿದ್ದೆ. ಕೊಯ್ಲಿಗೆ ಬಂದ ಸಮಯದಲ್ಲಿ ಈ ಮಳೆಯಿಂದಾಗಿ ಭೂಮಿಯಲ್ಲಿಯೇ ಈರುಳ್ಳಿ ಕೊಳೆಯುತ್ತಿದೆ. ಇದರಿಂದ ನನಗೆ ತುಂಬಾ ನಷ್ಟವಾಗಿದ್ದು, ಪರಿಹಾರ ದೊರಕಿಸಿಕೊಡುವಂತೆ ಸಚಿವರಲ್ಲಿ ಮನವಿ ಮಾಡಿದರು.

ರೈತ ಮಹಿಳೆ ಫಕ್ಕಿರವ್ವಾ. ಮರಬಸಪ್ಪ. ಯಡಳ್ಳಿ ಅವರು ತಮ್ಮ ಎರಡು ಎಕರೆ ಜಮೀನುದಲ್ಲಿ ಬೆಳೆದಿಂದ ಹತ್ತಿ ಬೆಳೆ ಕೊಯ್ಲಿಗೆ ಬಂದಿದ್ದು, ಮಳೆಯಿಂದಾಗಿ ಗಿಡದಲ್ಲಿಯೇ ಹತ್ತಿ ಹಾಳಾಗಿದೆ. ಮುಂದಿನ ಬಿತ್ತನೆಗಾಗಿ ಸಹಾಯ ಮಾಡುವಂತೆ ತಮ್ಮ ಹತ್ತಿ ತೋಟಕ್ಕೆ ಭೇಟಿ ನೀಡಿದ್ದ ಸಚಿವರಲ್ಲಿ ವಿನಂತಿಸಿದರು. ಮಳೆ ಹಾನಿ ಪ್ರದೇಶಗಳಿಗೆ ಸಚಿವರ ಭೇಟಿ ಸಂದರ್ಭದಲ್ಲಿ ಜಿಲ್ಲಾಧಿಕಾರಿ ದಿವ್ಯ ಪ್ರಭು, ಜಿಲ್ಲಾ ಪಂಚಾಯತ ಸಿಇಓ ಸ್ವರೂಪ ಟಿ.ಕೆ., ಜಿಲ್ಲಾ ಪೊಲೀಸ್ ಅಧಿಕ್ಷಕ ಡಾ.ಗೋಪಾಲ ಬ್ಯಾಕೋಡ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಅಂತರವಳ್ಳಿ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಕೆ.ಸಿ ಭದ್ರಣ್ಣವರ, ಉಪವಿಭಾಗಾಧಿಕಾರಿ ಶಾಲಂ ಹುಸೇನ್, ತಹಸೀಲ್ದಾರ್ ಡಿ.ಎಚ್.ಹೂಗಾರ, ತಾಲೂಕ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿ ಗಂಗಾಧರ ಕಂದಕೂರ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಇಮ್ತಿಯಾಜ್ ಚಂಗಾಪುರಿ, ಕೃಷಿ ಸಹಾಯಕ ನಿರ್ದೇಶಕ ಅನಗೌಡರ, ಉಪ ತಹಸೀಲ್ದಾರ್ ಅಜ್ಜಪ್ಪ ಮಂಗಳಗಟ್ಟಿ, ಕಂದಾಯ ನಿರೀಕ್ಷಕರಾದ ಗುರು ಸುಣಗಾರ, ಸಂಪತ್ತ ಕುಮಾರ ಗುರುವಡಿಯರ, ಉಪಾಧ್ಯಕ್ಷರು, ಸದಸ್ಯರು, ಗ್ರಾಮಸ್ಥರು, ಮುಖಂಡರು ಉಪಸ್ಥಿತರಿದ್ದರು.

ಚನ್ನಮ್ಮಳ ಜೀವನ, ಸಾಧನೆ ಪ್ರೇರಕ ಶಕ್ತಿಯಾಗಿದೆ

ಧಾರವಾಡ: ದೇಶದಲ್ಲಿ ಮೊದಲ ಸ್ವಾತಂತ್ರ ಸಂಗ್ರಾಮದ ಕಹಳೆ ಮೊಳಗಿಸಿದ್ದ ಕಿತ್ತೂರು ರಾಣಿ ಚನ್ನಮ್ಮ ಇಂದಿನ ಮಹಿಳೆಯರಿಗೆ ಆದರ್ಶ ಪ್ರಾಯರಾಗಿದ್ದಾರೆ. ಅವರ ಹೋರಾಟ, ಧೈರ್ಯ, ಸ್ಥೈರ್ಯ ಮತ್ತು ಸ್ವಾಭಿಮಾನಗಳು ಪ್ರತಿಯೊಬ್ಬ ಮಹಿಳೆಯಲ್ಲಿ ಇರಬೇಕು. ನಮ್ಮ ಹೆಣ್ಣುಮಕ್ಕಳಿಗೆ ರಾಣಿ ಚನ್ನಮ್ಮನ ಗುಣಗಳನ್ನು ಬೆಳೆಸಬೇಕು. ಸ್ವಾತಂತ್ರ ಸಂಗ್ರಾಮದ ಬೆಳ್ಳಿಚುಕ್ಕಿ, ಸ್ವಾಭಿಮಾನಿ ಕಿತ್ತೂರು ರಾಣಿ ಚನ್ನಮ್ಮ ಆದರ್ಶ ಪ್ರಾಯಳಾಗಿದ್ದು, ಅವರ ಜೀವನ ಮತ್ತು ಸಾಧನೆಗಳು ಎಲ್ಲರಿಗೂ ಪ್ರೇರಕ ಶಕ್ತಿಯಾಗಿವೆ ಎಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು ಹೇಳಿದರು.

ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗಿದ್ದ ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಕಾರ್ಯಕ್ರಮದಲ್ಲಿ ಕಿತ್ತೂರು ರಾಣಿ ಚನ್ನಮ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಸಲ್ಲಿಸಿ, ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಿತ್ತೂರಿನ ರಾಣಿ ಚನ್ನಮ್ಮನ ಬಗ್ಗೆ ಅನೇಕ ರೀತಿಯ ಜನಪದ ಕಥೆಗಳು, ಜನಪದ ಗೀತೆಗಳು, ಗೀಗಿ ಪದಗಳು ಸ್ವಾರಸ್ಯಕರವಾಗಿರುವ ಮತ್ತು ಐತಿಹಾಸಿಕವಾಗಿರುವ ಕಥೆಗಳನ್ನು ತಿಳಿಸುತ್ತವೆ. ಚಿಕ್ಕಂದಿನಿಂದಲೇ ಕುದುರೆ ಸವಾರಿ, ಕತ್ತಿವರಸೆ ಮತ್ತು ಬಿಲ್ಲುಗಾರಿಕೆಯಲ್ಲಿ ತರಬೇತಿ ಪಡೆದಿದ್ದ ಚನ್ನಮ್ಮಳು, ಕಿತ್ತೂರಿನ ದೇಸಾಯಿ ಮನೆತನದ ರಾಜಾ ಮಲ್ಲಸರ್ಜನನ್ನು 15 ನೇ ವಯಸ್ಸಿನಲ್ಲಿ ವಿವಾಹವಾದರು ಎಂದರು.

ಮಲ್ಲಸರ್ಜನ ನಿಧನಾ ನಂತರ ಕಿತ್ತೂರು ಸಂಸ್ಥಾನದ ಆಡಳಿತ ಚುಕ್ಕಾಣಿ ಹಿಡಿದ ಚನ್ನಮ್ಮಳು ಸ್ವಾಭಿಮಾನದಿಂದ ಸ್ವಾತಂತ್ರಕ್ಕಾಗಿ ಹೋರಾಡಿ ಇತಿಹಾಸ ಸೃಷ್ಟಿಸಿದಳು.

ಕಿತ್ತೂರಿನ ವಿಜಯೋತ್ಸವಕ್ಕೆ ಎರಡು ನೂರು ವರ್ಷಗಳು ತುಂಬಿರುವ ಪ್ರಯುಕ್ತ, ರಾಣಿ ಚನ್ನಮ್ಮಳ ಸಂಸ್ಮರಣೆ ಮತ್ತು ಕಿತ್ತೂರಿನ ಇತಿಹಾಸವನ್ನು ನಾಡಿನೂದ್ದಕ್ಕೂ ಪ್ರಸರಿಸಿ, ಕೀರ್ತಿ ಹರಡಲು ರಾಜ್ಯ ಸರಕಾರವು ಕಿತ್ತೂರು ವಿಜಯೋತ್ಸವದ ಜ್ಯೋತಿ ರಥ ಯಾತ್ರೆಯನ್ನು ಹಮ್ಮಿಕೊಂಡಿದೆ. ಜಿಲ್ಲೆಯಲ್ಲಿ ಜ್ಯೋತಿ ರಥ ಯಾತ್ರೆಯನ್ನು ಅದ್ದೂರಿಯಾಗಿ ಸ್ವಾಗತಿಸಿ, ಬಿಳ್ಕೋಡಲಾಗಿದೆ ಎಂದು ಅವರು ಹೇಳಿದರು.

ಕಿತ್ತೂರಿನ ರಾಣಿ ಚನ್ನಮ್ಮಳ ಜೀವನ ಚರಿತ್ರೆಯನ್ನು ಶಾಲಾ ಮಕ್ಕಳ ಪಠ್ಯ ಪುಸ್ತಕದಲ್ಲಿ ಅಳವಡಿಸಿ, ವಿದ್ಯಾರ್ಥಿಗಳಲ್ಲಿ ನಾಡಿನ ನಾಯಕರ ತ್ಯಾಗ, ಬಲಿದಾನ, ಸಾಧನೆಗಳನ್ನು ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದು ಅಪರ ಜಿಲ್ಲಾಧಿಕಾರಿ ತಿಳಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯೆ ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ ಮತ್ತು ಚಿಂತಕ ಮಡಿವಾಳಪ್ಪ ಶಿರಿಯಣ್ಣವರ ಅವರು ಕಿತ್ತೂರು ರಾಣಿ ಚನ್ನಮ್ಮ ಅವರ ಜೀವನ ಮತ್ತು ಸಾಧನೆ ಬಗ್ಗೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಸ್ವಾಗತಿಸಿ, ಆರತಿ ದೇವ ಶಿಕಾಮಣಿ ಅವರು ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ಪೊಲೀಸ್ ಆಯುಕ್ತ ಪ್ರಶಾಂತ ಸಿದ್ದನಗೌಡರ, ಮಹಾನಗರ ಪಾಲಿಕೆ ಸದಸ್ಯ ಶಂಭುಗೌಡ ಸಾಲಮನಿ, ಹಿರಿಯರಾದ ಸಿ.ಎಸ್. ಪಾಟೀಲ, ಸಿ.ಎಸ್. ನೇಗಿನಾಳ, ರಾಜು ಮಟ್ಟಿ, ಎನ್. ಆರ್.ಬಾಳಿಕಾಯಿ, ಗಾಮನಗಟ್ಟಿ ಹಾಗೂ ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

ಕಾಸ್ಮಸ್ ಕ್ಲಬ್ ಸಾರ್ವಜನಿಕರಿಗೂ ಉಪಯೋಗವಾಗಲಿ: ಸಚಿವ ಲಾಡ್

ಧಾರವಾಡ: ನಗರದ ಪ್ರತಿಷ್ಠಿತ ಕಾಸ್ಮಸ್ ಕ್ಲಬ್ ಕೇವಲ ಸದಸ್ಯರಿಗೆ ಮೀಸಲಿರದೇ ಸಾರ್ವಜನಿಕ ಜೀವನಕ್ಕೂ ಉಪಯೋಗವಾಗುವ ರೀತಿಯಲ್ಲಿ ನಡೆದುಕೊಳ್ಳಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಕ್ಲಬ್‌ನ ನೂತನ ಗ್ಯಾಲರಿ ಉದ್ಘಾಟಿಸಿದ ಮಾತನಾಡಿದ ಸಚಿವರು, ಉತ್ತಮವಾದ ಯೋಜನೆಯ ಜೊತೆಗೆ ಮುನ್ನಡೆಯುವವರೊಂದಿಗೆ ನಾನು ಸದಾಕಾಲ ಇರುತ್ತೇನೆ ಎಂದರು.

ಕ್ಲಬ್‌ನ ನಿತಿನ್ ತಗರಪುರ, ಎಂ.ಎಂ.ಹಿರೇಮಠ, ಅಶೋಕ ಹಿರೇಮಠ, ಎಸ್.ಎಂ.ರುದ್ರಸ್ವಾಮಿ, ಎಸ್.ಬಿ.ಕಿತ್ತೂರ, ವಿಜಯ ಸುಣಗಾರ, ಎಂ.ಎಸ್.ಹಾಲಭಾವಿ, ಅಜ್ಜಯ್ಯ ಗುಡ್ಡದಮಠ, ಸಿ.ಎಸ್.ಜೋಗಿಹಳ್ಳಿ, ಬಿ.ಎನ್.ಜಮಖಂಡಿ, ಎಚ್.ಎಫ್. ಹೆಬ್ಬಾಳ, ಸಂದೀಪ ಪೈ, ದೀಪಕ ಚಿಂಚೋರೆ, ಬಿ.ಬಿ.ತೇಗೂರ, ಪರಮೇಶ್ವರ ತೇಗೂರ, ವಿ.ಡಿ.ಕಾಮರೆಡ್ಡಿ, ವಿನೋದ ಪಾಟೀಲ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬಿಜೆಪಿ ರೈತ ಮೋರ್ಚಾದಿಂದ ರೈತರಿಗೆ ಎತ್ತಿನ ಎಣ್ಣೆ ಗಾಣ

ಹುಬ್ಬಳ್ಳಿ: ಬಿಜೆಪಿ ರೈತ ಮೋರ್ಚಾ ವತಿಯಿಂದ ಪ್ರಧಾನ ಮಂತ್ರಿ ಫಾರ್ಮುಲೈಜೇಷನ್ ಆಫ್ ಮೈಕ್ರೋ ಫುಡ್ ಪ್ರೊಸೆಸ್ಸಿಂಗ್ ಎಂಟರ್ ಪ್ರೆಸಿಸ್ ಯೋಜನೆಯಡಿ ರೈತ ಮಹಿಳೆಯರಿಗೆ ಎತ್ತಿನ ಎಣ್ಣೆ ಗಾಣಗಳನ್ನು ಒದಗಿಸಲು ಯೋಜಿಸಲಾಗಿದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಬಿ.ಜೆ.ಪಿ. ರೈತ ಮೋರ್ಚಾ ಕಾರ್ಯದರ್ಶಿ ವಿದ್ಯಾ ವ್ಹಿ.ಎಂ. ತಿಳಿಸಿದ್ದಾರೆ.

ಇತ್ತೀಚೆಗೆ ನಗರದಲ್ಲಿ ಕೇಂದ್ರ ಆಹಾರ ಸಚಿವ ಪ್ರಹ್ಲಾದ ಜೋಶಿ ಅವರನ್ನು ಭೇಟಿ ಮಾಡಿ ಚರ್ಚಿಸಿದ ಅವರು, ಉತ್ತರ ಕರ್ನಾಟಕ ಭಾಗದಲ್ಲಿಯೇ ಅತಿ ಹೆಚ್ಚು ಕುಸುಬೆ ಮತ್ತು ಶೇಂಗಾ ಬೆಳೆಯುವ ರೈತರಿದ್ದು, ಇಲ್ಲಿಯ ರೈತರಿಗೆ ಪಿ.ಎಂ.ಎಫ್.ಎ.ಇ. ಯೋಜನೆಯಡಿ ಎತ್ತಿನ ಎಣ್ಣೆ ಗಾಣಗಳನ್ನು ಕೊಡಿಸಲು ನಿರ್ಧರಿಸಲಾಗಿದೆ. ಎಣ್ಣೆ ಗಾಣದ ಆರಂಭಕ್ಕೆ ಪಿ.ಎಂ.ಎಫ್.ಎ.ಇ.' ಯೋಜನೆಯಡಿ ಬ್ಯಾಂಕ್ ನೀಡುವ ಸಾಲಸೌಲಭ್ಯದಲ್ಲಿ ಶೇ.50ರಷ್ಟು ಸಬ್ಸಿಡಿ ಲಭಿಸುತ್ತಿದೆ. ಉಳಿದ ಶೇ.50ರಷ್ಟು ಹಣವನ್ನು ಮಾತ್ರ ರೈತರು ಮರುಪಾವತಿ ಮಾಡಬೇಕಾಗಿದೆ. ರೈತ ಕುಟುಂಬಗಳಲ್ಲಿ ದೇಶಿ ಎತ್ತು ಮತ್ತು ಹಸುಗಳ ಸಂತತಿ ಸಂವರ್ಧಿಸಬೇಕು. ಯಾವುದೇ ಕಾರಣಕ್ಕೂ ಎತ್ತು ಮತ್ತು ಹಸುಗಳನ್ನು ಕಸಾಯಿಖಾನೆಗೆ ನೀಡದಂತೆ ಜನಜಾಗೃತಿ ಉಂಟು ಮಾಡುವುದೂ ಇಲ್ಲಿಯ ಮತ್ತೊಂದು ಉದ್ದೇಶವಾಗಿದೆ. ಜೊತೆಗೆ ಜನರ ಆರೋಗ್ಯ ಕಾಪಾಡುವಲ್ಲಿ ಶುದ್ಧ ಗಾಣದ ಎಣ್ಣೆಯನ್ನು ಹೆಚ್ಚು ಬಳಕೆ ಮಾಡುವುದು ಹಾಗೂ ರೈತ ಮಹಿಳೆಯರು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಬೇಕೆನ್ನುವುದು ಬಿ.ಜೆ.ಪಿ. ರೈತ ಮೋರ್ಚಾದ ಪ್ರಮುಖ ಉದ್ದೇಶಗಳಾಗಿವೆ ಎಂಬುದನ್ನು ವಿದ್ಯಾ ಅವರು ಸಚಿವರ ಗಮನಕ್ಕೆ ತಂದರು. ಉದ್ಯಮಿ ಭರತ ಭೇರುಲಾಲ್ ಜೈನ್ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.ಕೇಂದ್ರ ಸಚಿವ ಜೋಶಿ ಅವರು ಬಿ.ಜೆ.ಪಿ. ರೈತ ಮೋರ್ಚಾದ ಈ ಕಾರ್ಯವನ್ನು ಬೆಂಬಲಿಸಿ, ಆದಷ್ಟು ಶೀಘ್ರವಾಗಿ ಹುಬ್ಬಳ್ಳಿಯ ಬಿ.ಜೆ.ಪಿ. ಕಾರ್ಯಾಲಯದಲ್ಲಿ ಹಮ್ಮಿಕೊಳ್ಳುವ ಸಮಾರಂಭದಲ್ಲಿ ಎತ್ತಿನ ಎಣ್ಣೆ ಗಾಣಗಳನ್ನು ವಿತರಣೆ ಮಾಡಲು ಒಪ್ಪಿಗೆ ಸೂಚಿಸಿದರು. ಎತ್ತಿನ ಎಣ್ಣೆ ಗಾಣವನ್ನು ಆರಂಭಿಸಲು ಆಸಕ್ತಿ ಹೊಂದಿರುವ ರೈತ ಮಹಿಳೆಯರು ತಮ್ಮ ಮೊಬೈಲ್- 9845255764ಕ್ಕೆ ಸಂಪರ್ಕಿಸುವಂತೆ ವಿದ್ಯಾ ವ್ಹಿ.ಎಂ. ಮಾಧ್ಯಮ ಪ್ರಕಟಣೆಯಲ್ಲಿ ಕೋರಿದ್ದಾರೆ.

ಬಿತ್ತನೆ ಬೀಜ ವಿತರಿಸುವಂತೆ ಪ್ರಸ್ತಾವನೆ ಸಲ್ಲಿಸಿ

ಜಿಪಂ ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ ಸಚಿವ ಸಂತೋಷ್ ಲಾಡ್ ಸೂಚನೆ

ಧಾರವಾಡ: ಅತಿಯಾದ ಮಳೆಯಿಂದಾಗಿ, ಮುಂಗಾರಿನ ಫಸಲು ಕೊಯ್ಲು ಹಂತದಲ್ಲಿ ನಾಶವಾಗಿದ್ದು, ಹಿಂಗಾರು ಬಿತ್ತನೆ ಮಾಡಿದ್ದ ಬೀಜಗಳು ಕೊಚ್ಚಿಕೊಂಡು ಹೋಗಿ ನಾಟಿ ಬಂದಿಲ್ಲ. ಆದ್ದರಿಂದ ಈಗಾಗಲೇ ಕೃಷಿ ಇಲಾಖೆಯಿಂದ ಹಿಂಗಾರು ಬಿತ್ತನೆಗೆ ಬೀಜ ಪಡೆದಿದ್ದ ರೈತರಿಗೆ ಮತ್ತೊಮ್ಮೆ ರಿಯಾತಿಯಲ್ಲಿ ಬಿತ್ತನೆ ಬೀಜ ವಿತರಿಸಲು ಅಗತ್ಯವಿರುವ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಬೇಕೆಂದು ಕಾರ್ಮಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ನಡೆದ 2024-25 ನೇ ಸಾಲಿನ ಸೆ. ಅಂತ್ಯಕ್ಕೆ ಕೊನೆಗೊಂಡ 2ನೇ ತ್ರೈಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅನೇಕ ಇಲಾಖೆಗಳು ತಮಗೆ ನಿಗದಿಪಡಿಸಿದ ಆರ್ಥಿಕ ಮತ್ತು ಭೌತಿಕ ಗುರಿಯನ್ನು ತಲುಪಿದ್ದು, ಇದು ಉತ್ತಮ ಪ್ರಗತಿ ಆಗಿದೆ. ಇನ್ನೂ ಕೆಲವು ಇಲಾಖೆಗಳು ಪ್ರಗತಿಯಲ್ಲಿ ಹಿಂದುಳಿದಿದ್ದು, ಅವರು ಸಹ ನಿಗದಿತ ಗುರಿ ಸಾಧಿಸಬೇಕೆಂದು ಸಚಿವ ಸಂತೋಷ ಲಾಡ್ ಅವರು ಹೇಳಿದರು.

ಅ. 1 ರಿಂದ 14 ರವರೆಗೆ ಜಿಲ್ಲೆಯಲ್ಲಿ ಸುರಿದ ಮಳೆಗೆ ಸುಮಾರು 25 ಸಾವಿರ ಹೆಕ್ಟೇರ್ ಬೆಳೆ ನಾಶವಾಗಿದ್ದು, ಅ. 14 ರ ನಂತರದ ನಿರಂತರ ಮಳೆಗೆ ಮತ್ತೆ ಬೆಳೆ ಹಾನಿ, ಬಿತ್ತನೆ ಹಾನಿ ಆಗಿದೆ. ಈ ಕುರಿತು ಸರಿಯಾದ ಸಮೀಕ್ಷೆ ಮಾಡಿ, ಸೂಕ್ತ ವರದಿ ಸಲ್ಲಿಸಬೇಕೆಂದು ಸಚಿವರು ಸೂಚಿಸಿದರು.

ಮುಂದಿನ ನಾಲ್ಕು ದಿನ ಮಳೆ ಮುಂದುವರೆಯುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಪರಿಸ್ಥಿತಿಯಲ್ಲಿ ಎಲ್ಲ ಹಂತದ ಅಧಿಕಾರಿಗಳು ಕಚೇರಿಯಲ್ಲಿ ಕೂಡದೆ ಹಳ್ಳಿಗಳಿಗೆ ಭೇಟಿ ನೀಡಬೇಕು. ತಮ್ಮ ಇಲಾಖೆಗೆ ಸಂಬಂಧಿಸಿದ ಸೇವೆ, ಮೂಲಸೌಕರ್ಯ ಹಾಗೂ ಇತರೆ ಹಾನಿಗಳನ್ನು ಪರಿಶೀಲಿಸಿ, ತಕ್ಷಣ ಸಾರ್ವಜನಿಕರ ನೆರವಿಗೆ ಬರಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಳೆ ಹಾನಿ ಸಂದರ್ಭದಲ್ಲಿ ಮನೆ, ಜಮೀನು, ರಸ್ತೆ ಸೇತುವೆ, ಕಟ್ಟಡಗಳನ್ನು ಪರಿಶೀಲಿಸಿ ಸ್ಪಂದಿಸಬೇಕು. ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಕ್ಷೇತ್ರ ಭೇಟಿ ಮೂಲಕ ರೈತರ ಹಾನಿ ಕುರಿತು, ಜನಪ್ರತಿನಿಧಿಗಳ, ರೈತ ಮುಖಂಡರ ಗಮನಕ್ಕೆ ತಂದು ವರದಿ ರೂಪಿಸಬೇಕು. ಹಾನಿಯಾಗಿರುವ ಪ್ರತಿ ರೈತರ ಹೊಲಕ್ಕೆ ಖುದ್ದು ಇಲಾಖೆ ಸಿಬ್ಬಂದಿ, ವಿಮಾ ಕಂಪನಿ ಪ್ರತಿನಿಧಿಗಳು ಭೇಟಿ ನೀಡಿ ಪರಿಶೀಲಿಸಬೇಕು ಎಂದು ಸಚಿವರು ತಾಕೀತು ಮಾಡಿದರು.

ಅರಣ್ಯ ಇಲಾಖೆಯಿಂದ ಹೆಚ್ಚು ಸಸಿಗಳನ್ನು ವಿತರಿಸಬೇಕು. ವಿಶೇಷವಾಗಿ ನಗರ ಪ್ರದೇಶದ ಸಿ.ಎ.ಸೈಟು, ಉದ್ಯಾನವನ, ಕೆರೆಗಳ ದಂಡೆಯಲ್ಲಿ

ಸಸಿಗಳನ್ನು ನೆಟ್ಟು ಪೋಷಿಸಬೇಕು. ಅರಣ್ಯ ಪ್ರದೇಶದ ಒಳಗಡೆ ಖಾಲಿ ಇರುವ ಪ್ರದೇಶದಲ್ಲಿ ದಟ್ಟವಾದ ಅರಣ್ಯ ಬೆಳೆಸಲು ಸೂಕ್ತ ಯೋಜನೆ ರೂಪಿಸಬೇಕೆಂದು ಸಚಿವರು ತಿಳಿಸಿದರು.

ಗ್ರಾಮೀಣ ಕುಡಿಯುವ ನೀರು ಸರಬರಾಜುದಲ್ಲಿ ಅಷ್ಟಾಗಿ ಸಮಸ್ಯೆ ಇರದಿದ್ದರೂ, ನೀರು ಶುದ್ಧೀಕರಣ ಘಟಕಗಳ ದುರಸ್ತಿ ಬಗ್ಗೆ ದೂರುಗಳು ಬರುತ್ತಿವೆ. ಜಿಲ್ಲೆಯ ಎಲ್ಲ 476 ಆರ್.ಓ ಪ್ಲಾಂಟ್‌ಗಳನ್ನು ಗಮನಿಸಲು ಕೇಂದ್ರಸ್ಥಾನದಲ್ಲಿ ಡ್ಯಾಶ್ ಬೋರ್ಡ್ ವ್ಯವಸ್ಥೆ ಮಾಡಲು ಸಚಿವರು ಸೂಚಿಸಿದರು.

ಮಳೆಯಿಂದಾಗಿ ಗ್ರಾಮೀಣ ರಸ್ತೆಗಳು ಹಾಳಾಗಿವೆ. ಸಾರ್ವಜನಿಕರ ಓಡಾಟಕ್ಕೆ ತೊಂದರೆ ಆಗಿದೆ. ಲೋಕೋಪಯೋಗಿ ಮತ್ತು ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗದಿಂದ ಸಾರ್ವಜನಿಕರ ಸಂಚಾರಕ್ಕೆ ಅಗತ್ಯವಿರುವ ರಸ್ತೆಗಳ ತುರ್ತು ದುರಸ್ತಿಗೆ ಕ್ರಮವಹಿಸಬೇಕೆಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಶಾಸಕರಾದ ಎಂ.ಆರ್.ಪಾಟೀಲ, ಅಬ್ಬಯ್ಯ ಪ್ರಸಾದ್, ಜಿಲ್ಲಾಧಿಕಾರಿ ದಿವ್ಯ ಪ್ರಭು, ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಎಸ್.ಆರ್.ಪಾಟೀಲ, ಜಿಲ್ಲಾ ಉಪಾಧ್ಯಕ್ಷರು, ತಾಲೂಕು ಅಧ್ಯಕ್ಷರು, ಜಿಲ್ಲಾ ಕೆಡಿಪಿ ನಾಮನಿರ್ದೇಶಿತ ಸದಸ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

ಕರುನಾಡಿನಲ್ಲಿ ಮಹಾಮಳೆಗೆ ತತ್ತರಿಸಿದ ಜನ

ಹಲವೆಡೆ ಜನಜೀವನ ಅಸ್ತವ್ಯಸ್ತ | ರಾಜ್ಯದಲ್ಲಿ ಇಬ್ಬರು ಸಾವು | ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂರು ಹಸು ಸಾವು

ಬೆಂಗಳೂರು: ರಾಜ್ಯದ ಹಲವೆಡೆ ಮಳೆ ಮುಂದುವರಿದಿದ್ದು, ಹವಾಮಾನ ಇಲಾಖೆಯು ಮುಂದಿನ 24 ಗಂಟೆಗಳ ಕಾಲ 12 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಿದೆ. ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ ಹಾಗೂ ತುಮಕೂರು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಕೊಡಲಾಗಿದೆ. ಕಳೆದ ವಾರದಿಂದ ರಾಜ್ಯದಲ್ಲಿ ಸುರಿದ ಮಳೆಯಿಂದ ನಾನಾ ಅವಾಂತರ ಸೃಷ್ಟಿಯಾಗಿದೆ.

ಮೈಲಾರ ಮಹಾದೇವಪ್ಪ ಸ್ಮಾರಕ ಜಲಾವೃತ: ಹಾವೇರಿ ಜಿಲ್ಲೆಯಾದ್ಯಂತ ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿದೆ. ಹಾವೇರಿ ನಗರದ ಹೆಗ್ಗೇರಿ ನದಿ ಹಿಂಗಾರು ಮಳೆಗೆ ಕೋಡಿ ಬಿದ್ದಿದೆ. ಹೆಗ್ಗೇರಿ ಕೆರೆಯ ನೀರು ಸ್ವಾತಂತ್ರ್ಯ ಯೋಧ, ಹುತಾತ್ಮ ಮೈಲಾರ ಮಹಾದೇವ ಸ್ಮಾರಕಕ್ಕೆ ನುಗ್ಗಿದೆ. ಜೊತೆಗೆ, ಪಕ್ಕದಲ್ಲಿರುವ ಮೈಲಾರ ಮಹಾದೇವ ಸಂಕೀರ್ಣ ಜಲಾವೃತಕೊಂಡಿದೆ. ಇದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ. ಹಳ್ಳದ ಹೂಳೆತ್ತದೆ ಮತ್ತು ಸೂಕ್ತ ತಡೆಗೋಡೆ ನಿರ್ಮಾಣ ಮಾಡದೆ ಇರುವ ಕಾರಣಕ್ಕೆ ಮೈಲಾರ ಮಹಾದೇವ ಸ್ಮಾರಕವಿರುವ ವೀರಸೌಧ ಜಲಾವೃತಗೊಂಡಿದೆ ಎಂದು ಸ್ಥಳೀಯರು ಹೇಳಿದ್ದಾರೆ.

ಮೂರು ಹಸುಗಳ ಸಾವು: ಚಿಕ್ಕಮಗಳೂರು ಜಿಲ್ಲೆಯ ಕಡೂರಿನಲ್ಲಿ ಮಂಗಳವಾರ ಸಂಜೆ ಸುರಿದ ಭಾರೀ ಮಳೆಗೆ ಕೆರೆಕಟ್ಟೆಗಳಿಗೆ ನೀರು ಬಂದಿದೆ. ಮಲ್ಲಿದೇವಿಹಳ್ಳಿ ಬಳಿ ವೇದಾನದಿ ಮೈತುಂಬಿ ಹರಿಯುತ್ತಿದೆ. ಸಣ್ಣ ಸಣ್ಣ ಕೆರೆ ಕಟ್ಟೆಗಳು ಕೋಡಿ ಬಿದ್ದಿವೆ. ನಾರಣಾಪುರ ಗ್ರಾಮದ ಬಳಿ ಸೇತುವೆ ಮೇಲೆ ನೀರು ಹುಕ್ಕಿ ಹರಿದ ಪರಿಣಾಮ ಸೇತುವೆ ಮೇಲೆ ವಾಹನಗಳನ್ನು ನಿಧಾನವಾಗಿ ಚಲಾಯಿಸಲಾಯಿತು. ಮಳೆಯ ಪರಿಣಾಮ ತಾಲೂಕಿನ ಉಪ್ಪಿನಹಳ್ಳಿ ಮತ್ತು ಬಿಸಿಲೇಹಳ್ಳಿಯಲ್ಲಿ ತಲಾ ಒಂದು ಹಸು, ಜೋಡಿ ತಿಮ್ಮಾಪುರದಲ್ಲಿ ಎರಡು ಹಸುಗಳು ಮೃತಪಟ್ಟಿವೆ.

ಚಿಕ್ಕಮಗಳೂರಿನಲ್ಲಿ ಬಾರಿ ಮಳೆಗೆ ಹಳ್ಳ ಮತ್ತು ನದಿಗಳ ಪಕ್ಕದ ಕಾಫಿ ಮತ್ತು ಅಡಕೆ ತೋಟಗಳಿಗೆ ನೀರು ನುಗ್ಗುವ ಜತೆ ರಸ್ತೆಗಳು ಕೊಚ್ಚಿಹೋಗಿವೆ.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಮಹಿಳೆಗೆ?

← ಮೊದಲಪುಟದಿಂದ

ಈ ಹಿನ್ನೆಲೆಯಲ್ಲಿ ಹಲವರ ಹೆಸರುಗಳು ಹರಿದಾಡಿದ್ದವು. ಆದರೆ ಇದಕ್ಕೆ ಸಾಹಿತ್ಯ ವಲಯದಿಂದ ಭಾರಿ ವಿರೋಧ ವ್ಯಕ್ತವಾಗಿತ್ತು. ಹಾಗಿದ್ದರೆ ಸಾಹಿತ್ಯ ಸಮ್ಮೇಳನ ಎಂಬ ಹೆಸರೇಕೆ? ಎಂದು ಸಾಹಿತಿಗಳು ತರಾಟೆಗೆ ತೆಗೆದುಕೊಂಡಿದ್ದರು. ಹೀಗಾಗಿ, ಈ ಪ್ರಸ್ತಾವನೆಯನ್ನು ಕೈಬಿಟ್ಟು, ಸಾಹಿತಿಗಳನ್ನೇ ಆರಿಸಲು ಪರಿಷತ್ತು ಮುಂದಾಗಿದೆ.

ಈ ಬಾರಿಯೂ ಜಾತಿ ಲೆಕ್ಕಾಚಾರ: ಹಿರಿಯ ಲೇಖಕಿಯರಲ್ಲಿ ಹಲವರ ಹೆಸರುಗಳು ಈ ಸಮ್ಮೇಳನದ ಅಧ್ಯಕ್ಷತೆಗೆ ಕೇಳಿಬಂದಿವೆ. ಮಾಲತಿ ಪಟ್ಟಣಶೆಟ್ಟಿ, ವೀಣಾ ಶಾಂತೇಶ್ವರ, ವೈದೇಹಿ, ಬಿ.ಟಿ.ಲಲಿತಾ ನಾಯಕ್ ಅವರ ಹೆಸರುಗಳು ಮುಂಚೂಣಿಯಲ್ಲಿವೆ. ಎಂದಿನಂತೆ ಈ ಬಾರಿಯೂ ಅಧ್ಯಕ್ಷರ ಆಯ್ಕೆಯಲ್ಲಿ ಜಾತಿ ಲೆಕ್ಕಾಚಾರ ನಡೆಯುತ್ತಿದೆ. ಬಿ.ಟಿ.ಲಲಿತಾ ನಾಯಕ್ ಅವರ ಲಂಬಾಣಿ ಹಿನ್ನೆಲೆಯೂ ಇದರಲ್ಲಿ ಪ್ರಭಾವ ಬೀರುವ ಸಾಧ್ಯತೆ ಇದೆ. ಕಳೆದ ಬಾರಿಯಷ್ಟೇ ದೊಡ್ಡರಂಗೇಗೌಡರು ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದುದರಿಂದ, ಈ ವರ್ಷ ಇನ್ನೊಬ್ಬರು ಒಕ್ಕಲಿಗರನ್ನು ಪರಿಗಣಿಸುವುದು ಅನುಮಾನ. ಎಚ್.ಎಸ್.ಶ್ರೀಮತಿ, ಪ್ರತಿಭಾ ನಂದಕುಮಾರ್, ವಿಜಯಮ್ಮ, ನೇಮಿಚಂದ್ರ, ಮಲ್ಲಿಕಾ ಘಂಟಿ ಅವರ ಹೆಸರುಗಳೂ ಅಧ್ಯಕ್ಷತೆಗೆ ಸಂಬಂಧಿಸಿ ಕೇಳಿಬರುತ್ತಿವೆ.

ಮಂಡ್ಯದಲ್ಲಿ ದೇವನೂರು ಮಹಾದೇವ ಅವರಿಗೆ ಅಧ್ಯಕ್ಷತೆ ನೀಡಬೇಕು ಎಂದು ಒಂದು ವಲಯದಿಂದ ಆಗ್ರಹವಿದೆ. ಆದರೆ ಅವರೇ ಸ್ವತಃ ಅಧ್ಯಕ್ಷತೆಗೆ ಆಸಕ್ತಿ ಹೊಂದಿಲ್ಲ ಹಾಗೂ ಈ ಹಿಂದೆ ತಿರಸ್ಕರಿಸಿದ್ದೂ ಇದೆ. ದಲಿತರು ಹಾಗೂ ಒಕ್ಕಲಿಗರ ನಡುವೆ ಇಲ್ಲಿ ಪ್ರಾತಿನಿಧ್ಯಕ್ಕಾಗಿ ಪೈಪೋಟಿ ಇದೆ. ಜಾತಿ ಲೆಕ್ಕಾಚಾರ ಏನೇ ಇದ್ದರೂ ಮಹಿಳಾ ಸಾಹಿತಿ ಈ ಬಾರಿ ಅಧ್ಯಕ್ಷ ಸ್ಥಾನ ಪಡೆಯುವುದು ಬಹುತೇಕ ಖಚಿತವಾಗಿದೆ.

ಕಟ್ಟಡ ಕುಸಿತ: ಸಾವಿನ ಸಂಖ್ಯೆ 8ಕ್ಕೆ ಏರಿಕೆ

← ಮೊದಲಪುಟದಿಂದ

ಇಬ್ಬರ ಬಂಧನ: ಕಾರ್ಮಿಕ ಮೊಹಮ್ಮದ್ ಹರ್ಷದ್ ನೀಡಿರುವ ದೂರಿನ ಮೇಲೆ ಕಟ್ಟಡದ ಮಾಲೀಕ ಮುನಿರಾಜು ರೆಡ್ಡಿ, ಗುತ್ತಿಗೆದಾರರಾದ ಮೋಹನ್ ರೆಡ್ಡಿ, ಏಳುಮಲೈ ವಿರುದ್ಧ ನಿರ್ಲಕ್ಷ್ಯತನದ ಆರೋಪದಡಿ ಹೆಣ್ಣೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಕಟ್ಟಡದ ಮಾಲೀಕ ಮತ್ತು ಗುತ್ತಿಗೆದಾರನನ್ನು ಪೊಲೀಸರು ಬಂಧಿಸಿದ್ದಾರೆ. ಈ ನಿರ್ಮಾಣ ಹಂತದ ಕಟ್ಟಡ ಭುವನ್ ರೆಡ್ಡಿ ಹೆಸರಿನಲ್ಲಿದ್ದು, ಈತ ಪ್ರಕರಣದ ಮೊದಲನೇ ಆರೋಪಿ ಮುನಿರಾಜ ರೆಡ್ಡಿಯ ಮಗ. ಆರೋಪಿಗಳ ವಿರುದ್ಧ ಬಿಎನ್ ಎಸ್ 105, 125(ಎ) 125(ಬಿ), 270,3(5) ಬಿಬಿಎಂಪಿ ಕಾಯಿದೆ 326, 327,328 ಕಾಯಿದೆಯಡಿ ಎಫ್‌ಐಆರ್ ದಾಖಲಾಗಿದೆ.

ಸುಮೋಟೋ ಪ್ರಕರಣ ದಾಖಲಿಸಿದ ಲೋಕಾಯುಕ್ತ: ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಲೋಕಾಯುಕ್ತ ಸುಮೋಟೋ ಪ್ರಕರಣ ದಾಖಲಿಸಿಕೊಂಡಿದೆ. ಬಿಬಿಎಂಪಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್ .ಪಾಟೀಲ್ ಅವರು, ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ಗುರುತಿಸಿದ್ದೀರಾ? ಅಕ್ರಮವಾಗಿ ಆರು ಅಂತಸ್ತಿನ ಕಟ್ಟಡ ನಿರ್ಮಾಣ ಮಾಡುತ್ತಿದ್ದರೂ ಸುಮ್ಮನಿದ್ದೀರಿ. ಮಳೆ ಬಂದು ಅನಾಹುತಗಳು ನಡೆಯುತ್ತಿದ್ದರೂ ನೀವು (ಬಿಬಿಎಂಪಿ ಅಧಿಕಾರಿಗಳು) ಏನು ಕೆಲಸ ಮಾಡಿದ್ದೀರಿ? ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆ.

ಸಹಾಯಕ ಎಂಜಿನಿಯರ್‌ಗೆ ತಲೆ ದಂಡ: ಅವೈಜ್ಞಾನಿಕವಾಗಿ ಕಟ್ಟಡ ನಿರ್ಮಾಣ ಕುರಿತು ಯಾವುದೇ ಕ್ರಮ ಕೈಗೊಳ್ಳದೆ ಕರ್ತವ್ಯಲೋಪ ಹಿನ್ನೆಲೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ವಿನಯ್ ಅವರನ್ನು ಅಮಾನತು ಮಾಡಲಾಗಿದೆ. ಅವೈಜ್ಞಾನಿಕವಾಗಿ ನಿರ್ಮಿಸಲಾಗಿದ್ದ ಕಟ್ಟಡ ತೆರವಿಗೆ ಬಿಬಿಎಂಪಿ ಮೇಲಾಧಿಕಾರಿಗಳು ತಿಳಿಸಿದ್ದರೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಹೀಗಾಗಿ ವಿನಯ್ ಅವರನ್ನು ಅಮಾನತು ಮಾಡಿ ಬಿಬಿಎಂಪಿ ಆದೇಶಿಸಿದೆ.

ಇಂದಿನಿಂದ ತಗ್ಗಲಿದೆಯೇ ಮಳೆಯ ಅಬ್ಬರ?: ರಾಜ್ಯದಲ್ಲಿ ಗುರುವಾರದಿಂದ ಮಳೆಯ ತೀವ್ರತೆ ತಗ್ಗುವ ಸಾಧ್ಯತೆ ಇದೆ ಎಂಬ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದು, ವಿವಿಧೆಡೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ತಿಳಿಸಿದೆ. ರಾಜ್ಯದ ಯಾವುದೇ ಜಿಲ್ಲೆಗೆ ಗುರುವಾರ ಭಾರಿ ಮಳೆಯ ಮುನ್ಸೂಚನೆಯಿಲ್ಲ. ಕರಾವಳಿಯ ಒಂದೆರಡು ಸ್ಥಳಗಳು ಹಾಗೂ ದಕ್ಷಿಣ ಒಳನಾಡಿನ ಹಲವು ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ ಹಾಗೂ ಹಾವೇರಿ ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ಮಳೆಯಾಗಲಿದ್ದು, ಉಳಿದೆಡೆ ಒಣಹವೆ ಇರುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

ಪಾಳುಬಿದ್ದ ಮೂರ್ತಿಗೆ ಮಂದಿರ ನಿರ್ಮಿಸಿದ ಸುಧಮ್ಮ

← ಮೊದಲಪುಟದಿಂದ

ಈ ಮಂದಿರವನ್ನು ಸುಧಾಮೂರ್ತಿ ಅವರು ಸಂಪೂರ್ಣವಾಗಿ ಹೊಸದಾಗಿ ನಿರ್ಮಿಸಿದ್ದಾರೆ. ಇದರ ಜೀರ್ಣೋದ್ಧಾರದ ಸಂದರ್ಭದಲ್ಲಿ ರಥೋತ್ಸವ ಸೇರಿ ಮತ್ತಿತರ ಧಾರ್ಮಿಕ ಕಾರ್ಯಗಳು ವಿಜೃಂಭಣೆಯಿಂದ ನಡೆದವು. ಈ ಸಂದರ್ಭದಲ್ಲಿ ಸ್ಥಳೀಯ ಭಕ್ತರು ಸುಧಾಮೂರ್ತಿ ಅವರನ್ನು ಪ್ರೀತಿಯಿಂದ ಸನ್ಮಾನಿಸಿ, ಅವರ ನಿಸ್ವಾರ್ಥ ಸೇವಾ ಕಾರ್ಯವನ್ನು ಶ್ಲಾಘಿಸಿದ್ದಾರೆ.

ವ್ಯಾಪಕ ಮೆಚ್ಚುಗೆ: ಸುಧಾಮೂರ್ತಿ ಅವರು ದೇಶದ ಅತಿ ಸಿರಿವಂತರ ಸಾಲಿನಲ್ಲಿದ್ದರೂ ಅತ್ಯಂತ ಸರಳತೆ ಮತ್ತು ಅಪಾರ ಸೇವಾ ಕಾರ್ಯದಿಂದ ಜನರ ಮನ ಗೆದ್ದಿದ್ದಾರೆ. ರಾಜ್ಯದ ಹಲವು ದೇವಸ್ಥಾನಗಳಿಗೆ ಅವರು ವಿಶಿಷ್ಟ ಕೊಡುಗೆ ನೀಡಿದ್ದಾರೆ. ದೇವಸ್ಥಾನಗಳ ಉತ್ಸವದ ಸಂದರ್ಭದಲ್ಲಿ ಸಕ್ರಿಯವಾಗಿ ಸಾಮಾನ್ಯ ಭಕ್ತರಂತೆ ಭಾಗಿಯಾಗುತ್ತಿದ್ದಾರೆ. ಕೆಲವೊಮ್ಮೆ ಕೆಲಸಗಾರರ ಜತೆ ಕುಳಿತುಕೊಂಡು ಅಡುಗೆಗೆ ತರಕಾರಿ ಕೊಚ್ಚಿಕೊಡುವ ಕೆಲಸವನ್ನೂ ಮಾಡಿದ್ದಾರೆ. ಸಾವಿರ ವರ್ಷ ಇತಿಹಾಸವಿರುವ ಮಂದಿರಕ್ಕೆ ಮರು ಜೀವ ಕೊಟ್ಟಿರುವ ಸುಧಾಮೂರ್ತಿಯವ ಕಾರ್ಯಕ್ಕೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಕಾಂಗ್ರೆಸ್‌ಗೆ ಸೈನಿಕ

← ಮೊದಲಪುಟದಿಂದ

ಎನ್‌ಡಿಎ ಅಭ್ಯರ್ಥಿ ಆಯ್ಕೆಗೆ ಗೊಂದಲ: ಬಿಜೆಪಿ ತೊರೆದು ಕಾಂಗ್ರೆಸ್ ಮನೆ ಸೇರಿಕೊಂಡಿರುವ ಯೋಗೇಶ್ವರ್ ಚನ್ನಪಟ್ಟಣದಲ್ಲಿ ಮೈತ್ರಿಗೆ ಸಂಕಷ್ಟ ತಂದೊಡ್ಡಿದ್ದಾರೆ. ಸ್ವತಂತ್ರವಾಗಿ ಸ್ಪರ್ಧಿಸುತ್ತಾರೆ ಎಂದು ಅಂದಾಜಿಸಿದ್ದ ಮೈತ್ರಿ ಪಡೆಗೆ, ಕಾಂಗ್ರೆಸ್ ಸೇರ್ಪಡೆಯಿಂದಾಗಿ ಎಲ್ಲ ಲೆಕ್ಕಾಚಾರ ತಲೆಕೆಳಗಾಗುವಂತೆ ಮಾಡಿದೆ. ಚನ್ನಪಟ್ಟಣದಲ್ಲಿ ಜೆಡಿಎಸ್‌ನಿಂದ ನಿಖಿಲ್ ಕುಮಾರಸ್ವಾಮಿ ಅವರ ಹೆಸರು ಪ್ರಸ್ತಾಪವಾಗಿತ್ತು. ಯೋಗೇಶ್ವರ್ ನಡೆಯಿಂದಾಗಿ ಎನ್‌ಡಿಎ ಅಭ್ಯರ್ಥಿ ಯಾರು ಎಂಬ ದೊಡ್ಡ ಗೊಂದಲ ಸೃಷ್ಟಿಯಾಗಿದೆ. ನಿಖಿಲ್ ಬದಲಿಗೆ ಮಹಿಳೆಯರಿಬ್ಬರ ಹೆಸರು ತೇಲಿ ಬರುತ್ತಿದ್ದು, ಯಾವ ಅಭ್ಯರ್ಥಿ ಕಣಕ್ಕಿಳಿಯಲಿದ್ದಾರೆ ಎಂಬ ಕುತೂಹಲವಿದೆ.

ಅನಸೂಯ ಇಲ್ಲವೇ ಅನಿತಾ ಕಣಕ್ಕೆ?: ಯೋಗೇಶ್ವರ್ ಎದುರು ಜೆಡಿಎಸ್ ಮಹಿಳಾ ಅಭ್ಯರ್ಥಿ ಕಣಕ್ಕಿಳಿಸುವ ಸಾಧ್ಯತೆ ಇದೆ. ಈಗಾಗಲೇ ಡಿ.ಕೆ.ಸುರೇಶ್ ಅವರನ್ನು ಸ್ವಕ್ಷೇತ್ರದಲ್ಲೇ ಡಾ.ಸಿ.ಎನ್.ಮಂಜುನಾಥ್ ಅವರ ಮೂಲಕ ಮಣಿಸಿ ಗೆದ್ದಿರುವ ಮೈತ್ರಿಕೂಟ, ಇದೇ ತಂತ್ರ ಚನ್ನಪಟ್ಟಣದಲ್ಲೂ ಮುಂದುವರಿಸುವ ಸಾಧ್ಯತೆ ಇದೆ. ಸಿ.ಎನ್.ಮಂಜುನಾಥ್ ಅವರ ಪತ್ನಿ ಅನಸೂಯ ಅವರನ್ನು ಚನ್ನಪಟ್ಟಣದಿಂದ ಕಣಕ್ಕಿಳಿಸುವ ಸಾಧ್ಯತೆ ಇದೆ. ನಿಖಿಲ್ ಕಣಕ್ಕಿಳಿಸುವುದಿದ್ದರೆ ಅಧಿಕೃತ ಘೋಷಣೆ ಆಗಬೇಕಿತ್ತು. ಮತ್ತೊಂದೆಡೆ ಅನಸೂಯ ಅವರ ಸ್ಪರ್ಧೆ ಬಗ್ಗೆ ಪತಿ ಡಾ.ಮಂಜುನಾಥ್ ಅವರು ನಿರಾಕರಿಸಿದ್ದಾರೆ. ನನ್ನ ಪತ್ನಿ ಅನಸೂಯ ಅವರು ಸ್ಪರ್ಧೆ ಮಾಡುವುದಿಲ್ಲ. ಅವರು ಚನ್ನಪಟ್ಟಣದಲ್ಲಿ ನಿಲ್ಲುತ್ತಾರೆ ಎನ್ನುವುದು ಸುಳ್ಳು ಎಂದು ಹೇಳಿದ್ದಾರೆ. ಆದರೆ, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ಮಹಿಳಾ ಅಭ್ಯರ್ಥಿಯ ಅಸ್ತ್ರ ಬಿಟ್ಟಿದ್ದು, ಕೊನೆಯ ಕ್ಷಣದಲ್ಲಿ ಅನಸೂಯ ಅವರ ಹೆಸರು ಅಲ್ಲದಿದ್ದರೂ ಕುಮಾರಸ್ವಾಮಿ ಅವರ ಪತ್ನಿ ಅನಿತಾ ಅವರ ಹೆಸರು ಘೋಷಣೆ ಮಾಡುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಮೈತ್ರಿಯಲ್ಲಿ ಅಸಮಾಧಾನ: ಈ ಮಧ್ಯೆ ಮೈತ್ರಿಯಲ್ಲಿ ಅಸಮಾಧಾನ ಕಂಡುಬಂದಿದ್ದು, ಶಿಗ್ಗಾಂವಿ ಕ್ಷೇತ್ರದಲ್ಲಿ ಭರತ್ ಬೊಮ್ಮಾಯಿ ಸ್ಪರ್ಧೆಗೆ ಅಲ್ಲಿನ ಜೆಡಿಎಸ್ ಕಾರ್ಯಕರ್ತರು ಅಷ್ಟಾಗಿ ಒಲವು ತೋರಿಲ್ಲ ಎನ್ನಲಾಗಿದೆ. ಸ್ಥಳಿಯವಾಗಿ ಬಿಜೆಪಿ ಅಭ್ಯರ್ಥಿ ಬಗ್ಗೆ ಅಲ್ಲಿನ ಕಾರ್ಯಕರ್ತರಲ್ಲೇ ಅಸಮಾಧಾನವಿದ್ದು, ಈಗಾಗಲೇ ಅದು ಸ್ಫೋಟಗೊಂಡಿದೆ. ಚನ್ನಪಟ್ಟಣ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿ ಇನ್ನೂ ಅಂತಿಮವಾಗಿಲ್ಲ, ಹೀಗಿದ್ದರೂ ನಾಯಕರಲ್ಲಿ ಅಸಮಾಧಾನವಿದ್ದು, ಲೋಕಸಭೆಯಲ್ಲಿ 12 ಸ್ಥಾನ ಗೆಲ್ಲುವಲ್ಲಿ ಕುಮಾರಸ್ವಾಮಿಯ ಪಾತ್ರವಿದೆ ಎಂದು ಪುತ್ರ ನಿಖಿಲ್ ಬಿಜೆಪಿಗೆ ಪರೋಕ್ಷವಾಗಿ ಹೇಳಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ.
ಟೆಂಡರ್ ಸಂಖ್ಯೆ:– ಟೆಂಡರ್ ಸಂಖ್ಯೆ: ಕಾಇಂ/ಪಂರಾಇಂ/ವಿಶಿ/ಕಿಇಂ/ಟೆಂಡರ್/2024–25/970 Date: 22.10.2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯಲಂಗ್ ವಿಭಾಗ ಶಿವಮೊಗ್ಗ ವ್ಯಾಪ್ತಿಯ, ಶಿವಮೊಗ್ಗ ಹಾಗೂ ಭದ್ರಾವತಿ ತಾಲ್ಲೂಕಿನ ಲೆಕ್ಕ ಶೀರ್ಷಿಕೆ: 2024–25ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯ ಬೂದುನೀರು ನಿರ್ವಹಣಾ ಘಟಕ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗೆ ಬೇಕಾಗುವ ಸಾಮಾಗ್ರಿಗಳ ಪೂರೈಕೆ ಕಾಮಗಾರಿಯ ಟೆಂಡರ್‌ನ ಒಟ್ಟು ಮೊತ್ತ ರೂ. 107.92 ಲಕ್ಷಗಳು ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ಈ ವೆಬ್‌ಸೈಟ್‌ನಲ್ಲಿ ದಿನಾಂಕ: 22.10.2024 ರಿಂದ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 06.11.2024 ಸಂಜೆ 4:00 ರವರೆಗೆ ನಿಗದಿ ಪಡಿಸಲಾಗಿರುತ್ತದೆ.
ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/24–25/108/10/899

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/ 5054 & 4059/ 2024–25/2276 ದಿನಾಂಕ: 21.10.2024

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3 & 4 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 20 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 750.00 ಲಕ್ಷಗಳು & 150.00 ಲಕ್ಷಗಳು & ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ 11,25,000/– & 2,25,000.00 ರೂಗಳು. ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಗುತ್ತಿಗೆ ಪೂರ್ವ ಭಾವಿ ಸಭೆ ದಿನಾಂಕ: 25.10.2024ರ ಮುಂಜಾನೆ 11.00 ಗಂಟೆಗೆ, ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:–23.11.2024 ರ ಸಂಜೆ 4.30 ಗಂಟೆಯವರೆಗೆ, ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 25.11.2024 ರ ಸಂಜೆ 4.31 ಘಂಟೆಯ ನಂತರ ಮತ್ತು ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 26.11.2024 ರ ಮುಂಜಾನೆ 4.31 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/349/ಕೆಎಸ್‌ಎಂಸಿಎ/2024–25

ರೇಷ್ಮೆ ಇಲಾಖೆ
ರೇಷ್ಮೆ ಉಪನಿರ್ದೇಶಕರವರ ಕಛೇರಿ, ಜಿಲ್ಲಾ ಪಂಚಾಯತ್, ಕೋಲಾರ
ಸಂಖ್ಯೆ:ರೇಉನಿ/ತಾಂ2/ಸೋಂನಿ/ಮಂ/10/2024–25
ದಿನಾಂಕ: 18.10.2024

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಮತ್ತು ರೇಷ್ಮೆ ಸಂಶೋದನಾ ಸಂಸ್ಥೆಗಳಿಂದ ಅಧಿಕೃತ ಪೇಟೆಂಟ್ ಶಿಫಾರಸ್ಸು ದೃಢೀಕರಣ ಮತ್ತು ವಾಣಿಜ್ಯ ಉತ್ಪಾದನೆಗೆ ರಹದಾರಿ ಪಡೆದಿರುವ ಅರ್ಹ ಉತ್ಪಾದಕರಿಂದ 2024–25ನೇ ಸಾಲಿಗೆ ಕ್ಷೇತ್ರ ಮಟ್ಟದಲ್ಲಿ ರೇಷ್ಮೆ ಬೆಳೆಗಳನ್ನು ರೋಗಗಳಿಂದ ಸಂರಕ್ಷಿಸಲು ಹಾಗೂ ಉತ್ತಮ ಗುಣಮಟ್ಟದ ರೇಷ್ಮೆ ಗೂಡು ಉತ್ಪಾದನೆಗೆ ಹಾಗೂ ಹಿಪ್ಪುನೇರಳೆ ಸೊಪ್ಪಿನ ಇಳುವರಿ ಹೆಚ್ಚಿಸಲು ಅವಶ್ಯವಿರುವ ಸಸ್ಯ ಸಂವರ್ಧಕಗಳು, ಬ್ಲೀಚಿಂಗ್ ಪುಡಿ, ಸಾಮಾನ್ಯ ಮತ್ತು ಹಾಸಿಗೆ ಸೋಂಕು ನಿವಾರಕಗಳು ಈ ಕಛೇರಿಯ ವ್ಯಾಪ್ತಿಗೆ ಒಳಪಡುವ 06 ತಾಲ್ಲೂಕುಗಳಿಗೆ ಸರಬರಾಜು ಮಾಡಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯುವ ಅನುಸಾರ ಸರ್ಕಾರದ ವೆಬ್‌ಸೈಟ್ **https://kppp.karnataka.gov.in** ರಲ್ಲಿ ಕೆಳಗಿನ ಅನುಸೂಚಿಯ ಪ್ರಕಾರ ಸರಬರಾಜಿಗೆ ಇ–ಟೆಂಡರ್ ಅನ್ನು ಕರೆಯಲಾಗಿದೆ. ಹಾಗೆಯೇ ಟೆಂಡರ್‌ಗಳಲ್ಲಿ ಭಾಗವಹಿಸುವ ಮುನ್ನ ಇದೇ ಪ್ರಕಟಣೆಯಲ್ಲಿರುವ ಷರತ್ತುಗಳು ಅನ್ವಯವಾಗುತ್ತವೆ. ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ. **(1)** ಟೆಂಡರ್ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ: ರೇಉನಿ/ತಾಂ2/ಸೋಂನಿ/10/2024–25 ದಿನಾಂಕ: 18.10.2024.**(2)** ಟೆಂಡರ್ ಪ್ರಕಟಿಸಿದ **ದಿನಾಂಕ: 21.10.2024.(3)** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು **ಸಮಯ: 14.11.2024 ಸಂಜೆ: 4.30 ಗಂಟೆಗೆ. (4)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **ದಿನಾಂಕ: 15.11.2024 ಸಂಜೆ: 5.00 ಗಂಟೆಗೆ. (5)** ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ ದಿನಾಂಕ ಮತ್ತು ಸಮಯ: **16.11.2024 ಸಂಜೆ: 5.00 ಗಂಟೆಗೆ. (6)** ಟೆಂಡರ್‌ನಲ್ಲಿ ನಿರ್ವಹಿಸಲಾದ ಇ.ಎಂ.ಡಿ ಮೊತ್ತ ಶೇ2.5. **(7)** ಬಿಡ್ ಪೂರ್ವಸಭೆಯ ಸ್ಥಳ, ಟೆಂಡರ್ ತೆರೆಯುವುದು ಮತ್ತು ಸಂವಹನ ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ, ರೈಲ್ವೆ ನಿಲ್ದಾಣದ ಹತ್ತಿರ, ಕೋಲಾರ–563101. **Ph.No:9448204469,** ಇ–ಮೇಲ್: **ddserizpklr@gmail.com, ddseriklr@yahoo.com**
ಸಹಿ/– ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:290/ಕೆಎಸ್‌ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಕೇಂ–6, ಬೃಬೆಂಮಪಾ
ಎನ್.ಆರ್.ಚೌಕ, ಬೆಂಗಳೂರು–560 002.
ಸಂ: ಕಾಪಾಅ/ಯೋಕೇಂ–6/ಟೆಂಡರ್/04/2024–25/3ನೇ ಕರೆ ದಿನಾಂಕ: 23.10.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ – 6, ಬೃಬೆಂಮಪಾ, ಬೆಂಗಳೂರು, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ನಿರ್ಮಾಣದ ಹೊಸ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ವಸಂತನಗರ ವಾರ್ಡ್ ಸಂಖ್ಯೆ: 93ರಲ್ಲಿ ಹೊಸ ಬೃಬೆಂಮಪಾ ನರ್ಸರಿ ಶಾಲೆಯ ನಿರ್ಮಾಣ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ):** ರೂ. 58.21 ಲಕ್ಷಗಳು. **ಇಎಂಡಿ:** ರೂ.1,16,500/–. **ಟೆಂಡರ್ ಫಾರಂ ವೆಚ್ಚ:** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ. **ಪೂರ್ಣಗೊಳಿಸುವ ಅವಧಿ:** 11 ತಿಂಗಳು. (ಮಳೆಗಾಲ ಸೇರಿದಂತೆ)

ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮೂಲಕ ದಿನಾಂಕ: **23.10.2024ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಇ–ಪೋರ್ಟಲ್ ಮೂಲಕ ಪ್ರಶ್ನಾವಳಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **27.10.2024 ರ ಸಂಜೆ 5:30 ಗಂಟೆಯವರೆಗೆ.** (3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆ ದಿನಾಂಕ ಮತ್ತು ಸಮಯ: **06.11.2024 ರ ಸಂಜೆ 5:30 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **07.11.2024 ರ ಸಂಜೆ 5:30 ಗಂಟೆಗೆ.**
ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಎಲ್ಲಾ ಕೆಲಸದ ದಿನದಂದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಕೇಂ–6, ಬೃಬೆಂಮಪಾ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಪಂ.ರಾ.ಇಂ ವಿಭಾಗ–ಮಡಿಕೇರಿ
ಸಂ:ಕಾ.ಇಂ/ಪಂ.ರಾ.ಇಂ.ವಿ/ಎಇ/ಟೆಂಡರ್ ಸಂಖ್ಯೆ:/08/ 1153/2024–25 ದಿನಾಂಕ:21–10–2024

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಈ ಕೆಳಗಿನ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ವೇದಿಕೆ ಪದ್ಧತಿಯಲ್ಲಿ ಕೆ.ಡಬ್ಲ್ಯೂ ನಿಬಂಧನೆಗೊಳಪಟ್ಟು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಟೆಂಡರಿನಲ್ಲಿ ಭಾಗವಹಿಸಲು ಕೋರಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1	ಸೋಮವಾರಪೇಟೆ ತಾಲ್ಲೂಕು ಪಂಚಾಯತ್ ಕಚೇರಿಗೆ ಕಾರ್ ಶೆಡ್ ನಿರ್ಮಾಣ, ಸಭಾಂಗಣದ ದಾರಿಗೆ ಶೀಟ್ ಅಳವಡಿಸುವುದು ಮತ್ತು ಕಚೇರಿ ಕೊಠಡಿಗಳ ದುರಸ್ತಿ, ಇಂಡೆಂಟ್ ನಂ 8164	17.25
2	ಕುಶಾಲನಗರ ಸರ್ಕಾರಿ ಬಾಲಕಿಯರ ಪ್ರೌಢಶಾಲೆಗೆ ಶೌಚಾಲಯ ನಿರ್ಮಾಣ	5.20
3	ಪೊನ್ನಂಪೇಟೆ ತಾ.ಪಂ ಕಚೇರಿಗೆ ಕಾಂಪೌಂಡ್ ನಿರ್ಮಾಣ	7.00
4	ಬಾಳೆಲೆ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಸಭಾಂಗಣ ಕೊಠಡಿ ದುರಸ್ಥಿ	8.50
5	ತಿತಿಮತಿ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡದ ಮೇಜರ್ ದುರಸ್ತಿ,	15.75
6	ಕಾಕೋಟುಪರಂಬು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಕ್ಕೆ ಶೌಚಾಲಯ ಹಾಗೂ ಇತರೆ ಅಭಿವೃದ್ಧಿ (ವರ್ಗ: ಎಸ್.ಟಿ)	8.00
7	ಮಾಕುಟ್ಟ ಆರೋಗ್ಯ ಉಪಕೇಂದ್ರ ಕಟ್ಟಡ ಅಭಿವೃದ್ಧಿ (ವರ್ಗ: ಎಸ್.ಸಿ)	6.00

ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 08–11–2024, ಸಂಜೆ–5.00 ಘಂಟೆವರೆಗೆ, ಬಿಡ್ ತೆರೆಯುವ ದಿನಾಂಕ: 11–11–2024 ಗಳಾಗಿದ್ದು ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ಪಡೆಯಬಹುದು.
ಸಹಿ/–
ಕಾರ್ಯಪಾಲಕ ಇಂಜಿನಿಯರ್
ಪಂ.ರಾ.ಇಂ ವಿಭಾಗ–ಮಡಿಕೇರಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಹಾಸನ
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಡಿ.ದೇವರಾಜ್ ಅರಸು ಭವನ, ಶ್ರೀ ವಿದ್ಯಾ ಗಣಪತಿ ದೇವಸ್ಥಾನ ರಸ್ತೆ, ಆಕಾಶವಾಣಿ ಹತ್ತಿರ, ಸಾಲಗಾಮೆ ರಸ್ತೆ, ಹಾಸನ–573202
Phone: +91 7019024647, **08172-295108**
Email:dobcmhassan@gmail.com Website: https://bcwd.karnataka.gov.in
ಸಂಖ್ಯೆ:ಹಿಂವಕಇ/ಲೆ.ಶಾ/ಹೊ.ಸಂ. ಟೆಂಡರ್/ಸಿಆರ್–01/2024–25
ದಿನಾಂಕ:21–10–2024

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
:E-PROCUREMENT TENDERNOTIFICATION : :
(ದ್ವಿ–ಲಕೋಟೆ ಪದ್ದತಿ)

Calendar of Events 2024–25ನೇ ಸಾಲಿಗೆ ಹಾಸನ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯ ನಿರ್ವಹಿಸಲಾಗುತ್ತಿರುವ ಮೆಟ್ರಿಕ್ ಪೂರ್ವ/ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಹುದ್ದೆಗಳಾದ ಅಡುಗೆಯವರು, ಅಡುಗೆ ಸಹಾಯಕರು ಮತ್ತು ರಾತ್ರಿ ಕಾವಲುಗಾರರು ಹಾಗೂ ಜಿಲ್ಲಾ ಕಛೇರಿಯಲ್ಲಿಖಾಲಿ ಇರುವ ಡಾಟಾ ಎಂಟ್ರಿ ಅಪರೇಟರ್ & ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಅಪರೇಟರ್ ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಬೋಧಕ/ ಬೋಧಕೇತರ &ವಿವಿಧ ವೃಂದದ ಗ್ರೂಪ್ 'ಡಿ' ಹುದ್ದೆಗಳ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ. 1.ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ ಸಂಖ್ಯೆ:ಹಿಂವಕಇ/ಹೊ.ಸಂ. ಟೆಂಡರ್/ಸಿಆರ್–01/2024–25 ದಿನಾಂಕ:21–10–2024 2.ಟೆಂಡರ್‌ಗಿಟ್ಟ ಅಂದಾಜು ಮೊತ್ತ: ಅಂದಾಜು ರೂ.1075.82 ಲಕ್ಷಗಳು 3.ಇ.ಎಂ.ಡಿ ನಿಗದಿಪಡಿಸಿರುವ ಮೊತ್ತ: ರೂ.15.00 ಲಕ್ಷಗಳು 4.Pre-bid meeting ದಿನಾಂಕ:05–11–2024 ಬೆಳಿಗ್ಗೆ 11.00 ಗಂಟೆ ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾಸನ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) 5.e-portal ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ. ದಿನಾಂಕ:20–11–2024 ರಂದು ಸಂಜೆ 5.30 ಗಂಟೆಯೊಳಗೆ. 6.e-portal ನ ಟೆಂಡರ್ ದಾಖಲಾತಿಗಳನ್ನು & ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ ದಿನಾಂಕ: 22–11–2024 7.e-portal ನ ಟೆಂಡರ್ ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ: 28–11–2024 (ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) 8.ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ Website: https://kppp.karnataka.gov.in ಅಥವಾ ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಡಿ.ದೇವರಾಜಅರಸು ಭವನ, ಶ್ರೀ ವಿದ್ಯಾಗಣಪತಿ ದೇವಸ್ಥಾನದ ಅಡ್ಡರಸ್ತೆ, ಆಕಾಶವಾಣಿ ಹತ್ತಿರ, ಸಾಲಗಾಮ ರಸ್ತೆ, ಹಾಸನ–573202 (08172–295108) e-mail- dobcmhassan@gmail.com
ಸಹಿ/– (ಶ್ರೀ ಕುಮಾರ್ ಎಂ.) ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/590/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.
ಸಂಖ್ಯೆ: ಕಾಇಂ/ಸನೀತು/ಸ.ಇಂ–1/ಟೆಂಡರು ಪ್ರಕಟಣೆ ಸಂ.05/2024–25 ದಿನಾಂಕ: 22.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರಿಂದ 2024–25 ನೇ ಸಾಲಿನ ಲೆಕ್ಕ ಶೀರ್ಷಿಕೆ: 4702 ಕೆರೆಗಳ ಆಧುನೀಕರಣ–ಪ್ರಧಾನ ಕಾಮಗಾರಿಗಳು ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-4 ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.
ಕಾಮಗಾರಿಯ ಹೆಸರು :– ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಉತ್ತರ ತಾಲ್ಲೂಕುಗಳಲ್ಲಿ ಕೆರೆ ಅಭಿವೃದ್ಧಿ, ಇಂಗು ಕೆರೆಪುನರ್ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಂತೆ **ಒಟ್ಟು 02 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**
ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.300.00 (ಕನಿಷ್ಠ) & ರೂ.460.00 (ಗರಿಷ್ಠ)**
ಇಎಂಡಿ: **ರೂ.3,80,000.00 (ಕನಿಷ್ಠ) & ರೂ.5,54,000.00 (ಗರಿಷ್ಠ).**
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 09 ರಿಂದ 11 ತಿಂಗಳು ಮಳೆಗಾಲ ಸೇರಿದಂತೆ.
(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)
(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ : **23.10.2024 ಬೆಳಗ್ಗೆ 11.30** ಗಂಟೆಯ ನಂತರ, (2) ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು (ಪ್ರೀ ಬಿಡ್) ಪಡೆಯಲು ದಿನಾಂಕ ಮತ್ತು ವಿಳಾಸ: ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಬೆಂಗಳೂರು. ದಿನಾಂಕ : **29.10.2024 ಮಧ್ಯಾಹ್ನ 15.00** ಗಂಟೆಯವರೆಗೆ. (3) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ **30.10.2024 ಸಂಜೆ 17.00** ಗಂಟೆಯವರೆಗೆ, (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **04.11.2024 ಬೆಳಗ್ಗೆ 11.30** ಗಂಟೆಗೆ, (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**
ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ– 4 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ವಾಸಾಸಂಇ/ವಾ.ಪ್ರ/2699/2024–25 ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.
ನಂ:ಬೆಂಅಪ್ರಾ/ಅಭೂಸ್ವಾಅ/479/2024–25 ದಿನಾಂಕ:22.10.2024

ಸಾರ್ವಜನಿಕರ ಗಮನಕ್ಕಾಗಿ

ವಿಷಯ: ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಅಧಿಸೂಚಿಸಿರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದ ಸರ್ವೆ ನಂ.45/1&2ರಲ್ಲಿನ ಖಾತೆದಾರರಾದ ಶ್ರೀ ಲಕ್ಷ್ಮಯ್ಯ ಬಿನ್ ನರಸಿಂಹಯ್ಯ/ಜಿಪಿಎದಾರರಾದ ಶ್ರೀ ಪಿ.ಸಿ.ರಾಜೇಶ್ ರವರಿಂದ ಖರೀದಿಸಿರುವ ರೆವಿನ್ಯೂ ನಿವೇಶನದಾರರು ತಕರಾರು/ಆಕ್ಷೇಪಣೆ ಇದ್ದಲ್ಲಿ ಸಲ್ಲಿಸುವ ಬಗ್ಗೆ.
ಉಲ್ಲೇಖ: (1) ನಾಡಪ್ರಭು ಕೆಂಪೇಗೌಡ ಬಡಾವಣೆ ರಚನೆಗಾಗಿ ಹೊರಡಿಸಿದ ಪ್ರಾಥಮಿಕ ಅಧಿಸೂಚನೆ ಸಂ.ಬಿಡಿಎ/ಆಯುಕ್ತರು/ಉಆ(ಭೂಸ್ವಾ)/158/2008–2009, ದಿನಾಂಕ: 21.05.2008. **(2)** ನಾಡಪ್ರಭು ಕೆಂಪೇಗೌಡ ಬಡಾವಣೆ ರಚನೆಗಾಗಿ ಹೊರಡಿಸಿದ ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ:ಯುಡಿಡಿ/51/ಎಂಎನ್‌ಎಕ್ಸ್/2010, ದಿನಾಂಕ: 18.02.2010.
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ,ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದ ಸರ್ವೆ ನಂ.45/1 & 2 ರ ಒಟ್ಟು ವಿಸ್ತೀರ್ಣ 24 ಎಕರೆ 33 ಗುಂಟೆ ಜಮೀನಿನ ಪೈಕಿ 17 ಎಕರೆ 39 ಗುಂಟೆ ಜಮೀನು ನಾಡ ಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಅಂತಿಮ ಅಧಿಸೂಚನೆಯ ಸಂಖ್ಯೆ: ಯುಡಿಡಿ. 51 ಎಂಎನ್‌ಎಕ್ಸ್ 2010, ಬೆಂಗಳೂರು, ದಿನಾಂಕ: 18.02.2010 ರಂತೆ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಶ್ರೀ ಲಕ್ಷ್ಮಯ್ಯ ಬಿನ್ ಲೇಟ್ ನರಸಿಂಹಯ್ಯ ರವರು 1 ಎಕರೆ 15 ಗುಂಟೆ ಜಮೀನಿಗೆ ಖಾತೆದಾರರಾಗಿದ್ದು, ಶ್ರೀ ಲಕ್ಷ್ಮಯ್ಯ ಬಿನ್ ಲೇಟ್ ನರಸಿಂಹಯ್ಯ ರವರು ಶ್ರೀ ರಾಜೇಶ್.ಪಿ.ಸಿ ಬಿನ್ ಲೇಟ್ ಚಂದ್ರಶೇಖರ್ ಪಿ.ಸಿ ರವರಿಗೆ ಕೊಮ್ಮಘಟ್ಟ ಗ್ರಾಮದ ಸರ್ವೆ ನಂ.45/1ಎ ರಲ್ಲಿನ 01 ಎಕರೆ 15 ಗುಂಟೆ ಜಮೀನಿಗೆ ದಿನಾಂಕ.20.04.2013ರಂದು ಜನರಲ್ ಪವರ್ ಆಫ್ ಅಟಾರ್ನಿ ನೀಡಿದ್ದು, ಶ್ರೀ ಲಕ್ಷ್ಮಯ್ಯ ಮತ್ತು ಜಿ.ಪಿ.ಎ ಹೋಲ್ಡರ್ ಪಿ.ಸಿ ರಾಜೇಶ್ ರವರು ರೆವಿನ್ಯೂ ನಿವೇಶನವನ್ನು ಮಾರಾಟ ಮಾಡಿದ್ದು, ನಂತರ ಈಗಾಗಲೇ ಸದರಿ ರೆವಿನ್ಯೂ ನಿವೇಶನ ಖರೀದಿದಾರರಿಗೆ ಬೇರೆ ಪ್ರದೇಶದಲ್ಲಿ ನಿವೇಶನವನ್ನು ನೀಡಿರುವುದಾಗಿ ಶ್ರೀ ಲಕ್ಷ್ಮಯ್ಯ ಮತ್ತು ಜಿ.ಪಿ.ಎ ಹೋಲ್ಡರ್ ಪಿ.ಸಿ ರಾಜೇಶ್ ರವರು ತಿಳಿಸಿರುತ್ತಾರೆ. ಆದ್ದರಿಂದ, ಶ್ರೀ ಲಕ್ಷ್ಮಯ್ಯ ಮತ್ತು ಜಿ.ಪಿ.ಎ ಹೋಲ್ಡರ್ ಪಿ.ಸಿ ರಾಜೇಶ್ ರವರ ಕೊಮ್ಮಘಟ್ಟ ಗ್ರಾಮದ ಸರ್ವೆ ನಂ.45/1&2 ರಲ್ಲಿನ 01 ಎಕರೆ 15 ಗುಂಟೆ ಜಮೀನಿಗೆ ಭೂಪರಿಹಾರ ವಿತರಿಸುವ ಸಂಬಂಧ ರೆವಿನ್ಯೂ ನಿವೇಶನದಾರರ ಯಾವುದಾದರೂ ಆಕ್ಷೇಪಣೆ/ತಕರಾರು ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 15 ದಿನದೊಳಗಾಗಿ ತಮ್ಮ ತಕರಾರು ಅರ್ಜಿಯನ್ನು ಅಪರ ಭೂಸ್ವಾಧೀನ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರಿಗೆ ದಾಖಲಾತಿಗಳೊಂದಿಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.
ಸಹಿ/– ಅಪರ ಭೂಸ್ವಾಧೀನಾಧಿಕಾರಿ, ಬೆಂ.ಅ.ಪ್ರಾ., ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಕೇಂ–6, ಬೃಬೆಂಮಪಾ, ಬೆಂಗಳೂರು–560 002.
ಸಂ: ಕಾಪಾಅ/ಯೋಕೇಂ–6/ಟೆಂಡರ್/04/2024–25/3ನೇ ಕರೆ ದಿನಾಂಕ: 23.10.2024
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ – 6, ಬೃಬೆಂಮಪಾ, ಬೆಂಗಳೂರು, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ನಿರ್ಮಾಣದ ಹೊಸ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.
ಕ್ರ. ಸಂ.	ಕಾಮಗಾರಿಯ ಹೆಸರು
1	ವಸಂತನಗರ ವಾರ್ಡ್ ಸಂಖ್ಯೆ: 93ರಲ್ಲಿ ಹೊಸ ಬೃಬೆಂಮಪಾ ನರ್ಸರಿ ಶಾಲೆಯ ನಿರ್ಮಾಣ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ):** ರೂ. 58.21 ಲಕ್ಷಗಳು. **ಇಎಂಡಿ:** ರೂ.1,16,500/–. **ಟೆಂಡರ್ ಫಾರಂ ವೆಚ್ಚ:** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ. **ಪೂರ್ಣಗೊಳಿಸುವ ಅವಧಿ:** 11 ತಿಂಗಳು. (ಮಳೆಗಾಲ ಸೇರಿದಂತೆ)
ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮೂಲಕ ದಿನಾಂಕ: **23.10.2024ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಇ–ಪೋರ್ಟಲ್ ಮೂಲಕ ಪ್ರಶ್ನಾವಳಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **27.10.2024 ರ ಸಂಜೆ 5:30 ಗಂಟೆಯವರೆಗೆ.** (3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆ ದಿನಾಂಕ ಮತ್ತು ಸಮಯ: **06.11.2024 ರ ಸಂಜೆ 5:30 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **07.11.2024 ರ ಸಂಜೆ 5:30 ಗಂಟೆಗೆ.**
ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಎಲ್ಲಾ ಕೆಲಸದ ದಿನದಂದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಕೇಂ–6, ಬೃಬೆಂಮಪಾ

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ರಾಜ್ಯದಲ್ಲಿ ಭ್ರಷ್ಟ INCKarnataka ಅಧಿಕಾರಕ್ಕೆ ಬಂದು ಮಾಡಿದ ಸಾಧನೆ ಎಂದರೆ, ಜಮೀನು ಲೂಟಿ ಮಾಡಿ ಖಜಾನೆ ಖಾಲಿ ಮಾಡಿದ್ದು. ಗುತ್ತಿಗೆದಾರರ ಹೆಸರಲ್ಲಿ ರಾಜಕೀಯ ಬೇಳೆ ಬೇಯಿಸಿಕೊಂಡ ಭ್ರಷ್ಟ siddaramaiah ಅವರು ಇಂದು ಅದೇ ಗುತ್ತಿಗೆದಾರರನ್ನು ಬೀದಿಗೆ ತಂದು ನಿಲ್ಲಿಸಿದ್ದಾರೆ. ಬರೋಬ್ಬರಿ 31 ಸಾವಿರ ಕೋಟಿ ರು. ಬಿಲ್ ಬಾಕಿ ಉಳಿಸಿಕೊಂಡಿದೆ ATMSarkara. ಹೀಗಾಗಿ ರಾಜ್ಯದಲ್ಲಿ ನಯಾಪೈಸೆ ಅಭಿವೃದ್ಧಿಯೂ ಇಲ್ಲ. ಸರಕಾರದ ವಿರುದ್ಧ ಗುತ್ತಿಗೆದಾರರು ಬೀದಿಗಿಳಿದು ಪ್ರತಿಭಟನೆ ಮಾಡುವ ಎಚ್ಚರಿಕೆ ಕೊಟ್ಟಿದ್ದಾರೆ.

ಮನು, ಒಡೆಯರ್

ಮೋದಿ ಕುರ್ಚಿ ಉಳಿಸಿಕೊಳ್ಳಕ್ಕೆ ಆಂಧ್ರ, ಬಿಹಾರಕ್ಕೆ ವಿಶೇಷ ಅನುದಾನ ಕರ್ನಾಟಕಕ್ಕೆ ಮತ್ತೆ ಚೊಂಬು ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಮತ್ತು ಮೋದಿಯಿಂದ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿರುವ ಕೇಂದ್ರ, ಮೋದಿ ಸರಕಾರ ಕರ್ನಾಟಕದಿಂದ ಕೇಂದ್ರ ಸಚಿವರಾದ ನಿಮಗೆ ಪ್ರಶ್ನೆ ಮಾಡಕ್ಕೆ ಯೋಗ್ಯತೆ ಇಲ್ವಾ.

ಸಮಾಚಾರ ಸಣ್ಣದಲ್ಲ

ಚನ್ನಪಟ್ಟಣ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಖಚಿತ

ಉಡುಪಿ: ಸಿ.ಪಿ.ಯೋಗೇಶ್ವರ್ ನಮ್ಮನ್ನು ಬಿಡುವುದಿಲ್ಲ ಎನ್ನುವ ವಿಶ್ವಾಸವಿತ್ತು ಎಂದು ಸಿಪಿವೈ ಕಾಂಗ್ರೆಸ್ ಸೇರಿದ್ದಕ್ಕೆ ಸಂಸದ ಕೋಟ ಶ್ರೀನಿವಾಸ ಪೂಜಾರಿ

ಬೇಸರ ವ್ಯಕ್ತಪಡಿಸಿದರು. ಉಡುಪಿಯಲ್ಲಿ ಮಾತನಾಡಿದ ಅವರು, ಯೋಗೀಶ್ವರ್ ನಮ್ಮನ್ನು ಬಿಡುವುದಿಲ್ಲ ಎನ್ನುವ ವಿಶ್ವಾಸವಿತ್ತು. ಕ್ಷೇತ್ರ ದಲ್ಲಿ ಎನ್‌ಡಿಎ ಗೆಲ್ಲಬೇಕು ಅನ್ನೋದು ನಮ್ಮ ವಿಚಾರ. ಚನ್ನಪಟ್ಟಣದಲ್ಲಿ ನಮಗೆ ಗೆಲ್ಲುವ ವಿಶ್ವಾಸವಿದೆ ಎಂದು ಭರವಸೆ ವ್ಯಕ್ತಪಡಿಸಿದರು. ರಾಜಕಾರಣದಲ್ಲಿ ಈ ರೀತಿಯ ತರ್ಕಗಳು, ಚರ್ಚೆಗಳು ಬೆಳವಣಿಗೆಗಳು ಆಗುವುದು ಸಹಜ. ಒಟ್ಟು ಚುನಾವಣೆ ಸುಖಾಂತ್ಯ ವಾಗುತ್ತದೆ ಎನ್ನುವ ವಿಶ್ವಾಸವಿದೆ. ಎನ್‌ಡಿಎ ಇಂದ ಯಾರನ್ನು ನಿಲ್ಲಿಸಬೇಕು ಅನ್ನೋದನ್ನ ಪಕ್ಷ ತೀರ್ಮಾನ ಮಾಡುತ್ತದೆ. ನಮಗಿಂತ ದೊಡ್ಡವರು ಎಲ್ಲಾ ತೀರ್ಮಾನ ಕೈಗೊಳ್ಳುತ್ತಾರೆ ಎಂದು ಹೇಳಿದರು.

ಮುಖ್ಯಮಂತ್ರಿ ಆಗಲು ನನಗಿನ್ನೂ ಸಮಯವಿದೆ

ಬಳ್ಳಾರಿ: ಬಿ.ಎಸ್ ಯಡಿಯೂರಪ್ಪ ಅವರು ತಮ್ಮ 66ನೇ ವಯಸ್ಸಿಗೆ ಸಿಎಂ ಆದರು. ನನಗೆ ಈಗಿನ್ನು 57 ವರ್ಷ. ನನಗೆ 9ರಿಂದ 10 ವರ್ಷಯ ಸಮಯವಿದೆ'

ಎಂದು ಶಾಸಕ ಜನಾರ್ದನ ರೆಡ್ಡಿ ಹೇಳಿದ್ದಾರೆ. ಸಂಡೂರು ಉಪ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಸಿಗದೆ ಮುನಿಸಿಕೊಂಡಿದ್ದ ದಿವಾಕರ್ ಅವರ ಜತೆಗೆ ಕಾರ್ಯಕರ್ತರ ಸಭೆ ನಡೆಸಿದ ಅವರು, ತಾವು ಸಿಎಂ ಆಗುವ ಇಂಗಿತ ಹೊರ ಹಾಕಿದರು. ಯಡಿಯೂರಪ್ಪ ಸೈಕಲ್ ತುಳಿದು, ಬಸ್‌ನಲ್ಲಿ ತಿರುಗಿ ಪಕ್ಷ ಸಂಘಟಿಸಿ, ಕಷ್ಟಪಟ್ಟಮೇಲೆ 66ನೇ ವಯಸ್ಸಿನಲ್ಲಿ ಸಿಎಂ ಆದರು. ಆದರೆ, ರಾಜಕೀಯಕ್ಕೆ ಬಂದು, ಜೈಲಿಗೆ ಹೋಗಿ ಬಂದರೂ ನನಗೆ ಈಗಿನ್ನೂ 57 ವರ್ಷ ವಯಸ್ಸು. ಆ ಲೆಕ್ಕದಲ್ಲಿ ನನಗೆ ಇನ್ನೂ 9 ರಿಂದ 10 ವರ್ಷ ಸಮಯವಿದೆ' ಎಂದು ಹೇಳಿದರು. ನಾವು ಹೋಲಿಕೆ ಮಾಡಿಕೊಳ್ಳಬೇಕು. ಅಟಲ್ ಬಿಹಾರಿ ವಾಜಯಪೇಯಿ 75ನೇ ವರ್ಷದಲ್ಲಿ ಪ್ರಧಾನಿಯಾದರು. ದಿವಾಕರ್‌ಗೂ ವಯಸ್ಸಿದೆ, ಸಮಯವಿದೆ. ಇದು ಅವರಿಗೆ ಅಗ್ನಿ ಪರೀಕ್ಷೆ ಎಂದರು.

ವಾಂತಿ ಭೇದಿಯಿಂದ ಇಬ್ಬರು ಸಾವು

ತುಮಕೂರು: ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಸೋರಲು ಮಾವು ಗ್ರಾಮದಲ್ಲಿ ವಾಂತಿ ಭೇದಿಯಿಂದ ಇಬ್ಬರು ಮೃತಪಟ್ಟಿದ್ದು, ಕಲುಷಿತ ನೀರು ಸೇವನೆಯ ಶಂಕೆ ವ್ಯಕ್ತವಾಗಿದೆ. ಗುಂಡಮ್ಮ (60) ಮತ್ತು ಭುವನೇಶ್ವರಿ (10) ಮೃತ ದುರ್ದೈವಿಗಳಾಗಿದ್ದಾರೆ. ಗ್ರಾಮದ ಗುಂಡಮ್ಮ ವಾಂತಿ ಭೇದಿಯಿಂದ ಮಂಗಳ ವಾರ ಮನೆಯಲ್ಲಿ ಮೃತಪಟ್ಟಿದ್ದಾರೆ. ಭಾನುವಾರ ಬಾಲಕಿ ಯೋರ್ವಳು ಮೃತಪಟ್ಟಿದ್ದಳು ಎಂದು ಆರೋಗ್ಯ ಇಲಾಖೆ ಸಿಬ್ಬಂದಿ ಖಚಿತಪಡಿಸಿದ್ದಾರೆ. ರತ್ನಮ್ಮ ಎಂಬ ಮಹಿಳೆ ತೀವ್ರ ಅಸ್ವಸ್ಥಗೊಂಡಿದ್ದು, ಚಿಕ್ಕನಾಯಕನಹಳ್ಳಿ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ವೈದ್ಯಕೀಯ ಮಹಾ ವಿದ್ಯಾಲಯಕ್ಕೆ ಕಳುಹಿಸಲಾಗಿದೆ.

ಕಿತ್ತೂರು ಸಂಸ್ಥಾನದ 200 ನೇ ವಿಜಯೋತ್ಸವದಲ್ಲಿ ಸಚಿವ ಸತೀಶ್ ಜಾರಕಿಹೊಳಿ ಅಭಿಮತ

ಕಿತ್ತೂರು ರಾಣಿ ಚನ್ನಮ್ಮ ಇತಿಹಾಸ ಎಲ್ಲೆಡೆ ಪಸರಿಸಲಿ

ಚನ್ನಮ್ಮನ ಕಿತ್ತೂರು: ಐತಿಹಾಸಿಕ ಕಿತ್ತೂರು ಉತ್ಸವವನ್ನು ಈ ಬಾರಿ ಐತಿಹಾಸಿಕವಾಗಿ ಆಚರಣೆ ಮಾಡಬೇಕೆಂದು ಸರಕಾರ ನಿರ್ಧರಿಸಿ ನಾಡಿನಾದ್ಯಂತ ಸಂಭ್ರಮದಿಂದ 200 ನೇ ಕಿತ್ತೂರು ವಿಜಯೋತ್ಸವ ಆಚರಣೆ ಮಾಡಲಾಗಿದೆ ಎಂದು ಬೆಳಗಾವಿ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಬುಧವಾರ ಕಿತ್ತೂರು ಕೋಟೆ ಆವರಣದ ರಾಣಿ ಚನ್ನಮ್ಮ ವೇದಿಕೆಯಲ್ಲಿ ನಡೆದ ಕಿತ್ತೂರು ಸಂಸ್ಥಾನದ 200 ನೇ ವಿಜಯೋತ್ಸವ ಹಾಗೂ ಚನ್ನಮ್ಮನ ಕಿತ್ತೂರು ಉತ್ಸವ ಉದ್ಘಾಟಿಸಿ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಹಾಗೂ ಬಲಿದಾನವನ್ನು ನೆನೆಯುವ ಉದ್ದೇಶದಿಂದ ಇಂತಹ ಉತ್ಸವಗಳನ್ನು ಆಯೋಜನೆ ಮಾಡಲಾಗುತ್ತಿದೆ. ಕಿತ್ತೂರು ರಾಣಿ ಚನ್ನಮ್ಮನ ಇತಿಹಾಸ ನಾಡಿನಾದ್ಯಂತ ಪಸರಿಸುವ ಉದ್ದೇಶದಿಂದ ಈ ಬಾರಿಯ 200 ನೇ ವಿಜಯೋತ್ಸವವನ್ನು 5 ಕೋಟಿ ರು. ವೆಚ್ಚದಲ್ಲಿ ಆಚರಣೆ ಮಾಡಲಾಗುತ್ತಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿ, ಸ್ವಾಭಿಮಾನಕ್ಕೆ ಇನ್ನೊಂದು ಹೆಸರು ಕಿತ್ತೂರು ರಾಣಿ ಚನ್ನಮ್ಮ. ಮಹಿಳೆಯರು ಮನೆ ಬಿಟ್ಟು ಹೊರಗೆ ಬರಲು ಆಗದ ಸಂದರ್ಭದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದು ಸ್ವಾತಂತ್ರ್ಯದ ಕಿಚ್ಚು ಹಚ್ಚಿದ್ದು ರಾಣಿ ಚನ್ನಮ್ಮ. ಇಂತಹ ಮಹಾನ್ ಮಹಿಳೆಯ 200 ನೇ ವಿಜಯೋತ್ಸವ ಆಚರಣೆ ಮಾಡುತ್ತಿರುವುದು ನಮ್ಮ ಸೌಭಾಗ್ಯ ಎಂದು ಹೇಳಿದರು.

ಕಿತ್ತೂರು ಶಾಸಕ ಬಾಬಾಸಾಹೇಬ್ ಪಾಟೀಲ್ ಮಾತನಾಡಿ. ಕಿತ್ತೂರು ರಾಣಿ ಚನ್ನಮ್ಮನ 200 ನೇ ವಿಜಯೋತ್ಸವ ಕಾರ್ಯಕ್ರಮ ಕಾಲಘಟ್ಟದಲ್ಲಿ ನಾವು ಉಪಸ್ಥಿತರಿರುವುದು ನಮ್ಮ ಪುಣ್ಯ. ಈ ಬಾರಿ ಕಿತ್ತೂರು ವಿಜಯೋತ್ಸವ ಅದ್ದೂರಿ ಆಚರಣೆಗೆ ಸರಕಾರ 5 ಕೋಟಿ ಅನುದಾನ ನೀಡಿದ್ದು ಸಂತೋಷದ ಸಂಗತಿ. ಕಿತ್ತೂರು ಕೋಟೆ ಅಭಿವೃದ್ಧಿಗೆ ನಮ್ಮ ಸರಕಾರ ಬದ್ಧವಾಗಿದೆ ಎಂದರು.

ಬುಧವಾರ ಕಿತ್ತೂರು ಕೋಟೆ ಆವರಣದ ರಾಣಿ ಚನ್ನಮ್ಮ ವೇದಿಕೆಯಲ್ಲಿ ನಡೆದ ಕಿತ್ತೂರು ಸಂಸ್ಥಾನದ 200 ನೇ ವಿಜಯೋತ್ಸವ ಹಾಗೂ ಚನ್ನಮ್ಮನ ಕಿತ್ತೂರು ಉತ್ಸವವನ್ನು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಕಿತ್ತೂರು ಕಲ್ಮಠದ ಮಡಿವಾಳ ರಾಜಯೋಗೇಂದ್ರ ಸ್ವಾಮೀಜಿ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಉದ್ಘಾಟಿಸಿದರು.

> ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಇತಿಹಾಸ ಸಾರುವ ಅದ್ಭುತ ಕಾರ್ಯಕ್ರಮ ಮಾಡಲು ಸಹಕಾರ ನೀಡಿ ಬೆನ್ನು ತಟ್ಟಿದ್ದಾರೆ. ರಾಜ್ಯದ ಮಹಿಳೆಯರನ್ನು ಆರ್ಥಿಕವಾಗಿ ಮುಂದೆ ಬರಲು ಐದು ಗ್ಯಾರಂಟಿಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆ ಜಾರಿಗೆ ತರಲಾಗಿದೆ. ಈ ಒಂದು ಯೋಜನೆ ಸಮಾಜದಲ್ಲಿ ತಂದ ಅದ್ಭುತ ಬದಲಾವಣೆ ಕಾಂಗ್ರೆಸ್ ಸರಕಾರದ ಕಾರ್ಯಕ್ಕೆ ಹಿಡಿದ ಕನ್ನಡಿಯಾಗಿದ್ದು, ನಮ್ಮ ಸರಕಾರ ಯಾವತ್ತೂ ಮಹಿಳೆಯರ ಪರವಾಗಿ ಇರುತ್ತದೆ.
> -ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ಕಾಗೇರಿಯನ್ನು ಹಾಡಿ ಹೊಗಳಿದ ಸಚಿವೆ ಹೆಬ್ಬಾಳ್ಕರ್

ಮೊದಲಬಾರಿಗೆ ಶಾಸಕರಾಗಿದ್ದ ನಮಗೆ ವಿಧಾನಸಭಾ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಮಾರ್ಗದರ್ಶನ ಮಾಡಿದವರು ವಿಶ್ವೇಶ್ವರ ಹೆಗಡೆ ಕಾಗೇರಿ. ಇವರ ಪ್ರಯತ್ನದ ಫಲವಾಗಿ ಕೇಂದ್ರ ಸರಕಾರ ಕಿತ್ತೂರು ರಾಣಿ ಚನ್ನಮ್ಮನ 200 ನೇ ವಿಜಯೋತ್ಸವದ ಅಂಚೆ ಚೀಟಿ ಬಿಡುಗಡೆ ಮಾಡಿದ್ದು ಖುಷಿ ಸಂಗತಿ. ಈ ಕುರಿತು ರಾಜ್ಯ ಸರಕಾರದ ಪರವಾಗಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಧನ್ಯವಾದ ಸಮರ್ಪಿಸಿದರು.

ಕಾರ್ಯಕ್ರಮದಲ್ಲಿ ಕಿತ್ತೂರು ಕಲ್ಮಠದ ಮಡಿವಾಳ ರಾಜಯೋಗೇಂದ್ರ ಸ್ವಾಮೀಜಿ, ಉತ್ತರ ಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಬಾಬಾಸಾಹೇಬ್ ಪಾಟೀಲ್, ರಾಜು ಸೇಠ್, ಮಹಾಂತೇಶ್ ಕೌಜಲಗಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೀಮಾಶಂಕರ ಗುಳೆದ್, ಜಿಲ್ಲಾ ಪಂಚಾಯತಿ ಸಿಇಒ ರಾಹುಲ್ ಶಿಂಧೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕೋಲಾರ ಜಿಲ್ಲೆಯಲ್ಲಿ ಇಂದು ಚಾಲನೆ। ಗ್ರಾಮೀಣ ಜನರ ಆರೋಗ್ಯ ರಕ್ಷಣೆಯಲ್ಲಿ ಸರಕಾರದ ಮಹತ್ವದ ಹೆಜ್ಜೆ

ಗೃಹ ಆರೋಗ್ಯ ಯೋಜನೆಗೆ ಸಿಎಂ ಸಿದ್ದರಾಮಯ್ಯ ಚಾಲನೆ

ಬೆಂಗಳೂರು: ಗ್ರಾಮೀಣ ಪ್ರದೇಶದ ಜನರ ಆರೋಗ್ಯ ರಕ್ಷಣೆ ವಿಚಾರದಲ್ಲಿ ಮಹತ್ವಾಕಾಂಕ್ಷಿ ಯೋಜನೆಯಾದ 'ಗೃಹ ಆರೋಗ್ಯ' ಯೋಜನೆಯನ್ನು ಮುಖ್ಯಮಂತ್ರಿ ಸಿದ್ದ ರಾಮಯ್ಯ

ಗುರುವಾರ ಕೋಲಾರ ಜಿಲ್ಲೆಯಿಂದ ಚಾಲನೆ ನೀಡಲಿದ್ದು, ಜನವರಿ ತಿಂಗಳಿನಲ್ಲಿ ರಾಜ್ಯಾದ್ಯಂತ ಜಾರಿ ಯಾಗಲಿದೆ.

ಸಾಂಕ್ರಾಮಿಕವಲ್ಲದ (ಒಬ್ಬರಿಂದ ಒಬ್ಬರಿಗೆ ಹರಡದ) ರೋಗಗಳ ಹತೋಟಿಗೆ ತರಲು ಸರಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಗೃಹ ಆರೋಗ್ಯ ಯೋಜನೆಗೆ ಕ್ಷಣಗಣನೆ ಆರಂಭವಾಗಿದ್ದು, ಹಳ್ಳಿಗಾಡಿನ ಜನರು ರಕ್ತದೊತ್ತಡ, ಮಧುಮೇಹ ರೋಗಗಳ ತಪಾಸಣೆ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುತ್ತಿದ್ದು, ಹೀಗಾಗಿ ಆರೋಗ್ಯ ಇಲಾಖೆ ಜನರ ಮನೆ ಬಳಿಗೆ ಕಳಿಸುತ್ತಿದ್ದೇನೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ದೇಶದಲ್ಲಿ ಸಾಂಕ್ರಾಮಿಕವಲ್ಲದ ರೋಗ ಹೆಚ್ಚುತ್ತಿದ್ದು, ವಿಶೇಷವಾಗಿ ಕರ್ನಾಟಕದಲ್ಲಿ ಶೇ. 26.9 ರಷ್ಟು ರಕ್ತದೊತ್ತಡ, ಶೇ. 15.6 ರಷ್ಟು ಜನರು ಮಧುಮೇಹ ರೋಗಗಳಿಂದ ಬಳಲುತ್ತಿದ್ದಾರೆ. ಅಲ್ಲದೇ ರಾಜ್ಯದಲ್ಲಿ ಶೇ. 11.5 ರಷ್ಟು ಬಾಯಿ ಕ್ಯಾನ್ಸರ್, ಶೇ. 26 ರಷ್ಟು ಸ್ತನ ಕ್ಯಾನ್ಸರ್ ಹಾಗೂ ಶೇಕಡಾ 18.3 ರಷ್ಟು ಗರ್ಭಕಂಠದ ಕ್ಯಾನ್ಸರ್ ರೋಗಗಳಿಂದ ತತ್ತರಿಸುತ್ತಿದ್ದು, ಈ ರೋಗಗಳಿಗೂ ಪರಿಹಾರ ಒದಗಿಸಲು ಗೃಹ ಆರೋಗ್ಯ ಯೋಜನೆ ರೂಪುರೇಷೆ ಸಿದ್ಧಪಡಿಸಲಾಗಿದೆ. ಇದರಿಂದ ಉಂಟಾಗುತ್ತಿರುವ ಮರಣ ಹಾಗೂ ಅನಾರೋಗ್ಯ ತೊಡಕು ತಡೆಗಟ್ಟಲು ಗೃಹ ಆರೋಗ್ಯ ಯೋಜನೆ ಪರಿಚಯಿಸಲಾಗಿದೆ ಎಂದು ತಿಳಿಸಿದ್ದಾರೆ.

> ಆರೋಗ್ಯ ಅಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತರು ಮನೆ ಮನೆಗೆ ತೆರಳಿ ಜನರ ರಕ್ತದೊತ್ತಡ, ಮಧುಮೇಹ ತಪಾಸಣೆ ನಡೆಸಲಿದ್ದಾರೆ. ರೋಗಕ್ಕೆ ತುತ್ತಾದವರಿಗೆ ಸೂಕ್ತ ಔಷಧ ತಲುಪಿಸಲಾಗುತ್ತದೆ. ಜನರು ಈ ಯೋಜನೆಯ ಸದುಪಯೋಗ ಪಡಿಸಿಕೊಳ್ಳಬೇಕು. ಗೃಹ ಆರೋಗ್ಯದ ಮುಖಾಂತರ ಈಗಲೇ ತಪಾಸಣೆ ನಡೆಸಿ ಔಷಧಗಳನ್ನು ಕೊಟ್ಟರೆ ಮುಂದೆ ಆಗುವ ಜೀವಪಾಯಗಳನ್ನು ತಡೆಗಟ್ಟಬಹುದು.
> -ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಏನಿದು ಗೃಹ ಆರೋಗ್ಯ ಯೋಜನೆ-ಹೇಗೆ ಕಾರ್ಯ ನಿರ್ವಹಣೆ

- ಆಶಾ ಕಾರ್ಯಕರ್ತೆಯರು ಪ್ರತಿ ಮನೆಗೆ ಭೇಟಿ ನೀಡಿ 30 ವರ್ಷ ಮೇಲ್ಪಟ್ಟ ಜನರ ರಕ್ತದೊತ್ತಡ, ಮಧುಮೇಹ ತಪಾಸಣೆ ನಡೆಸಲಿದ್ದಾರೆ.
- ವಾರದಲ್ಲಿ ಮಂಗಳವಾರ, ಬುಧವಾರ, ಶುಕ್ರವಾರ ಮತ್ತು ಶನಿವಾರದಂದು ದಿನಕ್ಕೆ 15 ಮನೆಗಳಂತೆ ಭೇಟಿ ನೀಡಿ ತಪಾಸಣೆ ಕಾರ್ಯ ನಡೆಸಲಿದ್ದಾರೆ.
- ಬಾಯಿ ಕ್ಯಾನ್ಸರ್, ಮಹಿಳೆಯರ ಗರ್ಭಕಂಠ ಮತ್ತು ಸ್ತನ ಕ್ಯಾನ್ಸರ್ ಸೇರಿದಂತೆ ಸಹ ಭೇಟಿಯ ಸಂದರ್ಭದಲ್ಲಿ ಪರೀಕ್ಷಿಸಲಾಗುತ್ತದೆ.
- ರೋಗಗಳಿಂದ ದೂರವಿರಲು ಜೀವನಶೈಲಿ ಮಾರ್ಪಾಡು ಮಾಡಲು ಆರೋಗ್ಯ ಸಿಬ್ಬಂದಿಯಿಂದ ಸಲಹೆ ನೀಡಲಾಗುತ್ತದೆ.

ಚನ್ನಪಟ್ಟಣದಲ್ಲಿ ಕುಮಾರಸ್ವಾಮಿಯವರ ದೊಡ್ಡ ಪ್ರಭಾವ ಇದೆ

ಬಿಜೆಪಿಯಲ್ಲಿ ಯಾವ ಬಂಡಾಯವೂ ಇಲ್ಲ

ಹಾವೇರಿ: ಸಿಪಿ ಯೋಗೇಶ್ವರ್ ಮನವೊಲಿಸಲು ಬಹಳ ಪ್ರಯತ್ನ ಮಾಡಿದ್ದೇವೆ. ಆದರೆ ಆಗಲಿಲ್ಲ. ಅವರು ಕಾಂಗ್ರೆಸ್ ಸೇರಿರೋದು ದುರ್ದೈವದ ಸಂಗತಿ. ಕಾಂಗ್ರೆಸ್‌ನಲ್ಲಿ ಅಭ್ಯರ್ಥಿಯೇ ಇರಲಿಲ್ಲ. ಅಲ್ಲಿ ಸುಲಭವಾಗಿ ಗೆಲ್ಲಬಹುದಿತ್ತು. ಆದರೂ ಚನ್ನಪಟ್ಟಣದಲ್ಲಿ ಕುಮಾರಸ್ವಾಮಿಯವರ ದೊಡ್ಡ ಪ್ರಭಾವ ಇದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಬಾರಿ ಅಲ್ಲಿ ತ್ರಿಕೋನ ಸ್ಪರ್ಧೆ ಇದ್ದರೂ ಕುಮಾರಸ್ವಾಮಿ ಗೆದ್ದಿದ್ದರು. ಖಂಡಿತವಾಗಿ ಅಲ್ಲಿ ಜೆಡಿಎಸ್ ಅಭ್ಯರ್ಥಿಯೇ ಗೆಲ್ಲುತ್ತಾರೆ. ಮೈತ್ರಿ ಅಭ್ಯರ್ಥಿ ಯಾರು ಅಂತ ನೀವು ಕುಮಾರಸ್ವಾಮಿಯವರನ್ನೇ ಕೇಳಬೇಕು. ಡಿಕೆ ಸುರೇಶ್ ಕಣಕ್ಕೆ ಇಳಿಸುವ ಬಗ್ಗೆ ಏನು ಗೊತ್ತಿಲ್ಲ. ಆದರೆ ಕಾಂಗ್ರೆಸ್‌ಗೆ ಅಲ್ಲಿ ಬೇಸ್ ಇಲ್ಲ ಅನ್ನೋದಂತೂ ಸ್ಪಷ್ಟ ಎಂದರು.

ಬಿಜೆಪಿಯಲ್ಲಿ ಯಾವ ಬಂಡಾಯವೂ ಇಲ್ಲ. ಭರತ್ ಬೊಮ್ಮಾಯಿ ನಾಮಪತ್ರ ಸಲ್ಲಿಕೆ ವೇಳೆ ಯಡಿಯೂರಪ್ಪ ಬರುತ್ತಾರೆ. ಅಲ್ಲದೇ ರಾಜ್ಯ ಬಿಜೆಪಿ ನಾಯಕರೂ ಬರುತ್ತಾರೆ. ಮೆರವಣಿಗೆ ಮೂಲಕ ಅ. 25 ರಂದು ನಾಮಪತ್ರ ಸಲ್ಲಿಸುತ್ತೇವೆ ಎಂದು ತಿಳಿಸಿದರು.

ಸ್ಪರ್ಧಾತ್ಮಕವಾಗಿ ಎದುರಿಸುತ್ತೇವೆ

ವಿನಯ್ ಕುಲಕರ್ಣಿ ಪುತ್ರಿಗೆ ಕಾಂಗ್ರೆಸ್ ಟಿಕೆಟ್ ಘೋಷಣೆ ಸಾಧ್ಯತೆ ಬಗ್ಗೆ ಪ್ರತಿಕ್ರಿಯಿಸಿ, ಯಾರೇ ಆಗಲಿ ಕಾಂಗ್ರೆಸ್ ಅಭ್ಯರ್ಥಿ ಕಾಂಗ್ರೆಸ್ ಅಭ್ಯರ್ಥಿನೇ. ಚುನಾವಣೆಯನ್ನು ಅತ್ಯಂತ ಸ್ಪರ್ಧಾತ್ಮಕವಾಗಿಯೇ ಎದುರಿಸುತ್ತೇವೆ. ಸೌಹಾರ್ದ ಚುನಾವಣೆ ಮಾಡುತ್ತೇವೆ. ಅಸಮಾಧಾನ ಪ್ರತಿ ಚುನಾವಣೆಯಲ್ಲಿ ಇರುತ್ತದೆ ಸಂಸದ ಬಸವರಾಜ ಬೊಮ್ಮಾಯಿ ಎಂದು ಹೇಳಿದರು.

ಸಿ.ಪಿ.ಯೋಗೇಶ್ವರ್ ಮಾತೃಪಕ್ಷಕ್ಕೆ ಬಂದಿದ್ದಾರೆ: ದಿನೇಶ್ ಗುಂಡೂರಾವ್

ನಾವು ಯಾವುದೇ ಆಪರೇಷನ್ ಮಾಡಿಲ್ಲ

ಕೊಪ್ಪಳ: ಸಿ. ಪಿ. ಯೋಗೇಶ್ವರ್ ಕಾಂಗ್ರೆಸ್ ಪಕ್ಷದವರು. ಅವರು ಮಾತೃ ಪಕ್ಷಕ್ಕೆ ವಾಪಾಸ್ ಆಗಿದ್ದಾರೆ ಎಷ್ಟೇ. ಉಪ ಚುನಾವಣೆಯಲ್ಲಿ ಅಭ್ಯರ್ಥಿಯಾದರೆ ಇನ್ನೂ ಸಂತೋಷ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅದು ಉಪ ಮುಖ್ಯಮಂತ್ರಿಗಳ ಜವಾಬ್ದಾರಿ ಕ್ಷೇತ್ರ. ಉಪ ಚುನಾವಣೆಯಲ್ಲಿ ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿಯಾದರೆ ಸಂತೋಷ. ಈ ವಿಚಾರದಲ್ಲಿ ನಾವು ಆಪರೇಷನ್ ಕಮಲ ಮಾಡಿಲ್ಲ. ಅವರೇ ಒಪ್ಪಿಕೊಂಡು ಪಕ್ಷಕ್ಕೆ ಬಂದಿದ್ದಾರೆ. ಉಪ ಚುನಾವಣೆಯಲ್ಲಿ ಮೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲ್ಲುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗುತ್ತಿಗೆ ಆಧಾರದಲ್ಲಿ ವೈದ್ಯರ ನೇಮಕ ಮಾಡಿಕೊಳ್ಳುತ್ತೇವೆ. ಆರೋಗ್ಯ ಇಲಾಖೆಯಿಂದ ಉಚಿತವಾಗಿ ಮನೆ ಮನೆಗೆ ಮಾತ್ರೆ, ಚಿಕಿತ್ಸೆ ನೀಡುವ ಯೋಜನೆ ಆರಂಭವಾಗಲಿದೆ. ಆರೋಗ್ಯವಂತ ಸಮಾಜ ಮಾಡುವ ಕಾರ್ಯಕ್ರಮ ಆರಂಭಗೊಳ್ಳಲಿದೆ ಎಂದರು.

ಶಾಶ್ವತ ಪರಿಹಾರ ನೀಡುತ್ತೇವೆ

ಬೆಂಗಳೂರಿನಲ್ಲಿ ಮಳೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಮೂರು ನಾಲ್ಕು ಕಡೆ ಸಣ್ಣ ಪುಟ್ಟ ಸಮಸ್ಯೆಯಾಗಿದೆ. ಹೆಚ್ಚಿನ ಅನುದಾನ ತಂದು ಬೆಂಗಳೂರು ಸಮಸ್ಯೆಗೆ ಶಾಶ್ವತ ಪರಿಹಾರ ನೀಡುತ್ತೇವೆ ಎಂದು ಭರವಸೆ ನೀಡಿದ್ದಾರೆ. ಆರೋಗ್ಯ ಕೇಂದ್ರಗಳಲ್ಲಿ ಗುತ್ತಿಗೆ ಆಧಾರದಲ್ಲಿ ವೈದ್ಯರ ನೇಮಕ ಮಾಡಿಕೊಳ್ಳುತ್ತೇವೆ. ಆರೋಗ್ಯ ಇಲಾಖೆಯಿಂದ ಉಚಿತವಾಗಿ ಮನೆಮನೆಗೆ ಮಾತ್ರೆ, ಚಿಕಿತ್ಸೆ ನೀಡುವ ಯೋಜನೆ ಆರಂಭವಾಗಲಿದೆ ಎಂದು ತಿಳಿಸಿದ್ದಾರೆ.

ಕಂಜನ್ ಆನೆ ಮೇಲೆ ಮತ್ತೆ ಧನಂಜಯ ದಾಳಿ

ಮೈಸೂರು: ಈ ಹಿಂದೆ ದಸರಾ ವೇಳೆ ಮೈಸೂರು ಅರಮನೆ ಆವರಣದಲ್ಲೇ ಕಾದಾಟಕ್ಕೆ ಇಳಿದಿದ್ದ ಧನಂಜಯ ಮತ್ತು ಕಂಜನ್ ಆನೆಗಳು ಮತ್ತೆ ಸಂಘರ್ಷದ ವಿಚಾರವಾಗಿ ಸುದ್ದಿಗೆ ಗ್ರಾಸವಾಗಿದೆ.

ಈ ಬಾರಿಯೂ ಧನಂಜಯ ಆನೆ ಮತ್ತೆ ಕಂಜನ್ ಆನೆ ಮೇಲೆ ದಾಳಿ ಮಾಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಸ್ಥಳದಲ್ಲಿದ್ದ ಮಾವುತರ ಸಮಯ ಪ್ರಜ್ಞೆಯಿಂದ ಸಂಭವಿಸಬಹುದಾಗಿದ್ದ ಭಾರಿ ಅನಾಹುತ ತಪ್ಪಿದೆ. ಪ್ರಸ್ತುತ ಕೊಡಗಿನ ದುಬಾರೆ ಆನೆ ಶಿಬಿರದಲ್ಲಿರುವ ಧನಂಜಯ ಮತ್ತು ಕಂಜನ್ ಆನೆಗಳು ನಿನ್ನೆ ಪರಸ್ಪರ ಕಾದಾಡಿಕೊಂಡಿವೆ.

ದೊಡ್ಡಬಳ್ಳಾಪುರ ,ಚಿಕ್ಕಬಳ್ಳಾಪುರ ನಗರಗಳಿಗೆ ನೀರು ಒದಗಿಸುವ ಜಲಾಶಯ

ಜಕ್ಕಲಮಡಗು ಜಲಾಶಯಕ್ಕೆ ಶಾಸಕ ಪ್ರದೀಪ್ ಈಶ್ವರ್ ಬಾಗಿನ ಅರ್ಪಣೆ

ಚಿಕ್ಕಬಳ್ಳಾಪುರ: ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ನಗರಗಳಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಏಕೈಕ ಜಲಮೂಲವಾದ ಜಕ್ಕಲಮಡಗು ಜಲಾಶಯ 4 ವರ್ಷಗಳ ಬಳಿಕ ಭರ್ತಿಯಾಗಿದ್ದು ಜನ, ಜಾನುವಾರುಗಳಿಗೆ ಒಳಿತಾಗಲಿ ಎಂದು ಶಾಸಕ ಪ್ರದೀಪ್ ಈಶ್ವರ್ ಬುಧವಾರ ಬಾಗಿನ ಅರ್ಪಿಸಿದರು.

ಈ ವೇಳೆ ಮಾತನಾಡಿದ ಅವರು, 1955ರಲ್ಲಿ ಸರ್ ಎಂ ವಿಶ್ವೇಶ್ವರಯ್ಯ ಇಲ್ಲಿ ಈ ಜಲಾಶಯ ನಿರ್ಮಿಸಲು ಶಂಕುಸ್ಥಾಪನೆ ಮಾಡುತ್ತಾರೆ. ನಂತರದ ದಿನಗಳಲ್ಲಿ ಈ ಜಲಾಶಯ ನಿರ್ಮಾಣವಾಗಿ ಅವಳಿ ನಗರಗಳಿಗೆ ಕುಡಿಯುವ ನೀರು ಉಣಿಸುವ ಕೆಲಸ ಮಾಡುತ್ತಿದೆ. ಚಿಕ್ಕಬಳ್ಳಾಪುರ ಜನತೆಯ ಒಳ್ಳೆಯತನ ಕಾರಣವಾಗಿ ಜಲಾಶಯ ತುಂಬಿ ಕೋಡಿಯಾಗಿ ಹರಿಯುತ್ತಿದೆ. ಇಲ್ಲಿಂದ ಚಿಕ್ಕಬಳ್ಳಾಪುರ ನಗರಕ್ಕೆ ಶೇ .67ರಷ್ಟು, ಬಳಸಿದರೆ ದೊಡ್ಡಬಳ್ಳಾಪುರಕ್ಕೆ ಶೇ.33ರಷ್ಟು ಬಳಸಲಾಗುತ್ತಿದೆ. ಹೀಗೆ ನಗರಕ್ಕೆ ಪ್ರತಿದಿನ 10 ಎಂಎಲ್‌ಡಿನಂತೆ ನೀರು ಹರಿಸಿದರೂ 210 ದಿನಗಳಿಗೆ ಆಗಲಿದೆ.ಆದರೆ ಪ್ರಸ್ತುತ ಬೋರ್ ವೆಲ್‌ಗಳ ನೀರನ್ನು ಬಳಸುತ್ತಿರುವುದರಿಂದ ಪ್ರತಿದಿನ 5.5 ಎಂಎಲ್ಡಿ ಬಳಸಿದರೆ ಒಂದುವರೆ ವರ್ಷಕ್ಕೆ ಆಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಇದು ತುಂಬಾ ಸಂತೋಷದ ವಿಚಾರ ಎಂದರು.

ಚಿಕ್ಕಬಳ್ಳಾಪುರ ನಗರದ ಜಕ್ಕಲಮಡಗು ಜಲಾಶಯಕ್ಕೆ ಶಾಸಕ ಪ್ರದೀಪ್ ಈಶ್ವರ್ ಬಾಗಿನ ಅರ್ಪಿಸಿದರು.

ವರುಣದೇವ ಕರುಣೆ ತೋರಿ ನೀರುಸುರಿಸಿದ ಪರಿಣಾಮ ಜಲಾಶಯ ತುಂಬಿದೆ.ಇದೇ ಸಂತೋಷದಲ್ಲಿ ಶಾಸಕನಾಗಿ ಬಂದು ಬಾಗಿನ ಅರ್ಪಿಸಿ ಗಂಗಾಮಾತೆಗೆ ನಮಿಸಿದ್ದೇನೆ. ಪೋಶೆಟ್ಟಹಳ್ಳಿ ಭಾಗದ ಹಿರಿಯ ಕಾಂಗ್ರೆಸ್ ಮುಖಂಡ ಭರಣಿ ವೆಂಕಟೇಶ್, ನಾರಾಯಣಸ್ವಾಮಿ, ಸುಧಾಕರ್ ಸೇರಿ ಎಲ್ಲಾ ಮುಖಂಡರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು. ತಹಸೀಲ್ದಾರ್ ಅನಿಲ್,ಇಒ ಮಂಜುನಾಥ್ ಮತ್ತಿತರರು ಇದ್ದರು.

> ನನಗಿರುವ ಮಾಹಿತಿಯಂತೆ 2028ಕ್ಕೆ ಚಿಕ್ಕಬಳ್ಳಾಪುರಕ್ಕೆ ಎತ್ತಿನಹೊಳೆ ನೀರು ಬರುತ್ತೆ. ಅಲ್ಲಿಯವರೆಗೆ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕಿದೆ. ಎತ್ತಿನಹೊಳೆ ನೀರು ಬಂದರೆ 20 ಕೆರೆಗಳಿಗೆ ಕುಡಿಯುವ ಉದ್ದೇಶಕ್ಕೆ ಈ ನೀರನ್ನು ತುಂಬಿಸಿ ಬಳಸಲಾಗುವುದು.
> - ಪ್ರದೀಪ್ ಈಶ್ವರ್, ಶಾಸಕ

ಸಿ.ಪಿ.ಯೋಗೇಶ್ವರ್ ಆಗಮನದಿಂದ ಪಕ್ಷಕ್ಕೆ ಬಲ

ಚನ್ನಮ್ಮನ ಕಿತ್ತೂರು: ಸಿ.ಪಿ.ಯೋಗೇಶ್ವರ್ ನಮ್ಮವರೇ ಆಗಿದ್ದರು. ಬಳಿಕ ಎಲ್ಲಾ ಕಡೆ ಹೋಗಿ ಮರಳಿ ಗೂಡಿಗೆ ಬಂದಿದ್ದಾರೆ. ಅವರ ಆಗಮನದಿಂದ ಕಾಂಗ್ರೆಸ್ ಪಕ್ಷಕ್ಕೆ ಆನೆ ಬಲ ಬಂದಿದೆ. ಅವರಿಗೆ ಟಿಕೆಟ್ ಕೊಟ್ಟರೆ ಒಳ್ಳೆಯದು. ಸಿಪಿವೈ ಸ್ಪರ್ಧೆ ಮಾಡಿದರೆ ಚನ್ನಪಟ್ಟಣ ಕಾಂಗ್ರೆಸ್ ತೆಕ್ಕೆಗೆ ಬರುವುದರಲ್ಲಿ ಸಂಶಯವಿಲ್ಲ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಚನ್ನಮ್ಮನ ಕಿತ್ತೂರು ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ಸಿ.ಪಿ ಯೋಗೇಶ್ವರ್ ಮರಳಿ ಗೂಡಿಗೆ ಬಂದಿದ್ದು

ಖುಷಿಯಾಗಿದೆ. ಚನ್ನಪಟ್ಟಣದಲ್ಲಿ ಗೆಲುವು ನಮ್ಮದೇ. ಉಪ ಚುಮಾವಣೆ ನಡೆಯುವ ಮೂರು ಕ್ಷೇತ್ರಗಳಲ್ಲಿ ನಮ್ಮ ಪಕ್ಷ ಗೆಲ್ಲುವುದು ನಿಶ್ಚಿತ ಎಂದರು.

ಶಿಗ್ಗಾವಿಯಲ್ಲಿ ಲಿಂಗಾಯತ ನಾಯಕರಿಗೆ ಟಿಕೆಟ್ ನೀಡುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಲಕ್ಷ್ಮೀ ಹೆಬ್ಬಾಳ್ಕರ್, ಲಿಂಗಾಯತ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮುಸ್ಲಿಂ, ಹಿಂದುಳಿದವರು ಎಂದು ನೋಡಲ್ಲ. ಗೆಲ್ಲುವ ಮಾನದಂಡ ಒಂದೇ ಗಣನೆಗೆ ತೆಗೆದುಕೊಂಡು ಟಿಕೆಟ್ ಕೊಡುತ್ತೇವೆ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಸ್ಪಷ್ಟಪಡಿಸಿದರು.

200ನೇ ಚನ್ನಮ್ಮನ ವಿಜಯೋತ್ಸವ ವಿಶೇಷವಾಗಿ ಆಚರಿಸಲಾಗುತ್ತಿದೆ. ಬ್ರಿಟಿಷರ ವಿರುದ್ಧ ವಿಜಯ ಸಾಧಿಸಿ ಇಂದಿಗೆ 200 ವರ್ಷ. ರಾಣಿ ಚನ್ನಮ್ಮನಿಗೆ ನಾಡನಮನ ಸಲ್ಲಿಸಲು ಕರ್ನಾಟಕ ಸರ್ಕಾರದಿಂದ ಅದ್ದೂರಿ ಉತ್ಸವ ಆಯೋಜನೆ ಮಾಡಲಾಗಿದೆ ಎಂದು ಅಭಿಪ್ರಾಯಪಟ್ಟರು.

ಸಿಎಂ ನೇತೃತ್ವದಲ್ಲಿಯೇ ಉಪಚುನಾವಣೆ

ಕೊಪ್ಪಳ: ಮುಡಾ ಹಗರಣದಲ್ಲಿ ವಿನಾಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರು ಎಳೆದು ತರಲಾಗುತ್ತಿದ್ದು, ಅವರು ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ. ಸಿದ್ದರಾಮಯ್ಯ ನೇತೃತ್ವದಲ್ಲಿಯೇ ರಾಜ್ಯದ ಉಪಚುನಾವಣೆ ಎದುರಿಸುತ್ತೇವೆ

ಎಂದು ಶಾಸಕ ಡಾ. ಅಜಯ್ ಸಿಂಗ್ ಹೇಳಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿ ಕಾಂಗ್ರೆಸ್ ಪಕ್ಷದ ಸಿದ್ದಾಂತ ಒಪ್ಪಿಕೊಳ್ಳುವ ಯಾರನ್ನೇ ಆದರೂ ಸ್ವಾಗತ ಮಾಡುತ್ತೇವೆ. ಸಿ.ಪಿ. ಯೋಗೇಶ್ವರ್ ನಮ್ಮ ಪಕ್ಷಕ್ಕೆ ಸೇರಿದ್ದರಿಂದ ಮೈತ್ರಿ ಪಕ್ಷಗಳಿಗೆ ಆಘಾತವಾಗಿದೆ ಎಂದರು. ನಮ್ಮ ಪಕ್ಷದ ತತ್ವ ಹಾಗೂ ಸಿದ್ದಾಂತ ಮೆಚ್ಚಿಕೊಂಡು ಅನೇಕರು ಪಕ್ಷಕ್ಕೆ ಬರುತ್ತಿರುವುದನ್ನು ನೋಡಿದರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲುತ್ತದೆ ಎನ್ನುವುದು ಗೊತ್ತಾಗುತ್ತದೆ. ಕುಟುಂಬ ರಾಜಕಾರಣದ ಆಚೆಗೂ ಎಲ್ಲರಿಗೂ ನಮ್ಮ ಪಕ್ಷ ಅವಕಾಶ ಕೊಡುತ್ತದೆ ಎನ್ನುವುದು ಇದರಿಂದ ತಿಳಿಯುತ್ತದೆ ಎಂದು ಹೇಳಿದರು. ಸಿದ್ದರಾಮಯ್ಯ ಎಂದರೆ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳಿಗೆ ಭಯವಿದ್ದು, ಹೇಗಾದರೂ ಮಾಡಿ ಅವರನ್ನು ಅಧಿಕಾರದಿಂದ ಕೆಳಗಿಳಿಸಬೇಕು ಎಂದು ಮೈತ್ರಿ ಪಕ್ಷಗಳು ಕುತಂತ್ರ ಮಾಡುತ್ತಿವೆ ಎಂದು ಆರೋಪಿಸಿದರು. ಸಿ.ಎಂ. ಈಗಲೂ ಪ್ರಶ್ನಾತೀತ ನಾಯಕ ಎಂದರು.

ಜಿಲ್ಲಾಡಳಿತದಿಂದ ಭಕ್ತರಿಗಾಗಿ ಅಚ್ಚುಕಟ್ಟು ವ್ಯವಸ್ಥೆ

ಹಾಸನಾಂಬೆ ದರ್ಶನೋತ್ಸವ ಇಂದಿನಿಂದ

ಹಾಸನ: ವರ್ಷಕ್ಕೊಮ್ಮೆ ದರ್ಶನ ಭಾಗ್ಯ ಕರುಣಿಸಿರುವ ನಗರದ ಅಧಿದೇವತೆ ಹಾಸನಾಂಬೆಯ ದರ್ಶನೋತ್ಸವ ಆರಂಭಕ್ಕೆ ಕ್ಷಣಗಣನೆ ಶುರುವಾಗಿದೆ. ಆಶ್ವೀಜಮಾಸದ ಮೊದಲ ಗುರುವಾರ ದೇವಿಯ ಗರ್ಭಗುಡಿ ಬಾಗಿಲು ಮಧ್ಯಾಹ್ನ 12ಗಂಟೆಗೆ ಶಾಸ್ತ್ರೋಕ್ತವಾಗಿ ತೆರೆಯಲಿದೆ. ನ.3 ರವರೆಗೆ ದೇವಿಯ ದರ್ಶನೋತ್ಸವ ಮುಂದುವರಿಯಲಿದೆ. ಇದಕ್ಕಾಗಿ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

ಈ ವೇಳೆ ಆದಿಚುಂಚನಗಿರಿ ಪೀಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ತುಮಕೂರು ಸಿದ್ಧಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ ಹಾಗೂ ಸ್ಥಳೀಯ ಜನ ಪ್ರತಿನಿಧಿಗಳು ಉಪಸ್ಥಿತರಿರುವರು. ಈ ಬಾರಿ ದಿನದ 24 ಗಂಟೆಯೂ ದೇವಿಯ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಭಕ್ತರ ದರ್ಶನಕ್ಕೆ ಅವಶ್ಯವಿರುವ ಮೂಲ ಸೌಕರ್ಯಗಳಾದ ಮಳೆ-ಬಿಸಿಲಿನಿಂದ ಭಕ್ತರು ಆಶ್ರಯ ಪಡೆಯಲು ಜರ್ಮನ್ ಟೆಂಟ್ ನಿರ್ಮಿಸಲಾಗಿದೆ. ಇದರ ಜೊತೆಗೆ ದೇವಾಲಯದ ಒಳ-ಹೊರಗೆ ವಿಶೇಷ ರೀತಿಯಲ್ಲಿ ಹೂವಿನ ಅಲಂಕಾರ ಮಾಡಲಾಗಿದೆ. ಸಿದ್ದೇಶ್ವರ ದೇವಾಲಯದ ಮುಂಭಾಗ ಹೂವಿನಲ್ಲೇ ಅರಳಿರುವ ವಿವಿಧ ಹೂವಿನ ಶಿವಲಿಂಗ ನಿಜಕ್ಕೂ ಅತ್ಯಾಕರ್ಷಕವಾಗಿದೆ.

1400ಕ್ಕೂ ಅಧಿಕ ಖಾಕಿ ಪಡೆ ನಿಯೋಜನೆ: ಇನ್ನು ಹಾಸನಾಂಬೆ ಜಾತ್ರೋತ್ಸವ ವೇಳೆ ಶಾಂತಿ ಸುವ್ಯವಸ್ಥೆ ಕಾಪಾಡಲು ಬರೋಬ್ಬರಿ 1400ಕ್ಕೂ ಹೆಚ್ಚು ಖಾಕಿ ಪಡೆ ನಿಯೋಜನೆ ಮಾಡಲಾಗಿದೆ. ಜಿಲ್ಲೆಯ ಅಧಿಕಾರಿಗಳು, ಸಿಬ್ಬಂದಿ ಜೊತೆಗೆ ಹೊರಗಿನ ಸಿಬ್ಬಂದಿ ಸೇರಿ ಸುಮಾರು 250 ಮಂದಿ ಕರೆಸಿಕೊಳ್ಳಲಾಗಿದೆ. ಒಟ್ಟಾರೆ ಒಬ್ಬರು ಎಸ್ಪಿ, ನಾಲ್ಕು ಮಂದಿ ಎಎಸ್ಪಿ, 12 ಮಂದಿ ಡಿವೈಎಸ್ಪಿ, 74 ಮಂದಿ ಸಿಪಿಐ ಹಾಗೂ 126 ಮಂದಿ ಪಿಎಸ್‌ಐಗಳನ್ನು ನಿಯೋಜನೆ ಮಾಡಲಾಗಿದೆ ಎಂದು ಎಸ್ಪಿ ಮೊಹಮ್ಮದ್ ಸುಜೀತಾ ತಿಳಿಸಿದ್ದಾರೆ.

ಸಿದ್ದೇಶ್ವರ ದೇವಾಲಯದ ಮುಂಭಾಗ ಹೂವಿನಲ್ಲೇ ಅರಳಿರುವ ಶಿವಲಿಂಗ.

ಚನ್ನಪಟ್ಟಣ ಗೆಲುವು ನಿಶ್ಚಿತ: ಜಾರಕಿಹೊಳಿ

ಚನ್ನಮ್ಮನ ಕಿತ್ತೂರು: ಸಿ.ಪಿ.ಯೋಗೇಶ್ವರ ಕಾಂಗ್ರೆಸ್‌ಗೆ ನಿರೀಕ್ಷೆಯಂತೆ ಸೇರ್ಪಡೆ ಆಗಿದ್ದಾರೆ. ಸಿಪಿವೈಗೆ ಕಾಂಗ್ರೆಸ್ ಟಿಕೆಟ್ ನೀಡುವುದನ್ನು ಹೈಕಮಾಂಡ್ ತೀರ್ಮಾನಿಸಲಿದೆ. ಇವರ ಸೇರ್ಪಡೆಯಿಂದ ಪಕ್ಷಕ್ಕೆ ಶಕ್ತಿ ಬಂದಿದ್ದು ಚನ್ನಪಟ್ಟಣ

ಗೆಲುವು ನಿಶ್ಚಿತ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಿ.ಪಿ ಯೋಗೇಶ್ವರ್ ಕಾಂಗ್ರೆಸ್ ಸೇರ್ಪಡೆ ಹೈಕಮಾಂಡ್ ನಿರ್ಧಾರ. ಅವರು ಮರಳಿ ಕಾಂಗ್ರೆಸ್ ಗೆ ಬಂದಿದ್ದು ಶಕ್ತಿ ಹೆಚ್ಚಿಸಿದೆ. ಚನ್ನಪಟ್ಟಣ ಕ್ಷೇತ್ರದ ಗೆಲುವು ನಿಶ್ಚಿತ . ಸಂಡೂರ, ಶಿಗ್ಗಾವಿಯಲ್ಲಿ ಕಾಂಗ್ರೆಸ್ ಗೆಲುವಿಗೆ ಒಳ್ಳೆಯ ವಾತಾವರಣ ಇದೆ. ಟಿಕೆಟ್ ಹಂಚಿಕೆಯಲ್ಲಿ ಯಾವುದೇ ಗೊಂದಲಗಳಿಲ್ಲ, ಸೀಮಿತವಾದ ಅಭ್ಯರ್ಥಿಗಳಿದ್ದು, ಗೆಲ್ಲುವ ಅಭ್ಯರ್ಥಿಗೆ ಟಿಕೆಟ್ ಕೊಡುತ್ತೇವೆ. ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ನನಗೆ ಶಿಗ್ಗಾವಿ ಕ್ಷೇತ್ರದ ಜವಾಬ್ದಾರಿ ಇದೆ ಎಂದು ಸತೀಶ ಜಾರಕಿಹೊಳಿ ತಿಳಿಸಿದರು. ಅಂಚೆ ಚೀಟಿಯಲ್ಲಿ ಚೆನ್ನಮ್ಮಳ ಹೆಸರು ಸೇರ್ಪಡೆಗೆ ಈಗಾಗಲೇ ರಾಜ್ಯ ಸರಕಾರ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಅಂಚೆ ಚೀಟಿಯಲ್ಲಿ ಚೆನ್ನಮ್ಮಳ ಹೆಸರು ಹಾಕಿದೆ ಒಳ್ಳೆಯ ನಿರ್ಧಾರ ಎಂದರು.

ವಿಶ್ವವಾಣಿ

ಸಂಪಾದಕೀಯ

ಹದ್ದಿನ ಕಣ್ಣುಗಳು ಮಂಜಾಗಿದ್ದೇಕೆ?

ಇದು ನಿಜಕ್ಕೂ ಆಘಾತಕಾರಿ ಸಂಗತಿ. ಮೋರಿಸ್ ಸ್ಯಾಮ್ಯುಯೆಲ್ ಎಂಬಾತ ಗುಜರಾತಿನ ಗಾಂಧಿನಗರದಲ್ಲಿನ ತನ್ನ ಕಚೇರಿಯಲ್ಲಿ ನ್ಯಾಯಾಲಯದ ಸಜ್ಜಿಕೆಯನ್ನು ಮಾಡಿಸಿ, ನ್ಯಾಯಾಧೀಶನಂತೆ ಸ್ವತಃ ಛದ್ಮವೇಷ ಧರಿಸಿ ಜನರನ್ನು ವಂಚಿಸುತ್ತಿದ್ದನಂತೆ. 'ಆರ್ಬಿಟ್ರಲ್ ಟ್ರಿಬ್ಯೂನಲ್ ಕೋರ್ಟ್' ಎಂಬ ಫಲಕ ಹಾಕಿಕೊಂಡು, ಭೂವ್ಯಾಜ್ಯ ಸಂಬಂಧಿತ ದಾವೆಗಳನ್ನು ವಿಚಾರಣೆ ಮಾಡುವಂತೆ ನಟಿಸಿ, ಹಣ ನೀಡಿದವರಿಗೆ ಅನುಕೂಲಕರ ಆದೇಶಗಳನ್ನು ನೀಡುತ್ತಾ ಬಂದಿದ್ದನಂತೆ ಈ ವಂಚಕ. ಈತ ಕಳೆದ 5 ವರ್ಷಗಳಿಂದ ಜನರ ಕಣ್ಣಿಗೆ ಮಣ್ಣೆರಚಿದ್ದು ಮಾತ್ರವಲ್ಲದೆ ಅಲ್ಲಿನ ಆಳುಗ ವ್ಯವಸ್ಥೆಯನ್ನೂ ಅಣಕಿಸಿದ್ದಾನೆ ಎನ್ನಲಡ್ಡಿಯಿಲ್ಲ. ಈ ಸುದ್ದಿ ತಿಳಿದ ಅಹಮದಾಬಾದ್ ಸಿವಿಲ್ ಕೋರ್ಟ್ ರಿಜಿಸ್ಟ್ರಾರ್ ಅವರು ಪೊಲೀಸರಿಗೆ ದೂರು ನೀಡಿದ ನಂತರ ಈ ವಂಚಕನ ಮತ್ತು ಸದರಿ ವಂಚನೆಯಲ್ಲಿ ಈತನಿಗೆ ನೆರವಾಗುತ್ತಿದ್ದವರ ಬಂಧನವಾಗಿ ಪ್ರಕರಣ ದಾಖಲಾಗಿದೆ ಎಂಬುದು ಲಭ್ಯ ಸುದ್ದಿ. ವಂಚಕರಿಗೆ ಕೈಕೋಳ ತೊಡಿಸಿದ್ದು ಸಮಾಧಾನಕರ ಸಂಗತಿಯಾದರೂ, ಇಂಥದೊಂದು ಅಪಸವ್ಯ ನಮ್ಮ ವ್ಯವಸ್ಥೆಯ ಹದ್ದಿನ ಕಣ್ಣುಗಳಿಗೆ ಬೀಳುವುದಕ್ಕೆ ಇಷ್ಟು ತಡವಾಗಿದ್ದೇಕೆ? ಐದು ವರ್ಷಗಳವರೆಗೆ ಅವು ಮಂಜಾಗಿದ್ದವೇ? ಎಂಬ ಪ್ರಶ್ನೆಗಳು ಸಹಜವಾಗಿಯೇ ಹುಟ್ಟುತ್ತವೆ. ವ್ಯವಸ್ಥೆಯ ಕಣ್ಣಿಗೆ ಮಣ್ಣೆರಚಿ ನಗರ, ಪಟ್ಟಣ, ಹಳ್ಳಿಗಳಲ್ಲಿ ಠಿಕಾಣಿ ಹೂಡಿರುವ ನಕಲಿ ವೈದ್ಯರನ್ನು ಪೊಲೀಸರು ಪತ್ತೆಮಾಡಿ ಕೈಕೋಳ ತೊಡಿಸಿದಾಗ ಜನರು ನೆಮ್ಮದಿಯ ನಿಟ್ಟುಸಿರು ಬಿಡುವುದಿದೆ; ಕಾರಣ, ತಮ್ಮ ಆರೋಗ್ಯದೊಂದಿಗೆ ಚೆಲ್ಲಾಟವಾಡುತ್ತಿದ್ದ ಇಂಥವರಿಂದ ಇನ್ನು ಮುಂದಾದರೂ ದೂರ ಉಳಿಯಬಹುದು, ಮತ್ತಷ್ಟು ಎಚ್ಚರಿಕೆಯಿಂದ ಇರಬಹುದು ಎಂಬ ಗ್ರಹಿಕೆ. ಆದರೆ, ಬರೋಬ್ಬರಿ 5 ವರ್ಷಗಳವರೆಗೆ 'ನಕಲಿ ನ್ಯಾಯಾಲಯ'ವನ್ನು ನಡೆಸಿಕೊಂಡು ಬರುವಂಥ ಧಾರ್ಷ್ಟ್ಯ ಗುಜರಾತಿನ ಆ ವಂಚಕನಿಗೆ ದಕ್ಕಿದ್ದಾದರೂ ಹೇಗೆ? ಇದಕ್ಕಾಗಿ ಆತ ಯಾರೆಲ್ಲರನ್ನು 'ಸರಿಮಾಡಿಕೊಂಡಿದ್ದ'? ಅನ್ಯಾಯವಾದಾಗ ಜನರು ಬಾರಿಸಲು ಮುಂದಾಗುವ 'ನ್ಯಾಯದ ಗಂಟೆ'ಯೇ ಕಳಪೆಮಾಲು ಎಂದಾದರೆ ಅವರಿಗೆ ಆಗುವ ಆಘಾತವೆಷ್ಟು? ಎಂಬ ಪ್ರಶ್ನೆಗಳಿಗೆ ಉತ್ತರ ಸಿಗಬೇಕಿದೆ. 'ಕಾಂಚಾಣವಿದ್ದರೆ ಕಾರ್ಯಸಿದ್ಧಿ' ಎಂಬ ಭಂಡಧೈರ್ಯವೇ ಇಂಥವರಿಗೆ ಬಲ ನೀಡಿರಬಹುದೇ?!

ಸೊಂಪಾದಕೀಯ

ಯೋಗ ಬಂತು ಯೋಗ!

ರಾಜಕಾರಣದಲ್ಲಿ ಯಾವುದೂ ಶಾಶ್ವತ ಅಲ್ಲ ಅನ್ನೋ ಮಾತು ಮತ್ತೊಮ್ಮೆ ನಿಜ ಆಗಿದೆ. ವಿಚಿತ್ರ ಬೆಳವಣಿಗೆಯಲ್ಲಿ ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಪಾಳಯ ಸೇರಿದ್ದಾರೆ. ಮಧ್ಯರಾತ್ರಿಯಲ್ಲಿ ಬಿಜೆಪಿಯಿಂದ ಸ್ವಾತಂತ್ರ್ಯ ಸಿಕ್ಕವರ ಹಾಗೆ ಖಾಸಗಿ ಹೋಟೆಲ್‌ನಲ್ಲಿ ಡಿ.ಕೆ.ಶಿವಕುಮಾರ್ ಅವರನ್ನ ಭೇಟಿ ಮಾಡಿ ಕಾಂಗ್ರೆಸ್‌ಗೆ ಸೇರ್ಪಡೆ ಆಗುವ ನಿರ್ಧಾರ ಮಾಡಿದ್ದಾರೆ ಯೋಗೇಶ್ವರ್. ಸೋ ಕಾಲ್ಡ್ 'ಸೈನಿಕ' ಈಗಾಗಲೇ ಬಿಜೆಪಿಗೆ ರಾಜೀನಾಮೆ ಕೊಟ್ಟು ಸೈನ್ ಹಾಕಿರುವ ಪತ್ರವನ್ನು ಕಳಿಸಿಕೊಟ್ಟಿದ್ದಾರೆ ಎನ್ನಲಾಗಿದ್ದರೂ ಅದನ್ನ ಅಲ್ಲಗಳೆಯುತ್ತಲೇ ಕಾಂಗ್ರೆಸ್‌ಗೆ ಹೆಜ್ಜೆ ಇಟ್ಟಿದ್ದಾರೆ. ಅವರ ಈ ನಡೆ ನಿರೀಕ್ಷಿತವೋ ಅನಿರೀಕ್ಷಿತವೋ, ಆದರೆ ಅದು ಸಂಚಲನ ಮೂಡಿಸಿರೋದಂತೂ ಸತ್ಯ. ಅವರ ಈ ನಡೆಯಿಂದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರಿಗೆ ತಲ್ಲಣ ಶುರುವಾಗಿದೆ. ಅವರು ಯೋಗೇಶ್ವರ್ ವಿಷಯದಲ್ಲಿ ರಾಜಿ ಆಗುವ ಸೂಚನೆ ಕೊಟ್ಟಿದ್ದರೂ ಅವರ ಮಾತಿಗೆ ಬೆಲೆ ಸಿಗದೆ ಯೋಗೇಶ್ವರ್ ಕಾಂಗ್ರೆಸ್ ಸೇರಿಕೊಂಡಿರುವುದು ಅವರಿಗೆ ಅಸಮಾಧಾನ ತಂದಿದೆ. ಇದೆಲ್ಲವೂ ಆಗ್ತಾ ಇರೋದು ಚನ್ನಪಟ್ಟಣ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ. ಅಲ್ಲಿ ಕಾಂಗ್ರೆಸ್‌ನಿಂದ ಡಿ.ಕೆ.ಸುರೇಶ್‌ರನ್ನು ಕಣಕ್ಕಿಳಿಸೋ ಪ್ಲ್ಯಾನ್ ಇತ್ತು. ಆದರೆ ಯೋಗೇಶ್ವರ್ ಬರೋದಾದ್ರೆ ಅದರಿಂದ ತನಗೇ ಲಾಭ ಎಂದರಿತ ಕಾಂಗ್ರೆಸ್ 'ಸೈನಿಕ'ನ ಆಗಮನವನ್ನು ಸ್ವಾಗತಿಸಿದೆ. ಆದರೆ ಈ ವಿಷಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮಾಡಿಕೊಂಡಿದ್ದ ಮೈತ್ರಿಗೆ ಬೆಲೆ ಸಿಕ್ಕಿಲ್ಲ. 'ಯೋಗೇಶ್ವರ್‌ರನ್ನು ಜೆಡಿಎಸ್ ಚಿಹ್ನೆಯಡಿಯಲ್ಲೇ ಚನ್ನಪಟ್ಟಣದಲ್ಲಿ ಅಭ್ಯರ್ಥಿಯಾಗಿ ನಿಲ್ಲಿಸಲು ನಾನು ರೆಡಿ ಇದ್ದೆ. ರಾಜಿ ಆಗಿ ನೆಲದವರೆಗೂ ಬಗ್ಗಿದ್ದೆ. ಇನ್ನೆಷ್ಟು ಬಗ್ಗೋಕೆ ಸಾಧ್ಯ' ಅಂತ ಅಸಹನೆ ಹೊರಹಾಕಿದ್ದಾರೆ ಕುಮಾರಸ್ವಾಮಿ. ಆದರೆ ಯೋಗೇಶ್ವರ್ ಚಿಂತನೆಯೇ ಬೇರೆ ಇತ್ತು ಅನ್ನುತ್ತೆ. 'ಕುಮಾರಸ್ವಾಮಿ ಎಷ್ಟೇ ಆದರೂ ಮಣ್ಣಿನ ಮಕ್ಕಳ ಕುಟುಂಬದವರು. ಅವರು ನೆಲದವರೆಗೂ, ಮಣ್ಣಿನವರೆಗೂ ಬಗ್ಗೋದು ವಿಶೇಷ ಏನಲ್ಲ, ನಾನು ನನ್ನ ಪಾಡಿಗೆ ನನಗೆ ಬೇಕಾಗಿದ್ದನ್ನು ಮಾಡ್ತೀನಿ' ಅನ್ನೋ ಧಾಟಿಯಲ್ಲಿ ಜೆಡಿಎಸ್, ಬಿಜೆಪಿಯ ಚಾಳಿ ಬಿಟ್ಟು ಕಾಂಗ್ರೆಸ್ ಚಾವಡಿ ಸೇರಿದ್ದಾರೆ ಸಿಪಿವೈ.

ಸಂಪಾದಕರ ಸದ್ಯಶೋಧನೆ

ಬೆಲ್ಲಿ ಲ್ಯಾಂಡಿಂಗ್ ಅಂದರೇನು?

ವಿಮಾನವನ್ನು ಇಳಿಸುವಾಗ (ಲ್ಯಾಂಡ್ ಮಾಡುವಾಗ), ಒಂದು ವೇಳೆ ವಿಮಾನದ ಮುಂದಿನ ಅಥವಾ ಹಿಂದಿನ ಚಕ್ರಗಳು ಬಿಚ್ಚಿಕೊಳ್ಳಲಿಲ್ಲವೆನ್ನಿ, ಆಗ ಪೈಲಟ್ ಹೇಗೆ ರನ್ ವೇ ಮೇಲೆ ವಿಮಾನವನ್ನು ಇಳಿಸುತ್ತಾನೆ? ಈ ಪ್ರಶ್ನೆ ವಿಮಾನ ಪ್ರಯಾಣಿಕರ ತಲೆಯಲ್ಲಿ ಆಗಾಗ ಹಾದುಹೋಗಿ ಭಯ ಮೂಡಿಸುವುದುಂಟು. ನಿಜ, ಅಪರೂಪಕ್ಕೆ ವಿಮಾನದ ಲ್ಯಾಂಡಿಂಗ್ ಗೇರ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಳ್ಳುವುದುಂಟು. ಆಗ ವಿಮಾನದ ಚಕ್ರಗಳು ಬಿಚ್ಚಿಕೊಳ್ಳುವುದಿಲ್ಲ. ಅಂಥ ಸಂದರ್ಭದಲ್ಲಿ ಲ್ಯಾಂಡ್ ಮಾಡುವುದು ಹೇಗೆ? ಇದು ನಿಜಕ್ಕೂ ಅತ್ಯಂತ ಮೈನವಿರೇಳಿಸುವ ಅನುಭವವೇ. ಅಂಥ ಸನ್ನಿವೇಶದಲ್ಲಿ 'ಬೆಲ್ಲಿ ಲ್ಯಾಂಡಿಂಗ್' ಮಾಡುತ್ತಾರೆ. ನಿಮಗೆ ಗೊತ್ತಿರುವಂತೆ, ಬೆಲ್ಲಿ ಅಂದರೆ ಹೊಟ್ಟೆ. ವಿಮಾನದ ಹೊಟ್ಟೆ ಭಾಗ (ಮಧ್ಯ ಭಾಗ) ರನ್ ವೇ ಮೇಲೆ ಲ್ಯಾಂಡ್ ಆಗುತ್ತದೆ. ಇದನ್ನು ಊಹಿಸಿಕೊಳ್ಳುವುದೂ ಕಷ್ಟ. ತಾಂತ್ರಿಕ ದೋಷದಿಂದ ಮುಂದು-ಹಿಂದಿನ ಚಕ್ರಗಳು ಬಿಚ್ಚಿಕೊಳ್ಳದಿದ್ದಾಗ, ಪೈಲಟ್ ವಿಮಾನವನ್ನು ಇಳಿಸಲೇಬೇಕು. ಆಗ ಚಕ್ರಗಳು ತೆರೆದುಕೊಳ್ಳುವಂತೆ ದುರಸ್ತಿ ಮಾಡುವ ಸಾಧ್ಯತೆಯೇ ಇಲ್ಲ. ಆಗ ಇರುವ ಏಕೈಕ ಆಯ್ಕೆ ಅಂದರೆ ಬೆಲ್ಲಿ ಲ್ಯಾಂಡಿಂಗ್. ಇದು ಪೈಲಟ್ ಮುಂದಿರುವ ಕೊನೆಯ ಆಯ್ಕೆ. ಇದು ಅತ್ಯಂತ ಅಪಾಯಕಾರಿ. ವಿಮಾನದ ಹೊಟ್ಟೆಯ ಭಾಗ ರನ್ ವೇಗೆ ಜೋರಾಗಿ ಬಂದು ಅಪ್ಪಳಿಸಿ, ಹೊಟ್ಟೆ ಭಾಗ ಉಜ್ಜುತ್ತಾ ಬಹಳ ದೂರದವರೆಗೆ ಕ್ರಮಿಸುತ್ತದೆ. ಆಗ ಹೊಟ್ಟೆಯ ಭಾಗ 'ಚರ್' ಎಂದು ತಿಕ್ಕುವುದರಿಂದ, ಭಾರಿ ಘರ್ಷಣೆಗೆ ಬೆಂಕಿ ಹೊತ್ತಿಕೊಳ್ಳುವ ಸಾಧ್ಯತೆ ಇರುತ್ತದೆ. ಆ ಸಂದರ್ಭದಲ್ಲಿ ವಿಮಾನ ಸ್ವಲ್ಪ ಸಮತೋಲನ ತಪ್ಪಿದರೂ ರೆಕ್ಕೆಗಳು ಭೂಮಿಗೆ ಅಪ್ಪಳಿಸುವ ಸಾಧ್ಯತೆಯಿರುತ್ತದೆ. ಬೆಲ್ಲಿ ಲ್ಯಾಂಡಿಂಗ್ ಮಾಡುವಾಗ ಹೊಟ್ಟೆಯ ಭಾಗ ಭೂಮಿಗೆ ಮೊದಲು ತಾಗುವ ಬದಲು, ವಿಮಾನದ ಮೂತಿ ನೆಲಕ್ಕೆ ತಾಕುವ ಸಾಧ್ಯತೆಯೂ ಇದೆ. ಆಗ ವಿಮಾನ ನೆಲದ ಮೇಲೆ ಕಪ್ಪೆಯಂತೆ ಕುಪ್ಪಳಿಸುವುದುಂಟು. ಅದೂ ಅಪಾಯಕಾರಿಯೇ. ಪೈಲಟ್‌ಗಳು ಲ್ಯಾಂಡ್ ಮಾಡಲು ಸಿದ್ಧರಾದಾಗ, ಎಲ್ಲ ಭಾಗಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂದು ಖಾತ್ರಿಪಡಿಸಿಕೊಳ್ಳುತ್ತಾರೆ. ಆಗ ಚಕ್ರ ಬಿಚ್ಚಿಕೊಳ್ಳುತ್ತಿಲ್ಲ ಎಂಬುದು ಮನವರಿಕೆಯಾಗುತ್ತಿದ್ದಂತೆ, ತಕ್ಷಣ ವಿಮಾನ ಸಂಚಾರ ನಿಯಂತ್ರಣ ಕೇಂದ್ರ(ಎಟಿಸಿ)ಕ್ಕೆ ವಿಷಯವನ್ನು ರವಾನಿಸುತ್ತಾರೆ. ಆಗ ವಿಮಾನದೊಳಗೆ ಮತ್ತು ವಿಮಾನ ನಿಲ್ದಾಣದಲ್ಲಿ ತುರ್ತುಸ್ಥಿತಿಯನ್ನು ಘೋಷಿಸಲಾಗುತ್ತದೆ. ವಿಮಾನ ಲ್ಯಾಂಡ್ ಆಗುತ್ತಿದ್ದಂತೆ ಅಗ್ನಿಶಾಮಕ ವಾಹನಗಳು ಸಮರ ಸನ್ನದ್ಧವಾಗುತ್ತವೆ. ಕೆಲವು ವಿಶೇಷ ಸಂದರ್ಭಗಳಲ್ಲಿ ರನ್ ವೇ ಮೇಲೆ ವಿಮಾನದ ಹೊಟ್ಟೆ ಭಾಗ ಅಪ್ಪಳಿಸುವುದಕ್ಕೆ ಅನುಕೂಲವಾಗುವಂತೆ ಸುಮಾರು 200-300 ಮೀಟರ್ ದೂರ ಮೆತ್ತನೆಯ ಹಾಸನ್ನು ಹಾಸಲಾಗುತ್ತದೆ. ಈ ಮಧ್ಯೆ, ವಿಮಾನದಲ್ಲಿ ಇಂಧನ ಎಷ್ಟಿದೆ ಎಂಬುದು ಬಹಳ ಮುಖ್ಯ. ವಿಮಾನದಲ್ಲಿ ಹೆಚ್ಚಿನ ಪ್ರಮಾಣದ ಇಂಧನವಿದ್ದರೆ ಆಗಸದಲ್ಲಿಯೇ ಅತ್ಯಂತ ಜಾಗರೂಕವಾಗಿ ಅದನ್ನು ಹೊರಕ್ಕೆ ಚೆಲ್ಲಲಾಗುತ್ತದೆ, ಇಲ್ಲವೇ ಇಂಧನ ಖಾಲಿಯಾಗುವ ತನಕ ವಿಮಾನವನ್ನು ಆಗಸದಲ್ಲಿಯೇ ಗಿರಕಿ ಹೊಡೆಸಲಾಗುತ್ತದೆ. ನೆಲಕ್ಕೆ ತಾಕುವ ದೂರ ಕ್ರಮಿಸುವಷ್ಟು ಮಾತ್ರ ಇಂಧನವನ್ನು ಉಳಿಸಿಕೊಂಡು ವಿಮಾನವು ವೇಗದಲ್ಲಿ ನೆಲಕ್ಕೆ ಇಳಿಯುತ್ತದೆ ಮತ್ತು ಹೊಟ್ಟೆಯ ಭಾಗ ನೆಲಕ್ಕೆ ತಾಕಿ ಮುಂದಕ್ಕೆ ಹೋಗುತ್ತದೆ. ಈ ಸಮಯದಲ್ಲಿ ವಿಮಾನದ ಹಲ್‌ಗೆ (hull ಅಂದ್ರೆ body of the plane) ಹಾನಿಯಾಗುವ ಸಾಧ್ಯತೆ ಹೆಚ್ಚು. ಇಂಧನ ಖಾಲಿಯಾದಾಗ, ವಿಮಾನದ ಹೊಟ್ಟೆಯ ಭಾಗ ಅಪ್ಪಳಿಸಿ ನೆಲದ ಮೇಲೆ ಉಜ್ಜುತ್ತಾ ಸಾಗಿದರೂ, ಬೆಂಕಿ ಹೊತ್ತಿಕೊಳ್ಳುವುದಿಲ್ಲ. ಒಂದು ವೇಳೆ ಹೊತ್ತಿಕೊಂಡರೂ ಅಗ್ನಿಶಾಮಕ ವಾಹನಗಳು ಸನ್ನದ್ಧ ಸ್ಥಿತಿಯಲ್ಲಿರುತ್ತವೆ. ಪೈಲಟ್‌ನ ಕೌಶಲ, ಪರಿಣತಿ ಮತ್ತು ಅನುಭವ ಬೆಲ್ಲಿ ಲ್ಯಾಂಡಿಂಗ್‌ನ ಯಶಸ್ಸಿಗೆ ಬಹಳ ಮುಖ್ಯ. ಬೆಲ್ಲಿ ಲ್ಯಾಂಡಿಂಗ್‌ನಲ್ಲಿ ಪ್ರಯಾಣಿಕರಿಗೆ ಗಾಯಗಳಾಗುವ ಸಾಧ್ಯತೆ ಇರುತ್ತದೆ. ಬೆಲ್ಲಿ ಲ್ಯಾಂಡ್ ಆಗುತ್ತಿದ್ದಂತೆ, ವಿಮಾನದಿಂದ ಜಾರುಬಂಡಿಯಂಥ ಏಣಿಗಳು ಹೊರಚಾಚುವುದರಿಂದ ಪ್ರಯಾಣಿಕರನ್ನು ತುರ್ತು ರಕ್ಷಿಸುವ ಕಾರ್ಯಾಚರಣೆಗೆ ಗಮನ ನೀಡಲಾಗುತ್ತದೆ. ಬೆಲ್ಲಿ ಲ್ಯಾಂಡಿಂಗ್ ಆದ ವಿಮಾನವನ್ನು ಮರಳಿ ಬಳಸುವುದು ಸುರಕ್ಷಿತವಲ್ಲ. ಆದ ಹಾನಿಯ ಪ್ರಮಾಣವನ್ನು ಪರಿಗಣಿಸಿ ಅದನ್ನು ಮರಳಿ ಉಪಯೋಗಿಸುವ ಬಗ್ಗೆ ನಿರ್ಧರಿಸಲಾಗುತ್ತದೆ.

ರಾಜಕಾರಣಕ್ಕಿಂತ ಹೊಲಸಾದ ರಾಜ್ಯೋತ್ಸವ, ನೊಬೆಲ್ ಎಂಬ ಪ್ರಶಸ್ತಿಕಾರಣ!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಅಕ್ಟೋಬರ್ ತಿಂಗಳು ಪ್ರಶಸ್ತಿಗಳ ಕಾಲ. ನಾವು ಕನ್ನಡಿಗರು ರಾಜ್ಯೋತ್ಸವ ಪ್ರಶಸ್ತಿಗೆ ಎದುರು ನೋಡಿದರೆ, ಇಡೀ ಜಗತ್ತು ನೊಬೆಲ್ ಪ್ರಶಸ್ತಿ ಘೋಷಣೆಯಾಗುವುದನ್ನು ಆಸಕ್ತಿಯಿಂದ ನಿರೀಕ್ಷಿಸುತ್ತದೆ. ರಾಜ್ಯೋತ್ಸವ ಪ್ರಶಸ್ತಿ ಗಿಟ್ಟಿಸಲು ಕೆಲವರು ಇನ್ನಿಲ್ಲದ ಹರಸಾಹಸ ಮಾಡುತ್ತಾರೆ. ನಾಚಿಕೆಬಿಟ್ಟು ಕಂಡಕಂಡವರ ಮುಂದೆ ಪ್ರಶಸ್ತಿಗಾಗಿ ಅಂಗಲಾಚುತ್ತಾರೆ. ಜೀವನದಲ್ಲಿ ಸಾಧನೆ ಮಾಡುವುದು ಒಂದು ತೂಕವಾದರೆ, ಪ್ರಶಸ್ತಿ ಗಿಟ್ಟಿಸುವುದು ಆ ಸಾಧನೆಯನ್ನೂ ಮೀರಿಸುವ ಇನ್ನೊಂದು ತೂಕ. ಹೀಗಾಗಿ ಪ್ರಶಸ್ತಿ ಪಡೆದವರನ್ನು 'ಪುರಸ್ಕೃತ'ರು ಎನ್ನುವ ಬದಲು 'ವಿಜೇತ'ರು ಎಂದು ಕರೆಯುವುದೇ ಹೆಚ್ಚು ಸೂಕ್ತ. ಇಲ್ಲಿ ತನಕ ಯಾವ ಸರಕಾರಕ್ಕೂ, ರಾಜ್ಯೋತ್ಸವ ಪ್ರಶಸ್ತಿಯನ್ನು ವಿವಾದಗಳಿಲ್ಲದೇ ಕೊಡಮಾಡುವುದು ಸಾಧ್ಯವಾಗಿಲ್ಲ. ಈ ಪ್ರಶಸ್ತಿಗೆ ಪಾತ್ರರಾದವರನ್ನು ಅನುಮಾನದಿಂದ ನೋಡುವ ಸ್ಥಿತಿ ನಿರ್ಮಾಣವಾಗಿರುವುದು ವಾಸ್ತವ.

ನಾನು 'ವಿಜಯ ಕರ್ನಾಟಕ'ದಲ್ಲಿದ್ದಾಗ, ಒಂದು ವರ್ಷ ಕೆಲವು ವಿವಾದಾತ್ಮಕ ವ್ಯಕ್ತಿಗಳಿಗೆ ರಾಜ್ಯೋತ್ಸವ ಪ್ರಶಸ್ತಿ ಘೋಷಣೆಯಾದಾಗ, '130 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರಕಟ: ಅರ್ಹರಿಗೆ ಮುಂದಿನ ಬಾರಿ' ಎಂದು ಕೀಟಲೆ ಹೆಡ್‌ಲೈನ್ ಹಾಕಿದ್ದೆ. ಅದರಲ್ಲಿ ಸತ್ಯಾಂಶವೂ ಇತ್ತೆನ್ನಿ. ಪ್ರಶಸ್ತಿ ವಿತರಿಸುವ ಒಂದು ಗಂಟೆ ಮುನ್ನ, ಕೆಲವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ಘೋಷಿಸಿ, ಅದರ ಪಾವಿತ್ರ್ಯವನ್ನೇ ಹಾಳುಗೆಡವಲಾಗಿತ್ತು. ಶಾಮಿಯಾನ ಕಟ್ಟುವವರು, ಪಿಕ್‌ಪಾಕೆಟ್ ಮಾಡಿ ಜೈಲಿಗೆ ಹೋದವರು, ಮರ್ಡರ್ ಕೇಸಿನಲ್ಲಿ ಜೈಲಿನಲ್ಲಿದ್ದು ಬಂದವರು, ಒಂದೂ ಪುಸ್ತಕ ಬರೆಯದಿದ್ದರೂ 'ಸಾಹಿತ್ಯ' ಪ್ರಕಾರದಲ್ಲಿ ಸ್ಥಾನ ಪಡೆದುಕೊಂಡವರು ಆ ವರ್ಷದ ಪ್ರಶಸ್ತಿ ಪಟ್ಟಿಯಲ್ಲಿ ಮಿಂಚಿದ್ದರು. ಕೊನೆ ಗಳಿಗೆಯಲ್ಲಿ ಪ್ರಶಸ್ತಿ ಪ್ರಕಟಿಸಿದ್ದರಿಂದ, ಎಲ್ಲರಿಗೂ ಚಿನ್ನದ ಪದಕ, ಪ್ರಶಸ್ತಿ ಫಲಕ ನೀಡಲು ಸಾಧ್ಯವಾಗಿರಲಿಲ್ಲ.

ಪ್ರಶಸ್ತಿ ಪ್ರದಾನ ವೇದಿಕೆಯಲ್ಲಿ ಜನಜಂಗುಳಿಯಾಗಿ, ಪುರಸ್ಕೃತರೊಬ್ಬರ ಚಿನ್ನದ ಪದಕ ಕಾಣೆಯಾಗಿಬಿಟ್ಟಿತ್ತು. ಪಿಕ್‌ಪಾಕೆಟ್ ಮಾಡಿದವರಿಗೂ ಆ ವರ್ಷ ಪ್ರಶಸ್ತಿ ಕೊಟ್ಟಿದ್ದರಿಂದ ಅವರೇ ಈ ಕೃತ್ಯ ಎಸಗಿರಬಹುದೆಂದೂ, ಅವರು ತಮಗೆ ನೀಡಿದ ಕಾರಣಕ್ಕೆ ವೇದಿಕೆಯ ಮೇಲೆ ಚಾಕಚಕ್ಯತೆ ಮೆರೆದು ತಮ್ಮ ಯೋಗ್ಯತೆಯನ್ನು ಸಾಬೀತುಪಡಿಸಿದರೆಂದೂ ಪತ್ರಿಕೆಯಲ್ಲಿ ವರದಿಯಾಗಿತ್ತು. ಇನ್ನೊಂದು ವರ್ಷ, ಪ್ರಶಸ್ತಿ ನಿರೀಕ್ಷೆಯಲ್ಲಿದ್ದ, ಮುಖ್ಯಮಂತ್ರಿಯವರಿಗೆ ಆಪ್ತರಾದವರೊಬ್ಬರು, ತಮ್ಮ ಹೆಸರು ಪಟ್ಟಿಯಲ್ಲಿ ಇಲ್ಲದಿರುವುದನ್ನು ನೋಡಿ ನಿರಾಶರಾಗಿ, 'ಈ ಸಲ ನನಗೆ ಪ್ರಶಸ್ತಿ ಬರುವುದೆಂದು ಎಲ್ಲರಿಗೂ ಹೇಳಿದ್ದೆ. ನೀವು ನನಗೆ ಮೋಸ ಮಾಡಿದಿರಿ. ನಾನು ನಿಮ್ಮ ಮುಂದೆಯೇ ವಿಷ ಸೇವಿಸುತ್ತೇನೆ' ಎಂದು ಹೇಳಿದಾಗ, ಮುಖ್ಯಮಂತ್ರಿಯವರು ಆ ಕ್ಷಣವೇ ಅವರಿಗೂ ಪ್ರಶಸ್ತಿ ಘೋಷಿಸಿ ಸಮಾಧಾನಪಡಿಸಿದ್ದು, 'ರಾಜ್ಯೋತ್ಸವ ಪ್ರಶಸ್ತಿ ಮಹಾತ್ಮೆ'ಯ ಒಂದು ಅಕರಾಳ-ವಿಕರಾಳ ಸಂಗತಿಯೇ.

ನನಗೆ ಪರಿಚಿತರಿರುವ ಗಣ್ಯರೊಬ್ಬರು, ಕಳೆದ ಇಪ್ಪತ್ನಾಲ್ಕು ವರ್ಷಗಳಿಂದ ರಾಜ್ಯೋತ್ಸವ ಪ್ರಶಸ್ತಿಗೆ ನಿರಂತರವಾಗಿ ಪ್ರಯತ್ನಿಸುತ್ತಿರುವುದು ಮತ್ತು ಅಷ್ಟೂ ವರ್ಷ ಆ ಪ್ರಶಸ್ತಿಯಿಂದ ವಂಚಿತರಾಗುತ್ತಿರುವುದು ಹಾಗೂ ಛಲ ಬಿಡದ ತ್ರಿವಿಕ್ರಮನಂತೆ ಪ್ರಶಸ್ತಿಗಾಗಿ ಬೇಟೆ ಮುಂದುವರಿಸಿರುವುದು ಈ ಪ್ರಶಸ್ತಿಯ ಹೊಳಪು ಮತ್ತು ಖದರನ್ನು ಇನ್ನೂ ಜೀವಂತವಾಗಿಟ್ಟಿದೆ. ಒಂದು ವರ್ಷವಂತೂ ರಾಜ್ಯೋತ್ಸವ ಪ್ರಶಸ್ತಿ ಪ್ರಕಟವಾದಾಗ, ಪ್ರಶಸ್ತಿ ನಿರೀಕ್ಷೆಯಲ್ಲಿದ್ದವರೊಬ್ಬರು ಅದು ಸಿಗದೇ ನಿರಾಶರಾಗಿ, ಕೋರ್ಟಿನ ಮೆಟ್ಟಿಲನ್ನೂ ಹತ್ತಿದ್ದರು. ನಂತರ ರಾಜ್ಯೋತ್ಸವ ಪ್ರಶಸ್ತಿಗೆ ಮಾನದಂಡವನ್ನು ರೂಪಿಸುವಂತೆ ಕೋರ್ಟು ತೀರ್ಪು ನೀಡಬೇಕಾಯಿತು. ಬಳಿಕ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚನೆಯಾಗುತ್ತಿರುವುದೂ, ಈ ಪ್ರಶಸ್ತಿಯ ಇನ್ನೊಂದು ರೂಪವೇ. ಇದರಿಂದ ಪ್ರಶಸ್ತಿಗಳ ಸಂಖ್ಯೆಗೆ ಕಡಿವಾಣವೇನೋ ಬಿದ್ದಿತು. ಆದರೆ ರಾಜ್ಯೋತ್ಸವ ಪ್ರಶಸ್ತಿ ವಿವಾದಗಳಿಂದ ಮುಕ್ತವಾಗಲಿಲ್ಲ. ಈ ಸಲವಂತೂ ರಾಜ್ಯೋತ್ಸವ ಪ್ರಶಸ್ತಿಗೆ ಸಾಧನೆಯ ಜತೆಗೆ ಜಾತಿಯನ್ನೂ ಮುಖ್ಯವಾಗಿ ಪರಿಗಣಿಸಿರುವುದರಿಂದ, ಅದರ ಸಾಚಾತನ ಹೇಗಿರಬಹುದು ಎಂಬುದನ್ನು ಊಹಿಸಬಹುದು.

ಇನ್ನು ನೊಬೆಲ್ ಪ್ರಶಸ್ತಿ. ಪ್ರತಿ ವರ್ಷದ ಅಕ್ಟೋಬರ್ ಮೊದಲ ವಾರದಿಂದ ಎರಡನೇ ವಾರದಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ವೈದ್ಯಕೀಯ, ಸಾಹಿತ್ಯ, ಶಾಂತಿ, ಆರ್ಥಿಕ ವಿಜ್ಞಾನ ಕ್ಷೇತ್ರಗಳಲ್ಲಿನ ಸಾಧಕರಿಗೆ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ. ಇದಕ್ಕಿಂತ ದೊಡ್ಡದಾದ ಬೇರೆ ಪ್ರಶಸ್ತಿಯೇ ಇಲ್ಲ ಎಂಬ ರೀತಿಯ ಬಿಲ್ಡಪ್ ಅನ್ನು ನೊಬೆಲ್ ಪ್ರಶಸ್ತಿಗೆ ನೀಡಲಾಗಿದೆ. ಅದಕ್ಕಿರುವಷ್ಟು hype ಬೇರೆ ಯಾವ ಪ್ರಶಸ್ತಿಗಳಿಗೂ ಇಲ್ಲ. ಇನ್ನು ಆ ಪ್ರಶಸ್ತಿಗೆ ಭಾಜನರಾದವರನ್ನು 'ದೇವಾಂಶಸಂಭೂತ'ರಂತೆ ಈ ಜಗತ್ತು ನೋಡುತ್ತದೆ. ನೊಬೆಲ್ ಪ್ರಶಸ್ತಿಗೆ ಕನಿಷ್ಠ ಎರಡು ವರ್ಷಗಳಿಂದ ಹುಡುಕಾಟ ಆರಂಭವಾಗುತ್ತದೆ. ಕೆಲವರ ಹೆಸರು ಹತ್ತು ವರ್ಷಗಳಿಂದ ಪರಿಗಣನೆಗೆ ಬಂದು ಹೋಗಿದ್ದುಂಟು. ಈ ಪ್ರಶಸ್ತಿಗೆ ಬಹಳ ದೊಡ್ಡ ಮಟ್ಟದಲ್ಲಿ ಲಾಬಿ, ಪ್ರಭಾವ ನಡೆಯುವುದು ಗುಟ್ಟಾಗಿ ಉಳಿದಿಲ್ಲ. ಆದರೂ ಈ ಪ್ರಶಸ್ತಿ ತನ್ನ ಘನತೆಯನ್ನು ಇಂದಿಗೂ ಉಳಿಸಿಕೊಂಡು ಬಂದಿದೆ. ನೊಬೆಲ್ ಪ್ರಶಸ್ತಿಯನ್ನು ಅಣಕಿಸಲೆಂಬಂತೆ 'ಇಗ್ ನೊಬೆಲ್ ಪ್ರಶಸ್ತಿ' (satirical award) ಯನ್ನು ಘೋಷಿಸಲಾಗುತ್ತಿದ್ದರೂ, ನೊಬೆಲ್ ಪ್ರಶಸ್ತಿಯ ಬಗೆಗಿನ ಕುತೂಹಲ ಕಮ್ಮಿಯಾಗಿಲ್ಲ. ಹಾಗೆಯೇ ಈ ಪ್ರಶಸ್ತಿಯ ಸುತ್ತ ಕವಿದಿರುವ ಅನುಮಾನವೂ.

ಡೈನಮೇಟ್ ಅನ್ನು ಕಂಡುಹಿಡಿದ ಸ್ವೀಡಿಶ್ ವಿಜ್ಞಾನಿ ಅಲ್‌ಫ್ರೆಡ್ ನೊಬೆಲ್ (1833-1896) ಬದುಕಿದ್ದಾಗಲೇ, ಪ್ರಮುಖ ಪತ್ರಿಕೆಯೊಂದು, 'ಸಾವಿನ ವ್ಯಾಪಾರಿ ನೊಬೆಲ್ ನಿಧನ' ಎಂಬ ಸುದ್ದಿಯನ್ನು ಪ್ರಕಟಿಸಿಬಿಟ್ಟಿತು. ತಾನು ಸತ್ತ ಬಳಿಕ ಈ ಜಗತ್ತು ತನ್ನನ್ನು 'ಸಾವಿನ ವ್ಯಾಪಾರಿ (Merchant of Death)' ಎಂದು ನೆನಪಿಟ್ಟುಕೊಳ್ಳುತ್ತದೆ ಎಂದು ಭಾವಿಸಿದ ನೊಬೆಲ್ ತೀವ್ರ ವ್ಯಾಕುಲಕ್ಕೊಳಗಾಗಿ, ತನ್ನ ಜೀವಮಾನದ ಗಳಿಕೆಗಳನ್ನೆಲ್ಲ ತನ್ನ ಹೆಸರಿನಲ್ಲಿ ನೀಡುವ ಪ್ರಶಸ್ತಿಗೆ ದಾನವಾಗಿ ನೀಡಿದ್ದು ಗೊತ್ತಿರಬಹುದು. ಆತ ನಿಧನನಾಗಿ ಐದು ವರ್ಷಗಳ ನಂತರ, 1901ರಲ್ಲಿ ನೊಬೆಲ್ ಪ್ರಶಸ್ತಿಯನ್ನು ಸ್ಥಾಪಿಸಲಾಯಿತು. ಮಾನವ ಸಂಕುಲದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದವರಿಗೆ ಪ್ರಶಸ್ತಿ ನೀಡಬೇಕು ಎಂಬ ಉದಾತ್ತ ಧ್ಯೇಯವನ್ನು ನೊಬೆಲ್ ಪ್ರತಿಪಾದಿಸಿದ್ದರೂ, ಅದನ್ನು ನೀಡುವವರು ಆ ಆಶಯವನ್ನು ಪಾಲಿಸದಿರುವುದು ದುರ್ದೈವ.

1901ರಿಂದ 2024ರವರೆಗೆ ಕಳೆದ 123 ವರ್ಷಗಳಲ್ಲಿ 976 ಸಾಧಕರಿಗೆ ಮತ್ತು 28 ಸಂಘ-ಸಂಸ್ಥೆಗಳಿಗೆ ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿದೆ. ಈ ಪೈಕಿ ಐದು ಭಾರತೀಯರು ಮಾತ್ರ ಈ ಪ್ರತಿಷ್ಠಿತ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಏಳು ಮಂದಿ ಭಾರತೀಯ ಮೂಲದವರಿಗೂ ನೊಬೆಲ್ ಸಂದಿದೆ. ಅಂದರೆ ಶೇ.ಒಂದಕ್ಕಿಂತ ಕಮ್ಮಿ ಭಾರತೀಯರು ಮಾನವ ಸಂಕುಲದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ್ದಾರೆ ಎಂದಂತಾಯಿತು. ಇಲ್ಲಿ ತನಕ ಸಾಹಿತ್ಯ ಪ್ರಕಾರದಲ್ಲಿ 121 ಮಂದಿಗೆ ನೊಬೆಲ್ ಪ್ರಶಸ್ತಿ ಕೊಡಲಾಗಿದೆ. ಆ ಪೈಕಿ ಭಾರತೀಯರು ಒಬ್ಬೇ (ರವೀಂದ್ರನಾಥ್ ಟಾಗೋರ್) ಒಬ್ಬರು.

1913ರಲ್ಲಿ ಅವರಿಗೆ ಈ ಪ್ರಶಸ್ತಿಯನ್ನು ನೀಡಿದ ಬಳಿಕ ಕಳೆದ 111 ವರ್ಷಗಳಲ್ಲಿ ಒಬ್ಬನೇ ಭಾರತೀಯನಿಗೂ ಈ ಪ್ರಶಸ್ತಿಯನ್ನು ನೀಡಲಾಗಿಲ್ಲ. ಜಗತ್ತಿನಲ್ಲಿ ಅತಿ ಹೆಚ್ಚು ಅಧಿಕೃತ ಭಾಷೆಗಳಿರುವ, ಶ್ರೀಮಂತ ಭಾಷಾ ವೈವಿಧ್ಯವಿರುವ ಭಾರತದಲ್ಲಿ ಕಳೆದ ಒಂದು ಶತಮಾನದ ಅವಧಿಯಲ್ಲಿ ಒಬ್ಬರೂ ಈ ಪ್ರಶಸ್ತಿಗೆ ಅರ್ಹರಿಲ್ಲವೇ? ಈ ತನಕ ಸಾಹಿತ್ಯಕ್ಕೆ ನೀಡಿರುವ 121 ಮಂದಿ ಪೈಕಿ 95 ಮಂದಿ ಯುರೋಪ್ ಮತ್ತು ಅಮೆರಿಕದವರು. ಹದಿನಾರು ಮಂದಿ ಫ್ರೆಂಚ್ ಭಾಷಿಕರು, ಹದಿಮೂರು ಅಮೆರಿಕನ್ನರು, ಒಂಬತ್ತು ಜರ್ಮನ್ನರು, ಸ್ವೀಡನ್‌ನ ಎಂಟು ಮಂದಿ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬರೀ ಮೂರೂಕಾಲು ಲಕ್ಷ ಜನಸಂಖ್ಯೆ ಇರುವ ಐಸ್‌ಲ್ಯಾಂಡಿನ ಸಾಹಿತ್ಯ ಮತ್ತು ನೂರಾ ನಲವತ್ತು ಕೋಟಿ ಜನಸಂಖ್ಯೆ ಇರುವ ಭಾರತೀಯ ಸಾಹಿತ್ಯ, ನೊಬೆಲ್ ಆಯ್ಕೆ ಸಮಿತಿ ಮುಂದೆ ಒಂದೇ. ಕಾರಣ ಈ ಎರಡೂ ದೇಶಗಳಿಗೆ ಸಂದಿರುವ ನೊಬೆಲ್ (ಸಾಹಿತ್ಯ) ಪ್ರಶಸ್ತಿ ಒಂದೇ.

ಅಂದರೆ ನೊಬೆಲ್ ಆಯ್ಕೆ ಸಮಿತಿ ಪ್ರಕಾರ, ಜಗತ್ತಿನ ಶೇ.ಎಂಬತ್ತರಷ್ಟು ಸಾಹಿತ್ಯ ಪ್ರತಿಭೆಗಳು ಯುರೋಪಿನಲ್ಲಿ ಮಾತ್ರ ಇವೆ ಎಂದಂತಾಯಿತು. ಈ ಸಲ ಸಾಹಿತ್ಯದ ನೊಬೆಲ್ ಪ್ರಶಸ್ತಿ ದಕ್ಷಿಣ ಕೊರಿಯಾದ ಹಾನ್ ಕಾಂಗ್ ಎಂಬುವಳಿಗೆ ಸಂದಿದೆ. ಬರೀ ಐವತ್ತೂರು ವರ್ಷ ವಯಸ್ಸಿನ ಅವಳ ಸಾಹಿತ್ಯದ ಪ್ರತಿಭೆ ಬಗ್ಗೆ ಎರಡು ಮಾತಿಲ್ಲ, ಆದರೆ ಆಕೆ ಬರೆದಿದ್ದು ಕೇವಲ ಆರು ಕಾದಂಬರಿ ಮತ್ತು ಒಂದಷ್ಟು ಕವನಗಳು. ಆದರೆ ನೊಬೆಲ್ ಆಯ್ಕೆ ಸಮಿತಿಗೆ ಆರ್.ಕೆ.ನಾರಾಯಣ, ಮಹಾಶ್ವೇತಾದೇವಿ, ಮುಲ್ಕ್ ರಾಜ್ ಆನಂದ್, ರಸ್ಕಿನ್ ಬಾಂಡ್, ಅಮಿತಾವ್ ಘೋಷ್, ಗುಲ್ಜಾರ್, ಡಾ.ಎಸ್.ಎಲ್.ಭೈರಪ್ಪ ಮುಂತಾದವರು ಕಾಣಲೇ ಇಲ್ಲ. ಮಹಾಶ್ವೇತಾದೇವಿ ಏನಿಲ್ಲವೆಂದರೂ ನೂರಕ್ಕೂ ಹೆಚ್ಚು ಮಹತ್ವದ ಕಾದಂಬರಿ ಮತ್ತು ಇಪ್ಪತ್ತಕ್ಕೂ ಹೆಚ್ಚು ಕಥಾ ಸಂಕಲನಗಳನ್ನು ಬರೆದವರು. ಜಗತ್ತಿನ ಪ್ರಮುಖ ಭಾಷೆಗಳಿಗೆ ಅನುವಾದಗೊಂಡ ಡಾ.ಭೈರಪ್ಪನವರ ಕೃತಿಗಳು ಜಾಗತಿಕ ಮನ್ನಣೆಗೆ ಪಾತ್ರವಾಗಿವೆ. ತೊಂಬತ್ತರ ಅಂಚಿನಲ್ಲಿರುವ ಗುಲ್ಜಾರ್ ಸಾಹಿತ್ಯ ಯಾವ ದೃಷ್ಟಿಯಲ್ಲೂ ಕಮ್ಮಿಯಿಲ್ಲ. ಅವರು ಬರೆದಿರುವ ಕವನ, ನಾಟಕ, ಪ್ರಬಂಧ, ಮಕ್ಕಳ ಪುಸ್ತಕಗಳು ಯಾವ ಮಾನದಂಡದ ಮಸೂರದಲ್ಲೂ ಹೊಳೆಯುವ ಮಾಣಿಕ್ಯಗಳೇ. ಆದರೂ ನೊಬೆಲ್ ಸಮಿತಿಗೆ ಆರು ಹೆತ್ತವರಿಗಿಂತ ಮೂರು ಹೆತ್ತವರೇ ದೊಡ್ಡದಾಗಿ ಕಂಡಿದ್ದು ಆಶ್ಚರ್ಯವೇ. ತಾನು ಪಕ್ಷಪಾತಿ ಅಲ್ಲ ಎಂಬುದನ್ನು ತೋರಿಸಿಕೊಳ್ಳಲು ಅಥವಾ ಕಣ್ ಕಟ್ಟಲು, ಆಫ್ರಿಕಾ ದೇಶದ ಕೆಲವು ಸಾಹಿತಿಗಳನ್ನು ಹುಡುಕಿ, ಅವರ ಕೃತಿಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿ, ಅವರಿಗೆ ನೊಬೆಲ್ ಆಯ್ಕೆ ಸಮಿತಿ ಪ್ರಶಸ್ತಿ ನೀಡಿದ್ದುಂಟು.

ನೊಬೆಲ್ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ನಡೆಯುವ ರಾಜಕಾರಣ, ಹಗರಣ, ಕರ್ಮಕಾಂಡ ಬೇರೆಲ್ಲೂ ನಡೆಯಲಿಕ್ಕಿಲ್ಲ. ಆದರೆ ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವುದರಿಂದ ನಮ್ಮಂಥ 'ಹುಲುಮಾನವ'ರಿಗೆ ಗೊತ್ತಾಗುವುದಿಲ್ಲ. ನೊಬೆಲ್ ಶಾಂತಿ ಪ್ರಶಸ್ತಿಯನ್ನೇ ತೆಗೆದುಕೊಳ್ಳಿ. ಜಗತ್ತಿಗೆ ಶಾಂತಿ ಮತ್ತು ಅಹಿಂಸೆಯನ್ನು ಬೋಧಿಸಿದ ಮಹಾತ್ಮ ಗಾಂಧಿ ಅವರ ಹೆಸರು, 1937ರಿಂದ ಸತತ ಮೂರು ವರ್ಷ ಮತ್ತು 1947ರಲ್ಲಿ ಹಾಗೂ ಹತ್ಯೆಯಾಗುವ ಕೆಲದಿನಗಳ ಮುನ್ನ 1948ರಲ್ಲಿ- ಒಟ್ಟೂ ಐದು ಸಲ, ನೊಬೆಲ್ ಶಾಂತಿ ಪ್ರಶಸ್ತಿಗಾಗಿ ನಾಮಿನೇಟ್ ಆಗಿತ್ತು. ಆದರೆ ಕೊನೆಗೂ ಅವರ ಹೆಸರನ್ನು ಈ ಪ್ರಶಸ್ತಿಗೆ ಪರಿಗಣಿಸಲೇ ಇಲ್ಲ.

ನೊಬೆಲ್ ಪ್ರಶಸ್ತಿಯನ್ನು ನೀಡುವ ಸ್ವೀಡಿಶ್ ಅಕಾಡೆಮಿ 2006ರಲ್ಲಿ, 'ನೊಬೆಲ್ ಪ್ರಶಸ್ತಿ ಇತಿಹಾಸದಲ್ಲಿಯೇ, ಮಹಾತ್ಮ ಗಾಂಧಿಗೆ ಈ ಪ್ರಶಸ್ತಿ ನೀಡದಿರುವುದು ಬಹಳ ದೊಡ್ಡ ಪ್ರಮಾದ' ಎಂದು ಒಪ್ಪಿಕೊಂಡು ಕ್ಷಮೆಯಾಚಿಸಿತು. ಮಹಾತ್ಮ ಗಾಂಧಿಗೆ ಪ್ರಶಸ್ತಿಯನ್ನು ನೀಡದಂತೆ ಮಾಡಿದ ಆ ಕಾಣದ ಕೈಗಳು ಯಾವವು? ಯಾವ ಕಾರಣಕ್ಕೂ ಗಾಂಧಿಗೆ ನೊಬೆಲ್ ನೀಡಕೂಡದು ಎಂದು ಬ್ರಿಟಿಷ್ ಪರ ಶಕ್ತಿಗಳು ಪ್ರಭಾವ ಬೀರಿದ್ದು ಗೊತ್ತಿರುವ ರಹಸ್ಯವೇ. ಇವನ್ನೆಲ್ಲ ನೋಡಿದರೆ, ಕೈಲಾಶ ಸತ್ಯಾರ್ಥಿ (2014), ಮದರ್ ಥೆರೇಸಾ (1979) ಅವರಷ್ಟು ಮಹಾತ್ಮ ಗಾಂಧಿ ಪುಣ್ಯವಂತರಲ್ಲ ಎನಿಸುತ್ತದೆ.

ಎಂಥ ವಿಚಿತ್ರ, ನೋಡಿ, ವಿಯೆಟ್ನಾಮ್ ಯುದ್ಧದಲ್ಲಿ ನಪಾಲ್ಮ್ ಬಾಂಬ್ ಬಳಕೆಯನ್ನು ಪ್ರಚೋದಿಸಿದ ಅಮೆರಿಕದ ರಾಜತಾಂತ್ರಿಕ ಹೆನ್ರಿ ಕಿಸಿಂಜರ್ ನೊಬೆಲ್ ಪ್ರಶಸ್ತಿಯನ್ನು ಹೊಡೆದುಕೊಂಡರು!

ಆಗಲೇ ಆ ಪ್ರಶಸ್ತಿಯ ಸಾಚಾತನ ನೆಗೆದುಬಿದ್ದಿತು. ಆಯಾ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಬೇರೆ ಬೇರೆ ದೇಶಗಳ ಮುಖ್ಯಸ್ಥರನ್ನು ಓಲೈಸಲು ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡುವ ಪರಿಪಾಠ ಈಗಲೂ ಮುಂದುವರಿದುಕೊಂಡು ಬಂದಿದೆ. ಆಯಾ ವರ್ಷದ ಜಾಗತಿಕ ರಾಜಕಾರಣ ಈ ಪ್ರಶಸ್ತಿಯ ಮೇಲೆ ತನ್ನ ಪ್ರಭಾವವನ್ನು ಬೀರುತ್ತಲೇ ಬಂದಿದೆ. ಈ ವರ್ಷ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಯಾರಿಗೆ ಘೋಷಿಸಲಾಗಿದೆ ಎಂಬುದನ್ನು ಮಾಪಕವಾಗಿ ಇಟ್ಟುಕೊಂಡು ಜಾಗತಿಕ ರಾಜಕಾರಣದ ಗಾಳಿ ಯಾವ ದಿಕ್ಕಿನತ್ತ ಬೀಸುತ್ತಿದೆ ಎಂಬುದನ್ನು ಅಳೆಯಬಹುದು ಎಂಬ ಮಾತು ಸತ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಇನ್ನು ಭೌತಶಾಸ್ತ್ರ, ರಸಾಯನಶಾಸ್ತ್ರ, ವೈದ್ಯಕೀಯ, ಆರ್ಥಿಕ ವಿಜ್ಞಾನ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ನೀಡಿರುವ ನೊಬೆಲ್ ಪ್ರಶಸ್ತಿಯ ಬಗ್ಗೆ ಹೇಳದಿರುವುದೇ ಒಳ್ಳೆಯದು. ಈ ಕ್ಷೇತ್ರಗಳಲ್ಲಿ ಯಾರಿಗೆ ಪ್ರಶಸ್ತಿಯನ್ನು ನೀಡಬೇಕು ಎಂಬುದನ್ನು ವಿಶ್ವದ ಕೆಲವೇ ಕೆಲವು ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ನಿರ್ಧರಿಸುತ್ತವೆ. ತನ್ನ ಫ್ಯಾಕಲ್ಟಿಯಲ್ಲಿರುವವರು ಪ್ರಶಸ್ತಿಯನ್ನು ಪಡೆದುಕೊಂಡರು ಎಂದು ಆ ವಿಶ್ವವಿದ್ಯಾಲಯಗಳು ಟಾಮ್ ಟಾಮ್ ಮಾಡಿಕೊಳ್ಳುವುದರಿಂದ, ಅವರ ಆಯ್ಕೆಯಲ್ಲಿ ದೊಡ್ಡ ಲಾಬಿ, ಕಾಣದ ಕೈಗಳು ಕೆಲಸ ಮಾಡುತ್ತವೆ.

ರಾಜಕಾರಣದಲ್ಲೂ ಇಷ್ಟೊಂದು ಪ್ರಮಾಣದ ಲಾಬಿ, ಮೇಲಾಟ, ಪ್ರಭಾವ, ಪಕ್ಷಪಾತ, ರಾಜಕೀಯ ಇರಲಾರದು. ಅವೆಲ್ಲವನ್ನೂ ನೊಬೆಲ್ 'ಪ್ರಶಸ್ತಿಕಾರಣ'ವೊಂದೇ ಮೀರಿಸಬಲ್ಲುದು. ರಾಜಕಾರಣಿಗಳಿಗಿಂತ ಈ 'ಬುದ್ಧಿಕಾರಣಿ'ಗಳು ಸಾಚಾ ಅಲ್ಲ ಎಂಬುದಕ್ಕೆ ಈ ಪ್ರಶಸ್ತಿಗಳೇ ಸಾಕ್ಷಿ.

ವಿದೇಶಿ ಸಂಬಂಧದ ಹೊಸ ಸಮೀಕರಣಗಳು

ಭಾರತದ ವಿದೇಶಾಂಗ ನೀತಿ ಇನ್ನೊಂದು ಮಗ್ಗುಲು ಬದಲಿಸಿದೆ. ಕೆನಡಾ ಜತೆ ಚೆನ್ನಾಗಿದ್ದ ಸಂಬಂಧ ಹಳಸಿದೆ. ಪಾಕಿಸ್ತಾನದ ಜತೆಗೆ ಕೆಟ್ಟಿದ್ದ ಸಂಬಂಧದಲ್ಲಿ ಹೊಸ ಬೆಳಕು ಕಾಣಿಸುತ್ತಿದೆ. ನೆರೆರಾಷ್ಟ್ರಕ್ಕೆ ವಿದೇಶಾಂಗ ಮಂತ್ರಿ ಜೈಶಂಕರ್ ನೀಡಿದ ಭೇಟಿಯಲ್ಲಿನ ಅಚ್ಚರಿಗಳನ್ನು ಗಮನಿಸಿದ್ದೀರಾ?

ಸಂಗತ

ಡಾ.ವಿಜಯ್ ದರಡಾ
vveditoped@gmail.com

ಇತ್ತೀಚೆಗೆ ಪಾಕಿಸ್ತಾನದಲ್ಲಿ ನಡೆದ ಶಾಂಘೈ ಕೋ-ಆಪರೇಷನ್ ಆರ್ಗನೈಸೇಷನ್ (ಎಸ್‌ಸಿಒ) ಸಭೆಗೆ ಭಾರತದಿಂದ ಯಾರಾದರೊಬ್ಬ ಪ್ರತಿನಿಧಿ ಆಗಮಿಸಬಹುದು ಎಂಬ ನಿರೀಕ್ಷೆಯಲ್ಲಿ ಪಾಕಿಸ್ತಾನ ಇತ್ತು. ಆದರೆ ಕೊನೆಗೆ ಸ್ವತಃ ಭಾರತದ ವಿದೇಶಾಂಗ ವ್ಯವಹಾರಗಳ ಮಂತ್ರಿ ಎಸ್.ಜೈಶಂಕರ್ ಅವರೇ ಆಗಮಿಸಿದಾಗ ಆ ದೇಶಕ್ಕೆ ಅಚ್ಚರಿ. ಜೈಶಂಕರ್ ಪಾಕಿಸ್ತಾನಕ್ಕೆ ಹೋಗುತ್ತಾರೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಈ ಅನಿರೀಕ್ಷಿತ ಬೆಳವಣಿಗೆಯನ್ನು ನೋಡಿ ಪಾಕಿಸ್ತಾನದ ಮಾಜಿ ವಿದೇಶಾಂಗ ಸಚಿವೆ ಹೀನಾ ರಬ್ಬಾನಿ ಖಾರ್ 'ಸ್ಮಾರ್ಟ್ ಮೂವ್!' ಎಂದು ಉದ್ಗರಿಸಿದ್ದು ಸಹಜವೇ ಆಗಿತ್ತು. ಪಾಕಿಸ್ತಾನದ ಸರಕಾರ ಕೂಡ ಭಾರತದ ವಿದೇಶಾಂಗ ಸಚಿವರನ್ನು ಸ್ವಾಗತಿಸುವಲ್ಲಿ ಯಾವುದೇ ಎಡವಟ್ಟಾಗದಂತೆ ನೋಡಿಕೊಂಡಿತು.

ಕಳೆದ ವರ್ಷ ಗೋವಾದಲ್ಲಿ ನಡೆದ ಎಸ್‌ಸಿಒ ಸಭೆ ನನಗೆ ನೆನಪಾಗುತ್ತದೆ. ಅದಕ್ಕೆ ಪಾಕಿಸ್ತಾನದ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ಆಗಮಿಸಿದ್ದರು. ಆ ಸಮಯದಲ್ಲಿ ಭಾರತ ಹಾಗೂ ಪಾಕಿಸ್ತಾನದ ನಡುವೆ ಇನ್ನೂ ದ್ವೇಷಮಯ ವಾತಾವರಣವಿತ್ತು. ಬಿಲಾವಲ್ ಕೂಡ ಭಾರತಕ್ಕೆ ಆಗಮಿಸಿ ಕಟುವಾದ ಮಾತುಗಳನ್ನೇ ಆಡಿದ್ದರು. ಆದರೆ, ಜೈಶಂಕರ್ ತಮ್ಮ ಇಸ್ಲಾಮಾಬಾದ್ ಭೇಟಿಯನ್ನು ಕೊಂಚ ಬೇರೆಯದೇ ರೀತಿಯಲ್ಲಿ ನಿಭಾಯಿಸಿದ್ದಾರೆ. ಹೇಳಿಕೇಳಿ ಅವರು ನುರಿತ ರಾಜತಂತ್ರಜ್ಞರಾಗಿದ್ದವರು. ಈಗಂತೂ ಜಗತ್ತಿನ ಅತ್ಯಂತ ಪ್ರಭಾವಿ ವಿದೇಶಾಂಗ ಮಂತ್ರಿಗಳಲ್ಲಿ ಒಬ್ಬರು. ಅವರು ಪಾಕಿಸ್ತಾನದ ಭೇಟಿಯ ವೇಳೆ ತಾವು ಹೇಳಬೇಕಾದ್ದನ್ನು ಕಠೋರವಾಗಿಯೇ ಹೇಳಿದರು, ಆದರೆ ಪಾಕಿಸ್ತಾನದ ಮೇಲೆ ವಾಗ್ದಾಳಿ ನಡೆಸುವ ಗೋಜಿಗೆ ಹೋಗಲಿಲ್ಲ. ಪಾಕಿಸ್ತಾನದ ಪ್ರಧಾನ ಮಂತ್ರಿ ಶೆಹಬಾಜ್ ಷರೀಫ್ ಕೂಡ ಮೃದುವಾದ ಧ್ವನಿಗೇ ಅಂಟಿಕೊಂಡಿದ್ದರು. ಅವರೂ ಭಾರತಕ್ಕೆ ನೋವಾಗುವಂಥ ಯಾವುದೇ ಮಾತುಗಳನ್ನು ಆಡಲಿಲ್ಲ. ಅಚ್ಚರಿಯ ಸಂಗತಿಯೆಂದರೆ, ಭಾರತಕ್ಕೆ ವಿದೇಶಿ ವೇದಿಕೆಯಲ್ಲಿ ಮುಖಾಮುಖಿ ಆದಾಗಲೆಲ್ಲ ಕಾಶ್ಮೀರದ ವಿಷಯವನ್ನು ಪ್ರಸ್ತಾಪಿಸುವ ಚಟ ಪಾಕಿಸ್ತಾನಕ್ಕೆ ಇದ್ದರೂ, ಈ ಬಾರಿಯ ಜೈಶಂಕರ್ ಭೇಟಿಯ ವೇಳೆ ಪಾಕಿಸ್ತಾನದ ಪ್ರಧಾನಿಯೂ ಸೇರಿದಂತೆ ಯಾರೂ ಕಾಶ್ಮೀರ ವಿವಾದದ ಬಗ್ಗೆ ತುಟಿ ಬಿಚ್ಚಲಿಲ್ಲ. ಜೈಶಂಕರ್ ಮತ್ತು ಪಾಕಿಸ್ತಾನದ ಪ್ರಧಾನಿಯ ಈ ಸೌಹಾರ್ದಯುತ ನಡವಳಿಕೆಯಿಂದಾಗಿ ಎಸ್‌ಸಿಒ ಶೃಂಗದಲ್ಲಿ ಒಟ್ಟಾರೆ ವಾತಾವರಣ ತಿಳಿಯಾಗಿಯೂ, ಪರಸ್ಪರರಿಗೆ ಪೂರಕವಾಗಿಯೂ ಇತ್ತು. ಸಾಮಾನ್ಯವಾಗಿ ಒಂದು ದೇಶದ ಪ್ರಧಾನಿಯು ಇನ್ನೊಂದು ದೇಶದ ಪ್ರಧಾನಿ ಅಥವಾ ಅಧ್ಯಕ್ಷರನ್ನು ಮಾತ್ರ ಭೇಟಿಯಾಗುತ್ತಾರೆ. ಆದರೆ, ಭಾರತದ ವಿದೇಶಾಂಗ ಮಂತ್ರಿ ಜೈಶಂಕರ್ ಅವರನ್ನು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಭೇಟಿಯಾಗಿ ಮಾತುಕತೆ ನಡೆಸಿದರು. ಶಿಷ್ಟಾಚಾರ ಬದಿಗೊತ್ತಿ ಅವರು ಜೈಶಂಕರ್ ಅವರನ್ನು ಸ್ವಾಗತಿಸಿದ್ದು ವಿಶೇಷವಾಗಿತ್ತು. ಭಾರತಕ್ಕೆ ಮರಳಿದ ಮೇಲೆ ಜೈಶಂಕರ್ ಈ ನಡೆಯನ್ನು ಮುಕ್ತವಾಗಿ ಮೆಚ್ಚಿಕೊಂಡರು. ಸೋಷಿಯಲ್ ಮೀಡಿಯಾ ಮೂಲಕ ಅವರು ಶೆಹಬಾಜ್ ಷರೀಫ್‌ಗೆ ಪಾಕಿಸ್ತಾನದಲ್ಲಿನ ಆತಿಥ್ಯಕ್ಕಾಗಿ ಕೃತಜ್ಞತೆ ಸಲ್ಲಿಸಿದರು. ಅದಕ್ಕೆ ಶೆಹಬಾಜ್ ಷರೀಫ್ ಕೂಡ ಧನ್ಯವಾದ ಅರ್ಪಿಸಿ, ''ನೀವು ಪಾಕಿಸ್ತಾನಕ್ಕೆ ಭೇಟಿ ನೀಡಿದ್ದಕ್ಕೆ ಅನಂತ ವಂದನೆಗಳು'' ಎಂದು ಹೇಳಿದರು. ಎಸ್‌ಸಿಒ ಶೃಂಗದ ಫೋಟೋಗಳನ್ನು ನಾನು ಗಮನಿಸಿದ್ದೇನೆ. ಅಲ್ಲಿನ ಒಟ್ಟಾರೆ ವಾತಾವರಣ ಸೌಹಾರ್ದಯುತವಾಗಿತ್ತು. ಅದನ್ನು ನೋಡಿದರೆ ಉಭಯ ದೇಶಗಳ ಸಂಬಂಧದಲ್ಲಿ ಏನಾದರೂ ಸುಧಾರಣೆಯಾಗಬಹುದು ಎಂಬ ಆಶಾಭಾವನೆ ಮೂಡುವಂತಿತ್ತು. ಭೋಜನದ ವೇಳೆ ಪಾಕಿಸ್ತಾನದ ವಿದೇಶಾಂಗ ಸಚಿವರು ಜೈಶಂಕರ್ ಜತೆಗೆ ಕುಳಿತು ಲೋಕಾಭಿರಾಮವಾಗಿ ಮಾತನಾಡಿದರು. ಈ ವೇಳೆಯಲ್ಲೂ ಜೈಶಂಕರ್ ಅವರು ಪ್ರಧಾನಿ ಶೆಹಬಾಜ್ ಜತೆಗೆ ಮಾತನಾಡಿದರು.

ಭಾರತ ಹಾಗೂ ಪಾಕಿಸ್ತಾನದ ನಡುವೆ ಹೀಗೆ ಒಳ್ಳೆಯ ಬೆಳವಣಿಗೆಗಳನ್ನು ನೋಡಲು ಖುಷಿಯಾಗುತ್ತದೆ. ಇತ್ತೀಚೆಗಷ್ಟೇ ಅಮೆರಿಕದ ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆಯ ವಾರ್ಷಿಕ ಅಧಿವೇಶನದಲ್ಲಿ ಭಾರತ ಹಾಗೂ ಪಾಕಿಸ್ತಾನ ಯದ್ವಾತದ್ವಾ ಕಿತ್ತಾಡಿಕೊಂಡಿದ್ದವು! ಬೇರೆ ಯಾರೂ ಅಲ್ಲ, ಸ್ವತಃ ಜೈಶಂಕರ್ ಮತ್ತು ಶೆಹಬಾಜ್ ಷರೀಫ್ ಅವರೇ ಪರಸ್ಪರರ ವಿರುದ್ಧ ವಾಗ್ದಾಳಿ ನಡೆಸಿದ್ದರು. ಅವರ ಜಗಳ ಇಬ್ಬರು ಜಟ್ಟಿಗಳು ಕುತ್ತಿಗೆ ಪಟ್ಟಿ ಹಿಡಿದು ಸೆಣಸಿದಂತಿತ್ತು. ಅದಾಗಿ ಕೆಲವೇ ದಿನಗಳಲ್ಲಿ ಅವರಿಬ್ಬರ ನಡವಳಿಕೆಯಲ್ಲಿ ಈ ರೀತಿಯ ಅಗಾಧ ರೂಪಾಂತರ ಕಾಣಿಸಿದರೆ ಅಚ್ಚರಿಯಾಗುವುದಿಲ್ಲವೇ? ಈ ಬದಲಾವಣೆಯನ್ನು ಉಭಯ ದೇಶಗಳ ನಡುವಿನ ಸಂಬಂಧದಲ್ಲಿ ಆಗುತ್ತಿರುವ ಬದಲಾವಣೆಯ ಚಿಹ್ನೆ ಎಂದು ಹೇಳಬಹುದೇ? ಇದೊಂದು ಧನಾತ್ಮಕ ಬದಲಾವಣೆಯಂತೂ ಹೌದು. ನನ್ನ ಪ್ರಕಾರ ಶತ್ರುತ್ವ ಎಷ್ಟೇ ದೀರ್ಘವಾದದ್ದಾಗಿರಲಿ, ಅದು ಶಾಶ್ವತವಲ್ಲ. ಯಾರೂ ಶಾಶ್ವತ ಶತ್ರುಗಳಲ್ಲ ಅಥವಾ ಶಾಶ್ವತ ಮಿತ್ರರೂ ಅಲ್ಲ. ಅದರಲ್ಲೂ ಬೇರೆ ಬೇರೆ ದೇಶಗಳ ನಡುವಿನ ಸಂಬಂಧದ ವಿಚಾರಕ್ಕೆ ಬಂದರೆ, ಇಂಥ ಸ್ನೇಹ ಅಥವಾ ವೈರತ್ವದಲ್ಲಿ ಬದಲಾವಣೆಗಳು ಆಗುತ್ತಲೇ ಇರುತ್ತವೆ. ನೆರೆರಾಷ್ಟ್ರಗಳ ನಡುವೆ ಸ್ನೇಹವಿದ್ದರೆ ಇಬ್ಬರಿಗೂ ಲಾಭ. ಗಡಿ ಹಂಚಿಕೊಳ್ಳುವ ರಾಷ್ಟ್ರಗಳ ನಡುವೆ ಶತ್ರುತ್ವಕ್ಕಿಂತ ಸ್ನೇಹದಿಂದಲೇ ಲಾಭ ಹೆಚ್ಚು. ಎರಡೂ ದೇಶಗಳು ಪರಸ್ಪರ ಸಹಕಾರ ಮನೋಭಾವದಿಂದ ನಡೆದುಕೊಳ್ಳುವುದು ಉಭಯ ದೇಶಗಳ ಹಿತಾಸಕ್ತಿಗೆ ಒಳ್ಳೆಯದು. ಪಾಕಿಸ್ತಾನ ಸದ್ಯ ಆರ್ಥಿಕ ಸಂಕಷ್ಟದಿಂದ ನಲುಗುತ್ತಿದೆ. ಅದಕ್ಕೆ ತನ್ನ ಪರಿಸ್ಥಿತಿ ಏನು ಎಂಬುದು ಚೆನ್ನಾಗಿ ಗೊತ್ತಿದೆ. ತನ್ನ ದೇಶದ ಪ್ರಜೆಗಳ ಒಳಿತಿಗಾಗಿ ವಾಸ್ತವವನ್ನು ಒಪ್ಪಿಕೊಂಡು ಪರಿಸ್ಥಿತಿಯ ಸುಧಾರಣೆಗೆ ಪ್ರಯತ್ನಿಸುವುದು ಆ ದೇಶದ ಸರಕಾರಕ್ಕೆ ಅನಿವಾರ್ಯವಾಗಿದೆ. ಅದೇ ಸರಿಯಾದ ಕ್ರಮ ಕೂಡ. ಭಾರತ ಹಾಗೂ ಪಾಕಿಸ್ತಾನದ ಜನಸಾಮಾನ್ಯರು ಯಾವಾಗಲೂ ಉಭಯ ದೇಶಗಳ ನಡುವೆ ಒಳ್ಳೆಯ ಸಂಬಂಧವಿರಬೇಕು ಎಂದೇ ಬಯಸುತ್ತಾರೆ. ಆದರೆ ನಿಜವಾದ ಅಡ್ಡಿಯಿರುವುದು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಮತ್ತು ಅಲ್ಲಿನ ಮಿಲಿಟರಿ ಬಾಸ್‌ಗಳಿಂದ. ಐಎಸ್‌ಐ ಮತ್ತು ಪಾಕಿಸ್ತಾನದ ಮಿಲಿಟರಿಯ ತಳಪಾಯವೇ ಭಾರತದ ಮೇಲಿನ ದ್ವೇಷದಿಂದ ನಿರ್ಮಾಣವಾಗಿದೆ. ಅವು ಯಾವಾಗಲೂ ಭಾರತ-ವಿರೋಧಿ ನೀತಿಯನ್ನೇ ಅನುಸರಿಸುತ್ತವೆ. ಚುನಾಯಿತ ಸರಕಾರಗಳು ಭಾರತದ ಜತೆಗೆ ಒಳ್ಳೆಯ ಸಂಬಂಧ ಇರಿಸಿಕೊಳ್ಳಲು ಹೊರಟಾಗಲೆಲ್ಲ ಐಎಸ್‌ಐ ಮತ್ತು ಮಿಲಿಟರಿ ಬಾಸ್‌ಗಳು ಏನಾದರೂ ಉಪದ್ವ್ಯಾಪ ಮಾಡಿ ಸಂಬಂಧ ಕೆಡಿಸುತ್ತಾರೆ. ಭಾರತದ ಜತೆಗಿನ ವೈರತ್ವ ಕೊನೆಗಾಣಿಸಲು ಇಮ್ರಾನ್ ಖಾನ್ ಯತ್ನಿಸಿದಾಗ ಏನಾಯಿತು ಎಂಬುದು ಗೊತ್ತಲ್ಲವೇ? ಅವರು ಅಧಿಕಾರ ಕಳೆದುಕೊಂಡು ಜೈಲಿಗೆ ಹೋಗಬೇಕಾಯಿತು. ಐಎಸ್‌ಐ ಮತ್ತು ಪಾಕ್ ಸೇನೆಯ ಕಿಡಿಗೇಡಿತನಕ್ಕೆ ಇದಕ್ಕಿಂತ ಒಳ್ಳೆಯ ಉದಾಹರಣೆ ಬೇಕಿಲ್ಲ. ಹೀಗಾಗಿ ಜೈಶಂಕರ್ ಭೇಟಿಯ ವೇಳೆ ಎಲ್ಲವೂ ಚೆನ್ನಾಗಿ ಕಾಣಿಸಿತು ಎಂದಮಾತ್ರಕ್ಕೆ ಭಾರತ-ಪಾಕ್ ನಡುವೆ ಸಂಬಂಧ ಸುಧಾರಿಸಿಬಿಡುತ್ತದೆ ಎಂದು ನಿರೀಕ್ಷಿಸುವಷ್ಟು ಮುಗ್ಧ ನಾನಲ್ಲ. ಇದೊಂದು ಭೇಟಿಯಿಂದ ತಕ್ಷಣಕ್ಕೆ ಏನೋ ಮಹತ್ವದ ಸುಧಾರಣೆ ಆಗಿಬಿಡುವುದಿಲ್ಲ. ಉಭಯ ದೇಶಗಳ ನಡುವೆ ಇರುವ ಮರಗಟ್ಟಿದ ವಾತಾವರಣವನ್ನು ತಿಳಿಯಾಗಿಸಲು ಎರಡೂ ದೇಶಗಳು ಇನ್ನೂ ಸಾಕಷ್ಟು ಕೆಲಸ ಮಾಡುವ ಅಗತ್ಯವಿದೆ.

ಈಗ ಕೆನಡಾದ ವಿಷಯಕ್ಕೆ ಬರೋಣ. ಇತ್ತೀಚೆಗೆ ಭಾರತ ಮತ್ತು ಕೆನಡಾ ನಡುವಿನ ದ್ವಿಪಕ್ಷೀಯ ಸಂಬಂಧ ಪಾತಾಳಕ್ಕೆ ಕುಸಿದಿದೆ. ಕೆನಡಾ ನಮ್ಮ ನೆರೆರಾಷ್ಟ್ರವೇನೂ ಅಲ್ಲ, ಆದರೆ, ಭಾರತಕ್ಕೆ ಅದು ಭಾವನಾತ್ಮಕವಾಗಿ ಹತ್ತಿರದಲ್ಲಿದೆ. ಏಕೆಂದರೆ ಕೆನಡಾದಲ್ಲಿ ಭಾರತೀಯ ಮೂಲದ 18 ಲಕ್ಷ ಜನರು

ವಾಸಿಸುತ್ತಿದ್ದಾರೆ. ಅಷ್ಟೇ ಅಲ್ಲ, ಅವರ ಜತೆಗೆ 2.25 ಲಕ್ಷ ಭಾರತೀಯ ವಿದ್ಯಾರ್ಥಿಗಳು ಕೆನಡಾದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಭಾರತ-ಕೆನಡಾ ನಡುವೆ ಸಂಬಂಧ ಹಾಳಾದರೆ ಅದರಿಂದ ಎರಡೂ ದೇಶಗಳ ಮೇಲೆ ಗಂಭೀರ ದುಷ್ಪರಿಣಾಮಗಳು ಉಂಟಾಗುವುದು ಸಹಜವೇ ಆಗಿದೆ. ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೋಗೆ ದುರದೃಷ್ಟವಶಾತ್ ಇದು ಅರ್ಥವಾಗುತ್ತಿಲ್ಲ, ಅವರಿಗೆ ರಾಜಕೀಯ ಅಜೆಂಡಾವೇ ದೊಡ್ಡದು. ಟ್ರುಡೊ ಅಧಿಕಾರಕ್ಕೆ ಬಂದ ಲಾಗಾಯ್ತಿನಿಂದಲೂ ಭಾರತವನ್ನು ಕೆಣಕುತ್ತಲೇ ಇದ್ದಾರೆ. ಭಾರತದ ಜತೆಗಿನ ಸಂಬಂಧದ ವಿಷಯದಲ್ಲಿ ಟ್ರುಡೊ ಹೇಗೆ ಆಗಾಗ ಉಲ್ಟಾ ಹೊಡೆಯುತ್ತಾರೆ ಎಂಬುದರ ಬಗ್ಗೆ ಈ ಅಂಕಣದಲ್ಲೇ ಹಿಂದೊಮ್ಮೆ ಬರೆದಿದ್ದೆ. ಕೆನಡಾದಲ್ಲಿ ಖಲಿಸ್ತಾನಿ ಉಗ್ರ ಹರದೀಪ್ ಸಿಂಗ್ ನಿಜ್ಜರ್‌ನ ಹತ್ಯೆಯಾದಾಗ ಅದರಲ್ಲಿ ಭಾರತ ಸರಕಾರದ ಕೈವಾಡವಿದೆ ಎಂದು ಹಿಂದೆ-ಮುಂದೆ ನೋಡದೆ ಟ್ರುಡೊ ಆಪಾದಿಸಿದರು. ನಿಜ ಹೇಳಬೇಕೆಂದರೆ ಟ್ರುಡೊ ತನ್ನ ತಂದೆ ಹಾಕಿಕೊಟ್ಟ ದಾರಿಯಲ್ಲಿ ಸಾಗುತ್ತಿದ್ದಾರೆ. ಟ್ರುಡೊ ತಂದೆ ಪಿಯರೆ ಟ್ರುಡೊ ಕೂಡ ಕೆನಡಾದ ಪ್ರಧಾನಿಯಾಗಿದ್ದರು. 1985ರಲ್ಲಿ ಖಲಿಸ್ತಾನಿ ಉಗ್ರರು ಏರ್ ಇಂಡಿಯಾದ ಕನಿಷ್ಕ ವಿಮಾನಕ್ಕೆ ಬಾಂಬ್ ಇಟ್ಟು ಸ್ಫೋಟಿಸಿ 329 ಜನರನ್ನು ಕೊಂದಾಗ ಆ ದಾಳಿಯ ರೂವಾರಿಯಾದ ಖಲಿಸ್ತಾನಿ ಭಯೋತ್ಪಾದಕ ತಲ್ವಿಂದರ್ ಸಿಂಗ್ ಪಾರ್ಮರ್ ಕೆನಡಾದ ಆಶ್ರಯ ಪಡೆದಿದ್ದ. ಅವನನ್ನು ನಮ್ಮ ದೇಶಕ್ಕೆ ಗಡೀಪಾರು ಮಾಡಿ ಎಂದು ಭಾರತ ಎಷ್ಟೇ ಕೇಳಿಕೊಂಡರೂ ಪಿಯರೆ ಟ್ರುಡೋ ಒಪ್ಪಲಿಲ್ಲ. ಅಂದಿನಿಂದ ಈವರೆಗೂ ಭಾರತದಲ್ಲಿ ಪ್ರತ್ಯೇಕ ದೇಶ ರಚನೆ ಮಾಡಬೇಕು ಎಂಬ ಸಂಚಿನೊಂದಿಗೆ ಹೋರಾಟ ನಡೆಸುತ್ತಿರುವ ಖಲಿಸ್ತಾನಿ ಉಗ್ರರಿಗೆ ಕೆನಡಾ ಸುರಕ್ಷಿತ ಸ್ವರ್ಗದಂತೆ ಆಗಿದೆ. ಈ ಭಯೋತ್ಪಾದಕರು ಬಹಿರಂಗವಾಗಿಯೇ ಭಾರತದ ವಿರುದ್ಧ ಕಾರ್ಯಾಚರಣೆ ನಡೆಸುತ್ತಾರೆ. ಅದಕ್ಕೆ ಟ್ರುಡೊ ಬಹಿರಂಗವಾಗಿ ಬೆಂಬಲ ನೀಡುತ್ತಾರೆ. ಭಾರತದಲ್ಲಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡುವ ಉಗ್ರನೊಬ್ಬ ಕೆನಡಾದಲ್ಲಿ ಹತ್ಯೆಯಾದರೆ ಅದನ್ನು ಅಷ್ಟೊಂದು ದೊಡ್ಡ ವಿಷಯ ಮಾಡುವ ಅಗತ್ಯವಾದರೂ ಏನಿದೆ? ಒಬ್ಬ ಉಗ್ರ ಸತ್ತ ಎಂದು ಸಮಾಧಾನ ಮಾಡಿಕೊಳ್ಳಬೇಕು. ಅದರ ಬದಲು ಟ್ರುಡೊ ಈ ಘಟನೆಯನ್ನು ಭಾರತ-ವಿರೋಧಿ ಭಾವನೆಗಳನ್ನು ಉದ್ದೀಪಿಸಲು ಬಳಸಿಕೊಂಡರು. ನನಗೆ ತಿಳಿದಂತೆ ಭಾರತ ಸರಕಾರ ಯಾವತ್ತೂ ಬೇರೆ ದೇಶದ ಸಾರ್ವಭೌಮತೆಗೆ ಧಕ್ಕೆ ತರುವಂಥ ಹಿಂಸಾತ್ಮಕ ನೀತಿಗಳನ್ನು ಅನುಸರಿಸುವುದಿಲ್ಲ. ಹೀಗಾಗಿ ಟ್ರುಡೋ ಮಾಡಿದ ಆರೋಪಗಳು ಸಂಪೂರ್ಣ ಆಧಾರರಹಿತ ಹಾಗೂ ಅರ್ಥಹೀನವಾಗಿವೆ. ಭಾರತದ ರಾಯಭಾರಿಯ ಕಡೆಗೆ ಬೆರಳು ತೋರಿಸಿ ಅವರು ರಾಜತಾಂತ್ರಿಕತೆಯ ಶಿಷ್ಟಾಚಾರವನ್ನು ಉಲ್ಲಂಘಿಸಿದ್ದಾರೆ. ಹೀಗಾಗಿ ಭಾರತ ಸಿಟ್ಟಿಗೆದ್ದು ತನ್ನ ರಾಜತಾಂತ್ರಿಕ ಅಧಿಕಾರಿಗಳನ್ನು ಕೆನಡಾದಿಂದ ವಾಪಸ್ ಕರೆಸಿಕೊಂಡಿದೆ. ನಂತರ ಕೆನಡಾ ಅನುಸರಿಸಿದ ಕ್ರಮಕ್ಕೆ ತಿರುಗೇಟು ನೀಡಲು ಭಾರತದಲ್ಲಿದ್ದ ಕೆನಡಾದ ರಾಜತಾಂತ್ರಿಕ ಅಧಿಕಾರಿಗಳನ್ನು ಉಚ್ಚಾಟಿಸಿದೆ. ಇದು ಸಾಮಾನ್ಯ ಬೆಳವಣಿಗೆ ಅಲ್ಲ.

ಇಷ್ಟಕ್ಕೂ ಕೆನಡಾ ಸರಕಾರ ಏಕೆ ಈ ಪರಿ ದ್ವೇಷದಿಂದ ನಡೆದುಕೊಳ್ಳುತ್ತಿದೆ? ಇದಕ್ಕೆ ಮುಂಬರುವ ಚುನಾವಣೆ ಕಾರಣವೋ ಅಥವಾ ಟ್ರುಡೊ ಬೇರೆ ಯಾರದ್ದೋ ಮಾತನ್ನು ತಾವು ಆಡುತ್ತಿದ್ದಾರೋ? ಸ್ವತಃ ಕೆನಡಾದ ರಾಜಕಾರಣಿಗಳು ಹಾಗೂ ಅಲ್ಲಿನ ರಾಜಕೀಯ ಪಂಡಿತರೇ ಟ್ರುಡೊ ನಡೆದುಕೊಳ್ಳುತ್ತಿರುವ ರೀತಿಯನ್ನು ಟೀಕಿಸುತ್ತಿರುವುದರಿಂದ ಈ ಪ್ರಶ್ನೆ ಮುಖ್ಯವಾಗುತ್ತದೆ. ಇಲ್ಲಿ ಇನ್ನೂ ಒಂದು ಪ್ರಶ್ನೆಯೇಳುತ್ತದೆ. ಅಮೆರಿಕ ಏಕೆ ಭಾರತದ ಕಡೆ ಬೆರಳು ತೋರಿಸುತ್ತಿದೆ? ಖಲಿಸ್ತಾನಿ ಉಗ್ರ ಗುರ್‌ಪತ್ವಂತ್ ಸಿಂಗ್ ಪನ್ನು ಹತ್ಯೆ ಸಂಚಿನಲ್ಲಿ ಭಾರತದ ಪಾತ್ರವಿದೆ ಎಂದು ಅಮೆರಿಕ ಆರೋಪ ಮಾಡುತ್ತಿರುವುದು ಏಕೆ? ಭಾರತದ ಮೇಲೆ ಒತ್ತಡ ಹೇರುವ ತಂತ್ರವೇ?

ಭಾರತ-ಕೆನಡಾ ನಡುವೆ ಉಂಟಾಗಿರುವ ಈ ಬಿಕ್ಕಟ್ಟಿನಿಂದ ಉಭಯ ದೇಶಗಳ ನಡುವಿನ ವಾಣಿಜ್ಯ ಸಂಬಂಧದ ಮೇಲೆ ಏನು ಪರಿಣಾಮ ಉಂಟಾಗಲಿದೆ ಎಂಬುದನ್ನು ಈಗಲೇ ಹೇಳುವುದು ಕಷ್ಟ. ಆದರೆ, ಒಂದು ಸಂಗತಿಯಂತೂ ಸ್ಪಷ್ಟವಾಗಿದೆ: ಸಂಬಂಧ ಹಳಸಿದಷ್ಟೂ ಭಾರತೀಯರು ತಮ್ಮ ಮಕ್ಕಳನ್ನು ಕೆನಡಾಕ್ಕೆ ಓದಲು ಕಳಿಸುವಾಗ ಹೆಚ್ಚು ಎಚ್ಚರಿಕೆ ವಹಿಸುತ್ತಾರೆ. ಮಕ್ಕಳನ್ನು ಕೆನಡಾಕ್ಕೆ ಕಳುಹಿಸಲು ಹಿಂದೇಟು ಹಾಕುತ್ತಾರೆ. ಹೀಗಾಗಿ ಸಂಬಂಧ ಕೆಡಿಸಿಕೊಂಡರೆ ಭಾರತಕ್ಕಿಂತ ಕೆನಡಾಕ್ಕೇ ನಷ್ಟ ಹೆಚ್ಚು.

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ಕಾಚ್

- **ರಮೇಶ ಗೌಡ, ಮಳವಳ್ಳಿ**
ಭಟ್ಟರೇ, ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಒಂದೇ ದಿನದಲ್ಲಿ ಮೇಕೆದಾಟು ಯೋಜನೆಗೆ ಅನುಮತಿ ಅಂತ ಕುಮಾರಣ್ಣ ಹೇಳಿದ್ದಾರಲ್ಲ?
- **ಏನಿದ್ದರೂ ಮಗನನ್ನು ಶಾಸಕನನ್ನಾಗಿ ಮಾಡಿದ ನಂತರ ಅಂತ ಸುಮ್ಮನಿದ್ದಾರೆ!**

- **ರಾಜೀವ ಕೆ., ಬೆಂಗಳೂರು**
ಭಟ್ರೇ, ಬೆಂಗಳೂರಿನ ಮಳೆ ನೋಡಿ ನಿಮಗೆ ಯಾವ ಹಾಡು ನೆನಪಾಗುತ್ತಿಲ್ಲವೇ?
- **ನಗರದಲ್ಲಿ ಇದೇನಿದು ನದಿಯೊಂದು ಓಡಿದೆ..!**

- **ಸದಾಶಿವ ನಾಗವಾರ, ನಾಗವಾರ**
ಭಟ್ಟರೇ, 'ನನ್ನ ಜೀವನ ತೆರೆದ ಪುಸ್ತಕ' ಎಂದು ಸಿದ್ದರಾಮಯ್ಯನವರು ಹೇಳಿದ್ದಾರಲ್ಲ?
- **ಅದನ್ನು ಅನುವಾದ ಮಾಡಿಕೊಡಿ ಅಂತ ರಾಜ್ಯಪಾಲರು ಹೇಳಬಹುದು!**

- **ಸುರೇಶ ಕಲ್ಯಾಣಿ, ಗುಬ್ಬಿ**
ಭಟ್ರೇ, ಮುಸ್ಲಿಂ ಪುರುಷರು ಒಂದಕ್ಕಿಂತ ಹೆಚ್ಚು ಮದುವೆಯಾಗುವುದು ಎಂದು ಕೋರ್ಟ್ ಹೇಳಿದೆಯಲ್ಲ?
- **'ಮುಸ್ಲಿಂ' ಕೃತಿ ಓದಿದ ಬಳಿಕ ಈ ತೀರ್ಮಾನ ಅನಲೇ ಜಾರಿಗೊಳಿಸಿದ್ದರು!**

- **ಎಲ್.ಪಿ.ಸತೀಶ, ಮೈಸೂರು**
ಭಟ್ರೇ, ಸೂರ್ಯಗ್ರಹಣಕ್ಕೂ, ಪಾರ್ಶ್ವಗ್ರಹಣಕ್ಕೂ ಏನು ವ್ಯತ್ಯಾಸ?
- **ಮೊದಲನೆಯದು ಬೇಗನೆ ಬಿಡುತ್ತದೆ, ಎರಡನೆಯದು ಜೀವ ಹೋದ ನಂತರವೇ ಬಿಡೋದು!**

- **ಶಿವಲಿಂಗಪ್ಪ ಸಿಂಗಟೆಟ್ಟಿ, ಕಲಬುರ್ಗಿ**
ಭಟ್ಟರೇ, ಯತ್ನಾಳ್‌ಗೆ ಒಂದು ಹಾಡನ್ನು ಹಾಡಿ ಅಂದ್ರೆ ಯಾವ ಹಾಡನ್ನು ಹಾಡಬಹುದು?
- **'ಹುಟ್ಟಿದರೆ ವಿಜಯಪುರದಲ್ಲಿ ಹುಟ್ಟಬೇಕು, ಅಪ್ಪನಿಗೆ ಹುಟ್ಟಿದರೆ ಸಿಡಿ ಬಿಡುಗಡೆ ಮಾಡಬೇಕು'!**

- **ದಿವ್ಯಶ್ರೀ ವಿನಾಯಕ, ಬೆಳಗಾವಿ**
ಭಟ್ಟರೇ, ತನಗೆ ಜಾತಿ ಇಲ್ಲ ಎಂದು ರಾಹುಲ್ ಗಾಂಧಿ ಹೇಳಿದ್ದಾರಲ್ಲ?
- **ಜಾತಿಗಣತಿ ಮಾಡಿ ಅಂತ ಅವರು ಹೇಳುತ್ತಿರುವುದೇಕಂತೆ?!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಬೆಂಗಳೂರಿನಲ್ಲಿ ಅಷ್ಟು ಜೋರಾಗಿ ಮಳೆ ಬಂದಿಲ್ಲ ಎಂಬುದು ನನ್ನ ವಾದ ಅಂತ ಇಲೊಬ್ಬ ಹೇಳ್ತಾನಲ್ಲ?
- **'ವಿಶ್ವವಾಣಿ' ಪತ್ರಿಕೆ ಸ್ವಲ್ಪವೂ ಒದ್ದೆಯಾಗಿಲ್ಲದಿರುವುದನ್ನು ನೋಡಿ ಹಾಗೆ ಹೇಳುತ್ತಿರಬಹುದು!**

ಒಂದು ನಗರ ಸಾಯುವುದು ಹೇಗೆ?

ಕಾಡುದಾರಿ
ಹರೀಶ್ ಕೇರ
vveditoped@gmail.com

ಈ ಸಲ ಬಾಬಾಜಿಯ ಮನೆಗೆ ಹೋದಾಗ ಅವರು ಸಿಟ್ಟು ಮಾಡಿಕೊಂಡಿದ್ದರು. ''ಬರುತ್ತೇನೆ ಅಂತ ಹೇಳಿದವನು ಒಂದು ಗಂಟೆ ತಡವಾಗಿ ಬರುವುದೇನಯ್ಯ?'' ಎಂದು ಬೈದರು. ಆದರೆ ಬೆಂಗಳೂರಿನ ಟ್ರಾಫಿಕ್ಕು, ಮಳೆ ಬಂದಾಗ ಅದು ಪಡೆಯುವ ಘೋರರೂಪ, ಗಂಟೆಗಟ್ಟಲೆ ಮಳೆಯಲ್ಲಿ ನೆನೆಯುತ್ತ ಹೋಗಬೇಕಾದಲ್ಲಿಗೆ ತಲುಪುತ್ತೇನೋ ಇಲ್ಲವೋ ಅಥವಾ ಯಾವುದಾದರೂ ಮ್ಯಾನ್‌ಹೋಲ್ ಬಾಯಿ ತೆರೆದು ನುಂಗಿಬಿಡುತ್ತದಾ ಎಂಬ ಆತಂಕ- ಇದನ್ನೆಲ್ಲ ವಿವರಿಸಿದ ಬಳಿಕ ಸುಮ್ಮನಾದರು. ಸುಮ್ಮನಾದರು ಅಂದರೆ ಸುಮ್ಮನಾಗಲಿಲ್ಲ, ಅಲ್ಲಿಂದಲೇ ಹೊಸ ವಿಷಯಕ್ಕೆ ತೆರೆದುಕೊಂಡರು.

ನೋಡು, ಒಂದು ನಗರ ಸಾಯುವುದು ಹೇಗೆ ಗೊತ್ತೆ? ಇಂಥ ಸಣ್ಣ ಸಣ್ಣ ಸಂಗತಿಗಳಿಂದಲೇ ಅದರ ವಿನಾಶ ಶುರುವಾಗುತ್ತದೆ. ಒಬ್ಬ ನಾಗರಿಕ ಸರಿಯಾದ ಸಮಯಕ್ಕೆ ಮನೆ ಅಥವಾ ಕಚೇರಿ ತಲುಪಲು ಸಾಧ್ಯವಾಗುವುದಿಲ್ಲ ಎಂದರೆ ಅದರ ಹಿಂದೆ ಕೆಟ್ಟ ರೋಡುಗಳು, ಅದರ ಹಿಂದೆ ಕಳಪೆ ಕಾಮಗಾರಿ, ಅದರ ಹಿಂದೆ ಭ್ರಷ್ಟ ಕಾಂಟ್ರಾಕ್ಟರುಗಳು ಮತ್ತು ಅಧಿಕಾರಿಗಳು, ಅದರ ಹಿಂದೆ ಪರಮಭ್ರಷ್ಟ ಮಂತ್ರಿಗಳಲ್ಲ ಇರುತ್ತಾರೆ. ಇಲ್ಲಿ ಆರು ಅಂತಸ್ತಿನ ಕಟ್ಟಡ ಬಿದ್ದು ಹತ್ತಾರು ಜನ ಸತ್ತರೂ ಪರಿಸ್ಥಿತಿ ಹಾಗೇ ಇರುತ್ತದೆ. ಹೆಚ್ಚೆಂದರೆ ಒಬ್ಬ ಗುತ್ತಿಗೆದಾರನಿಗೆ ದಂಡ ಬೀಳಬಹುದು, ಬಿಬಿಎಂಪಿ ಎಂಜಿನಿಯರ್ ಸಸ್ಪೆಂಡ್ ಆಗಬಹುದು. ಅದರ ಹಿಂದಿರುವ ಭ್ರಷ್ಟ ಕೈಗಳಿಗೆ ಯಾವತ್ತಾದರೂ ಶಿಕ್ಷೆಯಾಗುತ್ತದಾ? ಇಂದು ಹೆಣ್ಣೂರಿನಲ್ಲಿ ನಡೆದದ್ದು ನಾಳೆ ಚಾಮರಾಜಪೇಟೆಯಲ್ಲೂ ನಡೆಯುತ್ತದೆ. ಸ್ಥಳ ಬದಲಾಗುತ್ತದೆ, ಆದರೆ ಕತೆ ಬದಲಾಗುವುದಿಲ್ಲ.

ಮಳೆ ಬಂದರೆ ಖುಷಿ ಆಗಬೇಕಿತ್ತು. ಊರನ್ನು ನೆನಪು ಮಾಡಿಕೋ. ಮಳೆ ಬಂದರೆ ಬೆಳೆಯುವವನ ಮುಖದಲ್ಲಿ ಎಷ್ಟು ನಗು. ಹಾಗೆಯೇ ನೆನೆಯುತ್ತಾ ದಾರಿಯಲ್ಲಿ ನಿಂತ ನೀರಿನಲ್ಲಿ ಕಾಲಾಡಿಸುತ್ತಾ ಮನೆಗೆ ಹೋಗುವುದೂ ಹುಡುಗಾಟ. ಆದರೆ ಇಲ್ಲಿ ಏನಾಗಿದೆ ನೋಡು. ದಾರಿಗಳೇ ಮುಳುಗಿಬಿಡುತ್ತವೆ. ಅಲ್ಲಿ ನಿಂತ ನೀರಿನಲ್ಲಿ ಯಾವ ಮ್ಯಾನ್‌ಹೋಲ್‌ನ ಒಳಗೆ ಬಿದ್ದು ಕೊಚ್ಚಿ ಹೋಗಿ ರಾಜಕಾಲುವೆ ಸೇರಬಹುದು. ಇಲ್ಲಾ, ಮೈಮೇಲೆ ರಾಡಿ ಸಿಡಿಸುತ್ತ ಹೋಗುವ ವಾಹನಗಳ ಭಯ. ಮಕ್ಕಳು ಶಾಲೆಗೆ ಹೋಗುವ ಬರುವ ವ್ಯಾನುಗಳಿಗೆ ಏನಾಗುತ್ತದೋ ಎಂಬ ಆತಂಕ. ಕೆಲ್ ಕುಂಡಾಗಿ ಕಂಬದಲ್ಲಿ ಕರೆಂಟ್ ಪಾಸಾಗಿ ಅದನ್ನು ಮುಟ್ಟಿದರೆ ಬೆಂಕಿಯಲ್ಲಿ ಕರಟಿ ಹೋಗುವ ಭೀತಿ. ಆಟವಾಡಲು ಹೊರಗೆ ಹೋದ ಮಗು ಮರಳಿ ಬರುವುದೋ ಇಲ್ಲವೋ ಎಂಬ ಕಂಪನ. ಹೀಗೆ ಮುಖಗಳನ್ನು ಹೊತ್ತುಕೊಳ್ಳುವ, ಭಯವನ್ನೇ ಬಿತ್ತಿ ಬೆಳೆಯುವ ಮಳೆ ನಮಗೆ ಯಾಕಾದರೂ ಬೇಕು ಎಂದು ನಗರಿಗ ಯೋಚಿಸುವುದು ಸಹಜ.

ಆದರೆ ಮಳೆ ಬಾರದಿದ್ದರೆ ನಾಳೆ ಕುಡಿಯುವ ನೀರಿಗೆ ಮಾಡುವುದೇನನ್ನು ಎಂದೂ ಯೋಚಿಸಬೇಡವೆ? ಕೆರೆಗಳನ್ನು ಬತ್ತಿಸಿ ಅಲ್ಲಿ ಸೈಟುಗಳನ್ನು ಮಾಡಿ ಆಗಿದೆ. ಈಗ ನೀರಿಗಾಗಿ ಹಸಿರು ಊರುಗಳನ್ನು ಸುಲಿಯಬೇಕು. ಕೊಡಗಿನಿಂದಲೋ ಹಾಸನದಿಂದಲೇ ನೀರು ತರಬೇಕು. ಅಲ್ಲಿಂದಲೂ ಬರಲಿಲ್ಲ ಎಂದರೆ ಪಶ್ಚಿಮ ಘಟ್ಟಗಳನ್ನು ಸಿಗಿದು ಭೂಮಿಯ ಎದೆಯನ್ನು ಬಗೆದು ಪೈಪುಗಳನ್ನು ಹಾಕಿ ನೀರು ತರಬೇಕು. ಅಲ್ಲಿನವರು ಏನು ಮಾಡಬೇಕು ಎಂದು ಯಾವತ್ತೂ ಯೋಚಿಸಬಾರದು. ಹಾಗೆ ಯೋಚಿಸುತ್ತಾ ಕೂತರೆ ಅವನು ನಗರದ ನಾಗರಿಕ ಆಗಲಾರ. ನಂತರ ರಾತ್ರಿಗೆ ಸ್ವಿಗ್ಗಿಯಲ್ಲೋ ಜೊಮ್ಯಾಟೊದಲ್ಲೋ ಊಟ ತರಿಸಬೇಕು. ಅವನು ತಂದುಕೊಟ್ಟ ಪ್ಲಾಸ್ಟಿಕ್ ಕವರ್‌ಗಳನ್ನು ಉಂಡೆಕಟ್ಟಿ ಮನೆ ಪಕ್ಕದಲ್ಲಿಯೇ ಇರುವ ಡ್ರೈನೇಜಿಗೆ ಎಸೆದರಾಯಿತು. ಅದು ನೀರಿನ ಸಹಜ ಹರಿವನ್ನು ಬಂದ್ ಮಾಡಿ ದಾರಿಗೆ ನೀರು ನುಗ್ಗಿದರೆ ಮತ್ತೆ ಒಳಚರಂಡಿಯವರನ್ನು ಬೈಯಬೇಕು. ನಗರದ ರಾಶಿ ಕಸ ಎಲ್ಲಿ ಹೋಗುತ್ತದೆ? ಕೋಲಾರಕ್ಕೋ ತುಮಕೂರಿನ

ಯಾವುದೋ ಗ್ರಾಮಕ್ಕೋ ಹೋಗುತ್ತದೆ. ಅಲ್ಲಿ ರಾಶಿ ಬಿದ್ದು ದುರ್ನಾತ ಬೀರುತ್ತ ಹಳ್ಳಿಗರ ಆರೋಗ್ಯಕ್ಕೆ ಮಾರಿಯಾಗುತ್ತದೆ. ಅಲ್ಲಿನ ಜನ ಊರಲ್ಲಿರಲಾಗದೆ ನಗರಕ್ಕೆ ಪಲಾಯನ ಮಾಡಬೇಕು. ಮತ್ತದೇ ಚಕ್ರ. ಹೀಗೆ ಹಳ್ಳಿಗಳನ್ನು ವ್ಯವಸ್ಥಿತವಾಗಿ ಕೊಲ್ಲುವವನೇ 'ನಾಗರಿಕ'. ಆದರೆ ಹೀಗೆ ಕೊಲ್ಲುವ ಪ್ರಕ್ರಿಯೆಯಲ್ಲಿಯೇ ತನ್ನ ಸಾವು ಕೂಡ ಅಡಗಿದೆ ಎಂದು ಒಂದು ನಗರಕ್ಕೆ ಗೊತ್ತೇ ಆಗುವುದಿಲ್ಲವಲ್ಲಾ.

ಒಂದು ಸುಂದರ ಊರು ಎಂದರೆ ಏನಿರಬೇಕು ಅಂತ ಯೋಚಿಸು. ಅದಕ್ಕೆ ಸ್ವಚ್ಛವಾದ ನೀರಿನ ನೆಲೆ ಇರಬೇಕು. ಕೆರೆ ಆಗಿದ್ದರೆ ಚೆನ್ನ. ಆ ಕೆರೆ ಜೀವಂತವಾಗಿರಬೇಕು. ಅಂದರೆ ಅಲ್ಲಿ ಜೀವರಾಶಿಗಳಿರಬೇಕು. ಮೀನುಗಳಿಂದ ಹಿಡಿದು ಏಡಿಗಳವರೆಗೆ ಯಾವುದೇ ಭಯವಿಲ್ಲದೆ, ರಾಸಾಯನಿಕಗಳ ಲೇಪನವಿಲ್ಲದೆ ಈಜಾಡಿಕೊಂಡು ತಮ್ಮ ಸಹಜ ಬದುಕಿನ ಪಥವನ್ನು ನಡೆಸುವಂತಿರಬೇಕು. ಆದರೆ ನಮ್ಮ ಕೆರೆಗಳು ವಿಷದ ಮಡುಗಳು. ಅಲ್ಲಿ ಯಾವ ಜೀವವೂ ಬದುಕಲು ಸಾಧ್ಯವಿಲ್ಲ. ಮೀನು ಬದುಕದ ಜಾಗದಲ್ಲಿ ಮನುಷ್ಯ ಬದುಕಲು ಹೇಗೆ ಸಾಧ್ಯವೋ? ಈ ಕೆರೆಗಳ ಮೇಲೆ ಕೊಕ್ಕರೆಗಳು ಹಾರುವುದಿಲ್ಲ, ಮಿಂಚುಳ್ಳಿಗಳು ಗೊತ್ತು ಕೂರುವುದಿಲ್ಲ.

ಒಂದು ಊರು ಅಂದರೆ ಅದರ ಆಸುಪಾಸಿನಲ್ಲಿ ನೈಸರ್ಗಿಕವಾದ ಕಾಡು ಸ್ವಲ್ಪವಾದರೂ ಇರಬೇಕು. ಅಲ್ಲಿ ಸಣ್ಣ ಕಳೆಗಿಡಗಳಿಂದ ಹಿಡಿದು ದೊಡ್ಡ ಮರಗಳವರೆಗೆ ಹಲವು ಹಂತಗಳ ಹಸಿರು ಇರಬೇಕು. ಬೆಂಗಳೂರಲ್ಲಿ ಲಾಲ್‌ಬಾಗ್, ಕಬ್ಬನ್ ಪಾರ್ಕ್ ಇಂಥವು ಇವೆ. ಆದರೆ ಇವು ಮನುಷ್ಯನ ಮಧ್ಯಪ್ರವೇಶವಿಲ್ಲದೆ ಸಹಜವಾಗಿ ಬೆಳೆದ ಕಾಡಲ್ಲ. ಇಲ್ಲಿ ಮನುಷ್ಯ ಓಡಾಡದ ಒಂದೇ ಒಂದು ದಿನವನ್ನೂ ಊಹಿಸಲು ಸಾಧ್ಯವಿಲ್ಲ. ಇಲ್ಲಿ ಸಹಜ ಜೀವಜಾತಿಯೊಂದು ತನ್ನಷ್ಟಕ್ಕೇ ಹುಟ್ಟಿ ಬೆಳೆಯಲು ಸಾಧ್ಯವಿಲ್ಲ. ಪಾರಿವಾಳಗಳನ್ನು ಸಹಿಸಿಕೊಳ್ಳುತ್ತೇವೆ. ಆದರೆ ನಾಗರಹಾವು ಕಂಡರೆ ಅದು ನಮ್ಮ ಕಣ್ಣಿಂದ ಬಲುದೂರ ಹೋಗಬೇಕು, ಇಲ್ಲವೇ ಸಾಯಬೇಕು- ಅಲ್ಲಿಯವರೆಗೂ ಬಿಡುವುದಿಲ್ಲ.

ಬೆಂಗಳೂರಿಗೆ ಹೊರಗಿನಿಂದ ಬರುವವನು, ಇಲ್ಲಿ ದುಡ್ಡು ಬಿತ್ತಿ ದುಡ್ಡು ಬೆಳೆಯಬಹುದು ಅಂದುಕೊಂಡಿರುತ್ತಾನೆ. ಇಲ್ಲಿನ ದೊಡ್ಡ ದೊಡ್ಡ ಕಟ್ಟಡಗಳ 18ನೇ, 26ನೇ ಮಹಡಿಯಲ್ಲಿ ಕುಳಿತು ಮುಂದಿನ ಒಂದು ವರ್ಷದಲ್ಲಿ ಎಷ್ಟು ಲಾಭ ಮಾಡಬಹುದು ಎಂದು ಪ್ಲಾನ್ ಮಾಡುತ್ತಾನೆ. ಎಲ್ಲಿ ಎಷ್ಟು ಕಾಂಕ್ರೀಟು ಸುರಿಯಬೇಕು, ಸೈಟನ್ನು ಎಷ್ಟು ಎತ್ತರಿಸಿದರೆ ನೀರು ನುಗ್ಗುವುದಿಲ್ಲ ಎಂದು ಯೋಚಿಸುತ್ತಾನೆ. ಪಕ್ಕದಲ್ಲಿರುವ ಸಣ್ಣ ಸೈಟಿನವನ, ಇದೇ ಊರಿನವನ ಬದುಕು ನರಕವಾಗಿಸುತ್ತಾನೆ. ಇವನು ವೀಕೆಂಡ್‌ನಲ್ಲಿ ಗ್ಲೋಬಲ್ ಮಾಲ್‌ಗೆ ಹೋಗಿ ಕಪುಚಿನೊ ಹೀರಿ ಬರುತ್ತಾನೆ. ತನ್ನ ಬಿಎಂಡಬ್ಲ್ಯು ಕಾರಿನ ಚಕ್ರದಿಂದ ಸಿಡಿದ ಮಳೆನೀರು ಡೆಲಿವರಿ ಬಾಯ್‌ನ ಮೈಯನ್ನು ಒದ್ದೆಯಾಗಿಸಿದ್ದು ಇವನಿಗೆ ತಿಳಿಯುವುದೇ ಇಲ್ಲ.

ನಿಮ್ಮದೇ ಊರಿನ ಸಂಸ್ಕೃತಿ ಅನ್ನುವುದನ್ನೇನಾದರೂ ಉಳಿಸಿಕೊಂಡಿದ್ದೀರಾ ಹೇಳಿ. ಹಂತಹಂತವಾಗಿ ಎಲ್ಲವನ್ನೂ ಸಾಯಿಸುತ್ತ ಬಂದಿದ್ದೀರಿ, ಕಡಲೆಕಾಯಿ ಪರಿಷೆಯಲ್ಲಿ ಕಡಲೆಕಾಯಿಗಿಂತ ತಮಿಳುನಾಡಿನಿಂದ ಬಂದ ಅಂಗಡಿಗಳೇ ಹೆಚ್ಚಿರುತ್ತವೆ. ಅವರೆಕಾಳು ಸೀಸನ್ನಲ್ಲಿ ನಿಮಗೆ ಫ್ರೆಂಚ್ ಫ್ರೈಸ್ ತಿನ್ನುವ ಹುಕಿ. ಗಾಂಧಿಬಜಾರು, ಮಲ್ಲೇಶ್ವರ, ಅಕ್ಕಿಪೇಟೆ, ಬಳೆಪೇಟೆಗಳ ಮೂಲ ಸ್ವರೂಪ ಎಲ್ಲಿ ಉಳಿಸಿಕೊಂಡಿದ್ದೀರಿ? ಸಿಟಿಯ ಸಾಂಪ್ರದಾಯಿಕ ಊಟ-ತಿಂಡಿ ಮುಂದಿನ ಜನರೇಶನ್ನಿಗೆ ಇಷ್ಟವಾಗಿಸೋ ಥರ ಏನಾದರೂ ಮಾಡಿ ದೀರಾ? ಮತ್ತೆ ಅವರೋ ಚೀಸ್ ಹಾಕಿದ 'ಮಸಾಲಾ ಡೋಸಾ' ತಿನ್ನದೇ ಇನ್ನೇನು ಮಾಡುತ್ತಾರೆ.

ಒಂದು ನಗರದ ಅಥವಾ ಹಳ್ಳಿಯ ಸಾವು ಅಂದರೆ ಅಲ್ಲಿನ ಜನರೆಲ್ಲಾ ಸಾಯುವುದು ಅಂತ ಅಲ್ಲ. ಅಂಥ ನಗರಗಳೂ ಇರಬಹುದು. ಆದರೆ ಒಂದು ನಗರ ಗಾಢವಾಗಿ ನೆಚ್ಚಿದ್ದ ಸಂಸ್ಕೃತಿ- ನಾನು ಅದನ್ನು ಆತ್ಮ ಎಂದು ಕರೆಯುತ್ತೇನೆ- ನಶಿಸುತ್ತಾ ಹೋದಾಗ ಆ ನಗರ ಚೈತನ್ಯ ಕಳೆದುಕೊಳ್ಳುತ್ತದೆ. ಇಂದಿನ ಹಲವು ಹೊಸ ನಗರಗಳ ಪಕ್ಕದಲ್ಲೇ ಹಳೆಯ ನಗರಗಳು ಇದ್ದೂ ಇಲ್ಲದಂತೆ ಇರುತ್ತವೆ, ದಯವಿಟ್ಟು ಅವುಗಳನ್ನು ಗಮನಿಸು. ಹೊಸ ಊರಿನಲ್ಲಿ ಹೊಸ ಕಟ್ಟಡಗಳು, ಹೊಸ ಉದ್ಯಮಗಳು ತಲೆ ಎತ್ತಿರುತ್ತವೆ. ಹಳೆ ಊರಿನ ಪ್ರಜೆಗಳು ತಮ್ಮ ಗತವೈಭವ ನೆನಪಿಸಿಕೊಳ್ಳುತ್ತ ಕೊರಗುತ್ತಿರುತ್ತಾರೆ. ಆದರೆ ಅಲ್ಲಿಂದ ಜೀವಚೈತನ್ಯವೇ ಮಾಯವಾಗಿರುತ್ತದೆ.

ಹಾಗೆ ನೋಡಿದರೆ ಬೆಂಗಳೂರು ಜಗಮಗಿಸುತ್ತಿದೆ. ಎಲ್ಲ ಕಡೆಗಳಲ್ಲೂ ಹೊಸ ಬಡಾವಣೆಗಳು, ಕಟ್ಟಡಗಳು ತಲೆ ಎತ್ತುತ್ತಿವೆ. ಅಲ್ಲಿ ದುಡಿಯುವವರು ಕೇರಳ, ತಮಿಳುನಾಡು, ಗುಜರಾತು, ಬಿಹಾರಗಳಿಂದ ಬರುತ್ತಾರೆ. ಬರಬಾರದೆಂದಲ್ಲ. ಆದರೆ ಅವರೆಲ್ಲಾ ಇಡೀ ನಗರದ ಆತ್ಮವನ್ನು ಅರ್ಥ ಮಾಡಿಕೊಂಡಿರುತ್ತಾರೆ ಎಂದು ನಾನು ಭಾವಿಸುವುದಿಲ್ಲ. ಅವರಿಗೆ ಇಲ್ಲಿನ ಭಾಷೆ ಗೊತ್ತಿಲ್ಲ. ಇಲ್ಲಿನ ಆಹಾರ ಗೊತ್ತಿಲ್ಲ. ಹೇಗೆ ಮಾತನಾಡಿದರೆ ಇಲ್ಲಿ ದುಡ್ಡು ಹುಟ್ಟುತ್ತದೆ ಅಂತ ಯೋಚಿಸುತ್ತಾರೆ ಹೊರತು, ಹೇಗೆ ಮಾತನಾಡಿದರೆ ಇಲ್ಲಿನ ಸಾಮಾನ್ಯನೊಬ್ಬನ ಮನಸ್ಸನ್ನು ಮುಟ್ಟಬಹುದು ಎಂದು ಯೋಚಿಸುವುದಿಲ್ಲ. ನನ್ನ ಬದುಕನ್ನೂ ಕಟ್ಟಿಕೊಂಡು, ಈ ನಗರವನ್ನೂ ಸುಂದರವಾಗಿ ಸಬಹುದು ಅಂತ ಯೋಚಿಸುವುದಿಲ್ಲ.

ಮಧ್ಯರಾತ್ರಿ ಒಂಟಿ ಮಹಿಳೆ ನಡೆದುಹೋಗಬಹುದಾದರೆ ಅದು ಸ್ವಾತಂತ್ರ್ಯ ಅಂತ ಹೇಳಿದ ಬಾಪೂಜಿ ಮಾತುಗಳಲ್ಲಿ ಉತ್ಪ್ರೇಕ್ಷೆ ಇರಬಹುದು. ಆದರೆ ಬೆಂಗಳೂರಿನಲ್ಲಿ ಮಧ್ಯರಾತ್ರಿ ಒಂಟಿ ಪುರುಷನಾದರೂ ಹೋಗಬಹುದಾ ಅಂತ ಯೋಚಿಸು. ವಿಧಾನಸೌಧದ ಪಕ್ಕದಲ್ಲಿಯೇ ಲಾಂಗು ಮಚ್ಚು ಝಳಪಿಸಿ ಓಡಾಡುತ್ತಾರೆ. ಸೈಡು ಕೊಡಲಿಲ್ಲ ಅನ್ನುವ ಸಿಲ್ಲಿ ಕಾರಣಕ್ಕೇ ಹೆಲ್ಮೆಟ್‌ನಿಂದ ಜಜ್ಜಿ ಪ್ರಾಣ ತೆಗೆಯುತ್ತಾರೆ. ಕಾರಣವೇ ಇಲ್ಲದೇ ಹಲ್ಲೆಗಳಾಗುತ್ತವೆ. ತೋಳ್ಬಲ ಇರುವವರು ಕಾನೂನು ಬಲವೂ ತಮ್ಮ ಕಡೆಗೇ ಇದೆ ಎಂದು ಭಾವಿಸಿದರೆ ಅಲ್ಲಿ ನಾಗರಿಕತೆಗೆ ಅಂತ್ಯ ಬಂತೆಂದೇ ಅರ್ಥ.

ಒಂದು ಆದರ್ಶ ನಗರದಲ್ಲಿ ಕಟ್ಟಡಗಳು ಕಟ್ಟುತ್ತಿರುವಾಗಲೇ ಬೀಳುವುದಿಲ್ಲ, ರಾಜಕಾಲುವೆಯಲ್ಲಿ ಯಾರೂ ಕೊಚ್ಚಿಕೊಂಡು ಹೋಗುವುದಿಲ್ಲ. ಕಚೇರಿಗೆ ಹೋದ ಹೆಂಡತಿ ಮನೆಗೆ ಸೇಫಾಗಿ ಬರುತ್ತಾಳೆ ಎಂಬ ಧೈರ್ಯ ಗಂಡನಿಗಿರುತ್ತದೆ. ಚಾಲಕರು ಮಕ್ಕಳನ್ನು ಶಾಲೆಯಿಂದ ಮನೆಗೆ ತಲುಪಿಸುತ್ತಾರೆ ಎಂಬ ಭರವಸೆ ಹೆತ್ತವರಿಗೆ ಇರುತ್ತದೆ. ತುಸು ಜೋಲಿ ಹೊಡೆದರೂ ಪರವಾಗಿಲ್ಲ, ಮುದಿಪ್ರಾಯದ ಅಪ್ಪ ಅಮ್ಮ ಸುರಕ್ಷಿತವಾಗಿ ಪಾರ್ಕಿಗೆ ಹೋಗಿ ಬರುತ್ತಾರೆ ಎಂದು ಮಕ್ಕಳಿಗೆ ಗೊತ್ತಿರುತ್ತದೆ. ತಾವು ಸೇವಿಸುವ ಆಹಾರದಲ್ಲಿ ಕಲಬೆರಕೆ ಆಗಿಲ್ಲ, ತಾವು ತಿನ್ನುವ ಪಾನಿಪುರಿಯಲ್ಲಿ ಯೂರಿಕ್ ಆಸಿಡ್ ಹಾಕಿಲ್ಲ ಎಂಬ ಧೈರ್ಯ ಅಲ್ಲಿನ ನಿವಾಸಿಗಳಿಗೆ ಇರುತ್ತದೆ. ಮನೆಯೊಳಗೇ ಕುಳಿತು ಬೇಸರವಾದರೆ ಸುತ್ತಾಡಿ ಬರಲು ವಿಶಾಲವಾದ ಕಾಲ್ದಾರಿಗಳು, ಹಸಿರು ತುಂಬಿದ ಪಾರ್ಕುಗಳಿರುತ್ತವೆ. ಬಿಸಿಲು ತಡೆಯುವ ನೆರಳು ನೀಡುವ ಮರಗಳಿರುತ್ತವೆ ಮತ್ತು ಅವು ಅಕಾಲದಲ್ಲಿ ಬೀಳುವುದಿಲ್ಲ.

ಒಂದು ಆದರ್ಶ ನಗರದಲ್ಲಿ ಎಲ್ಲರೂ ಹೋಗಿ ಕುಳಿತು ಆರಾಮಾಗಿ ಓದಿ ಬರಬಹುದಾದ, ಎಲ್ಲ ಪ್ರಾಯದವರಿಗೂ ಆನಂದ ಕೊಡುವ ಪುಸ್ತಕಗಳಿರುವ ಲೈಬ್ರರಿಗಳಿರುತ್ತವೆ. ವಾಹನಗಳ ಪಾರ್ಕಿಂಗ್ ಜಾಗದಲ್ಲೇ ಇರುತ್ತವೆ ಮತ್ತು ಫುಟ್‌ಪಾತುಗಳು ಸುರಕ್ಷಿತವಾಗಿರುತ್ತವೆ. ನಾಯಿಗಳನ್ನು ಪುಟ್ಟಪಥಗಳಲ್ಲಿ ಮಾಲೀಕರು ಕಕ್ಕ ಮಾಡಿಸುವುದಿಲ್ಲ ಮತ್ತು ತಾವೂ ಗೋಡೆಗಳಿಗೆ ಮೂತ್ರ ಮಾಡುವುದಿಲ್ಲ, ರೋಡ್ ಕ್ರಾಸ್ ಮಾಡಲು ಮಕ್ಕಳಿಗೂ ವೃದ್ಧರಿಗೂ ಅಂಜಿಕೆಯಾಗುವುದಿಲ್ಲ. ರಸ್ತೆಯಲ್ಲಿ ಸಹನೆ ತಪ್ಪಿ ಯಾರೂ ಯಾರಿಗೂ ಹೊಡೆಯಲು ಬರುವುದಿಲ್ಲ.

ಇಷ್ಟು ಹೇಳಿ ಬಾಬಾಜಿ ಸುಮ್ಮನಾದರು. ವಾಪಸು ಬರುವಾಗ ಟ್ರಾಫಿಕ್ ಸಿಗ್ನಲ್‌ನಲ್ಲಿ ನೂರಾರು ವಾಹನಗಳು ಸಿಕ್ಕಿಹಾಕಿಕೊಂಡು ಮುಂದಕ್ಕೂ ಹೋಗಲಾಗದೆ ಹಿಂದಕ್ಕೂ ತೆವಳಲಾಗದೆ ಹೊಗೆ ಬಿಡುತ್ತಾ ಹಾರನ್ ಮಾಡುತ್ತಾ ಕಿರುಚಾಡುತ್ತಿದ್ದವು.

ಕಳಕಳಿ

ಸತ್ಯಬೋಧ, ಬೆಂಗಳೂರು

ಗ್ರಂಥಾಲಯ ಇಲಾಖೆಗೆ ಕಾಯಕಲ್ಪದ ಅಗತ್ಯವಿದೆ

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯು ನಾಡಿನ ಮೂಲೆಮೂಲೆಗೂ ವಿಸ್ತರಿಸಿದ್ದು, ಗ್ರಂಥಾಲಯಗಳು ಗ್ರಾಮಗಳಲ್ಲೂ ವಿಜೃಂಭಿಸುತ್ತಿವೆ. ಇಲಾಖೆಯ ಹಿಂದಿನ ನಿರ್ದೇಶಕರ ದೂರದೃಷ್ಟಿಯ ಫಲವಾದ ಡಿಜಿಟಲ್ ಗ್ರಂಥಾಲಯ ಪರಿಕಲ್ಪನೆಯಿಂದಾಗಿ ಮನೆಮನೆಯೂ ಗ್ರಂಥಭಂಡಾರವಾಗಿದೆ. ಇದು ಕನ್ನಡ ನಾಡಿನ ಹೆಮ್ಮೆ. ಆದರೀಗ ಗ್ರಂಥಾಲಯದ ಹೃದಯವೇ ಆದ ಪುಸ್ತಕಗಳಿಲ್ಲ. ಹೀಗಾಗಿ ಅದು ಎಣ್ಣೆಯಿಲ್ಲದೆ ನಂದಿಹೋಗುವ ಹಣತೆಯಾಗಿಬಿಟ್ಟಿದೆ. ರಾಜಕಾರಣಿಗಳ ಮಾತಿನಲ್ಲಿ 'ಕನ್ನಡವೇ ನಮ್ಮ ಉಸಿರು, ಕನ್ನಡಕ್ಕಾಗಿ ನಾವು' ಎಂಬ ಕನ್ನಡಾಭಿಮಾನವು ಹೊಮ್ಮಿದರೂ ಅದು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ.

ಗ್ರಂಥಾಲಯಗಳಿಗೆ ಯಾವ ಕಾರಣಕ್ಕೂ ಅನುದಾನದ ಕೊರತೆಯಾಗಬಾರದು ಎಂಬ ಉದ್ದೇಶದಿಂದ ಮನೆ ತೆರಿಗೆಯಲ್ಲಿ ಶೇ.6ರ ಪಾಲನ್ನು ಸರಕಾರವು ಗ್ರಂಥಾಲಯಕ್ಕಾಗಿ ನಿಗದಿಮಾಡಿದೆ. ಆದರೆ ಸತ್ಯಸಂಗತಿಯೇ ಭಿನ್ನ. ಕಾಮಗಾರಿ ಮೊದಲಾದ ಅಭಿವೃದ್ಧಿ ಕಾರ್ಯಗಳೆಡೆಗೆ ಈ ತೆರಿಗೆ ಹಣವನ್ನು ತಿರುಗಿಸುತ್ತಿರುವುದರಿಂದ ಸಂಪನ್ಮೂಲ ಇದ್ದೂ ಇಲ್ಲದಂತಾಗಿದೆ. 2020ರಲ್ಲಿ ಪ್ರಕಟವಾಗಿ 2023ರಲ್ಲಿ ಗ್ರಂಥಾಲಯವು ಖರೀದಿಸಿರುವ ಸಾಕಷ್ಟು ಪುಸ್ತಕಗಳಿಗೆ ಸಂಬಂಧಿಸಿ ಅವುಗಳ ಪ್ರಕಾಶಕರಿಗೆ ಇನ್ನೂ ಹಣ ಸಂದಾಯವಾಗಿಲ್ಲ. ಕಳೆದ ವರ್ಷ ಮತ್ತು ಈ ವರ್ಷ ಎಸ್‌ಸಿ/ಎಸ್‌ಟಿ ಯೋಜನೆಯಲ್ಲಿ



ಪುಸ್ತಕಗಳನ್ನು ಖರೀದಿಸಿಲ್ಲ. ಮುಖ್ಯಮಂತ್ರಿಗಳೇನೋ ಅನುದಾನ ಕೊರತೆಯಾಗದಂತೆ ವ್ಯವಸ್ಥೆ ಮಾಡಲಾಗಿದೆ ಎಂದಿದ್ದರೂ, ಗ್ರಂಥಾಲಯ ಇಲಾಖೆಗೆ ಅದಿನ್ನೂ ಬಿಡುಗಡೆಯಾಗಿಲ್ಲ.

ನಾಡಿನಾದ್ಯಂತ ಇರುವ ಸಾರ್ವಜನಿಕ ಗ್ರಂಥಾಲಯಗಳಿಗೆ ಹೊಸ ಪುಸ್ತಕಗಳನ್ನು ಸರಬರಾಜು ಮಾಡಿ, ಅಸಂಖ್ಯ ಓದುಗರಿಗೆ ಓದುವ ಭಾಗ್ಯ ಕಲ್ಪಿಸಲೆಂದೇ 'ಏಕಗವಾಕ್ಷಿ' ಯೋಜನೆಯಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ ಪುಸ್ತಕಗಳನ್ನು ಖರೀದಿಸಲಾಗುತ್ತದೆ. ಆದರೆ ಹೀಗೆ ಖರೀದಿಸಿದ ಲಕ್ಷ ಲಕ್ಷ ಗ್ರಂಥಗಳು ನಾಡಿನ ವಿವಿಧ ಗ್ರಂಥಾಲಯಗಳಿಗೆ ಸರಬರಾಜಾಗದೆ ಬೆಂಗಳೂರಿನ ಗೋದಾಮಿನಲ್ಲಿ ತುಂಬಿ ತುಳುಕುತ್ತಿರುವುದನ್ನು ಕಾಣಬಹುದು. ಇತ್ತೀಚೆಗೆ ಏರ್ಪಡಿಸಿದ, ಆಯ್ಕೆಯಾದ ಮತ್ತು ಆಯ್ಕೆಯಾಗದ ಪುಸ್ತಕಗಳ ಪ್ರದರ್ಶನವೂ ಹಿಂದಿನ ವರ್ಷದಕ್ಕೆ ಹೋಲಿಸಿದರೆ ಸಮರ್ಪಕವಾಗಿರಲಿಲ್ಲ. ಹಿಂದಿನ ಪ್ರದರ್ಶನಗಳಲ್ಲಿ ಆಯ್ಕೆ ಸಮಿತಿಯ ಅಧ್ಯಕ್ಷರು ಪ್ರದರ್ಶನ ಸಭಾಂಗಣದಲ್ಲಿದ್ದು, ತಿರಸ್ಕೃತವಾದ ಕೃತಿಗಳ ಲೇಖಕರು ಅವರನ್ನು ನೇರವಾಗಿ ಸಂಪರ್ಕಿಸುವ ವ್ಯವಸ್ಥೆಯಿತ್ತು. ಉತ್ತಮ ಗುಣಮಟ್ಟದ ಪುಸ್ತಕಗಳು ಕಣ್ತಪ್ಪಿನಿಂದಾಗಿ ಆಯ್ಕೆಯಾಗದಿರುವುದನ್ನು ಅಧ್ಯಕ್ಷರ ಗಮನಕ್ಕೆ ತಂದರೆ, ಅವರು ಅದನ್ನು ಮರುಪರಿಶೀಲಿಸಿ ಆಯ್ಕೆಮಾಡುವುದಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಇದರಿಂದಾಗಿ ಉತ್ತಮ ಗುಣಮಟ್ಟದ ಪುಸ್ತಕಗಳಿಗೆ ನ್ಯಾಯ ಸಿಗುತ್ತಿತ್ತು. ಆದರೆ ಈ ಸಲ ಅಧ್ಯಕ್ಷರನ್ನು ಆಹ್ವಾನಿಸಿರಲಿಲ್ಲವಾದ್ದರಿಂದ, ಪುಸ್ತಕಗಳನ್ನು ಮರುಪರಿಶೀಲನೆಗೆ ನೀಡಲು ಲೇಖಕರು ದ್ರಾವಿಡ ಪ್ರಾಣಾಯಾಮ ಮಾಡಬೇಕಾಗಿದೆ. ಸರಕಾರವು ಇನ್ನಾದರೂ ಈ ನ್ಯೂನತೆಗಳನ್ನು ಗಮನಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

(ಲೇಖಕರು ಹವ್ಯಾಸಿ ಬರಹಗಾರರು)

ಭ್ರಷ್ಟಾಚಾರದ ತಾಣಗಳಾಗುತ್ತಿರುವ ವಿವಿಗಳು!

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ದೇಶ-ವಿದೇಶಗಳು ತಮ್ಮ ಶಿಕ್ಷಣ ಪದ್ಧತಿಯಲ್ಲಿ ಕ್ರಾಂತಿಕಾರಕ ಸುಧಾರಣೆಗಳನ್ನು ತರುತ್ತಿದ್ದರೆ, ಕರ್ನಾಟಕದಲ್ಲಿ ಮಾತ್ರ ರಾಜಕೀಯ ಶಕ್ತಿಗಳು ಶಿಕ್ಷಣದ ಹೆಸರಿನಲ್ಲಿ ರಾಜಕೀಯದ ಕೆಸರೆರಚುತ್ತ ಯುವಜನರ ಭವಿಷ್ಯದ ಜತೆ ಚೆಲ್ಲಾಟವಾಡುತ್ತಿರುವುದು ದುರಂತ.

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಜಗತ್ತಿನ ಜ್ಞಾನದೇಗುಲವೆಂದೇ ಖ್ಯಾತವಾಗಿದ್ದ ಭಾರತಕ್ಕೆ ವಿದ್ಯಾರ್ಜನೆಗಾಗಿ ದೂರದ ದೇಶಗಳಿಂದ ಜನರು ಬರುತ್ತಿದ್ದ ಕಾಲವಿತ್ತು. ಕಾರಣ ನಮ್ಮಲ್ಲಿ ತಕ್ಷಶಿಲಾ, ನಳಂದ, ವಿಕ್ರಮಶಿಲಾ, ವಲ್ಲಭಿ, ಸೋಮಪುರ, ನಾಗಾರ್ಜುನ, ಪುಷ್ಪಗಿರಿಯಂಥ ವಿಖ್ಯಾತ ವಿಶ್ವವಿದ್ಯಾಲಯಗಳಿದ್ದವು. ನಿಷ್ಕಲ್ಮಶ ಮನದಿಂದ ಕಲಿಸಲು, ಮುಂದಿನ ಸರ್ವಶ್ರೇಷ್ಠ ಜನಾಂಗವನ್ನು ರೂಪಿಸಲು ಹವಣಿಸುತ್ತಿದ್ದ ಧರ್ಮಪಾಲ, ನಾಗಾರ್ಜುನ, ಪಾಣಿನಿ, ಚಾಣಕ್ಯ, ಆರ್ಯಭಟರಂಥ ಪ್ರಖ್ಯಾತ ಗುರುಗಳಿದ್ದರು. ಹೀಗಾಗಿ ಭಾರತವು ನೂರಾರು ವರ್ಷಗಳಿಂದ 'ವಿಶ್ವಗುರು' ಸ್ಥಾನದಲ್ಲಿ ವಿರಾಜಮಾನವಾಗಿತ್ತು. ದೂರದ ಚೀನಾ, ಜಪಾನ್, ಟಿಬೆಟ್‌ಗಳ ಪ್ರಕಾಂಡ ಪಂಡಿತರೂ ವಿದ್ಯಾರ್ಥಿಗಳಾಗಿ ನಮ್ಮಲ್ಲಿಗೆ ಕಲಿಯಲು ಬರುತ್ತಿದ್ದರು. ಇಂದಿನ ಜಗತ್ತು ಬದಲಾಗಿದೆ. ಭಾರತವೂ ಆಧುನಿಕ ನಾಗರಿಕತೆಯ ಹಾದಿಯಲ್ಲಿ ಬದಲಾವಣೆಗೊಳಪಟ್ಟಿದೆ. ಇಲ್ಲಿನ ಹಲವು ಶಿಕ್ಷಣ ಸಂಸ್ಥೆಗಳು ದೇಶ-ವಿದೇಶಗಳ ಶಿಕ್ಷಣ ಪದ್ಧತಿಯನ್ನು ಅನುಸರಿಸುತ್ತಿವೆ. ಕಲಿಕೆಗಾಗಿ ನಮ್ಮ ವಿದ್ಯಾರ್ಥಿಗಳು ವಿದೇಶಗಳಿಗೆ ಹೋಗುವುದು, ವಿದೇಶಿ ವಿದ್ಯಾರ್ಥಿಗಳು ಭಾರತಕ್ಕೆ ಆಗಮಿಸುವುದು ನಿರಂತರವಾಗಿದೆ.

ಭಾರತದಲ್ಲಿಂದು ಕೇಂದ್ರದ ಅಧೀನದ 50 ವಿಶ್ವವಿದ್ಯಾಲಯಗಳಿದ್ದರೆ (ವಿ.ವಿ.), ರಾಜ್ಯ ಸಂಬಂಧಿತ 410ಕ್ಕೂ ಹೆಚ್ಚು ವಿ.ವಿ.ಗಳು, 340 ಖಾಸಗಿ ವಿ.ವಿ.ಗಳು ಸೇರಿದಂತೆ ಒಟ್ಟು 1170ರಷ್ಟು ವಿ.ವಿ.ಗಳಿವೆ ಎಂಬ ಅಂದಾಜಿದೆ. ಕರ್ನಾಟಕದಲ್ಲಿ ಉನ್ನತ ಶಿಕ್ಷಣದ ಅಡಿಯಲ್ಲಿ 41 ರಾಜ್ಯ ಸರಕಾರಿ ವಿ.ವಿ.ಗಳು, 27 ಖಾಸಗಿ ವಿ.ವಿ.ಗಳು, 12 ಡೀಮ್ಡ್ ವಿ.ವಿ.ಗಳು ಮತ್ತು 9 ಪ್ರಮುಖ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಿವೆ. ರಾಜ್ಯಪಾಲರು ಸಹಜವಾಗಿ ಆಯಾ ರಾಜ್ಯಗಳ ವಿ.ವಿ.ಗಳಿಗೆ ಕುಲಪತಿಗಳಾಗಿ ನಿಯುಕ್ತರಾಗಿರುತ್ತಾರೆ. ಈ ಮೂಲಕ ಅವರು ಕಮಿಟಿ ಸಭೆಗಳಲ್ಲಿ, ಪ್ರಮುಖ ನಿರ್ಧಾರ ಕೈಗೊಳ್ಳುವಲ್ಲಿ, ಸರಕಾರದ ಗಮನ ಸೆಳೆಯುವಲ್ಲಿ, ನೇಮಕಾತಿ, ಅಭಿವೃದ್ಧಿ, ವಿಸ್ತರಣೆಗಳ ಜತೆಗೆ ಘಟಿಕೋತ್ಸವದಂಥ ಪ್ರಮುಖ ಸಮಾರಂಭಗಳ ಅಧ್ಯಕ್ಷತೆ ವಹಿಸುವಲ್ಲಿ ಅಧಿಕಾರ ಹೊಂದಿರುತ್ತಾರೆ. ಉಪಕುಲಪತಿಗಳ ಆಯ್ಕೆ, ಗೌರವ ಪುರಸ್ಕಾರ ನೀಡುವಿಕೆ, ಕಾರ್ಯಕಾರಿ ಮಂಡಳಿಗೆ ಸದಸ್ಯರ ನೇಮಕ ಮುಂತಾದವು ರಾಜ್ಯಪಾಲರ ಪ್ರಮುಖ ಹೊಣೆಗಳಾಗಿರುತ್ತವೆ. ಹಾಗೆಯೇ, ಏನಾದರೂ ಹಗರಣವಾದಲ್ಲಿ ಸಂಬಂಧಪಟ್ಟವರನ್ನು ಅಮಾನತುಗೊಳಿಸುವ, ತಡೆಹಿಡಿಯುವ, ತನಿಖೆಗೊಳಪಡಿಸುವ ಅಧಿಕಾರವೂ ರಾಜ್ಯಪಾಲರಿಗೆ ಸೇರಿರುತ್ತದೆ.

ಹೀಗೆ ರಾಜ್ಯದ ಪ್ರಮುಖ ವಿ.ವಿ.ಗಳಲ್ಲಿ, ಉನ್ನತ ಶಿಕ್ಷಣ ಮತ್ತು ಫಲಿತಾಂಶಗಳ ಮೂಲಕ ಗುರುತಿಸಿಕೊಂಡಿರುವ ಮಂಗಳೂರು ವಿ.ವಿ.ಯೂ ಸೇರಿದೆ. ಇದನ್ನೇ ಉಲ್ಲೇಖಿಸಲು ಕಾರಣ, ಈ ಹಿಂದೆ ಇದ್ದ Solidity, Credibility, Honesty, Quality of Education ಎಂಬ ಆಶಯ ಅಲ್ಲಿ ಕಣ್ಮರೆಯಾಗಿದೆ. ಕ್ಯಾಂಪಸ್‌ನೊಳಗೆ ಒಮ್ಮೆ ಸುತ್ತಾಡಿದರೆ ಈ ಭಾವನೆ ಕಾಡದಿರದು. ಸುಂದರ ಹುಲ್ಲುಹಾಸಿನ ಕ್ಯಾಂಪಸ್‌ನಲ್ಲಿ 'ಜ್ಞಾನವೇ ಬೆಳಕು' ಎಂಬ ಅಡಿಬರಹ ಹೊತ್ತು, 'ಮಂಗಳ ಗಂಗೋತ್ರಿ' ಎಂಬ ಹೆಸರಿನೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯ ಕೊಣಾಜೆಯಲ್ಲಿ ಸುಮಾರು 360 ಎಕರೆ ಪ್ರದೇಶ ವ್ಯಾಪ್ತಿಯಲ್ಲಿ ಮಂಗಳೂರು ವಿ.ವಿ. ಸ್ಥಾಪಿತವಾಗಿದೆ. ಮೊದಲು ಇದು ಮೈಸೂರು ವಿ.ವಿ.ಯ ಸ್ನಾತಕೋತ್ತರ ಕೇಂದ್ರವಾಗಿದ್ದು, 1980ರಲ್ಲಿ ಸ್ವತಂತ್ರ ವಿ.ವಿ.ಯಾಗಿ ರೂಪುಗೊಂಡಿತು. 2023ರಲ್ಲಿ ಕೊಡಗು ವಿ.ವಿ. ಪ್ರಾರಂಭವಾಗುವ ತನಕ ಆ ಜಿಲ್ಲೆಯ ಪದವಿ-ಸ್ನಾತಕೋತ್ತರ ಕಾಲೇಜುಗಳು ಕೂಡ ಮಂಗಳೂರು ವಿ.ವಿ.ಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದವು. ಪ್ರಸ್ತುತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪದವಿ-ಸ್ನಾತಕೋತ್ತರ ಕಾಲೇಜುಗಳು ಈ ವಿ.ವಿ.ಯ ವ್ಯಾಪ್ತಿಗೆ ಒಳಪಡುತ್ತವೆ.

ಈ ವಿ.ವಿ.ಗೆ ಮಂಜೂರಾದ ಹುದ್ದೆ 273ರಷ್ಟಿದ್ದರೆ, ಇಲ್ಲಿನ ಅತಿಥಿ ಉಪನ್ಯಾಸಕರ ಸಂಖ್ಯೆಯೇ 249ರಷ್ಟಿದೆ. ಇರುವ ಹುದ್ದೆಯ ಸುಮಾರು ಶೇ.90ಕ್ಕೂ ಹೆಚ್ಚು ಪ್ರಾಧ್ಯಾಪಕರ ಅಗತ್ಯ ವಿ.ವಿ.ಗೆ ಇದೆ. ಮಂಜೂರಾದ ಹುದ್ದೆಗಳ ಪೈಕಿಯೂ ಭರ್ತಿಯಾಗಿರುವುದು 219 ಮಾತ್ರ. ಅಂದರೆ ಸರಕಾರ ನೇಮಿಸಿದ ಉಪನ್ಯಾಸಕರಿಗಿಂತ ಹೆಚ್ಚಿನ ಅತಿಥಿ ಉಪನ್ಯಾಸಕರೇ ವಿ.ವಿ.ಯ ವಿವಿಧ ಕೋರ್ಸುಗಳಿಗೆ ಪಾಠ ಮಾಡುತ್ತಿದ್ದಾರೆ. ಈ ಅತಿಥಿ ಉಪನ್ಯಾಸಕರಲ್ಲಿ ಒಂದು ಭದ್ರತಾ ಭಾವನೆಯಿಲ್ಲ. ಇಂಥ ಮನಸ್ಥಿತಿಯಲ್ಲಿ ಅದಿನ್ನೆಷ್ಟು ಆತ್ಮವಿಶ್ವಾಸದಿಂದ ಅವರು ಪಾಠ ಮಾಡಬಹುದು? ಇರುವ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳೇ ಬರುತ್ತಿಲ್ಲ, ಸಾವಿರಾರು ಅರ್ಜಿಗಳ ಸಲ್ಲಿಕೆಯಾದರೂ ಪ್ರವೇಶ ಪಡೆಯುವವರು 300-400ರಷ್ಟು ಮಾತ್ರ. ಹೀಗೇಕೆ ಎಂಬುದರ ಕಡೆಗೆ ವಿ.ವಿ.ಯ ಆಡಳಿತ ಮಂಡಳಿ ಕಣ್ಣೆತ್ತಿಯೂ ನೋಡುತ್ತಿಲ್ಲ.

15ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ವಿಭಾಗವನ್ನು ತಾತ್ಕಾಲಿಕವಾಗಿ ಬಂದ್ ಮಾಡಬೇಕೆಂಬುದು ಸರಕಾರದ ನಿರ್ದೇಶನ. ಈ ಮಟ್ಟವನ್ನು 10ಕ್ಕೆ ಇಳಿಸಿದರೂ ವಿದ್ಯಾರ್ಥಿಗಳು ಸೇರಿಕೊಳ್ಳುತ್ತಿಲ್ಲ. ಹೀಗಾಗಿ ಹಲವು ವಿಭಾಗದ 10-15 ಕೋರ್ಸ್‌ಗಳನ್ನು ಮುಚ್ಚಲಾಗಿದೆ ಎನ್ನಲಾಗಿದೆ. ಇನ್ನು ಪಿಜಿಗೆ ಸಂಬಂಧಿಸಿ 28 ವಿಭಾಗಗಳು, 42 ಕೋರ್ಸ್‌ಗಳಿದ್ದು 10ರಷ್ಟು ಕೋರ್ಸ್‌ಗಳಿಗೆ ಒಬ್ಬ ವಿದ್ಯಾರ್ಥಿಯೂ ಪ್ರವೇಶ ಪಡೆದಿಲ್ಲ. ಹೀಗಾಗಿ ಕೋರ್ಸ್‌ಗಳನ್ನು ಮುಚ್ಚುತ್ತಿರುವುದರಿಂದ ಅತಿಥಿ ಬೋಧಕರ ಬದುಕು ಅತಂತ್ರವಾಗುತ್ತಿದೆ. ಇವೆಲ್ಲದರ ಮಧ್ಯೆ, ವಿ.ವಿ.ಯ ಸಿಂಡಿಕೇಟ್, ಅಲ್ಲಿನ ನೌಕರರನ್ನು ಇಲ್ಲಿಗೆ, ಇಲ್ಲಿನವರನ್ನು ಮತ್ತೆಲ್ಲಿಗೋ ಎಂಬಂತೆ ನಿಯೋಜಿಸುತ್ತಿದೆ. ಇನ್ನು ಕೆಲವರು ಸುಮ್ಮನೆ ಸಂಬಳ ಎಣಿಸುತ್ತಿದ್ದಾರೆ. ಇದೇ ಕಾರಣದಿಂದ ಅರ್ಜಿ ಸಲ್ಲಿಕೆ ದಿನಾಂಕವನ್ನು 2 ಬಾರಿ ವಿಸ್ತರಿಸಲಾಗಿತ್ತು.

ಇಲ್ಲಿ ಅಸ್ತಿತ್ವದಲ್ಲಿದ್ದ ಶಿಕ್ಷಣ ವ್ಯವಸ್ಥೆ ದಿಢೀರ್ ಬದಲಾದದ್ದು. ಮೊದಲು ಕಲಿಸುತ್ತಿದ್ದ 'ರಾಷ್ಟ್ರೀಯ ಶಿಕ್ಷಣ ನೀತಿ' (ಎನ್‌ಇಪಿ) ಪದ್ಧತಿ ಬಿಟ್ಟು, ರಾಜ್ಯ ಸರಕಾರ ನಿಗದಿಪಡಿಸಲು ಮುಂದಾದ 'ರಾಜ್ಯ ಶಿಕ್ಷಣ ನೀತಿ' (ಎಸ್‌ಇಪಿ) ಪದ್ಧತಿಗೆ ಬದಲಾಗುವ ವಿಷಯದಲ್ಲಿ ಸಾಕಷ್ಟು ಗೊಂದಲಗಳಿವೆ. ಅಂದರೆ, ಈಗಾಗಲೇ ಎನ್‌ಇಪಿ ಅಡಿ ಕಲಿಯುತ್ತಿದ್ದವರು ಎಸ್‌ಇಪಿಗೆ ಬರಬೇಕೇ ಅಥವಾ ಅದರಲ್ಲೇ ಮುಂದುವರಿಯಬಹುದೇ? 3 ವರ್ಷದ ಪದವಿಯಲ್ಲಿ ಒಂದು ವರ್ಷ ಪೂರೈಸಿ ಪ್ರಮಾಣಪತ್ರ, 2 ವರ್ಷ ಪೂರೈಸಿ ಡಿಪ್ಲೊಮಾ, 3 ವರ್ಷದ ಪದವಿ, 4 ವರ್ಷದ ಆನರ್ಸ್ ಪದವಿ ಪಡೆಯಲು ಎಸ್‌ಇಪಿಯಲ್ಲಿ ಅವಕಾಶವಿದೆಯೇ? ಎಂಬ ಗೊಂದಲಗಳು. ಎಸ್‌ಇಪಿ ರೂಪಿಸಲು ತಜ್ಞರ ಸಮಿತಿ ರಚನೆಯಾಗಿದೆ, ಅಂತಿಮ ವರದಿ ಬಂದಿಲ್ಲ. ಅದು ಅನುಷ್ಠಾನವಾದ ಮೇಲೆ ಎನ್‌ಇಪಿ ಅಡಿ ಓದಿದ ವಿದ್ಯಾರ್ಥಿಗಳ ಪಾಡೇನು? ಇದಕ್ಕೆ ರಾಜ್ಯ ಸರಕಾರ ಉತ್ತರದಾಯಿ ಆಗಬೇಕಲ್ಲವೇ? ಕೆಲ ಡಿಗ್ರಿಗಳ ವಿದ್ಯಾರ್ಥಿಗಳು ಹಳೇ ಪಠ್ಯಕ್ರಮದಲ್ಲಿದ್ದರೆ ಅವರನ್ನು ಎನ್‌ಇಪಿಯವರೊಂದಿಗೆ ಪರೀಕ್ಷೆಗೆ ಕೂರಿಸಲಾಗುತ್ತಿದೆ. ಇಂಥ ಘಟನೆಗಳು ಬಹುತೇಕ ವಿ.ವಿ.ಗಳಲ್ಲಿ ಕಂಡುಬರುತ್ತಿರುವುದರಿಂದ ಇಡೀ ಶಿಕ್ಷಣ ವ್ಯವಸ್ಥೆ ಗೊಂದಲದ ಗೂಡಾಗಿದೆ. ಅದು ಉನ್ನತ ಶಿಕ್ಷಣದ ಮೂಲೋದ್ದೇಶವನ್ನೇ ಕೊಂದುಹಾಕಿದೆ. ಉಜ್ವಲ ಭವಿಷ್ಯ, ಕನಸು ಹೊತ್ತು ದೇಶದ ಆಸ್ತಿಯಾಗಬೇಕಿದ್ದ ಯುವಜನರನ್ನು ಕತ್ತಲಕೂಪಕ್ಕೆ ತಳ್ಳುತ್ತಿವೆ ನಮ್ಮ ಆಡಳಿತಾರೂಢ ಸರಕಾರ, ಇಲಾಖೆ ಮತ್ತು ವಿ.ವಿ.ಗಳು.

'ಮಂಗಳ ಗಂಗೋತ್ರಿ'ಯು ಭ್ರಷ್ಟಾಚಾರದ ಕೂಪವಾಗಿ ಮಾರ್ಪಟ್ಟಿರುವುದಕ್ಕೆ 2015-16ರಲ್ಲಿ ಆರಂಭಿಸಿದ 32 ಕೋಟಿ ರು. ವೆಚ್ಚದ ವಿದ್ಯಾರ್ಥಿನಿಲಯದ ಕಾಮಗಾರಿಯೇ ಸಾಕ್ಷಿ. 2024 ಮುಗಿಯುತ್ತ ಬಂದಿದ್ದರೂ ಅದು ಮುಗಿದಿಲ್ಲ. ಕಾಮಗಾರಿ ವೆಚ್ಚ 32ರಿಂದ 54 ಕೋಟಿಗೆ ಏರಿಕೆಯಾಗಿ, ಒಟ್ಟು 64 ಕೋಟಿಗೂ ಅಧಿಕ ಖರ್ಚಾಗಿದ್ದರೂ, ಅದು ಹೆಚ್ಚುವರಿಯಾಗಿ 30 ಕೋಟಿ ಹಣ ಬೇಡುತ್ತಿದೆಯಂತೆ! ಇಂಥ ಯೋಜನೆಗೆ ಆಂತರಿಕ ಸಂಪನ್ಮೂಲ ಬಳಸಲಾಗುವುದು ಎಂದು ಸರಕಾರಕ್ಕೆ ವಿ.ವಿ. ತಿಳಿಸಿತ್ತಂತೆ. ಹೀಗಾಗಿ, ನಿವೃತ್ತ ಪ್ರಾಧ್ಯಾಪಕರ ಪಿಂಚಣಿಗೆ ಮೀಸಲಾಗಿದ್ದ ಹಣವನ್ನು ಈ ಕಾಮಗಾರಿ ನುಂಗಿಹಾಕಿದೆ. ಗುತ್ತಿಗೆದಾರರು ಇದೇ ವಿಚಾರವಿಟ್ಟುಕೊಂಡು ಕೋರ್ಟ್‌ನಲ್ಲಿ ದಾವೆಹೂಡಿ, ಜಾಗದ ಜತೆಗೆ ಕಟ್ಟಡವನ್ನೂ ತಮಗೆ ಬಿಟ್ಟುಕೊಡಬೇಕೆಂಬ ಬೇಡಿಕೆಯಿಟ್ಟಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದೆ. ಇದಲ್ಲದೆ, ಗುತ್ತಿಗೆ ಆಧಾರದಲ್ಲಿರುವ ಅತಿಥಿ ಉಪನ್ಯಾಸಕರಿಗೆ ಕೆಲ ತಿಂಗಳಿಂದ ನಿಗದಿತ ಸಂಬಳವೂ ನಿಂತಿದ್ದು, ಗೌರವಧನ ಕೊಡಲೂ ವಿ.ವಿ.ಯಲ್ಲಿ ಹಣವಿಲ್ಲ. ನಿವೃತ್ತರು ಪಿಂಚಣಿ ಪಡೆಯಲೆಂದು 2-3 ವರ್ಷಗಳಿಂದ ಈ ಇಳಿವಯಸ್ಸಿನಲ್ಲೂ ವಿ.ವಿ.ಗೆ ಅಲೆಯುತ್ತಿದ್ದಾರೆ. ಹೀಗೆ ಅರೆಬರೆ ವ್ಯವಸ್ಥೆ, ಅವೈಜ್ಞಾನಿಕ ಯೋಜನೆಗಳಿಂದಾಗಿ ಕಟ್ಟಡಗಳೆಲ್ಲಾ ಬಿಕೋ ಎನ್ನುತ್ತಿದ್ದು, ಅವುಗಳ ಗೋಡೆಗಳು ನಿರ್ವಹಣೆಯಿಲ್ಲದೆ ಪಾಚಿಗಟ್ಟಿವೆ. ಕ್ಯಾಂಪಸ್‌ನಲ್ಲಿ ಬೆಳೆದಿರುವ ಮುಳ್ಳುಗಂಟಿಗಳನ್ನೂ ಚೊಕ್ಕ ಮಾಡದೆ ಅದರ ಅಂದಗೆಟ್ಟಿದೆ.

ವಿ.ವಿ.ಯ ಕಥೆಯೇ ಹೀಗಾದರೆ, ಇದರಡಿಯಲ್ಲಿರುವ ಅನೇಕ ಕಾಲೇಜುಗಳ ದಕ್ಷತೆ, ಪರೀಕ್ಷೆ ನಡೆಸುವಲ್ಲಿನ ಪಾರದರ್ಶಕತೆ ದೇವರಿಗೇ ಪ್ರೀತಿ. ಒಟ್ಟಾರೆ, 'ದೀಪದ ಕೆಳಗೆ ಕತ್ತಲು' ಎಂಬಂತಿದೆ. ಹಿಂದಿದ್ದ ಕೆಲವರು ಬೇಕಾಬಿಟ್ಟಿಯಾಗಿ ಪಿಜಿ ಸೆಂಟರ್‌ಗಳಿಗೆ ಅನುಮತಿಸಿದ್ದು, ಪದವಿ-ಉನ್ನತ ಪದವಿಯಂಥ ಶ್ರೇಣಿಗೂ ಸಿಕ್ಕ ಸಿಕ್ಕ ಕಾಲೇಜುಗಳಿಗೆ ಅನುಮತಿಸಿದ್ದು ಮತ್ತು ಅಗತ್ಯಕ್ಕಿಂತ 3 ಪಟ್ಟು ಹೆಚ್ಚು, ಅಂದರೆ 280ಕ್ಕೂ ಹೆಚ್ಚು ಬೋಧಕೇತರ ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದು ಸಾಕಷ್ಟು ಅನುಮಾನಗಳನ್ನು ಹುಟ್ಟಿಸುತ್ತವೆ. ಮಾನದಂಡಕ್ಕನುಗುಣವಾಗಿ ಇರಬೇಕಿದ್ದ ಸುಸಜ್ಜಿತ ಪ್ರಯೋಗಾಲಯಗಳು, ಮೂಲಭೂತ ಸೌಲಭ್ಯಗಳ ಕೊರತೆಯಿಂದಾಗಿ 'ಎನ್‌ಎಎಸಿ ಗ್ರೇಡ್-ಎ'ನಿಂದ 'ಗ್ರೇಡ್ ಬಿ'ಗೆ ಕುಸಿದ ಪರಿಣಾಮ ವಿದ್ಯಾರ್ಥಿಗಳ ಪ್ರವೇಶವು ನಿಂತಿತು. ಹೀಗಾಗಿ ಕೇಂದ್ರದ ಅನುದಾನ ಭಾಗಶಃ ನಿಂತಿತು. ನಿಯಮ ಮೀರಿ ಉದ್ಯೋಗಿಗಳ ನೇಮಕ, ಬೇಕಾಬಿಟ್ಟಿಯ ಕಟ್ಟಡ ಕಾಮಗಾರಿಗಳು, ಮೀಸಲಿಟ್ಟ ವಿ.ವಿ.ಯ ಹಣವನ್ನು ವಿವಿಧ ಕಾರ್ಯಕ್ಕೆ ಬಳಸಿ ನಷ್ಟಗೊಳಿಸಿದ ಕರ್ತವ್ಯಲೋಪದ ಆರೋಪವೂ ಈ ಹಿಂದಿನವರ ಮೇಲಿದೆ. ಇದಕ್ಕೆ ಸಂಬಂಧಿಸಿ, 'ವಿ.ವಿ.ಯ ಒಳಗಿನ ಸಮಸ್ಯೆಗಳನ್ನು, ಅನಗತ್ಯ ನೌಕರರ ಸಂಖ್ಯೆಯನ್ನು ಸರಿಪಡಿಸಿ, ಸರಕಾರದ ನೀತಿ-ನಿಯಮಗಳಿಗೆ ಹೊಂದಿಕೊಂಡು ಬನ್ನಿ; ಹಣಕಾಸು ಒದಗಿಸುವ ಕುರಿತಂತೆ ಗಮನಿಸೋಣ' ಎಂದು ಉನ್ನತ ಶಿಕ್ಷಣ ಸಚಿವರು ಹೇಳಿದ್ದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇದಾದ ಬಳಿಕ, ಸಿಕ್ಕಸಿಕ್ಕವರನ್ನೆಲ್ಲ ಕೆಲಸದಿಂದ ತೆಗೆಯಲಾಗುತ್ತಿದ್ದು ಈ ಕುರಿತೂ ಅಸಮಾಧಾನವೆದ್ದಿದೆ. ಈಗಿನವರು, 'ನಾವೇನು ಮಾಡಲು ಸಾಧ್ಯ; ಹಿಂದಿನವರು ಮಾಡಿದ ತಪ್ಪುಗಳನ್ನು ಸರಿಪಡಿಸಲು ಯತ್ನಿಸುತ್ತಿದ್ದೇವೆ' ಎನ್ನುತ್ತಿದ್ದಾರೆ.

ಪ್ರತಿಷ್ಠಿತ ವಿ.ವಿ.ಯೊಂದು ಹೀಗೆ ಕತ್ತಲಲ್ಲಿ ಮುಳುಗಿರುವುದನ್ನು, ಆಕರ್ಷಣೆ ಕಳೆದುಕೊಳ್ಳುತ್ತಿರುವುದನ್ನು ನೋಡಿದರೆ, ಇದರೊಳಗೆ ಅಡಗಿರುವ ಗೆದ್ದಲು-ತಿಮಿಂಗಿಲಗಳು ಅದನ್ನು ಸರ್ವನಾಶಗೊಳಿಸಲು ಸಜ್ಜಾಗಿವೆ ಎನಿಸುತ್ತದೆ. ಜನರ ತೆರಿಗೆ ಹಣದಿಂದ ನಡೆಯುತ್ತಿರುವ ಇಂಥ ಸಾರ್ವಜನಿಕ ಸಂಸ್ಥೆಗಳ ನಿರ್ವಹಣೆ ಕುರಿತಂತೆ ಪ್ರಶ್ನಿಸಲು ಕೂಲಿ ಕಾರ್ಮಿಕರಿಂದ ಹಿಡಿದು ರಾಜ್ಯಪಾಲರವರೆಗೂ ಹಕ್ಕಿದೆ. ಹಾಗಾಗಿ ನಾಗರಿಕರು ತಮ್ಮ ಪ್ರಜ್ಞೆ ಮರೆಯಬೇಕಿದೆ. ಇಡೀ ಆಡಳಿತ ಮಂಡಳಿಯನ್ನು ಬರ್ಖಾಸ್ತುಗೊಳಿಸುವ/ಸೂಪರ್‌ಸೀಡ್ ಮಾಡಿ ಹೊಸ ಆಡಳಿತ ಮಂಡಳಿ ನೇಮಿಸುವ ಮೂಲಕ ಕಾಯಕಲ್ಪ ನೀಡುವಂತಾಗಲು ನಾಗರಿಕರು ರಾಜ್ಯಪಾಲರಿಗೆ, ಇಲಾಖೆಗೆ, ಆಳುಗ ಸರಕಾರಕ್ಕೆ ಬಿಸಿಮುಟ್ಟಿಸಬೇಕಿದೆ. ಹಾಗೆಯೇ, ಇಂಥ ಸ್ಥಳಗಳಲ್ಲಿ ಭ್ರಷ್ಟಾಚಾರ, ಅಪರಾಧಗಳು ನಡೆಯುತ್ತಿದ್ದರೆ ಪ್ರಶ್ನಿಸಿ ತಡೆಯುವ ಹೊಣೆಗಾರಿಕೆಯನ್ನು ಸ್ಥಳೀಯ ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕಿದೆ.

ಪುಟ್ಟಜಾಗ ಸಿಕ್ಕರೂ ವಿದ್ಯೆ ಕಲಿಸುವ ತವಕದಿಂದ ಚಿಕ್ಕ-ಪುಟ್ಟ ಕಾನ್ವೆಂಟುಗಳು ತಲೆಯೆತ್ತುತ್ತಿರುವ ಈ ಕಾಲದಲ್ಲಿ, ವಿಶಾಲ ಪ್ರದೇಶದಲ್ಲಿ ಮೈದಳೆದಿರುವ ಇಂಥದೊಂದು ವಿ.ವಿ.ಯ ಅದ್ಭುತ ವ್ಯವಸ್ಥೆ ಮತ್ತು ವಾತಾವರಣವನ್ನು ಹದಗೆಡಿಸುತ್ತಿರುವವರಿಗೆ ಕೆಲವರು ಶಾಪ ಹಾಕುತ್ತಿದ್ದಾರೆ. ವಿ.ವಿ.ಯು ಇನ್ನಾದರೂ ನವನವೀನ ರೂಪುರೇಷೆಗಳೊಂದಿಗೆ ಗುಣಮಟ್ಟದ ಶಿಕ್ಷಣ ನೀಡುವಂತಾಗಲಿ. ತನ್ಮೂಲಕ 'ಗಂಗೋತ್ರಿ'ಯ ಉದ್ದೇಶ 'ಮಂಗಳ'ಕರವಾಗಿ ನೆರವೇರಲಿ ಎಂಬುದು ಶಿಕ್ಷಣಪ್ರೇಮಿಗಳ ಆಶಯ.

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಪುಣ್ಯಕೋಟಿಯ ಕಥೆಯಿದು..!!

ಉತ್ತರ ಪ್ರದೇಶ ಸರಕಾರದ ಕಬ್ಬು ಅಭಿವೃದ್ಧಿ ಖಾತೆಯ ರಾಜ್ಯ ಸಚಿವ ಸಂಜಯ್ ಸಿಂಗ್ ಗಂಗ್ವಾರ್ ನಿಮಗೆ ಗೊತ್ತಿರಬೇಕು. ''ಹಸುವೊಂದನ್ನು ಹಾಗೇ ಸುಮ್ಮನೆ ಸ್ಪರ್ಶಿಸಿದರೂ ಸಾಕು 'ಹೈಪರ್ ಟೆನ್ಷನ್' ಸಮಸ್ಯೆಯು ಮಂಗಮಾಯವಾಗಿಬಿಡುತ್ತದೆ. ಮಾತ್ರವಲ್ಲ, ಹಸುಗಳಿರುವ ಕೊಟ್ಟಿಗೆಯಲ್ಲಿ ಸಾಕಷ್ಟು ಕಾಲವನ್ನು ಕಳೆದರೆ ಅದು ಕ್ಯಾನ್ಸರ್ ಕಿರಿಕಿರಿಯನ್ನು ಕಿತ್ತೊಗೆಯು ವುದು ಕಟ್ಟಿಟ್ಟಬುತ್ತಿ'' ಎಂದು ಸಂಜಯ್‌ಸಿಂಗ್ ಅವರು ಹೇಳಿದ್ದು ವರದಿಯಾಗಿದೆ. ತಮ್ಮ ಮತಕ್ಷೇತ್ರವಾದ ಪಿಲಿಭಿತ್‌ನಲ್ಲಿ ಹಸುಗಳ ಆಶ್ರಯತಾಣವೊಂದನ್ನು ಉದ್ಘಾಟಿಸುವ ಸಂದರ್ಭದಲ್ಲಿ ಈ ಜ್ಞಾನಧಾರೆಯನ್ನು ಹಂಚಿಕೊಂಡ ಸಂಜಯ್ ಮಹಾಶಯರು ತಮ್ಮ ಮಾತುಗಳನ್ನು ಅಷ್ಟಕ್ಕೇ ನಿಲ್ಲಿಸದೆ, ''ವಿವಿಧ ಜಾತಿ-ಮತ-ಪಂಥಗಳಿಗೆ ಸೇರಿದ ಜನರು ತಂತಮ್ಮ ಹುಟ್ಟುಹಬ್ಬಗಳು ಮತ್ತು ವೈವಿಧ್ಯಮಯ ವಾರ್ಷಿಕೋತ್ಸವಗಳನ್ನು ಹಸುಗಳ ಕೊಟ್ಟಿಗೆಗಳಲ್ಲೇ ಆಚರಿಸಿಕೊ ಳ್ಳುವಂತಾದರೆ ಕೋಮು ಸೌಹಾರ್ದವು ಇನ್ನಷ್ಟು ವರ್ಧಿಸುತ್ತದೆ'' ಎಂದರಂತೆ. ಜತೆಗೆ, ''ಅಮೃತಕ್ಕೆ ಸಮಾನವಾಗಿರುವ ಹಸುವಿನ ಹಾಲಿನಿಂದ ಮಾತ್ರವೇ ಸಿಹಿತಿನಿಸುಗಳನ್ನು ತಯಾರಿಸಿ'' ಎಂಬ 'ಅಡುಗೆ ಟಿಪ್ಸ್' ಅನ್ನೂ ನೀಡಿದರಂತೆ ಎಂಬಲ್ಲಿಗೆ ಪುಣ್ಯಕೋಟಿಯ ಕಥೆಯು ಮುಕ್ತಾಯವಾಯಿತು. ಈ ಕಥೆಯನ್ನು ಓದಿದವರಿಗೂ, ಮತ್ತೊಬ್ಬರೊಂದಿಗೆ ಹಂಚಿಕೊಂಡವರಿಗೂ 'ಹಾಲಿನಂಥ' ಮಧುರ ಬದುಕು ಪ್ರಾಪ್ತವಾಗಲಿ!

ನಾರಾಯಣ ನಾರಾಯಣ!

ಕೆಲವೊಂದು ವಿಕ್ಷಿಪ್ತರಿಗೆ ಹೊತ್ತಲ್ಲದ ಹೊತ್ತಲ್ಲಿ ವಿಲಕ್ಷಣವಾದ ಐಡಿಯಾಗಳು ಹೊಳೆಯುವುದುಂಟು, ಅದರ ಅನುಷ್ಠಾನಕ್ಕೆ ಅವರು ಇನ್ನಿಲ್ಲದೆ ತವಕಿಸುವುದುಂಟು. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಕರ್ನಾಟಕ ರಾಜ್ಯೋತ್ಸವದ ದಿನವಾದ ನವೆಂಬರ್ 1ರಂದು 'ಕರಾಳದಿನ'ವನ್ನು ಆಚರಿಸ್ತಾರಂತೆ. ಅದೇನೋ ಹೇಳ್ತಾರಲ್ಲ, ''ಅಜ್ಜಿಗೆ ಅರಿವೆ ಚಿಂತೆಯಾದರೆ, ಮೊಮ್ಮಗಳಿಗೆ.....'' ಅನ್ನೋ ಮಾತು ನೆನಪಾಗ್ತಿದೆ ತ್ರಿಲೋಕ ಸಂಚಾರಿ ನಾರದರಿಗೆ..!!

ಪಂಚ್ ಭಕ್ಷ್ಯ ಪರಮಾನ್ನ..!

ಯಗಟಿ ರಘು ನಾಡಿಗ್

ಸಲ್ಮಾನ್ ಖಾನ್‌ಗೆ 60 ಬಾಡಿಗಾರ್ಡ್‌ಗಳ ರಕ್ಷಣೆ: ಸುದ್ದಿ

ಶಭಾಷ್! ಬಾಡಿಗಾರ್ಡ್‌ಗಳ ಸಂಖ್ಯೆ ವಿಷಯದಲ್ಲಿ 'ಷಷ್ಟಿ ಪೂರ್ತಿ' ಆಯ್ತು ಅಂದ್ಕೋಬಹುದು!

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 168

ಸಮಾಚಾರ ಸಣ್ಣದಲ್ಲ

ಬೈರೂತ್‌ನಲ್ಲಿ ಇಸ್ರೇಲ್ ದಾಳಿ-ಹಶೆಮ್ ಹತ್ಯೆ

ಟೆಲ್‌ಅವಿವ್: ಹೆಜ್ಬೊಲ್ಲಾ ನಾಯಕ ಹಸನ್ ನಸ್ರಲ್ಲಾ 3 ವಾರಗಳ ಹಿಂದೆ ಬೈರೂತ್‌ನಲ್ಲಿ ಹತ ನಾದ. ಆತನ ಉತ್ತರಾಧಿಕಾರಿಯಾಗಲಿದ್ದ ಧರ್ಮ ಗುರು, ಹೆಜ್ಬೊಲ್ಲಾ ಕಾರ್ಯಕಾರಿ ಮಂಡಳಿ ಮುಖ್ಯಸ್ಥ ಹಶೆಮ್ ಸಫೀದ್ದೀನ್‌ನನ್ನು ಬೈರೂತ್ ಮೇಲಿನ ಹೊಸ ವೈಮಾನಿಕ ದಾಳಿಯಲ್ಲಿ ಕೊಂದಿರುವುದಾಗಿ ಇಸ್ರೇಲ್ ಸೇನೆ ಘೋಷಿಸಿದೆ. ಆದರೆ, ಈ ಬಗ್ಗೆ ಹೆಜ್ಬೊಲ್ಲಾ ಯಾವುದೇ ಹೇಳಿಕೆ ನೀಡಿಲ್ಲ. ಲೆಬನಾನ್ ರಾಜಧಾನಿ ದಕ್ಷಿಣ ಬೈರೂತ್ ಉಪನಗರವಾದ ದಹಿಯೆಹ್‌ನಲ್ಲಿರುವ ಹೆಜ್ಬೊಲ್ಲಾ ಮುಖ್ಯ ಗುಪ್ತಚರ ಕಚೇರಿ ಮೇಲೆ ಇಸ್ರೇಲ್ ವಾಯುಪಡೆ ದಾಳಿ ನಡೆಸಿದದು, ಆಗ ಅಲ್ಲಿ 25ಕ್ಕೂ ಹೆಚ್ಚು ಹೆಜ್ಬೊಲ್ಲಾ ಉಗ್ರರು ಇದ್ದರು ಎಂದು ಸೇನೆ ಹೇಳಿದೆ.

'ಛೋಟಾ' ಜೀವಾವಧಿ ಶಿಕ್ಷೆ ಅಮಾನತು

ಮುಂಬೈ: ಭೂಗತ ಪಾತಕಿ ಛೋಟಾ ರಾಜನ್‌ಗೆ 2001ರಲ್ಲಿ ನಡೆದಿದ್ದ ಹೋಟೆಲ್ ಉದ್ಯಮಿ ಜಯ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಬಾಂಬೆ ಹೈಕೋರ್ಟ್ ಬುಧವಾರ ಅಮಾನತು ಮಾಡಿ, ಜಾಮೀನು ಮಂಜೂರು ಮಾಡಿದೆ. ವಿಶೇಷ ಮೋಕಾ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದು, ಅದನ್ನು ಪ್ರಶ್ನಿಸಿ ಛೋಟಾ ರಾಜನ್ ಬಾಂಬೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ. ಆ ಮೇಲ್ಮನವಿ ತೀರ್ಮಾನವಾಗುವವರೆಗೂ ಶಿಕ್ಷೆ ಅಮಾನತುಗೊಳಿಸಲಾಗಿದೆ ಎಂದು ನ್ಯಾ.ರೇವತಿ ಮೋಹಿತೆ ಡೇರೆ, ನ್ಯಾ.ಪೃಥ್ವಿ ರಾಜ್ ಚವಾಣ್ ಅವರ ವಿಭಾಗೀಯ ಪೀಠ ತಿಳಿಸಿದೆ.

ದೀಪಾವಳಿಗೆ ಭಾರತ್ ರೈಸ್, ಭಾರತ್ ದಾಲ್

ದೆಹಲಿ: ದೀಪಾವಳಿ ಹಬ್ಬದ ವೇಳೆ ಗ್ರಾಹಕರಿಗೆ ಎಂಆರ್‌ಪಿ ದರದಲ್ಲಿ ಭಾರತ್ ರೈಸ್, ಭಾರತ್ ಬೇಳೆ-ಕಾಳು ಪೂರೈಕೆಗೆ ಕೇಂದ್ರ ಸರಕಾರ ಕ್ರಮ ಕೈಗೊಂಡಿದೆ. ಗ್ರಾಹಕರಿಗೆ ಕೈಗೆಟುಕುವ ಬೆಲೆಯಲ್ಲಿ ಭಾರತ್ ಅಕ್ಕಿ, ಬೇಳೆ ವಿತರಿಸಲು ಮೊಬೈಲ್ ಘಟಕಗಳಿಗೆ ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ದೆಹಲಿಯ ಕೃಷಿ ಭವನ ಬುಧವಾರ ಚಾಲನೆ ನೀಡಿದರು. ದೆಹಲಿ ನಿವಾಸಿಗಳಿಗೆ ಭಾರತ್ ಕಡಲೆ ಬೇಳೆ ಕೆಜಿಗೆ 70 ರು. ಭಾರತ್ ಹೆಸರುಬೇಳೆ 107 ರು. ಮತ್ತು ಭಾರತ್ ತೊಗರಿಬೇಳೆ 89 ರು. ಬೆಲೆಯಲ್ಲಿ ಮಾರಾಟವಾಗಲಿದೆ ಎಂದು ಸಚಿವ ಜೋಶಿ ತಿಳಿಸಿದ್ದಾರೆ.

ದೆಹಲಿ ವಾಯುಮಾಲಿನ್ಯ; ಕೇಂದ್ರಕ್ಕೆ ಸುಪ್ರೀಂ ತರಾಟೆ

ದೆಹಲಿ: ಪರಿಸರ ಸಂರಕ್ಷಣಾ ಕಾನೂನು ಜಾರಿ ವಿಚಾರವಾಗಿ ಕೇಂದ್ರ ಸರಕಾರದ ವಿರುದ್ಧ ಸುಪ್ರೀಂ ಕೋರ್ಟ್ ಬುಧವಾರ ಸಿಟ್ಟಾಗಿದೆ. ದೆಹಲಿಯಲ್ಲಿ



ವಾಯುಮಾಲಿನ್ಯ ಹೆಚ್ಚುತ್ತಿರುವುದಕ್ಕೆ ಕೇಂದ್ರ ಸರಕಾರವನ್ನು ನ್ಯಾ.ಅಭಯ್ ಎಸ್.ಓಕಾ, ನ್ಯಾ. ಅಹಾನು ದ್ದೀನ್ ಅಮಾನುಲ್ಲಾ ಮತ್ತು ನ್ಯಾ.ಆಗಸ್ಟೀನ್ ಜಾರ್ಜ್ ಮಸಿಹ್ ಅವರ ಪೀಠ ತೀವ್ರ ತರಾಟೆಗೆ ತೆಗೆದುಕೊಂಡಿದೆ. ದೇಶದಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಕಾನೂನುಗಳು ಹಲ್ಲುಕಿತ್ತ ಹಾವಿನಂತಾಗಿವೆ. ದಂಡ ವಿಧಿಸಿದರೂ ಅದರ ಪ್ರಕ್ರಿಯೆಯನ್ನು ಸರಿಯಾಗಿ ಜಾರಿಗೊಳಿಸಲಾ ಗುತ್ತಿಲ್ಲ ಎಂದು ಅಸಮಾಧಾನ ಹೊರಹಾಕಿದೆ.

ಸೋದರ ರಾಹುಲ್ ಗಾಂಧಿ ಜತೆಗೂಡಿ ಬೃಹತ್ ರೋಡ್ ಶೋ | ತಾಯಿ ಸೋನಿಯಾ ಗಾಂಧಿ, ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಹಾಜರಿ

ಪ್ರಿಯಾಂಕಾ ನಾಮಪತ್ರ: ಚುನಾವಣಾ ಕಣ ಪ್ರವೇಶ

ಕಲ್ಪೆಟ್ಟಾ: ಜವಹರಲಾಲ್ ನೆಹರು ವಂಶದ ಮತ್ತೊಂದು ಕುಡಿ ಬುಧವಾರ ಕೇರಳ ರಾಜ್ಯದ ಮೂಲಕ ಚುನಾವಣಾ ರಾಜಕಾರಣಕ್ಕೆ ಪದಾರ್ಪಣೆ ಮಾಡಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಪ್ರಿಯಾಂಕಾ ಗಾಂಧಿ ವಾದ್ರಾ, ಕೇರಳದ ವಯನಾಡು ಲೋಕಸಭಾ ಕ್ಷೇತ್ರದಲ್ಲಿ ನ.13ರಂದು ನಡೆಯಲಿರುವ ಉಪ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಮಾಜಿ ಅಧ್ಯಕ್ಷೆಯೂ ಆದ ತಾಯಿ ಸೋನಿಯಾ ಗಾಂಧಿ, ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ, ಸೋದರ ರಾಹುಲ್ ಗಾಂಧಿ, ಪತಿ ರಾಬರ್ಟ್ ವಾದ್ರಾ, ಉಪಸ್ಥಿತಿಯಲ್ಲಿ 53 ವರ್ಷದ ಪ್ರಿಯಾಂಕಾ ಗಾಂಧಿ ವಾದ್ರಾ, ನಾಮಪತ್ರ ಸಲ್ಲಿಸಿದ್ದಾರೆ. ಆ ಮೂಲಕ ಸಂಸತ್ ಪ್ರವೇಶಕ್ಕೆ ಪ್ರಯತ್ನ ನಡೆಸಿದ್ದಾರೆ.

ಇದಕ್ಕೂ ಮುನ್ನಾ ಸೋದರ ರಾಹುಲ್ ಗಾಂಧಿ ಜತೆಗೂಡಿ ಕಲ್ಪೆಟ್ಟಾದ ಹೊಸ ಬಸ್ ನಿಲ್ದಾಣದಿಂದ ತೆರೆದ ವಾಹನದಲ್ಲಿ ಬೃಹತ್ ರೋಡ್ ಶೋ ನಡೆಸಿದರು. ಈ ವೇಳೆ ಯುಡಿಎಫ್ ಒಕ್ಕೂಟದ ಪಕ್ಷಗಳ ನಾಯಕರು, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು, ಕಾರ್ಯಕರ್ತರು, ಅಭಿಮಾನಿಗಳು ಸೇರಿದಂತೆ ಅಸಂಖ್ಯಾತ ಜನರು ಮೆರವಣಿಗೆಯಲ್ಲಿ ಸಾಗಿದರು. ರೋಡ್ ಶೋ ಗಾಗಿ ಬೆಳಗೆಯಿಂದ ಕಾಯುತ್ತಿದ್ದ ಯುಡಿ ಎಫ್ ಕಾರ್ಯಕರ್ತರು, ಬೆಂಬಲಿಗರು ಪ್ರಿಯಾಂಕಾ ವಾದ್ರಾ, ಮತ್ತು ರಾಹುಲ್ ಗಾಂಧಿ ಅವರ ದೊಡ್ಡ ಭಾವಚಿತ್ರಗಳು, ಪಕ್ಷದ ಬಾವುಟ ದಲ್ಲಿನ ಮೂರು ಬಣ್ಣಗಳ ಬಲೂನ್‌ಗಳು, ಭಿತ್ತಿಚಿತ್ರಗಳನ್ನು ಹಿಡಿದು ಡ್ರಮ್ ಬಾರಿಸುತ್ತಾ ಮೆರವಣಿ ಗೆಯಲ್ಲಿ ಸಾಗಿದರು. ಮಿತ್ರ ಪಕ್ಷ 'ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್'(ಐಯುಎಂಎಲ್) ಪಕ್ಷದ ಬಾವುಟದ ಬಣ್ಣಗಳ ಬಲೂನ್‌ಗಳು ಕೂಡಾ ರೋಡ್ ಶೋನಲ್ಲಿ ಕಂಡು ಬಂದವು. ಏಪ್ರಿಲ್‌ನಲ್ಲಿ ನಡೆದಿದ್ದ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಕೇರಳದ ವಯನಾಡು ಮತ್ತು ಉತ್ತರ ಪ್ರದೇಶದ ರಾಯ್‌ಬರೇಲಿ ಲೋಕಸಭಾ ಕ್ಷೇತ್ರಗಳಿಂದ ಸ್ಪರ್ಧಿಸಿ ಎರಡೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದ ರಾಹುಲ್ ಗಾಂಧಿ, ಬಳಿಕ ವಯನಾಡು ಕ್ಷೇತ್ರವನ್ನು ತೆರವುಗೊಳಿಸಿದರು. ಆ ನಂತರ ಚುನಾವಣಾ ಆಯೋಗ ಉಪ ಚುನಾವಣೆ ನಡೆಸುತ್ತಿದೆ.

ಕಣದಲ್ಲಿ 3 ಮಹಿಳೆಯರು

ಕಳೆದ 5 ವರ್ಷ ರಾಹುಲ್ ಗಾಂಧಿ ಅವರು ಪ್ರತಿನಿಧಿಸಿದ್ದ ವಯನಾಡು ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಮೂರು ಪ್ರಮುಖ ಪಕ್ಷಗಳಿಂದ ಮೂವರು ಮಹಿಳೆಯರೇ ಕಣಕ್ಕಿಳಿದಿದ್ದಾರೆ. ಕಾಂಗ್ರೆಸ್‌ನಿಂದ ಪ್ರಿಯಾಂಕಾ ವಾದ್ರಾ, ಬಿಜೆಪಿಯಿಂದ ನವ್ಯಾ ಹರಿದಾಸ್ ಮತ್ತು ಎಡಪಕ್ಷದಿಂದ ಸತ್ಯನ್ ಮೊಕೇರಿ ಸ್ಪರ್ಧಿಸುತ್ತಿದ್ದಾರೆ.

ಪ್ರಿಯಾಂಕಾ ವಾದ್ರಾ, ಚುನಾವಣಾ ರಾಜಕೀಯ ಪ್ರವೇಶಿಸುವ ಮೊದಲು, ಉತ್ತರ ಪ್ರದೇಶದಲ್ಲಿನ ನೆಹರು ಕುಟುಂಬದ ನೆಚ್ಚಿನ ಅಮೇಥಿ ಮತ್ತು ರಾಯ್‌ಬರೇಲಿ ಲೋಕಸಭಾ ಕ್ಷೇತ್ರಗಳ ಉಸ್ತುವಾರಿ ವಹಿಸಿಕೊಂಡಿದ್ದರು. ಏಪ್ರಿಲ್‌ನಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಗಾಂಧಿ ಕುಟುಂಬದ ಭದ್ರಕೋಟೆಯಂತಿರುವ ಈ ಎರಡೂ ಕ್ಷೇತ್ರಗಳಲ್ಲೊಂದರಲ್ಲಿ ಸ್ಪರ್ಧೆ ಮಾಡಲಿದ್ದಾರೆ ಎಂಬ ಮಾತುಗಳು ಕೇಳಿಬಂದಿದ್ದವು. ಆದರೆ, ಅವರ ಚುನಾವಣಾ ರಾಜಕೀಯ ಪ್ರವೇಶ ಮುಂದೆ ಹೋಯಿತು.

ನನಗಾಗಿ ಇದೇ ಮೊದಲ ಪ್ರಚಾರ

ತಿರುವನಂತಪುರಂ: ಕಳೆದ 35 ವರ್ಷಗಳಲ್ಲಿ ಅಪ್ಪ ರಾಜೀವ್ ಗಾಂಧಿ, ಅಮ್ಮ ಸೋನಿಯಾ ಗಾಂಧಿ, ಸೋದರ ರಾಹುಲ್ ಗಾಂಧಿ ಹಾಗೂ ಪಕ್ಷದ ಹಲವಾರು ನಾಯಕರ ಪರವಾಗಿ ದೇಶದ ವಿವಿಧೆಡೆ ವಿವಿಧ ಚುನಾವಣೆಗಳಲ್ಲಿ ಅಸಂಖ್ಯ ಪ್ರಚಾರ ಕಾರ್ಯಕ್ರಮ ಗಳಲ್ಲಿ ಭಾಗಿಯಾಗಿದ್ದೆ. ಆದರೆ ಇದೇ ಮೊದಲ ಬಾರಿಗೆ ನಾನು ನನಗಾಗಿಯೇ ಚುನಾವಣಾ ಪ್ರಚಾರ ನಡೆಸುವ ಸಂದರ್ಭ ಬಂದಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಮಾಜಿ ಪ್ರಧಾನಿ ದಿ.ರಾಜೀವ್ ಗಾಂಧಿ ಅವರ ಪುತ್ರಿ ಪ್ರಿಯಾಂಕಾ ಗಾಂಧಿ ವಾದ್ರಾ, ತುಸು ಭಾವುಕರಾಗಿ ಹೇಳಿದರು. ವಯನಾಡು ಲೋಕಸಭಾ ಕ್ಷೇತ್ರದ ಉಪ ಚುನಾ ವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವು ದಕ್ಕೂ ಮುನ್ನ ಕಲ್ಪೆಟ್ಟಾದಿಂದ ಆಯೋಜಿಸಿದ್ದ ಬೃಹತ್ ರೋಡ್ ಶೋ ಮತ್ತು ಬೃಹತ್ ಸಾರ್ವಜನಿಕ ಸಭೆಯಲ್ಲಿ ಅವರು ಭಾವೋದ್ವೇಗದಿಂದಲೇ ಮಾತನಾ ಡಿದರು. ನನ್ನನ್ನು ವಯನಾಡು ಲೋಕಸಭಾ ಕ್ಷೇತ್ರದ ಉಪ ಚುನಾವಣೆಗೆ ಅಭ್ಯರ್ಥಿಯಾಗಿಸಿರುವುದಕ್ಕೆ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಧನ್ಯವಾದ ಅರ್ಪಿಸುವೆ ಎಂದರು. 17 ವರ್ಷದವಳಿದ್ದಾಗ ಮೊದಲ ಬಾರಿಗೆ ಚುನಾವಣಾ ಪ್ರಚಾರದಲ್ಲಿ ಭಾಗಿಯಾದೆ. ಆಗ ತಂದೆ ರಾಜೀವ್ ಗಾಂಧಿ ಅವರಿಗಾಗಿ ಚುನಾವಣಾ ಪ್ರಚಾರ ನಡೆಸಿದ್ದೆ. ಅದಾಗಿ 35 ವರ್ಷಗಳ ಬಳಿಕ ಈಗ ಇದೇ ಪ್ರಥಮ ಬಾರಿಗೆ ನನಗಾಗಿ ಮತ



ಕೇಳುತ್ತಿದ್ದೇನೆ. ಇದೊಂದು ಹೊಸಬಗೆಯ ಅನುಭವವಾಗಿದೆ ಎಂದು ನಗೆಬೀರಿದರು. ಕೆಲ ತಿಂಗಳ ಹಿಂದೆ ವಯನಾಡು ಭೂಕುಸಿತ ದೇಶವನ್ನೇ ನಡುಗಿಸಿತ್ತು. ಆಗ ಈ ಪ್ರದೇಶಕ್ಕೆ ಸೋದರ ರಾಹುಲ್ ಜತೆ ಭೇಟಿ ನೀಡಿದ್ದೆ. ಇಡೀ ನೆಲವೇ ಕುಸಿದು ಹೋಗಿದ್ದ ಮುಂಡಕ್ಕೈ ಮತ್ತು ಚೂರಲ್‌ಮಲ ಗ್ರಾಮಗಳಿಗೆ ಹೋಗಿ ನೋಡಿದ್ದೆ. ಆ ವಿನಾಶದ ದೃಶ್ಯ ನೋಡಿ ಮನಸ್ಸು ಭಾರವಾಗಿತ್ತು. ತಮ್ಮವರನ್ನು ಕಳೆದುಕೊಂಡ ಜನರ ಜತೆ ಮಾತುಕತೆ ನಡೆಸಿದೆ. ಈಗ ಅದೇ ಜನಸಮುದಾಯದ ಭಾಗವಾಗಲು ಬಂದಿರುವೆ ಎಂದು ಪ್ರಿಯಾಂಕಾ ಭಾವುಕರಾದರು.

ಕ್ಷೇತ್ರಕ್ಕೆ ಇಬ್ಬರು ಸಂಸದರು: ರಾಹುಲ್

ವಯನಾಡು ಲೋಕಸಭಾ ಕ್ಷೇತ್ರ ವಾಸ್ತವವಾಗಿ ಇಬ್ಬರು ಸಂಸದರನ್ನು ಹೊಂದಲಿದೆ. ಒಬ್ಬರು ಸೋದರಿ ಪ್ರಿಯಾಂಕಾ, ಮತ್ತೊಬ್ಬ ನಾನೇ. ನಾವಿಬ್ಬರೂ ನಿಮ್ಮ ಸಮಸ್ಯೆಗಳನ್ನು ಲೋಕಸಭೆಗೆ ಕೊಂಡೊಯ್ದು ಪರಿಹಾರ ದೊರಕಿಸಿಕೊಡುತ್ತೇವೆ ಎಂದು ಕ್ಷೇತ್ರದ ಹಳೆಯ ಜನಪ್ರತಿನಿಧಿಯೂ ಆದ ರಾಹುಲ್ ಗಾಂಧಿ ಹೇಳಿದರು.

ಸಂಸತ್ ಆವರಣ ಚೆನ್ನಮ್ಮ ಪ್ರತಿಮೆಗೆ ನಮನ

ಕಿತ್ತೂರು ವಿಜಯೋತ್ಸವ 200 ವರ್ಷ

ದೆಹಲಿ: ಸಂಸತ್ ಭವನದ ಆವರಣದಲ್ಲಿ ಬುಧವಾರ ಕಿತ್ತೂರು ವಿಜಯೋತ್ಸವ ಆಚರಿಸಲಾಯಿತು. ಬ್ರಿಟಿಷರ ವಿರುದ್ಧ ಕಿತ್ತೂರು ರಾಣಿ ಚೆನ್ನಮ್ಮ ಹೋರಾಟದ ವಿಜಯೋತ್ಸವಕ್ಕೆ 200 ವರ್ಷ ಪೂರ್ಣಗೊಂಡ ಹಿನ್ನೆಲೆ ಸಂಸತ್ ಆವರಣದಲ್ಲಿರುವ ರಾಣಿ ಚೆನ್ನಮ್ಮ ಪ್ರತಿಮೆಗೆ ಲೋಕಸಭೆ ಸ್ಪೀಕರ್ ಓಂಬಿರ್ಲಾ ಪುಷ್ಪಾರ್ಚನೆ ಮಾಡಿ, ಗೌರವ ನಮನ ಸಲ್ಲಿಸಿದರು.

ಐತಿಹಾಸಿಕ ದಿನ ಹಿನ್ನೆಲೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಚಿವರಾದ ಪ್ರಲ್ಹಾದ ಜೋಷಿ, ವಿ.ಸೋಮಣ್ಣ, ರಾಜ್ಯ ಸಭೆ ಸದಸ್ಯ ಈರಣ್ಣ ಕಡಾಡಿ, ಪರಿಷತ್ ಸದಸ್ಯ ಅರವಿಂದ ಬೆಲ್ಲದ್, ಹರಿಹರದ ಪಂಚಮ ಸಾಲಿ ಪೀಠದ ವಚನಾನಂದ ಸ್ವಾಮೀಜಿ, ಕೂಡಲ ಸಂಗಮ ಪೀಠದ ಜಯಮೃತ್ಯುಂಜಯ ಸ್ವಾಮೀಜಿ, ಗಣ್ಯರು-ದೆಹಲಿಯಲ್ಲಿರುವ ಕನ್ನಡಿಗರು ಭಾಗಿಯಾಗಿದ್ದರು. ರಾಣಿ ಚೆನ್ನಮ್ಮ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ನಮಿಸಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ವಿ.ಸೋಮಣ್ಣ, ಬ್ರಿಟಿಷರ ವಿರುದ್ಧ ಹೋರಾಡಿದ ಧೀರ ಮಹಿಳೆ ಚೆನ್ನಮ್ಮ. ಅವರು ಬ್ರಿಟಿಷ್ ಸೇನೆಯನ್ನು ಸೋಲಿಸಿದ ದಿನಕ್ಕೆ 200 ವರ್ಷಗಳಾಗಿವೆ. ಅವರಿಂದಲೇ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ಸಿಕ್ಕಿತು. ಕಿತ್ತೂರು ರಾಣಿ ಚೆನ್ನಮ್ಮ ಅವರ ಇತಿಹಾಸವನ್ನು ದೇಶಕ್ಕೆ ಸಮರ್ಪಣೆ ಮಾಡುವ ಪ್ರಯತ್ನ ನಡೆದಿದೆ ಎಂದರು. ಜಯಮೃತಂಜ್ಯಯ ಸ್ವಾಮೀಜಿ. ಪರಿಷತ್ ಸದಸ್ಯ ಅರವಿಂದ್ ಬೆಲ್ಲದ್ ಮಾತನಾಡಿದರು.

2020ರ ಮೇನಲ್ಲಿ ನಡೆದ ಲಡಾಖ್ ಸಂಘರ್ಷ ಬಳಿಕ ಮೊದಲ ಬಾರಿ ಚರ್ಚೆ

ಮೋದಿ-ಜಿನ್‌ಪಿಂಗ್ ದ್ವಿಪಕ್ಷೀಯ ಮಾತು

ಕಜಾನ್: ಎರಡೂ ದೇಶಗಳ ಗಡಿಯಲ್ಲಿ ಶಾಂತಿ-ಸ್ಥಿರತೆ ಕಾಯ್ದುಕೊಳ್ಳುವುದು ಬಹಳ ಮುಖ್ಯ ಹಾಗೂ ಆದ್ಯತೆಯ ವಿಷಯವಾಗಬೇಕಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ರಷ್ಯಾದ ಕಜಾನ್‌ನಲ್ಲಿ ಎರಡು ದಿನಗಳ ಕಾಲ ನಡೆದ ಬ್ರಿಕ್ಸ್ ಶೃಂಗಸಭೆ ಮಧ್ಯೆಯೇ ಪ್ರಧಾನಿ ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಬುಧವಾರ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಪೂರ್ವ ಲಡಾಖ್ ಗಡಿಯಲ್ಲಿನ ದೀರ್ಘ ಸಂಘರ್ಷ ನಂತರ ಮೊದಲ ಬಾರಿಗೆ ನೇರಾನೇರ ಮಾತುಕತೆ ನಡೆಸಿದ್ದಾರೆ. 5 ವರ್ಷಗಳಲ್ಲೇ ಮೊದಲ ಬಾರಿಗೆ ಭಾರತ-ಚೀನಾ ನಡುವೆ ರಚನಾತ್ಮಕ ಸಭೆ ನಡೆದಿದೆ.

'ಭಾರತ-ಚೀನಾ ನಡುವೆ ಮೈತ್ರಿ ಸಾಧ್ಯವಾದರೆ ಅದು ಎರಡೂ ದೇಶಗಳ ಜನರಲ್ಲಿ ಶಾಂತಿ-ಸ್ಥಿರತೆ ಸ್ಥಾಪನೆಗೆ ಹಾಗೂ ಪರಸ್ಪರರ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂಬುದೇ ನಮ್ಮ ನಂಬಿಕೆಯಾಗಿದೆ' ಎಂದು ಮೋದಿ ಹೇಳಿದರು. ಪೂರ್ವ ಲಡಾಖ್‌ನಲ್ಲಿನ ವಾಸ್ತವ ನಿಯಂತ್ರಣ ರೇಖೆ(ಎಲ್‌ಎಸಿ)ಯ ಉದ್ದಕ್ಕೂ ಭಾರತ-ಚೀನಾ ಸೇನಾಪಡೆಗಳಿಂದ ಗಸ್ತು ನಡೆಸುವ ವಿಚಾರದಲ್ಲಿ 2 ದಿನಗಳ ಹಿಂದೆಯಷ್ಟೇ ಒಪ್ಪಂದಕ್ಕೆ ಬಂದಿದ್ದು, ಆ ನಂತರದಲ್ಲೇ ಈ ದ್ವಿಪಕ್ಷೀಯ ಸಭೆ ನಡೆದಿರುವುದು ಗಮನಾರ್ಹ. ಇದು ಕಳೆದ 4 ವರ್ಷಗಳಿಂದ ನೆರೆಯ ದೇಶಗಳ ನಡುವೆ ಉಂಟಾಗಿದ್ದ ಉದ್ವಿಗ್ನತೆ ಮತ್ತು ಬಿಕ್ಕಟ್ಟನ್ನು ಕೊನೆಗೊಳಿಸುವಲ್ಲಿ ಪ್ರಮುಖ ಪ್ರಗತಿಯಾಗಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ವಿದೇಶಾಂಗ ಸಚಿವಾಲಯದ ಹಿರಿಯ ಅಧಿಕಾರಿಗಳ ಸಭೆಯಲ್ಲಿದ್ದರು.

ಈವರೆಗೆ... 2019ರ ಅಕ್ಟೋಬರ್‌ನಲ್ಲಿ ಮಾಮಲ್ಲಪುರಂನಲ್ಲಿ ನಡೆದ 2ನೇ ಅನೌಪಚಾರಿಕ ಶೃಂಗಸಭೆಯಲ್ಲಿ ಉಭಯತ್ರರೂ



> ಭಾರತ-ಚೀನಾ ಪರಸ್ಪರರಲ್ಲಿ ಗೌರವ, ಸೂಕ್ಷ್ಮ ಸಂವೇದನೆ-ಸೂಕ್ತ ಸ್ಪಂದನೆಯೂ ಇರಬೇಕು. ಅವುಗಳೇ ಸ್ನೇಹ ಸಂಬಂಧಕ್ಕೆ ಆಧಾರವಾಗಿರಬೇಕಿದೆ. ಉಭಯತ್ರರೂ ಮುಕ್ತ ಮನಸ್ಥಿತಿ ಹೊಂದಿರಬೇಕು, ರಚನಾತ್ಮಕ ಮಾತುಕತೆ ನಡೆಸಬೇಕಿದೆ.
>
> -ನರೇಂದ್ರ ಮೋದಿ ಭಾರತ ಪ್ರಧಾನಿ

ರಚನಾತ್ಮಕ ಸಭೆ ನಡೆಸಿದ್ದರು. ಬಳಿಕ 2020ರ ಮೇನಲ್ಲಿ ಪೂರ್ವ ಲಡಾಖ್‌ನಲ್ಲಿ ಗಡಿ ಸಂಘರ್ಷ ನಡೆದು ಎರಡೂ ದೇಶಗಳು ದೂರವಾಗಿದ್ದವು. 2022ರ ನವೆಂಬರ್‌ನಲ್ಲಿ ಇಂಡೋನೇಷ್ಯಾ ಅಧ್ಯಕ್ಷರು ಜಿ-20 ನಾಯಕರಿಗೆ ಆಯೋಜಿಸಿದ್ದ ಭೋಜನಕೂಟದಲ್ಲಿ ಮೋದಿ ಮತ್ತು ಕ್ಸಿ ಮುಖಾಮುಖಿಯಾಗಿದ್ದರು. ಕೇವಲ ಶುಭಾಶಯ ವಿನಿಮಯ ಮಾಡಿಕೊಂಡಿದ್ದರು. 2023ರ ಆಗಸ್ಟ್‌ನಲ್ಲಿ ಬ್ರಿಕ್ಸ್ ಶೃಂಗಸಭೆ ವೇಳೆ ಜೋಹಾನ್ಸ್‌ಬರ್ಗ್‌ನಲ್ಲಿ ಚುಟುಕಾಗಿ ಅನೌಪಚಾರಿಕ ಮಾತುಕತೆ ನಡೆಸಿದ್ದರು.

'ನಮ್ಮ ಭೇಟಿಯತ್ತ ಇಡೀ ವಿಶ್ವವೇ ಬಿಡುಗಣ್ಣಾಗಿದೆ'

ಭಾರತ-ಚೀನಾ ನಡುವಿನ ಈ ಭೇಟಿಯನ್ನು ಇಡೀ ವಿಶ್ವವೇ ಕೌತುಕದ ಕಣ್ಣುಗಳಿಂದ ಗಮನಿಸುತ್ತಿದೆ. ಅಷ್ಟೇ ಅಲ್ಲ, ಎರಡೂ ದೇಶಗಳ ಜನರೂ ಆಸಕ್ತಿಯಿಂದ ಈ ಭೇಟಿಯತ್ತ ಬಿಡುಗಣ್ಣಾಗಿದ್ದಾರೆ. ಪ್ರಧಾನಿ ಮೋದಿ ಅವರನ್ನು ಕಜಾನ್‌ನಲ್ಲಿ ದ್ವಿಪಕ್ಷೀಯ ಸಭೆಯಲ್ಲಿ ಭೇಟಿಯಾಗಲು ಸಂತಸವೆನಿಸಿದೆ ಎಂದು ಕ್ಸಿ ಜಿನ್‌ಪಿಂಗ್ ಹೇಳಿದರು. ಭಾರತ-ಚೀನಾ ಎರಡೂ ಪುರಾತನ ನಾಗರಿಕತೆ-ಸಂಸ್ಕೃತಿಯ ದೇಶಗಳಾಗಿವೆ. ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಪ್ರಮುಖ ದೇಶಗಳಾಗಿವೆ. ದಕ್ಷಿಣ ಗೋಲಾರ್ಧ ಸಂಘಟನೆಯ ಬಹುಮುಖ್ಯ ಸದಸ್ಯರಾಗಿವೆ. ಈ ಭೇಟಿ ಎರಡೂ ದೇಶಗಳಿಗೆ, ದೇಶದ ಜನರಿಗೆ ಬಹಳ ಮುಖ್ಯವಾಗಿದೆ ಎಂದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು-570017,

ದೂರವಾಣಿ: 9448994705 ಇ-ಮೇಲ್: gmpurc@cescmysore.org ವೆಬ್‌ಸೈಟ್: www.cescmysore.org

ಸಂಖ್ಯೆ: ಚಾವಿಸನಿನಿ/ಪ್ರವ್ಯ/ಉ.ಪ್ರವ್ಯ(ಖ)/ಸ.ಪ್ರವ್ಯ(ಖ-2)/2024-25/16964 ದಿನಾಂಕ: 23.10.2024

"ಅಲ್ಪಾವಧಿ ಟೆಂಡರ್ ಪ್ರಕಟಣೆ" (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗೆ ಹಾಗೂ ಸಾಮಗ್ರಿಗಳ ಸರಬರಾಜು ಮತ್ತು ಸೇವೆಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ.	ವಿವರಗಳು	ವಿಚಾರಣೆ ಸಂಖ್ಯೆ/ದಿನಾಂಕ	
1	ಚಾವಿಸನಿನಿ, **ಮೈಸೂರು ವೃತ್ತ ವ್ಯಾಪ್ತಿಯ** ಅಧಿಕಾರಿಗಳಿಗೆ ಚಾಲಕ ಸಹಿತ ಮೋಟಾರ್ ವಾಹನ ಸೇವೆಯನ್ನು ಒದಗಿಸುವುದು.	ಸಿ2-5958/23-10-2024	
2	ಚಾವಿಸನಿನಿ, **ಮಂಡ್ಯ ವೃತ್ತ ವ್ಯಾಪ್ತಿಯ** ಅಧಿಕಾರಿಗಳಿಗೆ ಚಾಲಕ ಸಹಿತ ಮೋಟಾರ್ ವಾಹನ ಸೇವೆಯನ್ನು ಒದಗಿಸುವುದು.	ಸಿ2-5959/23-10-2024	
3	ಚಾವಿಸನಿನಿಗೆ **ಸುರಕ್ಷತಾ ಸಾಮಗ್ರಿಗಳನ್ನು** ಸರಬರಾಜು ಮಾಡಲು	ಸಿ2-5960/23-10-2024	
4	ತಾಂತ್ರಿಕ ನಿರ್ದಿಷ್ಟತೆಗಳಿಗೆ ಅನುಗುಣವಾಗಿ **11 ಕೆ.ವಿ 400 amps** ಡಬಲ್ ಬ್ರೇಕ್ **ಜಿ.ಓ.ಎಸ್** ಸಿ-ಟೈಪ್ ವೆಡ್ಜ್ ಕನೆಕ್ಟರನೊಂದಿಗೆ	ಸಿ2-5961/23-10-2024	
5	ಚಾವಿಸನಿನಿ ವ್ಯಾಪ್ತಿಯಲ್ಲಿ ಎಲ್.ಟಿ, ಏ ಸಿ ಸಿಂಗಲ್ ಫೇಸ್, 2 ವೈರ್, 5-30 ಆ್ಯಂಪ್ಸ್, ಮಾಪಕಗಳನ್ನು ಗುತ್ತಿಗೆ ದರದಲ್ಲಿ ಮಾರಾಟ ಮಾಡುವ ಕೇಂದ್ರಗಳನ್ನು ತೆರೆಯುವ ಬಗ್ಗೆ.	ಸಿ2-5969/23-10-2024	
6	ಚಾವಿಸನಿನಿ ವ್ಯಾಪ್ತಿಯಲ್ಲಿ ಎಲ್.ಟಿ, ಏ ಸಿ ಮೂರು ಫೇಸ್, 4 ವೈರ್, 5-30 ಆ್ಯಂಪ್ಸ್, ಮಾಪಕಗಳನ್ನು ಗುತ್ತಿಗೆ ದರದಲ್ಲಿ ಮಾರಾಟ ಮಾಡುವ ಕೇಂದ್ರಗಳನ್ನು ತೆರೆಯುವ ಬಗ್ಗೆ.	ಸಿ2-5970/23-10-2024	
7	11 ಕಿ ವೋ ದರ್ಜೆಯ 25, 63, 100 ಕೆವಿಎ ಸಾಮರ್ಥ್ಯದ ಸ್ಟಾರ್ ರೇಟೆಡ್ ಮತ್ತು ಕನ್ವೆನ್ಷನಲ್ ಪರಿವರ್ತಕಗಳನ್ನು ಬೈ ಬ್ಯಾಕ್ ಆಧಾರದಲ್ಲಿ ಮೂಲ ಸೌಕರ್ಯ ಒದಗಿಸುವುದರೊಂದಿಗೆ ದುರಸ್ತಿಗೊಳಿಸುವುದು ಮತ್ತು ರೀಕಂಡಿಷನಿಂಗ್ ಮಾಡುವುದು	**ಬೇಲೂರು**	ಸಿ2-5962/23-10-2024
		ಶ್ರೀರಂಗಪಟ್ಟಣ	ಸಿ2-5963/23-10-2024

ಕೊಡಗು ಜಿಲ್ಲೆಯಲ್ಲಿ ಹೆಚ್.ಟಿ / ಎಲ್.ಟಿ ವಿತರಣಾ ಜಾಲದ ಸಮಗ್ರ ಸಬಲೀಕರಣದ ಪೂರ್ಣ ಗುತ್ತಿಗೆ ಕಾಮಗಾರಿ

ಕ್ರ.ಸಂ.	ಉಪ-ವಿಭಾಗಗಳು	ವಿಚಾರಣೆ ಸಂಖ್ಯೆ/ದಿನಾಂಕ
1	ಮಡಿಕೇರಿ	ಸಿ2-5964/23-10-2024
2	ಕುಶಾಲನಗರ	ಸಿ2-5965/23-10-2024
3	ವೀರಾಜಪೇಟೆ	ಸಿ2-5966/23-10-2024
4	ಸೋಮವಾರಪೇಟೆ	ಸಿ2-5967/23-10-2024
5	ಗೋಣಿಕೊಪ್ಪ	ಸಿ2-5968/23-10-2024

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ **ದಿನಾಂಕ: 28-10-2024**ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91-8046010000, +91-8068948777 ಗೆ ಅಥವಾ ಇ-ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/-
ಪ್ರಧಾನ ವ್ಯವಸ್ಥಾಪಕರು(ಖರೀದಿ)
ನಿಗಮ ಕಛೇರಿ, ಚಾವಿಸನಿನಿ, ಮೈಸೂರು

DIPR/MYS/KAVITA/712/2024-25

ಬಾಂಗ್ಲಾ ಮತ್ತೆ ಪ್ರತಿಭಟನೆ; ಅಧ್ಯಕ್ಷರ ಪದತ್ಯಾಗಕ್ಕೆ ಆಗ್ರಹ

ಢಾಕಾ: ಬಾಂಗ್ಲಾದೇಶದಲ್ಲಿ ಮತ್ತೆ ಪ್ರತಿಭಟನೆ ಆರಂಭವಾಗಿದೆ. ಪ್ರತಿಭಟನಾಕಾರರು ತಡರಾತ್ರಿ ಬಂಗಾ ಭವನಕ್ಕೆ ಮುತ್ತಿಗೆ ಹಾಕಿ, ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ರಾಜೀನಾಮೆಗೆ ಒತ್ತಾಯಿಸಿದರು. ಅಧ್ಯಕ್ಷರ ವಿರುದ್ಧ ಘೋಷಣೆ ಕೂಗುತ್ತಾ ಭವನಕ್ಕೆ ನುಗ್ಗಲೆತ್ನಿಸಿದ ಪ್ರತಿಭಟನಾಕಾರರನ್ನು ಪೊಲೀಸರು ಬ್ಯಾರಿಕೇಡ್ ಹಾಕಿ ತಡೆದರು. ಕೆಲವರು ಬ್ಯಾರಿಕೇಡ್‌ಗಳನ್ನು ತಳ್ಳಿ ಮುಂದೆ ಸಾಗಲು ಯತ್ನಿಸಿದರು. ಪೊಲೀಸರು ಅಶ್ರುವಾಯು ಸಿಡಿಸಿ, ಲಾಠಿ ಪ್ರಹಾರ ನಡೆಸಿ ಪ್ರತಿಭಟನಾಕಾರರನ್ನು ಹೊರಗಟ್ಟಿದರು. ಲಾಠಿ ಚಾರ್ಜ್‌ನಿಂದ ಕೆಲವರು ಗಂಭೀರವಾಗಿ ಗಾಯಗೊಂಡಿದ್ದು ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಧಾನಿ ಹುದ್ದೆಗೆ ಶೇಖ್ ಹಸೀನಾ ರಾಜೀನಾಮೆ ನೀಡಿದ್ದಾರೆ ಎಂಬುದಕ್ಕೆ ತಮ್ಮ ಬಳಿ ಯಾವುದೇ ಪುರಾವೆ ಇಲ್ಲ ಎಂದು ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಹೇಳಿಕೆ ನೀಡಿದ್ದರು. ಅದರಿಂದ ಜನರು ಸಿಟ್ಟಾಗಿ ಪ್ರತಿಭಟನೆ ಆರಂಭಿಸಿದ್ದಾರೆ.

ಬಿಜೆಪಿಗೆ 27 ಲಕ್ಷ ಅಲ್ಪಸಂಖ್ಯಾತರು

ದೆಹಲಿ: ದೇಶಾದ್ಯಂತದ ಬಿಜೆಪಿ ಸದಸ್ಯತ್ವ ಅಭಿಯಾನದಲ್ಲಿ ಮುಸ್ಲಿಮರು ಸೇರಿದಂತೆ ಅಲ್ಪಸಂಖ್ಯಾತ ಸಮುದಾಯಗಳ 26,82,092 ಜನರು ಹೊಸದಾಗಿ ಸದಸ್ಯರಾಗಿದ್ದಾರೆ ಎಂದು ಅಲ್ಪಸಂಖ್ಯಾತ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಜಮಾಲ್ ಸಿದ್ದಿಕಿ ಹೇಳಿದ್ದಾರೆ. ಚುನಾವಣೆ ಎದುರಿಸುತ್ತಿರುವ ಮಹಾರಾಷ್ಟ್ರ, ಜಾರ್ಖಂಡ್, ಇತ್ತೀಚೆಗೆ ಚುನಾವಣೆ ನಡೆದ ಹರಿಯಾಣ ಮತ್ತು ಜಮ್ಮು-ಕಾಶ್ಮೀರ ಹೊರತುಪಡಿಸಿ ದೇಶದ ಉಳಿದೆಡೆ ಅ.2ರಿಂದ ಸದಸ್ಯತ್ವ ನೋಂದಣಿ ನಡೆಯುತ್ತಿದೆ. 6 ವರ್ಷಕ್ಕೊಮ್ಮೆ ಸದಸ್ಯತ್ವ ಅಭಿಯಾನ ನಡೆಯುತ್ತದೆ. ಈವರೆಗೆ ಕಮಲ ಪಕ್ಷ 10 ಕೋಟಿಗೂ ಅಧಿಕ ಸದಸ್ಯರನ್ನು ಹೊಂದುವ ಮೂಲಕ ದಾಖಲೆ ಮಾಡಿದೆ.

ಕರ್ತಾರ್‌ಪುರ ಕಾರಿಡಾರ್ ಒಪ್ಪಂದ 5 ವರ್ಷ ವಿಸ್ತರಣೆ

ಚಂಡೀಗಢ: ಪಾಕಿಸ್ತಾನದ ದರ್ಬಾರ್ ಸಾಹಿಬ್ ಗುರುದ್ವಾರಕ್ಕೆ ಭಾರತದ (ಸಿಖ್) ಯಾತ್ರಿಕರು ಯಾವುದೇ ಅಡೆತಡೆ ಇಲ್ಲದೇ ಸರಾಗ ಪ್ರಯಾಣ ಮಾಡಲು ಅವಕಾಶ ಮಾಡಿಕೊಡುವ ಕರ್ತಾರ್‌ಪುರ



ಕಾರಿಡಾರ್ ಒಪ್ಪಂದವನ್ನು ಮತ್ತೂ 5 ವರ್ಷಗಳಿಗೆ ವಿಸ್ತರಿಸಲು ಭಾರತ ಮತ್ತು ಪಾಕಿಸ್ತಾನ ಒಪ್ಪಿಕೊಂಡಿವೆ. ಗುರುದ್ವಾರಕ್ಕೆ ಭೇಟಿ ನೀಡುವ ಪ್ರತಿ ಭಾರತೀಯ ಯಾತ್ರಾರ್ಥಿಗೆ ಪಾಕ್ ವಿಧಿಸುವ 20 ಅಮೆರಿಕನ್ ಡಾಲರ್ ಶುಲ್ಕವನ್ನು ರದ್ದು ಮಾಡುವಂತೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಆಗ್ರಹಿಸಿದೆ. ಪಾಕಿಸ್ತಾನದ ನರೋವಾಲ್‌ನ ಗುರುದ್ವಾರ ದರ್ಬಾರ್ ಸಾಹಿಬ್ ಕರ್ತಾರ್‌ಪುರಕ್ಕೆ ಭಾರತದ ಯಾತ್ರಿಕರ ಭೇಟಿಗೆ ಅನುಕೂಲವಾಗುವಂತೆ 2019ರ ಅ.24ರಂದು 5 ವರ್ಷಗಳ ಒಪ್ಪಂದವಾಗಿತ್ತು.

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾವೇರಿ ನೀರಾವರಿ ನಿಗಮ, (ನಿ), ನಾಗಮಂಗಲ, ದೂ:08234-200058 ಫ್ಯಾಕ್ಸ್ ಸಂಖ್ಯೆ 08234-286019

e-mail: eeno7nagamangala@gmail.com

ತಿದ್ದುಪಡಿ ಪ್ರಕಟಣೆ ಸಂಖ್ಯೆ:01/2024-25 ದಿನಾಂಕ:22.10.2024

ವಿಷಯ: ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:03/2024-25 ದಿನಾಂಕ:16.10.2024 ರಂದು ಆಹ್ವಾನಿಸಿದ ಕಾಮಗಾರಿಗಳ ಬಗ್ಗ.

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟನೆ ಸಂಖ್ಯೆ:03/2024-25 ದಿನಾಂಕ:-16.10.2024 ರಲ್ಲಿ ಪ್ರಕಟಿಸಿದ ಟೆಂಡರ್ ಪ್ರಕ್ರಿಯೆ ಮಾಹಿತಿಯನ್ನು ತಾಂತ್ರಿಕ ಕಾರಣಗಳಿಂದ ತಿದ್ದುಪಡಿ ಮಾಡಿ ತಿದ್ದುಪಡಿ ಪ್ರಕಟಣೆ ಸಂಖ್ಯೆ:-01/2024-25 ದಿನಾಂಕ:-22.10.2024 ಕ್ಕೆ ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಪ್ರಕಟಿಸಲಾಗಿದೆ.

ವಿಷಯ :- ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 03/2024-25 ದಿನಾಂಕ:16.10.2024 ರ ಕಾಮಗಾರಿಗಳ ಸಂಖ್ಯೆ-02.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 03/2024-25 ದಿನಾಂಕ:16.10.2024 ರಲ್ಲಿ ಪ್ರಕಟಿಸಿದಂತೆ : **ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್ ಗಳನ್ನು ಹಾಗೂ ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ 01.11.2024 ರ ಸಂಜೆ 4.00 ಗಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 04.11.2024 ರ ಬೆಳಿಗ್ಗೆ 11.00 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ : 07.11.2024 ರ ಬೆಳಿಗ್ಗೆ 11.00 ಗಂಟೆಗೆ .**

ಈಗ ತಿದ್ದುಪಡಿ ಮಾಡಿರುವಂತೆ : **ತಾಂತ್ರಿಕ ಕಾರಣಗಳಿಂದ ಅನಿರ್ಧಿಷ್ಟಾವಧಿಯ ವರೆಗೆ ಮುಂದೂಡಲಾಗಿದೆ.**

ಮೂಲ ಟೆಂಡರ್ ಪ್ರಕಟನೆಗಳಲ್ಲಿ ನಮೂದಿಸಿರುವ ಇತರೆ ವಿವರಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ

ಸಹಿ/-ಕಾರ್ಯಪಾಲಕ ಇಂಜಿನಿಯರ್, ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ, ನಾಗಮಂಗಲ

ವಾಸಾಸಂಇ/ಸನಿ-ಮಂ/ಕೆಎಸ್ಎಂಸಿ&ಎ/383 'ಎ'/2024-25

ಚೆನ್ನೈನಲ್ಲಿ ಕೊಡವರ 'ಐನ್ ಮನೆ'!

ಚೆನ್ನೈ: 'ಕೊಡವ ಐನ್ ಮನೆ' ಕರ್ನಾಟಕದ ಕೊಡಗಿನಲ್ಲಿರುವ ಕೊಡವ ಸಮುದಾಯದವರ ಸಾಂಸ್ಕೃತಿಕ ಅಸ್ಮಿತೆ. ಕೊಡಗಿನ ಮೂಲ ನಿವಾಸಿಗಳ ಹೆಮ್ಮೆಯ ಹೆಗ್ಗುರುತು. ಆ ಮನೆಯ ಮಾದರಿ ಈಗ ತಮಿಳುನಾಡಿನ ಚೆನ್ನೈನಲ್ಲೂ ಕಾಣಿಸಿಕೊಂಡಿದೆ. ಪರಂಪರೆ, ಸಂಪ್ರದಾಯಬದ್ಧ ನಿವಾಸಗಳನ್ನು

ಜಗತ್ತಿಗೆ ತೋರಿಸುವ ಉದ್ದೇಶದಿಂದಲೇ ಐನ್ ಮನೆಯ ಮಾದರಿ ಚೆನ್ನೈನ ದಕ್ಷಿಣ ಚಿತ್ರ ವಸ್ತು ಸಂಗ್ರಹಾಲಯದಲ್ಲಿದ್ದು, ಬುಧವಾರ ಅನಾವರಣ ಗೊಂಡಿದೆ. ಈ ಮ್ಯೂಸಿಯಂ ಈವರೆಗೆ ದಕ್ಷಿಣ ಭಾರತದ ವಿಶಿಷ್ಟ ಸಂಸ್ಕೃತಿ ಬಿಂಬಿಸುವ 18 ಸಾಂಪ್ರದಾಯಿಕ ಮನೆಗಳನ್ನು ಪ್ರದರ್ಶಿಸುತ್ತಿತ್ತು. ಈಗ 19ನೆಯದಾಗಿ 'ಐನ್ ಮನೆ' ಸೇರ್ಪಡೆಯಾಗಿದೆ. 1852ರಲ್ಲಿ ನಿರ್ಮಾಣಗೊಂಡಿದ್ದ ಕೋಡಿರ ಕುಟುಂಬದ ಐನ್ ಮನೆಯನ್ನು 2022ರಲ್ಲಿ ಸ್ವಾಧೀನಪಡಿಸಿಕೊಂಡು, ವಿಂಗಡಿಸಿ, ಕಿಟಕಿ, ಬಾಗಿಲು ಎಲ್ಲವನ್ನೂ ಗುರುತಿಸಿ 2023ರಲ್ಲಿ ಮ್ಯೂಸಿಯಂಗೆ ಸಾಗಿಸಿ ಮರಳಿ ಜೋಡಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಮಾಜಿ ಕಾರ್ಯದರ್ಶಿ, ದಕ್ಷಿಣ ಚಿತ್ರ ಮ್ಯೂಸಿಯಂನ ಲೈಫ್ ಟ್ರಸ್ಟಿ ರತಿ ವಿನಯ್ ಝಾ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಆರಾಧನಾ ಸಮಿತಿ ಸದಸ್ಯರ ಆಯ್ಕೆ

ಮುದಗಲ್: ಲಿಂಗಸುಗೂರ ಮಾಜಿ ಶಾಸಕ ಹಾಗೂ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಡಿ.ಎಸ್. ಹೂಲಗೇರಿ ರವರ ಶಿಫಾರಸಿನ ಮೇರೆಗೆ ಪಟ್ಟಣ ಸಮೀಪದ ಕಾಚಾಪೂರು

ಗ್ರಾಮದ ಚಂದ್ರಶೇಖರ ನಾಯಕ ರವರನ್ನು ಲಿಂಗಸುಗೂರ ವಿಧಾನ ಕ್ಷೇತ್ರ ಆರಾಧನಾ ಸಮಿತಿ ಸದಸ್ಯರಾಗಿ ಕಂದಾಯ ಇಲಾಖೆಯ (ಧಾರ್ಮಿಕ ದತ್ತಿ) ಅಧೀನ ಕಾರ್ಯದರ್ಶಿ ಕೆ, ಪಿ, ಹನುಮಂತರಾಜು ನೇಮಕ ಆದೇಶ ಮಾಡಿಸಿದ್ದಾರೆ. ಆತ್ಮೀಯ ಗೆಳೆಯರು ವಾಲ್ಮೀಕಿ ನಾಯಕ ಸಮಾಜದ ಮುಖಂಡರು, ನೂತನ ಆರಾಧನಾ ಸಮಿತಿ ಸದಸ್ಯರಿಗೆ ಅಭಿನಂದನೆಗಳು ಸಲ್ಲಿಸಿದ್ದಾರೆ. ಇದೆ ವೇಳೆ ಸಮಿತಿಗೆ ಸದಸ್ಯರಾಗಿ ಆಯ್ಕೆ ಮಾಡಲು ಕಾರಣೀಭೂತರಾದ ಮಾಜಿ ಶಾಸಕ ಡಿ.ಎಸ್.ಹೂಲಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಿಗೆ ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಿಗೆ ಕಾರ್ಯಕರ್ತರಿಗೆ ಚಂದ್ರಶೇಖರ ನಾಯಕ ಕೃತಜ್ಞತೆಗಳು ಸಲ್ಲಿಸಿದ್ದಾರೆ.

ವಾರ್ತಾಧಿಕಾರಿ ಡಾ.ಸುರೇಶ್ ನೇಮಕ

ಕೊಪ್ಪಳ: ಜಿಲ್ಲಾ ವಾರ್ತಾಧಿಕಾರಿಯಾಗಿ ಡಾ. ಸುರೇಶ್ ಜಿ ಇತ್ತೀಚೆಗೆ ಅಧಿಕಾರ ವಹಿಸಿಕೊಂಡರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಭಾರಿ ಸಹಾಯಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಗವಿಸಿದ್ದಪ್ಪ ಹೊಸಮನಿ ಅವರು, ರಾಯಚೂರು ಜಿಲ್ಲೆಗೆ ವರ್ಗಾವಣೆಯಾದ ಹಿನ್ನೆಲೆ ಡಾ.ಸುರೇಶ್ ಜಿ ಅವರು ಪ್ರಭಾರ ವಹಿಸಿಕೊಂಡರು ನಿರ್ಗಮಿತ ಅಧಿಕಾರಿಗಳು ನೂತನ ಜಿಲ್ಲಾ ವಾರ್ತಾಧಿಕಾರಿಗೆ ಹೂಗುಚ್ಛ ನೀಡಿ ಅಧಿಕಾರ ಹಸ್ತಾಂತರಿಸಿದರು.

ಬಿ.ಇಡಿ ಕೋರ್ಸ್ ವ್ಯಾಸಂಗಕ್ಕೆ ಅರ್ಜಿ

ರಾಯಚೂರು: ನಗರದ ಯರಮರಸ್ ಡಯಟ್ ವತಿಯಿಂದ 2024-25ನೇ ಶೈಕ್ಷಣಿಕ ಸಾಲಿಗೆ ಎರಡು ವರ್ಷಗಳ ಬಿ.ಇಡಿ ಕೋರ್ಸ್ಗೆ ವ್ಯಾಸಂಗಕ್ಕಾಗಿ ದಾಖಲಾತಿ ಬಯಸುವ ಅರ್ಹ ಅಭ್ಯರ್ಥಿಗಳು ಅರ್ಜಿ ಆಹ್ವಾನಿಸಲಾಗಿದೆ ಎಂದು ಡಯಟ್ ಉಪ ನಿರ್ದೇಶಕ ಆರ್. ಇಂದಿರಾ ಅವರು ತಿಳಿಸಿದ್ದಾರೆ. ಆಸಕ್ತರು ಇಲಾಖೆಯ ವೆಬ್‌ಸೈಟ್ ವಿಳಾಸ ಎರಡು ವರ್ಷಗಳ ಬಿ.ಇಡಿ ಕೋರ್ಸ್‌ಗೆ ಅಂತರ್ಜಾಲದ ಮುಖಪುಟನಲ್ಲಿ ಪ್ರಕಟವಾಗುವ ಆನ್‌ಲೈನ್ 2024-25 ಲಿಂಕ್ ಮೂಲಕ ಆನ್‌ಲೈನ್ ಅರ್ಜಿ ಅ.2024ರ ನವಂಬರ್ 14ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಯರಮರಸ್ ಡಯಟ್ ಉಪನಿರ್ದೇಶಕ ಆರ್.ಇಂದಿರಾ ದೂರವಾಣಿ ಸಂಖ್ಯೆ: 9448999378, ಡಯಟ್ ಹಿರಿಯ ಉಪನ್ಯಾಸಕ ಶಿವಮ್ಮ ದೂರವಾಣಿ ಸಂ. 13926376ಗೆ ಸಂಪರ್ಕಿಸುವುದಾಗಿ ಡಯಟ್ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

5 ನಾಮ ನಿರ್ದೇಶನ ಸದಸ್ಯರ ನೇಮಕ

ಸಿಂಧನೂರು: ನಗರಸಭೆಗೆ ಐವರು ಸದಸ್ಯರನ್ನು ನಾಮ ನಿರ್ದೇಶನ ಮಾಡಿ ಸರಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆಯ ಟಿ. ಮಂಜುನಾಥ ಅವರು 23-10-2024ರಂದು ಆದೇಶಿಸಿದ್ದಾರೆ. ಗರೀಬ್‌ಪಾಶಾ ತಂದೆ ಹೊನ್ನೂರುಸಾಬ ವಾರ್ಡ್ ನಂ.9, ನಾಗರಾಜ್ ತಂದೆ ಲಾಲಸಾಬ ವಾರ್ಡ್ ನ.26, ಆಯುಬ್‌ಖಾನ್ ತಂದೆ ಕೆ.ಮಹ್ಮದ್ ಹುಸೇನ್, ಸಂಗೀತಾ ಸಂದೀಪ ಕುಮಾರ ವಾರ್ಡ್ ನಂ.23, ಮಲ್ಲಿಕಾರ್ಜುನ ಮಾಲಿಪಾಟೀಲ್ ತಂದೆ ಈಶ್ವರ ಸಾಹುಕಾರ ವಾರ್ಡ್ ನಂ.12 ಇವರು ನಾಮನಿರ್ದೇಶನಗೊಂಡವರು.

ಮಕ್ಕಳ ಕುಟುಂಬದ ಪರಿಹಾರಕ್ಕೆ ಮನವಿ

ಲಿಂಗಸುಗೂರು: ತಾಲೂಕಿನ ಗೌಡೂರ ತಾಂಡಾದ ಜಮೀನಿನಲ್ಲಿ ದಿ. 15 ರಂದು ಸಾಯಂಕಾಲ ಮಕ್ಕಳು ದನ ಮೇಯಿಸಲು ಹೊದಾಗ ಜಿಟಿ ಜಿಟಿಯಾದ ಮಳೆ ಸುರಿದ ಕಾರಣ ಮಕ್ಕಳು ಕಲ್ಲು ಬಂಡೆಯ ಸನಿಹ ಆಸರೆಯಾಗಿ ಕುಳಿತುಕೊಂಡಿದ್ದರು. ಏಕಾಏಕಾಗಿಯಾಗಿ ಮಣ್ಣುಕುಸಿದು ಮೂವರು ಮಕ್ಕಳ ಮೇಲೆ ಕಲ್ಲು ಬಂಡೆ ಉರುಳಿದೆ. ಮಕ್ಕಳ ಚೀರಾಟ ಕೇಳಿ ಹೊಲದಲ್ಲಿದ್ದ ಪೋಷಕರು ಬಂಡೆ ಎತ್ತಲೂ ಪ್ರಯತ್ನಿಸಿದರೂ ಮಕ್ಕಳನ್ನು ರಕ್ಷಣೆ ಮಾಡಲು ಸಾಧ್ಯವಾಗಲಿಲ್ಲ. ಪೋಷಕರ ಕಣ್ಣೆದುರೇ, ಮಂಜುನಾಥ ತಂದೆ ಮಾನಪ್ಪ, ವೈಶಾಲಿ ತಂದೆ ಮಾನಪ್ಪ ಮಕ್ಕಳು ಮೃತ ಪಟ್ಟಿದ್ದು ಪಾಲಕರ ಆಕ್ರಂದನ ಮುಗಿಲು ಮುಟ್ಟಿದ ರಾಘು ಎಂಬುವವನನ್ನು ಸರಕಾರಿ ಆಸ್ಪತ್ರೆ ಕರೆದೊಯುವಾಗ ದಾರಿ ಮಧ್ಯೆದಲ್ಲಿಯೇ ಮೃತಪಟ್ಟಿದ್ದಾನೆ. ಈ ಸಂದರ್ಭದಲ್ಲಿ ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ತಾಲೂಕ ಅಧ್ಯಕ್ಷ ಲಾಲಪ್ಪ.ಡಿ ಇದ್ದರು.

{ದಿನೇಶ ಗುಂಡುರಾವ್, } ಸಚಿವ

ಬೆಂಗಳೂರಿನಲ್ಲಿ ಮಳೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಮೂರು ನಾಲ್ಕು ಕಡೆ ಸಣ್ಣ ಪುಟ್ಟ ಸಮಸ್ಯೆಯಾಗಿದೆ. ಹೆಚ್ಚಿನ ಅನುದಾನ ತಂದು ಬೆಂಗಳೂರು ಸಮಸ್ಯೆಗೆ ಶಾಶ್ವತ ಪರಿಹಾರ ನೀಡುತ್ತೇವೆ ಎಂದು ಭರವಸೆ ನೀಡಿದ್ದಾರೆ. ಆರೋಗ್ಯ ಇಲಾಖೆಯಿಂದ ಉಚಿತವಾಗಿ ಮನೆಮನೆಗೆ ಮಾತ್ರೆ, ಚಿಕಿತ್ಸೆ ನೀಡುವ ಯೋಜನೆ ಆರಂಭವಾಗಲಿದೆ.

ಆಸ್ಪತ್ರೆ ಕಟ್ಟಡಕ್ಕೆ ಶಂಕುಸ್ಥಾಪನೆ ಶೀಘ್ರ | ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

ಹೊಸ ಮೂರು ತಾಲೂಕಿಗೆ 100 ಹಾಸಿಗೆ ಆಸ್ಪತ್ರೆ: ಸಚಿವ

ಕುಕನೂರು: ಕೊಪ್ಪಳ ಜಿಲ್ಲೆಯ ಹೊಸ 3 ತಾಲೂಕು ಕೇಂದ್ರಕ್ಕೆ 100 ಹಾಸಿಗೆಯ ಆಸ್ಪತ್ರೆ ಮಂಜೂರು ಮಾಡಲಾಗಿದೆ. ಶೀಘ್ರದಲ್ಲೇ ಆಸ್ಪತ್ರೆ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸುತ್ತೇವೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ತಾಲೂಕಿನ ಬಳಗೇರಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾರಂಭೋತ್ಸವ ಹಾಗೂ ಬಳಗೇರಿ ಹಳ್ಳಕ್ಕೆ ಬ್ರಿಜ್ ಕಂ ಬ್ಯಾರೇಜ್ ಕಾಮಗಾರಿಗೆ ಶಂಕುಸ್ಥಾಪನೆ ಕಾರ್ಯಕ್ರಮದ ಉದ್ಘಾಟಿಸಿ ಬುಧವಾರ ಮಾತನಾಡಿದರು.

ಜಿಲ್ಲೆಯ ಹೊಸ ಕಂದಾಯ ತಾಲೂಕು ಕೇಂದ್ರಗಳಾದ ಕುಕನೂರ, ಕಾರಟಗಿ ಹಾಗೂ ಕನಕಗಿರಿಗೆ ಆಸ್ಪತ್ರೆ ಮಂಜೂರು ಮಾಡಲಾಗಿದೆ. ಕುಕನೂರು ಪಟ್ಟಣದ 30 ಹಾಸಿಗೆ ಆಸ್ಪತ್ರೆಯನ್ನು 100 ಹಾಸಿಗೆ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಲಾಗುವುದು. ಶಿಕ್ಷಣ ಮತ್ತು ಆರೋಗ್ಯ ನಮ್ಮ ಸರಕಾರದ ಆದ್ಯತೆ. ಇದು ಜನರಿಗೂ ಅಗತ್ಯ. ಇಂಥ ಎರಡೂ ಕಾರ್ಯಕ್ರಮಕ್ಕೆ ಒಂದೇ ವೇದಿಕೆಯಲ್ಲಿ ಚಾಲನೆ ನೀಡುವ ಭಾಗ್ಯ ಇಂದು ಬಳಗೇರಿ ಗ್ರಾಮದಲ್ಲಿ ನನಗೆ ಸಿಕ್ಕಿದೆ. ಇಂಥ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದು ನನಗೆ ಸಂತೋಷ ತಂದಿದೆ ಎಂದರು.

ಯಲಬುರ್ಗಾ ಹಾಗೂ ಕುಕನೂರು ತಾಲೂಕಿನ 3 ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಾಲನೆ ನೀಡಿದ್ದೇನೆ. ಈ ಆರೋಗ್ಯ ಕೇಂದ್ರಕ್ಕೆ ವೈದ್ಯರು, ಸಿಬ್ಬಂದಿಗಳನ್ನು ಕೂಡಲೇ ನೇಮಿಸಲಾಗುವುದು. ಹೊಸ ಆಸ್ಪತ್ರೆಯಲ್ಲಿ ಇಂದಿನಿಂದಲೇ ರೋಗಿಗಳಿಗೆ ಚಿಕಿತ್ಸೆ ದೊರೆಯಲಿದೆ. ಆಸ್ಪತ್ರೆಯ ಶಾಶ್ವತ

ಬಳಗೇರಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಆರೋಗ್ಯ ಸಚಿವ ದಿನೇಶ ಗುಂಡೂರಾವ ಬುಧವಾರ ಉದ್ಘಾಟಿಸಿದರು.

> **ನಾನು ಅಧಿಕಾರದಲ್ಲಿದ್ದಾಗ ಎಲ್ಲ ಕೆಲಸಗಳನ್ನು ಮಾಡಿಸಿಕೊಳ್ಳುತ್ತೇನೆ. ನಮ್ಮ ಕ್ಷೇತ್ರಕ್ಕೆ ಅನುದಾನದ ಕೊರತೆ ಇಲ್ಲ. ಈಗಾಗಲೇ ತಾಲೂಕಿನಲ್ಲಿ ಸಾಕಷ್ಟು ಕಾಮಗಾರಿ ಪ್ರಗತಿಯಲ್ಲಿವೆ. ಕುಕನೂರು ಪಟ್ಟಣದ 100 ಹಾಸಿಗೆ ಆಸ್ಪತ್ರೆಗೆ 10 ಎಕರೆ ಭೂಮಿ ನೋಡಲಾಗಿದೆ. ಹಣ ಬಿಡುಗಡೆಯಾಗಿದೆ.**
> – ಬಸವರಾಜ ರಾಯರೆಡ್ಡಿ, ಶಾಸಕ

ಕಟ್ಟಡಕ್ಕೆ ಈಗಾಗಲೇ ಅನುದಾನ ಬಿಡುಗಡೆಯಾಗಿದೆ. ಸದ್ಯದಲ್ಲೇ ಕಟ್ಟಡ ಕಾಮಗಾರಿ ಆರಂಭವಾಗಲಿದೆ ಎಂದರು.

ಸಿಎಂ ಆರ್ಥಿಕ ಸಲಹೆಗಾರ ಹಾಗೂ ಶಾಸಕ ಬಸವರಾಜ ರಾಯರೆಡ್ಡಿ ಮಾತನಾಡಿ, ನಮ್ಮ ಭಾಗದ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯಬೇಕು. ವಸತಿ ಶಾಲೆಯಲ್ಲಿ ನಮ್ಮ ಭಾಗದ ಮಕ್ಕಳಿಗೆ ಸಾಕಷ್ಟು ಅವಕಾಶ ಸಿಗಬೇಕು. ಯಲಬುರ್ಗಾ ಮತ್ತು ಕುಕನೂರು ತಾಲೂಕಿನಲ್ಲಿ ಈಗಾಗಲೇ 16 ವಸತಿ ಶಾಲೆ ಪ್ರಾರಂಭವಾಗಿವೆ ಶಿಕ್ಷಣಕ್ಕೆ ಯಾವುದೇ ಕೊರತೆಯಾಗಬಾರದು.

ನಾನು ರಾಜಕೀಯಕ್ಕೆ ಬಂದಿರುವುದು ಜನ ಸೇವೆಗೆ ಜನರೇ ನನ್ನ ಪಾಲಿನ ದೇವರು ಎಂದರು. ಡಿಎಚ್ಒ ಡಾ.ಲಿಂಗರಾಜ, ಹನುಮಂತ ಗೌಡ ಚಂಡೂರ, ಕಾಸಿಂಸಾಬ್ ತಳಕಲ್, ಸತ್ಯನಾರಾಯಣಪ್ಪ ಹರಪನಹಳ್ಳಿ, ಮಂಜುನಾಥ ಕಡೆಮನಿ, ಈರಪ್ಪ ಕುಟುಗುಂಟಿ, ಯಂಕಣ್ಣ ಯರಾಶಿ ಸೇರಿ ವಿವಿಧ ಇಲಾಖೆ ಅಧಿಕಾರಿಗಳು, ತಾಲೂಕಿನ ಮುಖಂಡರು ಇದ್ದರು.

ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ: ಶಾಸಕ

ತೋರಣದಿನ್ನಿ ಗ್ರಾಮದಿಂದ ಕ್ರಾಸ್ ಡಾಂಬರೀಕರಣ ಕಾಮಗಾರಿಗೆ ಶಾಸಕ ಆರ್. ಬಸನಗೌಡ ತುರವಿಹಾಳ ಅವರು ಭೂಮಿ ಪೂಜೆ ನೆರವೇರಿಸಿದರು.

ಮಸ್ಕಿ: ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಶಾಸಕ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ನಿಗಮ ಮಂಡಳಿ ಅಧ್ಯಕ್ಷ ಆರ್.ಬಸನಗೌಡ ತುರವಿಹಾಳ ಅವರು ಹೇಳಿದರು.

ತಾಲೂಕಿನ ತೋರಣದಿನ್ನಿ ಹಾಗೂ ಮೈಬೂಬನಗರ ಕ್ಯಾಂಪ್‌ನಲ್ಲಿ ರಸ್ತೆ ಡಾಂಬರೀಕರಣ ಹಾಗೂ ಸೇತುವೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ತಾಲೂಕಿನ ಅನೇಕ ಗ್ರಾಮಗಳ ರಸ್ತೆಗಳು ಕಿತ್ತಿ ಹೋಗಿದ್ದು, ರಸ್ತೆ ತುಂಬೆಲ್ಲ ಗುಂಡಿಗಳು ಬಿದ್ದು, ಜನರು ತೊಂದರೆ ಅನುಭವಿಸುತ್ತಿದ್ದನ್ನು ಪರಿಗಣಿಸಿ ಸರಕಾರದಿಂದ ಕೋಟ್ಯಂತರ ಅನುದಾನ ತಂದು ರಸ್ತೆಗಳ ಅಭಿವೃದ್ಧಿಪಡಿಸುತ್ತೇನೆ ಜನರು ಸಹಕಾರ ನೀಡಬೇಕು. ಮಳೆಗಾಲದಲ್ಲಿ ಪ್ರವಾಹ ನೀರಿನ ರಭಸ ಹೆಚ್ಚಾದರೆ ಮೈಬೂಬನಗರ ಕ್ಯಾಂಪಿನ ಭಾಗದ ಜನರು ರಸ್ತೆ ದಾಟಲು ತೀವ್ರ ತೊಂದರೆ ಅನುಭವಿಸಿದ್ದನ್ನು ಪರಿಗಣಿಸಿ

> **ಇನ್ನೂ ತೋರಣದಿನ್ನಿ ಗ್ರಾಮದ ಆಸ್ಪತ್ರೆಯಿಂದ ತೋರಣದಿನ್ನಿ ಕ್ರಾಸ್‌ದವರೆಗೆ 2ಕೋಟಿ ರು. ಅನುದಾನದಲ್ಲಿ ರಸ್ತೆಗೆ ಡಾಂಬರೀಕರಣ ನಿರ್ಮಿಸಲಾಗುವುದು. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಕೈಗೊಂಡು ತ್ವರಿತಗತಿಯಲ್ಲಿ ಕಾಮಗಾರಿ ಮುಗಿಸಿ ಜನರಿಗೆ ಅನುಕೂಲ ಕಲ್ಪಿಸಬೇಕೆಂದು.**
> –ಆರ್.ಬಸನಗೌಡ ತುರವಿಹಾಳ, ಶಾಸಕ

ಲೋಕೋಪಯೋಗಿ ಇಲಾಖೆಯಿಂದ 90 ಲಕ್ಷ ಸೇತುವೆ ನಿರ್ಮಿಸಲು ಭೂಮಿ ಪೂಜೆ ನೆರವೇರಿಸಲಾಗಿದೆ. ಈ ಸಂದರ್ಭದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಪಾಟೀಲ ಯದ್ದಲದಿನ್ನಿ, ನಿರುಪಾದೆಪ್ಪ ವಕೀಲರು, ಗಣೇಶ ತಾತ, ಸೂರ್ಯ ಪ್ರಕಾಶ, ಶರಣಪ್ಪಗೌಡ, ಗ್ರಾಪಂ ಅಧ್ಯಕ್ಷ ಉಮಾಪತಿ, ರಾಮಣ್ಣ ಕಾಸಮಯ್ಯ, ಯಂಕಪ್ಪ ಜವಳಗೇರ್, ಗಂಗಪ್ಪ ಬಾಲಸ್ವಾಮಿ ಜಿನ್ನಾಪೂರ ಇದ್ದರು.

ಕೆಕೆಆರ್‌ಡಿಬಿ ಕಾಮಗಾರಿ ಪೂರ್ಣಗೊಳಿಸಿ: ಅಜಯ್

ಕೊಪ್ಪಳ: ಕೆಕೆಆರ್ ಡಿಬಿ ಅನುದಾನದಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಯಾವುದೇ ನೆಪ ಹೇಳದೆ ಕಾಲಮಿತಿಯಲ್ಲಿ ಮುಗಿಸಬೇಕು ಎಂದು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ. ಅಜಯ್ ಧರ್ಮಸಿಂಗ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕೊಪ್ಪಳ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಲಬುರಗಿಯಲ್ಲಿ ಸೆ. 17 ರಂದು ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ 24 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಂಜೂರಾತಿ ನೀಡಲಾಗಿದೆ. ಇದರಲ್ಲಿ 18ಕ್ಕೆ ಟೆಂಡರ್ ಆಗಿವೆ. ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣಕ್ಕೆ ಅಗತ್ಯ ಕ್ರಮ ವಹಿಸಬೇಕು. ಪ್ರತಿವರ್ಷ ನಿಗದಿಪಡಿಸುವ ಕೆಕೆಆರ್‌ಡಿಬಿ ಅನುದಾನ ಬಳಕೆ ಆಗಲ್ಲ ಎಂಬ ಆರೋಪ ಇದೆ.

ಜಿಲ್ಲಾಧಿಕಾರಿಳು ಹಾಗೂ ಜಿಪಂ ಸಿಇಒ, ನಿರಂತರವಾಗಿ ಪ್ರಗತಿ ಪರಿಶೀಲನೆ ಸಭೆ ನಡೆಸಿ ಕಾಮಗಾರಿ ಅನುಷ್ಠಾನಕ್ಕೆ ಒತ್ತು ಕೊಡಬೇಕು. ಕೆಲಸ ಮಾಡದ ಅಧಿಕಾರಿಗಳಿಗೆ ನೋಟಿಸ್ ನೀಡಿ ಸೂಚಿಸಿದರು.

ಮಂಡಳಿಯ ಕಾರ್ಯದರ್ಶಿ ಎಂ.ಸುಂದರೇಶ ಬಾಬು ಮಾತನಾಡಿ, 2023-24ನೇ ಸಾಲಿನ ಕಾಮಗಾರಿ ಈಗಲೇ ಆರಂಭಿಸಬೇಕು. 2023-24ನೇ ಸಾಲಿನಲ್ಲಿ ನಡೆಯುತ್ತಿರುವ ಕಾಮಗಾರಿ 2024-25ನೇ ಸಾಲಿನ ನವೆಂಬರಗೆ ಶೇ.50ರಷ್ಟು ಮತ್ತು ಡಿಸೆಂಬರನಲ್ಲಿ ಶೇ.50ರಷ್ಟು ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು.

ಕೊಪ್ಪಳದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಸಭೆ ನಡೆಯಿತು.

> **ಬಹು ದಿನದಿಂದ ಪೂರ್ಣಗೊಳ್ಳದ ಜಿಲ್ಲಾ ರಂಗಮಂದಿರವನ್ನು 15 ದಿನಗಳ ಒಳಗೆ ಪೂರ್ಣಗೊಳಿಸಬೇಕು. ಅರೆಬರೆ ಆಗಿರುವ ಬೇರೆ ಬೇರೆ ಕಾಮಗಾರಿ ಕೂಡ ಕಾಲಮಿತಿಯಲ್ಲಿ ಮುಗಿಸಬೇಕು. ಕೆಕೆಆರ್ ಡಿಬಿ ಅನುದಾನದಲ್ಲಿ ನಡೆಯುತ್ತಿರುವ ರಸ್ತೆ, ಬಿಲ್ಡಿಂಗ್, ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿದಂತೆ ಬೇರೆ ಬೇರೆ ಕಾಮಗಾರಿ ಪೂರ್ಣಗೊಳ್ಳದೇ ಬಾಕಿ ಉಳಿದಿರುವುದಕ್ಕೆ ನೆಪ ಹೇಳಬಾರದು.**
> –ಡಾ.ಅಜಯ್ ಧರ್ಮಸಿಂಗ್, ಅಧ್ಯಕ್ಷ

ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್, ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಶಾಸಕ ರಾಘವೇಂದ್ರ ಹಿಟ್ನಾಳ, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಸಹಾಯಕ ಆಯುಕ್ತರಾದ ಕ್ಯಾಪ್ಟನ ಮಹೇಶ ಮಾಲಗಿತ್ತಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಅನುಷ್ಠಾನಾಧಿಕಾರಿಗಳು ಉಪಸ್ಥಿತರಿದ್ದರು.

ರಾಜ್ಯೋತ್ಸವ ಆಚರಣೆಗೆ ಸಿದ್ಧತೆ ಕೈಗೊಳ್ಳಿ

ರಾಯಚೂರು: ಕರ್ನಾಟಕದ ನಾಡು-ನುಡಿ, ಸಂಸ್ಕೃತಿ ಬಿಂಬಿಸುವ ನಿಟ್ಟಿನಲ್ಲಿ ಹಾಗೂ ಕರ್ನಾಟಕ ಸಂಭ್ರಮ 50ರ ಅಂಗವಾಗಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಾಗೂ ವೈಭವಯುತವಾಗಿ ಮತ್ತು ಅರ್ಥಪೂರ್ಣವಾಗಿ ಜಿಲ್ಲಾಡಳಿತ ವತಿಯಿಂದ ಆಚರಿಸಲು ಪೂರ್ವಸಿದ್ಧತೆ ಕೈಗೊಳ್ಳಬೇಕೆಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆಯ ಅಂಗವಾಗಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬೆಳಿಗ್ಗೆ 7.30ಗಂಟೆಗೆ ನಗರದ ಕರ್ನಾಟಕ ಸಂಘದಲ್ಲಿ ಭುವನೇಶ್ವರಿ ಮಾತೆಯ ಪೂಜೆ ಕಾರ್ಯಾಕ್ರಮ ನಂತರ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣಕ್ಕೆ ಸಾರ್ವಜನಿಕರು ಬಂದು ಸೇರಲು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮಕೈಗೊಳ್ಳಬೇಕು. ಬೆಳಿಗ್ಗೆ 9ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಪಾಲ್ಗೊಳ್ಳಬೇಕು.

ಧ್ವಜಾರೋಹಣ ಕಾರ್ಯಕ್ರಮದ ಸಿದ್ಧತೆ, ಮೆರವಣಿಗೆ, ವೇದಿಕೆ ಅಲಂಕಾರ ಸೇರಿದಂತೆ ಕಾರ್ಯಕ್ರಮದಲ್ಲಿ ಯಾವುದೇ ಲೋಪವಾಗದಂತೆ ಎಲ್ಲವನ್ನು ಮುಂಜಾಗ್ರತವಾಗಿ ಸಿದ್ಧತೆ ಕ್ರಮಕೈಗೊಳ್ಳಲು ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳನ್ನು ಒಳಗೊಂಡ 09 ಸಮಿತಿ ರಚಿಸಲಾಗಿದೆ ಎಂದರು.

ಕರ್ನಾಟಕ ರಾಜ್ಯೋತ್ಸವ ಆಚರಣೆಯ ಅಂಗವಾಗಿ ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ ಮಾತನಾಡಿದರು.

> **ಅಲ್ಲದೆ ಜಿಲ್ಲಾ ಕ್ರೀಡಾಂಗಣದಲ್ಲಿ ಸಮಾರಂಭಕ್ಕೆ ಅಗತ್ಯವಾದ ಆಸನ ವ್ಯವಸ್ಥೆ, ಧ್ವನಿವರ್ಧಕ ವ್ಯವಸ್ಥೆ, ಧ್ವಜಾರೋಹಣ ವ್ಯವಸ್ಥೆ, ಪಥ ಸಂಚಲನ ಹಾಗೂ ವಿದ್ಯಾರ್ಥಿಗಳಿಂದ ನಾಡು-ನುಡಿ ಬಿಂಬಿಸುವ ಸಾಮೂಹಿಕ ನೃತ್ಯ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲು ಸೂಚಿಸಿದರು.**
> –ಶಿವಾನಂದ, ಅಪರ ಜಿಲ್ಲಾಧಿಕಾರಿ

ಈ ವೇಳೆ ವಿವಿಧ ಕನ್ನಡ ಪರ ಸಂಘಟನೆಗಳ ಮುಖಂಡರು ಮಾತನಾಡಿ, ಕನ್ನಡ ಪರ ಸೇವೆ ಸಲ್ಲಿಸಿದವರಿಗೆ ಜಿಲ್ಲಾ ಮಟ್ಟದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಗೌರವಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಗಳಿಗೆ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಡಿ.ವೈ.ಎಸ್ಪಿ ಪ್ರಮಾನಂದಾ ಘೋಡಿಗೆ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿರೇಶ್ ಇದ್ದರು.

ಚನ್ನಮ್ಮ ಶೌರ್ಯ, ಸಾಹಸ ಮಾದರಿ: ವೆಂಕಟೇಶ

ಕಾರಟಗಿ: ಕಿತ್ತೂರು ರಾಣಿ ಚನ್ನಮ್ಮನ ಶೌರ್ಯ ಮತ್ತು ದಿಟ್ಟತನ ಇಂದಿನ ಸಮಾಜದಲ್ಲಿ ಮಹಿಳೆಯರಿಗೆ, ಮಕ್ಕಳಿಗೆ ಮಾದರಿಯಾಗಬೇಕು ಎಂದು ಕಾಂಗ್ರೆಸ್ ಮುಖಂಡ ವೆಂಕಟೇಶ ತಂಗಡಗಿ ಹೇಳಿದರು.

ಪಟ್ಟಣದ ಆರ್.ಜಿ ರಸ್ತೆಯಲ್ಲಿನ ಬಸವೇಶ್ವರನಗರ ಬಳಿಯ (9ನೇ ವಾರ್ಡನ) ಕಿತ್ತೂರು ಚೆನ್ನಮ್ಮ ವೃತ್ತದಲ್ಲಿ ಹಮ್ಮಿಕೊಂಡಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯಲ್ಲಿ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ಸಮಾಜದ ಒಳಿತಿಗಾಗಿ ಹೋರಾಡಿದ ಧೀರಮಹಿಳೆ ರಾಣಿ ಚೆನ್ನಮ್ಮನ ತ್ಯಾಗ ಬಲಿದಾನವನ್ನು ಶ್ಲಾಘನೆ ಮಾಡುವ ಮೂಲಕ ಮಕ್ಕಳಲ್ಲಿ ಸಾಧನೆಯ ಛಲ ತುಂಬಬೇಕು ಎಂದರು. ಬಿಜೆಪಿ ಮುಖಂಡ ವೀರೇಶ ಸಾಲೋಣಿ ಮಾತನಾಡಿ, ಕಿತ್ತೂರು ರಾಣಿ ಚೆನ್ನಮ್ಮ ಎಂದರೆ ಕಿರಿಯರಿಂದ ಹಿರಿಯರಿಗೆ ಸಂಚಲನ ಮೂಡಿಸುವಂಥ ಅಪ್ರತಿಮ ವೀರ ಮಹಿಳೆ. ಬ್ರಿಟಿಷರೇ ದೇಶ ಬಿಟ್ಟು ತೊಲಗಿ ಎಂದು ಗಟ್ಟಿ ಧ್ವನಿಯಲ್ಲಿ ಹೇಳಿದ್ದು ರಾಣಿ ಚೆನ್ನಮ್ಮ. ಬ್ರಿಟಿಷ್ ಕಲೆಕ್ಟರನ್ನೇ ಹತ್ಯೆ ಮಾಡುವ ಮೂಲಕ ಆಂಗ್ಲರನ್ನು ನಡುಗಿಸಿದ್ದ ವೀರ ರಾಣಿ ಚೆನ್ನಮ್ಮ ಇತಿಹಾಸ ರೋಚಕವಾದುದು ಎಂದರು. ಕಾಂಗ್ರೆಸ್ ಮುಖಂಡ ಶಿವರೆಡ್ಡಿ ನಾಯಕ ಮಾತನಾಡಿ, ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಸೆಣಸಾಡಿದ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ. ಕಿತ್ತೂರಿನ ದೇಸಾಯಿಗಳಲ್ಲಿ ಪ್ರಸಿದ್ಧನಾದ ಮಲ್ಲಸರ್ಜನ ಹೆಂಡತಿಯಾಗಿದ್ದ ಚನ್ನಮ್ಮ, ತನ್ನ ಪುಟ್ಟ ರಾಜ್ಯದ ರಕ್ಷಣೆಗಾಗಿ ಆಂಗ್ಲರ ವಿರುದ್ಧ ಹೋರಾಡಿದರು. ಯುದ್ಧದಲ್ಲಿ ಅವರು ಸೈನ್ಯ ಮುನ್ನಡೆಸಿದ ರೀತಿ, ಧೈರ್ಯ, ಸಾಹಸ, ಕೆಚ್ಚು ಇಂದಿಗೂ ಅಜರಾಮರ ಎಂದರು.

ಭವ್ಯ ಮೆರವಣಿಗೆ

ಇದಕ್ಕೂ ಮುಂಚೆ ಬಸವೇಶ್ವರನಗರದ ಬಸವಣ್ಣ ದೇವಸ್ಥಾನದಿಂದ ಪಂಚಮಸಾಲಿ ಸಮಾಜ ಬಾಂಧವರ ನೇತೃತ್ವದಲ್ಲಿ ವೀರರಾಣಿ ಕಿತ್ತೂರು ಚನ್ನಮ್ಮಳ ಭಾವಚಿತ್ರದ ಭವ್ಯ ಮೆರವಣಿಗೆ ಆರ್.ಜಿ ರಸ್ತೆಯ ಕಿತ್ತೂರು ರಾಣಿ ಚನ್ನಮ್ಮಳ ನಾಮಫಲಕದವರೆಗೆ ನಡೆಯಿತು. ಈ ಸಂದರ್ಭದಲ್ಲಿ ಕುಂಭ-ಕಳಸ ಹೊತ್ತ ಮಹಿಳೆಯರು ಮೆರವಣಿಗೆಗೆ ಕಳೆಗಟ್ಟಿದರು. ಡೊಳ್ಳು ಸದ್ದಿಗೆ ಯುವಕರು ಹೆಜ್ಜೆ ಹಾಕಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಜಿ.ಪಂ ಮಾಜಿ ಅಧ್ಯಕ್ಷ ಅಮರೇಶ ಕುಳಗಿ, ಪಂಚಮಸಾಲಿ ಸಮಾಜದ ಪ್ರಮುಖರಾದ ಚನ್ನಬಸಪ್ಪ ಸುಂಕದ್, ಗುಂಡಪ್ಪ ಕುಳಗಿ, ಉದ್ಯಮಿಗಳಾದ ಕೆ.ನಾಗಪ್ಪ ಎಲ್ವಿಟಿ ಸಣ್ಣ ವೀರೇಶಪ್ಪ ಚಿನಿವಾಲ, ವಿಜಯಲಕ್ಷ್ಮೀ ಮೇಲಿನಮನಿ, ಬಸವರಾಜ ಕೂಡ್ಲೂರು, ಗುರುಸಿದ್ದಪ್ಪ ಯರಕಲ್, ಬಸವರಾಜ ಬೇವಿನಕಟ್ಟಿ, ಪುರಸಭೆ ಮುಖ್ಯಾಧಿಕಾರಿ ಸುರೇಶ, ಸದಸ್ಯ ಈಶಪ್ಪ ಇಟ್ಟಂಗಿ, ಕೆ.ಎಸ್ ಸಂಗನಗೌಡ, ದೊಡ್ಡ ಬಸವರಾಜ ಬೂದಿ, ಹಿರೇಬಸಪ್ಪ ಸಜ್ಜನ್, ಅಯ್ಯಪ್ಪ ಉಪ್ಪಾರ, ಸೋಮನಾಥ ದೊಡ್ಡಮನಿ, ಶರಣಯ್ಯಸ್ವಾಮಿ ಯರಡೋಣಿ ಇದ್ದರು.

ಕಿತ್ತೂರು ಚೆನ್ನಮ್ಮ ವೃತ್ತದಲ್ಲಿ ಹಮ್ಮಿಕೊಂಡಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯಲ್ಲಿ ಪುಷ್ಪನಮನ ಸಲ್ಲಿಸಿ ಕಾಂಗ್ರೆಸ್ ಮುಖಂಡ ವೆಂಕಟೇಶ ತಂಗಡಗಿ ಮಾತನಾಡಿದರು.

ಪರಿಸರ ಸಮತೋಲನಕ್ಕೆ ವನ್ಯಜೀವಿ ಪಾತ್ರ

ಕೊಪ್ಪಳ: ಪರಿಸರ ಸಮತೋಲನಕ್ಕೆ ವನ್ಯಜೀವಿಗಳ ಪಾತ್ರ ಪ್ರಮುಖವಾಗಿದೆ ಎಂದು ಸಂಸದ ಕೆ.ರಾಜಶೇಖರ ಹಿಟ್ನಾಳ ಹೇಳಿದರು.

ನಗರದ ಶ್ರೀಗವಿಮಠದ ಆವರಣದಲ್ಲಿ ಆಯೋಜಿಸಿದ್ದ 70ನೇ ವನ್ಯಜೀವಿ ಸಪ್ತಾಹ-2024ರ ಅಂಗವಾಗಿ ವನ್ಯಜೀವಿ ಸಂರಕ್ಷಣೆಗಾಗಿ ನಡಿಗೆ ಕಾರ್ಯಕ್ರಮ ಉದ್ಘಾಟಿಸಿ ಬುಧವಾರ ಮಾತನಾಡಿದರು.

ವನ್ಯಜೀವಿ ದೇವರ ಅದ್ಭುತ ಸೃಷ್ಟಿ. ದೇವರು ವಿಶ್ವವನ್ನು ಮನುಷ್ಯರಿಗಾಗಿ ಮಾತ್ರ ಸೃಷ್ಟಿಸಿಲ್ಲ. ಮನುಕುಲಕ್ಕೆ ಪ್ರಕೃತಿಯ ಕೊಡುಗೆಯಾದ ವನ್ಯಜೀವಿಗಳು ಭೂಮಿಯ ಪರಿಸರ ಸಮತೋಲನ ಕಾಪಾಡುವಲ್ಲಿ ನಿರಂತರವಾಗಿ ಸಹಾಯ ಮಾಡುತ್ತಿವೆ. ಎಲ್ಲ ಜೀವಿಗಳ ನಡುವೆ ಆರೋಗ್ಯಕರ ಪರಿಸರ ಸಮತೋಲನ ಕಾಪಾಡಿಕೊಳ್ಳಲು ವನ್ಯಜೀವಿ ಸಂರಕ್ಷಣೆ ಮುಖ್ಯವಾಗಿದೆ. ಈ ಭೂಮಿಯಲ್ಲಿರುವ ಪ್ರತಿಯೊಂದು ಜೀವಿಯು ಆಹಾರ ಸರಪಳಿಯಲ್ಲಿ ವಿಶಿಷ್ಟ ಸ್ಥಾನ ಹೊಂದಿದೆ ಮತ್ತು ಅವು ತಮ್ಮದೇ ಆದ ವಿಶೇಷ ರೀತಿಯಲ್ಲಿ ಪರಿಸರ ವ್ಯವಸ್ಥೆಗೆ ಕೊಡುಗೆ ನೀಡುತ್ತವೆ. ಈ ಹಿನ್ನೆಲೆಯಲ್ಲಿ ವನ್ಯಜೀವಿಗಳ ರಕ್ಷಣೆಯಾಗಬೇಕು ಎಂದು ಸಲಹೆ ನೀಡಿದರು.

ಜಿಲ್ಲಾಧಿಕಾರಿ ನಲಿನ್ ಅತುಲ್ ಮಾತನಾಡಿ, ಜಿಲ್ಲೆಯಲ್ಲಿ ಕರಡಿದಾಮ ಹಾಗೂ ತೋಳದಾಮ ಇವೆ. ಅಲ್ಲದೇ ವಿವಿಧ ಬಗೆಯ ಪಕ್ಷಿಗಳನ್ನು ನಾವು ಇಲ್ಲಿ ಕಾಣಬಹುದು. ಇವುಗಳ ಬಗ್ಗೆ ಜನರಿಗೆ ತಿಳಿಸಬೇಕು. ವನ್ಯಜೀವಿಗಳ ಬಗ್ಗೆ ಅರಿವು ಮೂಡಿಸಲು ಅರಣ್ಯ ಇಲಾಖೆಯು ಈ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು.

ಕೊಪ್ಪಳ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾವ್ಯ ಚತುರ್ವೇದಿ ಮಾತನಾಡಿದರು. ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೇ, ಎಸ್ಪಿ ಡಾ.ರಾಮ್.ಎಲ್.ಅರಸಿದ್ದಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ಎಚ್.ಮುಲ್ಲಾ, ವಲಯ ಅರಣ್ಯಾಧಿಕಾರಿ ಸ್ವಾತಿ, ಸುಭಾಸಚಂದ್ರ ನಾಯಕ, ಶಿವರಾಜ ಮೇಟಿ, ಸಾಮಾಜಿ ವಲಯ ಅರಣ್ಯ ಅಧಿಕಾರಿ ಗುರನಗೌಡ ಪಾಟೀಲ, ಸತೀಶ, ರಾಘವೇಂದ್ರ ಬಳ್ಳಾರಿ ಇದ್ದರು.

ಕೊಪ್ಪಳದ ನಡೆದ ವನ್ಯಜೀವಿ ಸಂರಕ್ಷಣೆಗಾಗಿ ನಡಿಗೆ ಕಾರ್ಯಕ್ರಮದಲ್ಲಿ ಸ್ತಬ್ಧ ಚಿತ್ರಗಳು ಗಮನ ಸೆಳೆದವು.

ಜಾಗೃತಿ ನಡಿಗೆ, ಸೆಲ್ಫಿ ಪಾಯಿಂಟ್

ವನ್ಯಜೀವಿ ಸಂರಕ್ಷಣೆಗೆ ಜಾಗೃತಿ ನಡಿಗೆ ಗವಿಮಠದಿಂದ ಬಸವೇಶ್ವರ ವೃತ್ತ, ಅಶೋಕ ಸರ್ಕಲ್, ಬಸ್‌ನಿಲ್ದಾಣದ ಮಾರ್ಗವಾಗಿ ಜಿಲ್ಲಾ ಕ್ರೀಡಾಂಗಣದವರೆಗೆ ನಡೆಯಿತು. ವನ್ಯಜೀವಿ ಸಂರಕ್ಷಣೆಗಾಗಿ ಅರಣ್ಯ ಇಲಾಖೆಯಿಂದ ಹಮ್ಮಿಕೊಂಡ ಈ ವಿನೂತನ ಕಾರ್ಯಕ್ರಮದಲ್ಲಿ ವನ್ಯಜೀವಿಗಳನ್ನೊಳಗೊಂಡ ಸ್ತಬ್ಧಚಿತ್ರ ಆಕರ್ಷಣೀಯವಾಗಿತ್ತು. ಸಾರ್ವಜನಿಕರ ಗಮನ ಸೆಳೆಯಿತು. ಡೊಳ್ಳು ಕುಣಿತ ತಂಡ ನ ಸೆಳೆದವು. ಕಾರ್ಯಕ್ರಮದಲ್ಲಿ ವನ್ಯಜೀವಿ ಸಂರಕ್ಷಣೆಯ ಬಗ್ಗೆ ಜಾಗೃತಿ ಸಂದೇಶವಿರುವ ಸೆಲ್ಫಿ ಪಾಯಿಂಟ್ ಇಡಲಾಗಿತ್ತು.

> **ವನ್ಯಜೀವಿಗಳ ನಾಶ, ಅರಣ್ಯ ಪ್ರದೇಶ ಒತ್ತುವರಿ, ವನ್ಯಜೀವಿ- ಮಾನವ ಸಂಘರ್ಷ ಪ್ರಕರಣ ಹೆಚ್ಚುತ್ತಿವೆ. ಇದರಿಂದ ಅರಣ್ಯ ಇಲಾಖೆ ಅರಣ್ಯ ಸಂರಕ್ಷಣೆ ಜೊತೆಗೆ ವನ್ಯಜೀವಿಗಳ ಉಳಿವಿಗಾಗಿ ಶ್ರಮಿಸುತ್ತಿದೆ. ಸಾರ್ವಜನಿಕರಿಗೆ ಅರಿವು ಮೂಡಿಸಲು ವನ್ಯಜೀವಿ ಸಪ್ತಾಹ ಕಾರ್ಯಕ್ರಮ ಆಯೋಜಿಸಲಾಗಿದೆ.**
> – ಕಾವ್ಯ ಚತುರ್ವೇದಿ, ಡಿಎಫ್ಒ

ರಕ್ತದಾನಿಗಳಿಗೆ ಸಂಘ ಸಂಸ್ಥೆ ಗೌರವ ಸಮರ್ಪಣೆ

ರಾಯಚೂರು : ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ತಡೆ ಮತ್ತು ನಿಯಂತ್ರಣ ಘಟಕ, ಭಾರತೀಯ ವೈದ್ಯಕೀಯ ಸಂಘ, ರಿಮ್ಸ್ ಆಸ್ಪತ್ರೆ, ನವೋದಯ ಆಸ್ಪತ್ರೆ, ಲಯನ್ಸ್ ಕಬ್ಸ್, ರೋಟರಿ ಕ್ಲಬ್, ಎಸ್.ಕೆ. ಪ್ಯಾರಾಮೆಡಿಕಲ್ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಂಯು ಕ್ತಾಶ್ರಯದಲ್ಲಿ ವಿಶ್ವ ಸ್ವಯಂ ಪ್ರೇರಿತ ರಕ್ತದಾನಿಗಳ ದಿನಾಚರಣೆಯ ಅಂಗವಾಗಿ ಹೆಚ್ಚು ಬಾರಿ ರಕ್ತದಾನ ಮಾಡಿದ ಬಸವಸರಾಜ ರಾಂಪುರ, ಕಿರಣ ರಾಯಚೂರು, ಬಾಬು ಇನಾಮದಾರ ಹಟ್ಟಿ, ಗಾಯತ್ರಿ ತಿವಾರಿ ರಿಮ್ಸ್ ರಾಯಚೂರು ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ವಿಜಯ ಶಂಕರ, ಜಿಲ್ಲಾ ಏಡ್ಸ ತಡೆ ಮತ್ತು ನಿಯಂತ್ರಣಾಧಿಕಾರಿ ಡಾ. ಎಮ್.ಡಿ.ಶಾಕೀರ್, ರಿಮ್ಸ್ ಕಾಲೇಜು ಪ್ರಾಂಶುಪಾಲರಾದ ಬಸವರಾಜ ಪಾಟೀಲ್, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ಯಶೋದ, ಹಿರಿಯ ಮನೋವೈದ್ಯ ಡಾ.ಮನೋಹರ ಪತ್ತಾರ್, ತಾಲೂಕು ಆರೋಗ್ಯಾಧಿಕಾರಿ ಡಾ.ಪ್ರಜ್ವಲ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಲಕ್ಷ್ಮೀ ಮುಂಡಾಸ್, ಜಿಲ್ಲಾ ಆರೋಗ್ಯ ಉಪ ಶಿಕ್ಷಣಾಧಿಕಾರಿ ಬಸಯ್ಯ, ಮಲ್ಲಯ್ಯ ಮಠಪತಿ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು ಇದ್ದರು.

ವೈದ್ಯರ ನಿರ್ಲಕ್ಷ್ಯದಿಂದ ಬಾಣಂತಿ ಸಾವು

ಸಿಂಧನೂರು: ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಹೆರಿಗಾಗಿ ದಾಖಲಾಗಿದ್ದ ತಾಲೂಕಿನ ಆರ್.ಎಚ್.ಕ್ಯಾಂಪ್-3ರ ಗರ್ಭಿಣಿಯೊಬ್ಬರು, ಹೆರಿಗೆ ನಂತರ ಮೃತಪಟ್ಟ ಘಟನೆ ಅ.21ಸೋಮವಾರ ರಾತ್ರಿ ನಡೆದಿದೆ. ಮಹಿಳೆ ಮೃತಪಟ್ಟಿದ್ದು, ಕೂಸು ಆರೋಗ್ಯವಾಗಿದೆ. ತನ್ನ ಪತ್ನಿ ಸಾವಿಗೆ ಸರಕಾರಿ ಆಸ್ಪತ್ರೆಯ ವೈದ್ಯರ ಹಾಗೂ ಸಿಬ್ಬಂದಿಯ ನಿರ್ಲಕ್ಷ್ಯವೇ ಕಾರಣ ಎಂದು ಮೃತ ಮಹಿಳೆಯ ಪತಿ ಹಾಗೂ ಪೋಷಕರು ಆರೋಪಿಸಿದ್ದಾರೆ. ಆರ್.ಎಚ್.ಕ್ಯಾಂಪ್‌ನ ಮೌಸಂಬಿ ಮಂಡಲ್ ಗಂಡ ಮಹೇಶ್ವರ ಮಂಡಲ್ ಮೃತ ಮಹಿಳೆಯಾಗಿದ್ದಾಳೆ. ಅ. 21ರಂದು ಹೆರಿಗೆಗಾಗಿ ಸರಕಾರಿ ಆಸ್ಪತ್ರೆಗೆ ದಾಖಲಾಗಿಸಲಾಗಿತ್ತು. ಹೆರಿಗೆಯಾದ ನಂತರ ಬಾಣಂತಿಗೆ ಆರೋಗ್ಯದಲ್ಲಿ ಏರುಪೇರಾಗಿದೆ ಎಂದು ಹೇಳಲಾಗುತ್ತಿದೆ. ವೈದ್ಯರು, ಸಿಬ್ಬಂದಿಯೊಂದಿಗೆ ವಾಗ್ವಾದ ಮೌಸಂಬಿ ಮಂಡಲ್ ಮೃತಪಟ್ಟ ಸುದ್ದಿ ತಿಳಿಯುತ್ತಿದ್ದಂತೆ ಆರ್. ಎಚ್.ಕ್ಯಾಂಪ್ 3ರಲ್ಲಿರುವ ಅವರ ಸಂಬಂಧಿಕರು ರಾತ್ರಿ 10 ಗಂಟೆ ಸುಮಾರು ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಜಮಾಯಿಸಿದರು. ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಯೊಂದಿಗೆ ಮಾತಿನ ಚಕಮಕಿ ನಡೆಸಿದರು. ''ಸರಿಯಾದ ಸಮಯಕ್ಕೆ ಚಿಕಿತ್ಸೆ ಕೊಟ್ಟಿದ್ದರೆ ಮೌಸಂಬಿ ಉಳಿಯುತ್ತಿದ್ದಳು, ನಿಮ್ಮ ನಿರ್ಲಕ್ಷ್ಯ ದಿಂದ ಸಾವಾಗಿದೆ. ಇಲ್ಲಿಗೆ ನಾವು ಬಿಡುವುದಿಲ್ಲ, ಈ ವಿಷಯವನ್ನು ಕೋರ್ಟ್ನಲ್ಲಿ ದಾವೆ ಹೂಡುತ್ತೇವೆ. ಇನ್ನು ಎಷ್ಟು ಜನರು ಇಲ್ಲಿ ಬಲಿಯಾಗಬೇಕಿದೆ'' ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

ಪಿಎಸ್‌ಐ ಆಗಿ ಸಂಗನಗೌಡ ನೇಮಕ

ಮುದಗಲ್: ಪಟ್ಟಣ ಸಮೀಪದ ಹೂನೂರು ಗ್ರಾಮದ ಸಂಗನಗೌಡ ಕಾನ್ಸ್ಟೇಬಲ್ ರವರು ಪಿಎಸ್‌ಐ ಹುದ್ದೆಗೆ ನೇಮಕವಾಗಿದ್ದಾರೆ, ಪಟ್ಟಣದಿಂದ ಸುಮಾರು 14 ಕಿ, ಮೀ ದೂರವಿರುವ ಹೂನೂರು

ಗ್ರಾಮದ ಸಂಗನಗೌಡ ಹಾಗೂ ಶಾಂತಮ್ಮ ದಂಪತಿಗಳ ಮಗನಾಗಿ ಜನಸಿದ ಸಂಗನಗೌಡ ಪಾಟೀಲ್ 1-7 ತರಗತಿ ಹೂನೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ನಂತರ ಮುದಗಲ್ ಸರಕಾರಿ ಪ್ರೌಢ ಶಾಲೆಯಲ್ಲಿ 1-10ನೇ ತರಗತಿ ಪಿಯುಸಿ ಕೂಡ ಮುದಗಲ್ ಕಾಲೇಜ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿ ತಾವರಗೇರಾದಲ್ಲಿ ಡಿಎಡ್ ಮುಗಿಸಿದರು. ಕಡು ಬಡತನದಲ್ಲಿ ಬೆಳೆದ ಸಂಗನಗೌಡ ಹೂನೂರು ಜಮೀನು ಹಾಗೂ ಮನೆಕೆಲಸ ಮಾಡುತ್ತಾ ವಿದ್ಯಾಭ್ಯಾಸ ಮುಗಿಸಿದರು. 2011ರ ಪೊಲೀಸ್ ಪರೀಕ್ಷೆಯಲ್ಲಿ ಪಾಸಾಗಿ ಉಡುಪಿ ಪೊಲೀಸ್ ಠಾಣೆಗೆ ಕಾನ್ಸೆಟೇಬಲ್ ಆಗಿ ನೇಮಕವಾದರು ಸುಮಾರು 7 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಪೊಲೀಸ್ ಠಾಣೆಗೆ ವರ್ಗಾವಣೆಯಾಗಿ 5 ವರ್ಷಗಳಿಂದ ಸದರಿ ಪೊಲೀಸ್ ಠಾಣೆಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಕ್ರೈಮ್ ವಿಭಾಗದಲ್ಲಿ ಅನೇಕ ಪ್ರಕರಣನ್ನು ಭೇದಿಸುವಲ್ಲಿ ಸಂಗನಗೌಡ ಪ್ರಮುಖ ಪಾತ್ರ ವಹಿಸಿದ್ದಾರೆ. ಸಂಗನಗೌಡ ಹೂನೂರು ಪಿಎಸ್‌ಐ ಪರೀಕ್ಷೆಯಲ್ಲಿ ಸಾಮನ್ಯ ಮೀಸಲಾತಿನಲ್ಲಿ ಪಿಎಸ್‌ಐಯಾಗಿ ಸಂಗನಗೌಡ ಹೂನೂರು ನೇಮಕವಾಗಿದ್ದಾರೆ.

ತಾಂಡಾ ಹುಡುಗ ರಾಷ್ಟ್ರ ಮಟ್ಟಕ್ಕೆ ಆಯ್ಕೆ

ಮಸ್ಕಿ: ಚಿಕ್ಕಮಗಳೂರು ಜಿಲ್ಲೆಯ ಕಡೂರುದಲ್ಲಿ ಈಚೆಗೆ ನಡೆದ ರಾಜ್ಯಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ತಾಲೂಕಿನ ಮಾರಲದಿನ್ನಿ ತಾಂಡದ ವಿದ್ಯಾರ್ಥಿ ಕುಮಾರ ಚವ್ಹಾಣ ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಆರ್ಥಿಕ ಪರಿಸ್ಥಿತಿಯಿಂದ ಮುಂದಿನ ರಾಷ್ಟ್ರಮಟ್ಟದ ಯೋಗಾಸನ ಸ್ಪರ್ಧೆಗೆ ಭಾಗಿಯಾಗಲು ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ಕಿತ್ತು ತಿನ್ನುವ ಬಡತನದ ನಡುವೆ ತಂದೆ ಘನಮಠ ತಾಯಿ ಶಾಂತವ್ವ ಗಾರೆ, ಹೆಲ್ಪರ್ ಕೆಲಸ ಮಾಡಿ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದಾರೆ. ಬಡತನದ ಬೇಗೆಯಲ್ಲಿ ಮಗನಲ್ಲಿ ಕ್ರೀಡಾ ಪ್ರತಿಭೆ ಅರಳಿದೆ, ಮಗ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಾಸಾಗಿ ಕ್ರೀಡಾ ಕೋಟಾದಲ್ಲಿ ಮೂಡಬಿದರಿಯ ಆಳ್ವಾಸ ಪ್ರಿಯುನಿವರ್‌ಸಿಟಿ ಖಾಸಗಿ ಕಾಲೇಜಿನಲ್ಲಿ ಉಚಿತವಾಗಿ ಸೀಟು ಪಡೆದು, ಪಿಯು ಪ್ರಥಮ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಭಾಗಿಯಾಗಿ ಪ್ರಥಮ ಸ್ಥಾನ ಪಡೆದು ಜಿಲ್ಲೆಯ ಹಿರಿಮೆ ಹೆಚ್ಚಿಸಿದ್ದಾನೆ. ಮುಂದಿನ ರಾಷ್ಟ್ರ ಮಟ್ಟದ ರಿದಮಿಕ್ ಯೋಗಾಸನ ಸ್ಪರ್ಧೆ ನ.14ರಂದು ಅಸ್ಸಾಂ ರಾಜ್ಯ ದಲ್ಲಿ ನಡೆಯಲಿದ್ದು, ಗೇಮ್ ಫೇಡರೇಷನ್ ಆಫ್ ಇಂಡಿಯಾ ಯೋಗಾಸನ ಸ್ಪರ್ಧೆ ನ.17ರಂದು ಮಹಾರಾಷ್ಟ್ರ ರಾಜ್ಯಕ್ಕೆ ತೆರಳಬೇಕು. ಬಡತನವೇ ಅಡ್ಡಿ ಉಂಟಾಗಿದೆ. ಮುಂದಿನ ಕ್ರೀಡಾ ಸ್ಪರ್ಧೆಗೆ ಭಾಗಿಯಾಗಲು ಯಾರಾ ದರೂ ನೆರವು ನೀಡಿದರೆ ರಾಷ್ಟ್ರಮಟ್ಟದ ಸ್ಪರ್ಧೆಗೆ ನನ್ನ ಮಗ ಭಾಗಿ ಯಾಗಿ ಕ್ರೀಡೆಯಲ್ಲಿ ಜಯಗಳಿಸಿ ದೇಶದ ಕೀರ್ತಿ ಪತಾಕೆ ಹೆಚ್ಚಿಸುತ್ತಾನೆ ಎಂದು ತಂದೆ ಘನಮಠಯ್ಯ ಅವರು ತಿಳಿಸಿದ್ದಾರೆ.

ದಿನ ದರ್ಶಿಕೆ

ಅಶ್ವಿನ ಮಾಸ, ಕೃಷ್ಣ ಪಕ್ಷ, ಸಪ್ತಮಿ ತಿಥಿ, ಪುನರ್ವಸು ನಕ್ಷತ್ರ, ಶಿವ ಯೋಗ, ಪುನರ್ವಸು ನಕ್ಷತ್ರ, ವಿಷ್ಠಿ ಕರಣ, ಹೇಮಂತ ಋತು, ದಕ್ಷಿಣಾಯನ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮನಾಮ ಸಂವತ್ಸರ

ಮನೆಮದ್ದು

ಶೀತ, ಕೆಮ್ಮು ಉಂಟಾಗಿದ್ದರೆ. ದಾಲ್ಚಿನ್ನಿ, ಲವಂಗ ಮತ್ತು ಅರ್ಧ ನಿಂಬೆಹಣ್ಣಿನ ಹುಳಿ ಹಿಂಡಿ ಇದಕ್ಕೆ ಒಂದು ಲೋಟ ನೀರು ಹಾಕಿ ಚೆನ್ನಾಗಿ ಕುದಿಸಿ ಸೇವನೆ ಮಾಡಿ. ಇದರಲ್ಲಿ ಆಂಟಿ ಬ್ಯಾಕ್ಟೀರಿಯಲ್ ಗುಣಲಕ್ಷಣಗಳು ಸಾಕಷ್ಟಿದ್ದು, ಕೆಮ್ಮಿನ ಹಾಗೂ ಶೀತದ ಲಕ್ಷಣಗಳನ್ನು ಹೋಗಲಾಡಿಸುತ್ತದೆ.

ಸೌಂದರ್ಯ ಸೂತ್ರ



ಒಂದು ಬೌಲ್‌ನಲ್ಲಿ ಆಲಿವ್ ಆಯಿಲ್, ತಾಜಾ ಮೊಸರು ಮತ್ತು ಸೀಗೆಕಾಯಿ ಪುಡಿಯನ್ನು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ ದಪ್ಪ ಪೇಸ್ಟ್ ತಯಾರಿಸಿ ನಿಮ್ಮ ಕೂದಲಿಗೆ ಹಾಗೂ ನೆತ್ತಿಗೆ ಹಚ್ಚಿ 40 ನಿಮಿಷ ಬಿಟ್ಟು ಕೂದಲನ್ನು ತೊಳೆಯಿರಿ. ಇದನ್ನು ವಾರದಲ್ಲಿ ಎರಡು ಬಾರಿ ಬಳಸಿ.

ದಿನ ಭವಿಷ್ಯ

ಮೇಷ: ಒಂದು ದೀರ್ಘ ಪ್ರಯಾಣಕ್ಕೆ ಹೊಗಲು ಯೋಜನೆ ಹಾಕುತ್ತೀರಿ, ಆರೊಗ್ಯ ಮತ್ತು ಹಣದ ಉಪಯೋಗ ಬರುತ್ತದೆ.

ವೃಷಭ: ಸಾಧ್ಯವಾದರೆ ಸೂರ್ಯನ ಬೆಳಕಿಗೆ ಅತಿಯಾದ ಒಡ್ಡಿಕೊಳ್ಳುವಿಕೆಯನ್ನು ತಪ್ಪಿಸಿ. ಮನಸ್ಸಿನಲ್ಲಿರುವುದನ್ನು ಹೇಳಲು ಹಿಂಜರಿಯದಿರಿ

ಮಿಥುನ: ದೈಹಿಕ ಬಲವನ್ನು ನಿರ್ವಹಿಸಲು ಕ್ರಿಡೆಯಲ್ಲಿ ಸಮಯ ಕಳೆಯುವ ಸಾಧ್ಯತೆ ಗಳಿವೆ. ಊಹೆಗಳು ಲಾಭ ತರುತ್ತವೆ.

ಕಟಕ: ಆರೋಗ್ಯ ಸಂಬಂಧಿತ ಸಮಸ್ಯೆಗಳು ಅಸ್ವಸ್ಥತೆಯನ್ನು ಉಂಟುಮಾಡಬಹುದು. ಅನಿರೀಕ್ಷಿತ ಮೂಲಗಳಿಂದ ಗಳಿಕೆಯ ಸಾಧ್ಯತೆ ಹೊಂದಿದ್ದೀರಿ.

ಸಿಂಹ: ದೀರ್ಘಕಾಲಿನ ಹೂಡಿಕೆಗಳನ್ನು ತಪ್ಪಿಸಿ ಮತ್ತು ಸ್ನೇಹಿತರ ಜೊತೆ ಕೆಲವು ಆಹ್ಲಾದಕರ ಕ್ಷಣಗಳನ್ನು ಕಳೆಯಲು ಪ್ರಯತ್ನಿಸಿ.

ಕನ್ಯಾ: ಗೃಹಪ್ರವೇಶಕ್ಕೆ ಮಂಗಳಕರ ದಿನ. ನಿಮ್ಮ ಪ್ರೀತಿಪಾತ್ರರಿಂದ ಉಡುಗೊರೆ ಸ್ವೀಕರಿಸುವುದರಿಂದ ಖುಷಿಯಾಗಿರುತ್ತೀರಿ.

ತುಲಾ: ಆರೋಗ್ಯವನ್ನು ನಿರ್ಲಕ್ಷ್ಯ ಮಾಡಬೇಡಿ, ವಿಶೇಷವಾಗಿ ಮದ್ಯಪಾನ ಮಾಡಬೇಡಿ. ತಾತ್ಕಾಲಿಕ ಸಾಲ ಕೇಳಿ ಬರುವವರನ್ನು ನಿರ್ಲಕ್ಷಿಸಿ.

ವೃಶ್ಚಿಕ: ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳೆರಡಕ್ಕೂ ಪ್ರಯೋಜನ. ಆರೋಗ್ಯಕ್ಕಾಗಿ ಹಣ ಖರ್ಚು.

ಧನು: ಇಂದು ಕೈಗೊಂಡ ಧರ್ಮಾರ್ಥ ಕಾರ್ಯವು ಮಾನಸಿಕ ಶಾಂತಿ ಮತ್ತು ಆರಾಮ ತರುತ್ತದೆ. ಹಣಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಹೊಂದಿರಬಹುದು.

ಮಕರ: ಸಾಧ್ಯವಿರುವುದಕ್ಕಿಂತ ಹೆಚ್ಚು ಕೆಲಸ ಮಾಡಲು ಒಪ್ಪಿಕೊಳ್ಳಬೇಡಿ. ಇತರರನ್ನು ಸಂತೋಷಪಡಿಸಲು ಮೇಲೆ ಒತ್ತಡ ಹಾಕಿಕೊಳ್ಳಬೇಡಿ.

ಕುಂಭ: ಆರೋಗ್ಯ ಸುಧಾರಿಸಲು ಸಹಕಾರಿಯಾಗುವ ಕೆಲಸಗಳನ್ನು ಮಾಡಬಹುದಾದ ದಿನ. ದಿನದ ಆರಂಭವು ಚೆನ್ನಾಗಿ ಆಗಿದರು.

ಮೀನ: ಸುತ್ತಲಿರುವವರು ಬೆಂಬಲ ನೀಡುವುದರಿಂದ ಸಂತೋಷವಾಗಿರುವಿರಿ. ಅಮೂಲ್ಯ ವಸ್ತುಗಳ ಬಗ್ಗೆ ಗಮನ ಹರಿಸಿ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

• 1945: ವಿಶ್ವಸಂಸ್ಥೆಯ ಉಗಮವಾಯಿತು.

• 1949: ವಿಶ್ವಸಂಸ್ಥೆಯ ಕೇಂದ್ರ ಕಚೇರಿಗೆ ನ್ಯೂಯಾರ್ಕ್‌ನಲ್ಲಿ ಶಂಕುಸ್ಥಾಪನೆ ಮಾಡಲಾಯಿತು.

• 1984: ಭಾರತದ ಮೊದಲ ಅಂಡರ್‌ಗ್ರೌಂಡ್ ಮೆಟ್ರೊ ಕೋಲ್ಕತ್ತಾದಲ್ಲಿ ಶುರುವಾಯಿತು.

ಚಿತ್ರಸ್ಫೂರ್ತಿ



ನಯಾಗಾರ ಫಾಲ್ಸ್‌ನ ನೋಡಲು ಹೊರಟವರಿಗೆ ಸ್ವಾಗತ ಕೋರಿದ ಕಾಮನಬಿಲ್ಲು — ಅನದೊಲು

ಕುರುಕ್ಷೇತ್ರ ಯುದ್ಧಕ್ಕಾಗಿ ಪ್ರಾಣತ್ಯಾಗ ಮಾಡಿದ 'ಇರಾವಣ'

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಯುದ್ಧ ಎಂದ ಕೂಡಲೇ ಸಾವು ನೋವು ತಪ್ಪಿದ್ದಲ್ಲ. ಇಷ್ಟಿದ್ದರೂ ಯುದ್ಧ ಆರಂಭವಾಗುವ ಮೊದಲೇ ಯುದ್ಧ ಭೂಮಿಗೆ ನರಬಲಿಯನ್ನು ಕೊಡಬೇಕು ಇದರಿಂದ ಜಯ ಸಾಧ್ಯವಾಗುತ್ತದೆ ಎನ್ನುವ ನಿಯಮವಿತ್ತು. ಕುರುಕ್ಷೇತ್ರ ಕದನವಾಗುವ ಮೊದಲೇ ಯುದ್ಧ ಭೂಮಿಗೆ ಒಂದು ನರಬಲಿಯನ್ನು ಕೊಡಬೇಕು. ಅಮಿಷ ತೋರಿಸಿ ಬೇರೆ ಯಾರನ್ನೋ ಕೊಡುವುದಲ್ಲ ಸಂಬಂಧದಲ್ಲಿ ಆಗಿರಬೇಕು. ಪಾಂಡವರು ಯಾರನ್ನು ಬಲಿಕೊಡುವುದು ಯಾರು ಒಪ್ಪುತ್ತಾರೆ ಎಂದು ಚಿಂತೆಯಲ್ಲಿದ್ದಾಗ 'ನಾನು ನನ್ನ ಪ್ರಾಣವನ್ನು ತ್ಯಾಗ ಮಾಡುತ್ತೇನೆ'. ಎಂದು ಮುಂದೆ ಬಂದಂತಹ ವೀರ 'ಇರಾವಣ'.

ದ್ರೌಪದಿ ಯುಧಿಷ್ಠಿರನ ಜೊತೆ ಇದ್ದಾಗ ಅವರ ಏಕಾಂತಕ್ಕೆ ಭಂಗ ತಂದಿದ್ದಕ್ಕಾಗಿ ಅರ್ಜುನ ಮೂರು ವರ್ಷ ಸನ್ಯಾಸವನ್ನು ಸ್ವೀಕರಿಸಿ ಹೊರಡಬೇಕಾಗುತ್ತದೆ. ಆಗ ಬಲರಾಮನ ತಂಗಿ ಸುಭದ್ರೆ, ಚಿತ್ರಾಂಗನೆ ಮತ್ತು ನಾಗ ಲೋಕದ ಯುವರಾಣಿ ಉಲೂಪಿಯರನ್ನು ಮದುವೆಯಾಗಬೇಕಾಗುತ್ತದೆ. ಅರ್ಜುನನ ಸ್ಫುರದ್ರೂಪ ನೋಡಿ ಅವನ ಮೇಲೆ ಪ್ರೀತಿ ಅಂಕುರಿಸುತ್ತದೆ. ಅವಳು ಒಂದು ದಿನದ ಮಟ್ಟಿಗೆ ಅರ್ಜುನನ ಜೊತೆ ಸಂಬಂಧ ಬೆಳೆಸುತ್ತಾಳೆ. ಇವರಿಬ್ಬರಿಗೆ ಮುಂದೆ ಹುಟ್ಟಿದ ಮಗನೇ 'ಇರಾವಣ' ಇವನು ನಾಗಲೋಕದಲ್ಲಿ ಬೆಳೆಯುತ್ತಾನೆ. ಕಲಾ ನೈಪುಣ್ಯನು, ಶಸ್ತ್ರ-ಶಾಸ್ತ್ರ-ಯುದ್ಧ ವಿದ್ಯೆಗಳಲ್ಲಿ ನಿಪುಣ. ಇವನ ಸೋದರ ಮಾವನೊಬ್ಬ ಅರ್ಜುನನ್ನು, ಪಲಾಯನ ವಾದಿ, ಹೇಡಿ ಎಂದು ಕೆಟ್ಟದಾಗಿ ಚಾಡಿ ಹೇಳಿರುತ್ತಾನೆ. ಒಮ್ಮೆ ಸ್ವತಃ ಇಂದ್ರ ದೇವನೇ ಬಂದು ಆ ಹುಡುಗನಿಗೆ ನಿನ್ನ ತಂದೆ ವೀರ, ಧೀರ, ಬಿಲ್ಲುಗಾರ, ಧನುರ್‌ಧಾರಿ, ಸ್ಫೂರದ್ರೂಪಿ, ಶಕ್ತಿವಂತ. ನಿನ್ನ ಮಾವನ ಮಾತನ್ನು ಕೇಳಬೇಡ ಎಂದು ಹೇಳುತ್ತಾನೆ ಹಾಗೂ ಇನ್ನೂ ಸ್ವಲ್ಪ ದಿನಗಳಲ್ಲಿ ಕುರುಕ್ಷೇತ್ರ ಯುದ್ಧ ಆರಂಭವಾಗುತ್ತದೆ ನೀನು ಯುದ್ಧದಲ್ಲಿ ಪಾಲ್ಗೊಂಡು ಪಾಂಡವರಿಗೆ ಜಯ ತಂದು ಕೊಡುವಲ್ಲಿ ಯಶಸ್ವಿಯಾಗು ಎಂದು ಹರಸುತ್ತಾನೆ.

ಮಹಾಯುದ್ಧವನ್ನು ಗೆಲ್ಲಬೇಕೆಂದಾಗ 'ನರ ಬಲಿ' ಕೊಡ ಬೇಕು ಇದಕ್ಕೆ ಯಾರು ಮುಂದೆ ಬರುತ್ತಾರೆ? ಎಂಬ ಚಿಂತೆ ಯಲ್ಲಿರುವಾಗಲೇ 'ಇರಾವಣ' ಯುದ್ಧ ಭೂಮಿಗೆ ನರಬಲಿ ಯಾಗಲು ಸಿದ್ಧನಿದ್ದೇನೆ ಎಂದು ಬಂದನು. ಹಾಗೆ ಹೇಳಿ, ಆದರೆ ಒಂದು ಷರತ್ತಿನ ಮೇಲೆ ಎನ್ನುತ್ತಾನೆ. ಆ ಶರತ್ತು ತಾನು ಬಲಿಯಾಗುವ ಮೊದಲು ಮದುವೆಯಾಗಬೇಕು ಎಂಬ ಇಚ್ಛೆ. ಆದರೆ ನಾಳೆಯೇ ಸಾಯುವ ಇವನಿಗೆ ಯಾರು ಹೆಣ್ಣು ಕೊಡುತ್ತಾರೆ. ಆಗ ಮುಂದೆ ಬಂದವನೇ ಶ್ರೀಕೃಷ್ಣ. ಶ್ರೀಕೃಷ್ಣ ಮೋಹಿನಿ ರೂಪ ಧರಿಸಿ ಇರಾವಣನನ್ನು ವಿವಾಹ ಆಗುತ್ತಾನೆ. ಮದುವೆಯಾದ ಮರುದಿನವೇ ನರ ಬಲಿ ಸಮಯದಲ್ಲಿ ಇರಾವಣನೇ ತನ್ನ ಖಡ್ಗದಿಂದ ಕುತ್ತಿಗೆ ಕಡಿದುಕೊಂಡು ಬಲಿಯಾಗುತ್ತಾನೆ. ಇದನ್ನು ಕಂಡು ಶ್ರೀಕೃಷ್ಣನ ಮನಸ್ಸು ಮರುಗಿತು. ಮೋಹಿನಿ ರೂಪ ದಲ್ಲಿದ್ದ ಕೃಷ್ಣನು ಪತಿ ಕಳೆದುಕೊಂಡ ಸತಿಯಂತೆ ಶೋಕಾಚರಣೆ ಆಚರಿಸಿ ಅತ್ತು ಗೋಳಾಡುತ್ತಾನೆ ಇದರಿಂದ ಇರಾವಣನಿಗೆ ಮೋಕ್ಷ ಪ್ರಾಪ್ತಿಯಾಗುತ್ತದೆ. ಕೃಷ್ಣನು ಮಾಡಿದ ಶೋಕಾಚರಣೆ ಪದ್ಧತಿಯನ್ನು ಮಂಗಳಮುಖಿಯರು ಇಂದಿಗೂ ಮುಂದುವರೆಸಿಕೊಂಡು ಬಂದಿದ್ದಾರೆ.

ಕೃಷ್ಣನ ಅನುಗ್ರಹದಂತೆ ಇರಾವಣನಿಗೆ ಮಹಾ ಪುಣ್ಯವೇ ಪ್ರಾಪ್ತಿಯಾಗುತ್ತದೆ. ತಮಿಳುನಾಡಿನಲ್ಲಿ ಇರಾವಣ ಸತ್ತ ದಿನವನ್ನು ಪವಿತ್ರ ದಿನವೆಂದು ಆಚರಿಸುತ್ತಾರೆ. ತಮಿಳುನಾಡಿನ 'ಕುವಗಂ'ನಲ್ಲಿ ಇರಾವಣನಿಗೆ ದೊಡ್ಡ ದೇವಸ್ಥಾನ ವಿದೆ. ಇದು ಮಂಗಳಮುಖಿಯರಿಗೆ ಪವಿತ್ರ ದೇವಸ್ಥಾನವಾಗಿದೆ. ವರ್ಷಕ್ಕೊಮ್ಮೆ ವಾರ್ಷಿಕೋತ್ಸವ ಜಾತ್ರೆ ಉತ್ಸವ ನಡೆಯುತ್ತದೆ. ದೇಶವಿದೇಶಗಳಿಂದ ಮಂಗಳಮುಖಿಯರು ಬಂದು, ಸಂಭ್ರಮದಿಂದ ಉತ್ಸವ ಆಚರಿಸಿ ಮದುಮಗಳಂತೆ ಸಿಂಗರಿಸಿಕೊಂಡು ಅರ್ಚಕರ ನೇತೃತ್ವದಲ್ಲಿ ಅಂದು ರಾತ್ರಿ ಇರಾವಣನನ್ನು ಪತಿಯೆಂದು ಸ್ವೀಕರಿಸಿ ವಿವಾಹ ವಿಧಿಯನ್ನು ಆಚರಿಸುತ್ತಾರೆ. ಸ್ವಲ್ಪ ಹೊತ್ತಿಗೆ ಪತಿ ಇರಾವಣ ಮರಣ ಹೊಂದಿದನೆಂದು ಮಂಗಳಮುಖಿಯರೆಲ್ಲ ವಿಧವೆಯರಂತೆ ದುಃಖ ತಪ್ತರಾಗಿ ಅತ್ತು, ಅಣುಕು ಶವ ಯಾತ್ರೆ ಆಚರಿಸಿ, 'ಇರಾವಣ'ನ ನೆನಪಿನೊಂದಿಗೆ ಜಾತ್ರೆ ಮುಗಿಸುತ್ತಾರೆ.

ನಮ್ಮ ಧರ್ಮದಲ್ಲಿ ಹೇಗೆ ಪ್ರತಿಯೊಬ್ಬರಿಗೂ ಕೂಡ ತಮ್ಮನ್ನು ಗುರುತಿಸಿಕೊಳ್ಳುವ ಅಂತೆಯೇ ಭಗವಂತನ ಕೃಪೆಗೆ ಪಾತ್ರರಾಗುವ ಅವಕಾಶವಿದೆ ಎನ್ನುವುದಕ್ಕೆ ಮೇಲಿನ ಕಥೆಯೇ ಸಾಕ್ಷಿ.

ಒಂದೊಳ್ಳೆ ಮಾತು

ಪದಬಂಧ



ಎಡದಿಂದ ಬಲಕ್ಕೆ:

1. ಈ ಭೂಮಿಯ ಮಧ್ಯೆ ಮತ್ತೊಂದು ಹೂವಿದೆ (4)
5. ಮೋಸ ಮಾಡು ಎನ್ನುವುದನ್ನು ಹೀಗೆಯೂ ಹೇಳಬಹುದು (4)
7. ಎಲ್ಲರೂ ಸಮಾನರು ಎನ್ನುವ ವಾದ (5)
9. ಸಾಮಾನು ಕೊಳ್ಳಲು ಅಂಗಡಿಗೆ ಬಂದವನು (3)
11. ಎಳೆಯ ಶಿಶು (3)
12. ಮತ್ತೊಂದು ಅಳುವಿಕೆ (3)
14. ರಾಜಪದವಿಯನ್ನು ಹೀಗೆ ಹೇಳಬಹುದು (4)
15. ಹಕ್ಕಿಗಳ ಮಧುರವಾದ ಧ್ವನಿ (4)
17. ಮದುಮಕ್ಕಳಿಗೆ ಹಾಕಿದ ವಿಶೇಷವಾದ ಆಸನ (4)

ಮೇಲಿನಿಂದಕೆಳಕ್ಕೆ:

1. ಹೊಟ್ಟೆ ಮತ್ತು ಎದೆಯ ಅಂಗಗಳನ್ನು ಬೇರ್ಪಡಿಸುವ ಪದರ (2)
2. ಮೊಮ್ಮಗ ಅಥವಾ ಮೊಮ್ಮಗಳ ಮಗ (4)
3. ಧ್ವನಿ ಅಥವಾ ಶಬ್ದಕ್ಕೆ ಮತ್ತೊಂದು ಹೆಸರು (3)
4. ಕೊರತೆ ಅಥವಾ ವ್ಯಂಗ್ಯವಾದ ಉಕ್ತಿ (2)
6. ತುಂಬಾ ಘೋರವಾದ ಒಂದು ವಿಷ (4)
8. ಪಿತ್ರಾರ್ಜಿತವಾದ ಆಸ್ತಿಯ ಹಕ್ಕುದಾರ (5)
10. ಒಂದು ಬಗೆಯ ಘೋರವಾದ ವಿಷ (4)
13. ವೈರತ್ವ ಸಾಧಿಸು ಎನ್ನುವ ಪದ (4)
14. ತುಂಬಾ ಅಗತ್ಯವಾದುದು (3)
15. ಕಡೆಗೆ ತೆಗೆದುಕೊಂಡ ಸಾಲ (2)
16. ಜವಾಬ್ದಾರಿಗೆ ಮತ್ತೊಂದು ಹೆಸರು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ಮಸೂರಾ 5. ದಿನಮಣಿ 6. ಮಾತುಕತೆ 7. ಕೂಪ 8. ರಪಣ 10. ತಪ 12. ನಗ 14. ವರಾತ 16. ಗುಣ 17. ಆಗಮನ 18. ರಾಣಿವಾಸ 19. ಟಗರು

ಮೇಲಿನಿಂದ ಕೆಳಕ್ಕೆ: 1. ಮನಸ್ತಾಪ 2. ಮಣಿಹಾರ 3. ರಾಮಾಯಣ 4. ಏಕದಂತ 7. ಕೂಜನ 9. ಪಾಗಾರಾ 11. ಪಯಣ 13. ಗರಗಸ 14. ವರನಟ 15. ತಕರಾರು 16. ಗುರುವಾರ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ವೇಗದ ಪಕ್ಷಿ

ಪಕ್ಷಿಗಳನ್ನು ನಾವು ದಿನನಿತ್ಯ ನೋಡುತ್ತೇವೆ, ಅದು ಎಷ್ಟೋ ಜನರಿಗೆ ಇಷ್ಟವೂ ಹೌದು. ಕೆಲವೊಮ್ಮೆ ಅದರ ಫೋಟೋಗಳನ್ನೂ ತೆಗೆದುಕೊಳ್ಳುತ್ತೇವೆ. ನಮಗೆಲ್ಲ ಗೊತ್ತಿರುವ ರೀತಿಯಲ್ಲಿ ಗರುಡ ಅತೀ

ವೇಗವಾಗಿ ಹಾರುವ ಪಕ್ಷಿ ಎಂದು ಊಹಿಸಿಕೊಂಡಿದ್ದರೆ, ಅದು ತಪ್ಪು. ಅತೀ ವೇಗವಾಗಿ ಹಾರುವ ಪಕ್ಷಿಯ ಹೆಸರು ಪೆರೆಗ್ರಿನ್ ಫಾಲ್ಕನ್ ಅಂತ. ಕಂದು ಬಣ್ಣ ಹೊಂದಿರುವ ಈ ಪಕ್ಷಿ, ವಿಶ್ವದಲ್ಲೇ ಅತೀ ವೇಗವಾಗಿ ಹಾರುವ ಪಕ್ಷಿ ಎಂದು ಗಮನಿಸಲಾಗುತ್ತದೆ. ಅಂಟಾರ್ಟಿಕಾ ಬಿಟ್ಟು ಇನ್ನುಳಿದ ಎಲ್ಲ ಖಂಡಗಳಲ್ಲಿ ಕಾಣಸಿಗುವ ಈ ಹಕ್ಕಿ, ಅತೀ ದೂರ ದೂರದ ಪ್ರದೇಶಗಳಿಗೆ ಹಾರುತ್ತವೆ. ಕೆಲವೊಮ್ಮೆ ದೇಶದಿಂದ ಬೇರೆ ದೇಶಕ್ಕೆ ಹಾರಿದರೆ, ಕೆಲವೊ ಮ್ಮೆ ಖಂಡಾಂತರ ಗಳಿಗೂ ಹೋಗುತ್ತವೆ. ಹಾಗೇ ಈ ಪಕ್ಷಿಗಳು ಬೇರೆ ಪಕ್ಷಿಗಳನ್ನು ಬೇಟೆಯಾಡಿ ತಿನ್ನುತ್ತವೆ. ಅದರ ಜತೆಗೆ ಉತ್ತರ ಅಮೆರಿಕದಲ್ಲಿ 450ಕ್ಕೂ ಹೆಚ್ಚು ಈ ಜಾತಿಯ ಪಕ್ಷಿಗಳು ಕಾಣಸಿಗುತ್ತವೆ. ಈ ಪಕ್ಷಿಗಳು ಸುಮಾರು 1,300 ಕ್ಕಿಂತ ಹೆಚ್ಚಿನ ಎತ್ತರಕ್ಕೆ ಹಾರುತ್ತವೆ. ಈ ಒಂದು ಪಕ್ಷಿ ಹೆಚ್ಚುಕಡಿಮೆ 15 ವರ್ಷಗಳ ಕಾಲದ ಜೀವನವನ್ನು ಹೊಂದಿರುತ್ತದೆ.

ಪುಸ್ತಕ ಲೋಕ

'ಚೌದಿ'

ಪಾರ್ವತಿ ಜಿ. ಐತಾಳ್ ಅವರ ಅನುವಾದಿತ ಕಾದಂಬರಿಯಾಗಿರು ಇದರ ಮೂಲ ಕರ್ತೃ ಕಣಕ್ಕೂರ್ ಆರ್. ಸುರೇಶ ಕುಮಾರ್.ಇದು ಮಳಯಾಳಂನಲ್ಲಿ ಬರೆಯಲಾಗಿತ್ತು,ಈ ಕಾದಂಬರಿಯು ಮುಖ್ಯವಾಗಿ ಓದುಗರ ಗಮನ ಸೆಳೆಯುವುದು ಅದು ರವೀಂದ್ರನಾಥ ಟಾಗೋರ್ ಅವರ ಜೀವನದಲ್ಲಿ ನಡೆಯಿತೆಂದು ಹೇಳಲಾಗುವ ಒಂದು ಪ್ರೇಮ ಕಥೆಗೆ ಸಂಬಂಧಿಸಿದ್ದು ಎನ್ನುವ ಕಾರಣಕ್ಕಾಗಿ. ಆದರೆ ಇದು ಹೆಣ್ಣು-ಗಂಡಿನ ನಡುವಣ ಸಂಬಂಧದಲ್ಲಿ ಎಲ್ಲರೂ ನಿರೀಕ್ಷಿಸು ವಂತಹ ಒಂದು ಸಾಮಾನ್ಯ ಪ್ರಣಯ ಕಥೆಯಲ್ಲ.ಅತ್ಯಂತ ಸೂಕ್ಷ್ಮ ಮನಸ್ಸಿನ ಹೆಣ್ಣಾದ ಕಾದಂಬರಿ (ರವೀಂದ್ರನಾಥ ಟ್ಯಾಗೋರ್ ಅವರ ಅಣ್ಣನ ಹೆಂಡತಿ) ಮತ್ತು ಕವಿಹೃದಯದ ಮೃದು ಸ್ವಭಾವದ ರವೀಂದ್ರನಾಥರ ನಡುವಣ ಆತ್ಮಬಂಧವೇ ಈ ಕಾದಂಬರಿಯ ಜೀವಾಳ. ರವೀಂದ್ರನಾಥರ ಮದುವೆಯಾಗಿ ನಾಲ್ಕು ತಿಂಗಳಲ್ಲಿ ಅಗಲಿಕೆಯ ನೋವನ್ನು ಸಹಿಸಿಕೊಳ್ಳಲಾರದೆ ಕಾದಂಬರಿ ಆತ್ಮಹತ್ಯೆ ಮಾಡಿಕೊಳ್ಳುವುದು ಹೃದಯ ವಿದ್ರಾವಕ ವಾದ ಒಂದು ದುರಂತ. ರವೀಂದ್ರನಾಥರ ಅಣ್ಣ ದೇವೇಂದ್ರನಾಥ್ ಅವರು ಜಿಲ್ಲಾಧಿಕಾರಿಯಾಗಿದ್ದ ಕಾರವಾರದ ಕಡಲತೀರದ ಸುತ್ತ ಮುತ್ತ ಸ್ವಾತಂತ್ರ್ಯ ಪೂರ್ವದಲ್ಲಿ ನಡೆಯುವ ಘಟನೆಗಳ ಚಿತ್ರಣವು ಹತ್ತಾರು ಹೊಸ ಕಾಲ್ಪನಿಕ ಪಾತ್ರಗಳ ಮೂಲಕ ಕಾದಂಬರಿಗೆ ಒಂದು ಸುಂದರ ಚೌಕಟ್ಟನ್ನು ಒದಗಿಸಿದೆ.

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ಚಿರತೆಗಳನ್ನು ಪರಿಚಯಿಸಿದ ಕುನೊ ರಾಷ್ಟ್ರೀಯ ಉದ್ಯಾನವನವು ಯಾವ ರಾಜ್ಯದಲ್ಲಿದೆ?

- ಎ. ಮಧ್ಯಪ್ರದೇಶ
- ಬಿ. ಉತ್ತರ ಪ್ರದೇಶ.
- ಸಿ. ರಾಜಸ್ಥಾನ.
- ಡಿ. ಕರ್ನಾಟಕ.

ಉತ್ತರ: ಎ. ಮಧ್ಯಪ್ರದೇಶ.

ಮಾಹಿತಿ

ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನವನ ಮತ್ತು ಇತರ ಗೊತ್ತುಪಡಿಸಿದ ಪ್ರದೇಶಗಳಲ್ಲಿ ಚಿರತೆಯ ಪರಿಚಯದ ಜೊತೆ ಮೇಲ್ವಿಚಾರಣೆ ಮಾಡಲು ಕೇಂದ್ರಸರಕಾರವು 9 ಸದಸ್ಯರ ಕಾರ್ಯಪಡೆಯನ್ನು ರಚಿಸಿದೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್.ಟಿ.ಸಿ.ಎ) ಚೀತಾ ಕಾರ್ಯಪಡೆಯ ಕಾರ್ಯನಿರ್ವಹಣೆಯನ್ನು ಸುಗಮಗೊಳಿಸುತ್ತದೆ. ಇದು ಎರಡು ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ ಮತ್ತು ಚಿರತೆಯ ಆರೋಗ್ಯ ಸ್ಥಿತಿ, ಕ್ವಾರಂಟೈನ್ ಮತ್ತು ಮೃದುವಾದ ಬಿಡುಗಡೆ ಆವರಣ, ಪ್ರದೇಶದ ರಕ್ಷಣೆಯ ಸ್ಥಿತಿ ಮತ್ತು ಕುನೋ ರಾಷ್ಟ್ರೀಯ ಉದ್ಯಾನವನದ ಆವಾಸಸ್ಥಾನಕ್ಕೆ ಚಿರತೆಗಳ ಹೊಂದಾಣಿಕೆಯನ್ನು ಮೇಲ್ವಿಚಾರಣೆ ಮಾಡುತ್ತದೆ.

ಮಲೆನಾಡ ಸೊಬಗನ್ನು ಅಂದ ಕಾಣಿಸುತ್ತಿದೆ ಗಿರಿಧಾಮ

• ಸೌಮ್ಯ ಕಾರ್ಕಳ

ಹಸಿರ ಕಾನನದ ಮಧ್ಯೆ ಕಂಗೊಳಿಸುವ ಮಲೆನಾಡ ಸೊಬಗನ್ನು ಸ್ವಾದಿಸಲು ಎಲ್ಲಾ ಪ್ರವಾಸಿ ಪ್ರಿಯರಿಗೂ ಬಲು ಇಷ್ಟನೇ. ಕಾಫಿ-ಚಹಾ ತೋಟಗಳ ಸ್ವಾದ, ಬೆಟ್ಟ ಗುಡ್ಡಗಳ ರಮಣೀಯ ನೋಟ, ಅಲ್ಲಲ್ಲಿ ಕಾಣ ಸಿಗುವ ಜಲಪಾತಗಳ ಸಿಂಗಾರದ ಜೊತೆಗೆ ಇಳಿಜಾರು ಪ್ರದೇಶಗಳು, ಹೀಗೆ ನಾನಾ ರೀತಿಯಾದ ಪ್ರದೇಶಗಳನ್ನು ಮಲೆನಾಡ ಸೀಮೆಯಲ್ಲಿ ಕಾಣಬಹುದು.

ಮಲೆನಾಡಿನಲ್ಲಿ ಚಾರಣಕ್ಕೆಂದೇ ಹೇಳಿ ಮಾಡಿಸಿದ ಅಸಂಖ್ಯ ತಾಣಗಳಿವೆ. ಪ್ರತಿಯೊಂದು ತಾಣವೂ ಪ್ರಕೃತಿ ಸೌಂದರ್ಯದಿಂದ ಕಂಗೊಳಿಸುತ್ತಿರುತ್ತದೆ. ಮಳೆಗಾಲದಲ್ಲಿ ಮಲೆನಾಡ ಸೌಂದರ್ಯವು ಮೈವೆತ್ತಂತೆ ಇಲ್ಲಿನ ಜಲಧಾರೆಗಳು ಧುಮ್ಮಿಕ್ಕಿ ಹರಿಯುವುದನ್ನು ನೋಡುವುದೇ ಸೊಗಸು. ಬೆಟ್ಟ-ಗುಡ್ಡಗಳು ಸುರಿವ ಮಳೆಯ ನಡುವೆ ಹಸುರುಟ್ಟು ಶೋಭಿಸುತ್ತಿವೆ. ಇದೇ ಕಾರಣಕ್ಕೆ ಚಾರಣಿಗರು ಮಳೆಗಾಲದಲ್ಲಿ ಮಲೆನಾಡಿನ ಸೊಬಗನ್ನು ಮಿಸ್ ಮಾಡಿಕೊಳ್ಳುವುದಿಲ್ಲ. ಮಲೆನಾಡಿನ ಮೂಲೆ-ಮೂಲೆ ಜಾಲಾಡದೆ ಅವರು ತೃಪ್ತಿಪಡುವುದಿಲ್ಲ. ಇಂಥ ಚಾರಣಿಗರು ಚಾರಣದ ಸವಿಯನ್ನು ಮನಸಾರೆ ಅನುಭವಿಸಲು ಹೇಳಿ ಮಾಡಿಸಿದ ಹೊಚ್ಚ ಹೊಸ ತಾಣ ಪಂಚಮಿ ಕಲ್ಲು ಜೊತೆ ಕ್ಯಾತನಮಕ್ಕಿ .

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಮೇಗುಂದ ಗ್ರಾಮದಲ್ಲಿ ಕಾಣಸಿಗುವ ಪ್ರವಾಸಿ ತಾಣವೇ 'ಪಂಚಮಿ ಕಲ್ಲು' ಅಂಕುಡೊಂಕಾದ ದಾರಿಯಲ್ಲಿ ಸಾಗಿದಾಗ ಸುಂದರವಾದ ಬೆಟ್ಟ ಗುಡ್ಡಗಳಿಂದ ಸುತ್ತುವರೆದು, ಬೆಟ್ಟದ ತುತ್ತ ತುದಿಯಲ್ಲಿ ಒಂದು ಸುಂದರ ಸ್ಮಾರಕವು ಕಾಣಸಿಗುತ್ತದೆ ಅದೇ ಪಂಚಮೀ ಕಲ್ಲು. ಇದು ಜೈನ ಧರ್ಮದವರಿಗೆ ಸಂಬಂಧಿಸಿದ ತಾಣವಾಗಿದ್ದು. ಈ ಜೈನ ಸ್ಮಾರಕವು ಹಲವಾರು ವರ್ಷಗಳಿಂದ ಅಸ್ತಿತ್ವದಲ್ಲಿದೆ. ಮತ್ತು ಧ್ಯಾನಕ್ಕಾಗಿ ಜೈನ ಸಂತರ ವಿಹಾರ ತಾಣವಾಗಿದ್ದು, ಹೆಸರೇ ಸೂಚಿಸುವಂತೆ ಈ ರಚನೆಯು ದೊಡ್ಡದಾದ ಕಲ್ಲಿನ ಮೇಲೆ ಚಿಕ್ಕದಾದ ಕಲ್ಲಿನ ಗೋಪುರದಿಂದ ನಿರ್ಮಿಸಲ್ಪಟ್ಟಿದೆ. ಪಂಚಮಿ ಕಲ್ಲು ಎಂಬ ಪ್ರವಾಸಿ ತಾಣವು ಪ್ರಸ್ತುತ ದಿನಗಳಲ್ಲಿ ಸದ್ದಿಲ್ಲದೆ ಸದ್ದು ಮಾಡುತ್ತಿದೆ. ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಈ ಜಾಗಕ್ಕೆ ಇತ್ತೀಚಿನ ದಿನಗಳಲ್ಲಿ ಭೇಟಿ ನೀಡುತ್ತಿದ್ದು, ಹಾಗಾಗೀ ಬೆಟ್ಟದ ಮೇಲಿರುವ ಸುಂದರವಾದ ಕಲ್ಲಿನ ಮಂಟಪವು ನೋಡುಗರ ಕಣ್ಮನ ಸೆಳೆಯುತ್ತಿದೆ

ಪಂಚಮಿ ಕಲ್ಲು: ಮೇಗುಂದದ ಶಾಂತಿನಾಥ ಬಸದಿಯಿಂದ ಸುಮಾರು 3 ಕಿ.ಮೀ ದೂರದಲ್ಲಿ ಸಲ್ಲೇಖನವನ್ನು ಅಭ್ಯಾಸ ಮಾಡುವ ಮೂಲಕ ಸಮಾಧಿಯನ್ನು ಸಾಧಿಸಿದ ಜೈನ ಮುನಿಗಳ 4 ವಿಭಿನ್ನ ಪಾದ/ ಅಡಿ ಅನಿಸಿಕೆಗಳನ್ನು ಹೊಂದಿರುವ ಎತ್ತರದ ಪ್ರದೇಶವನ್ನು ಕಾಣಬಹುದು. ಈ ಸ್ಥಳವನ್ನು ಪಂಚಮಿ ಕಲ್ಲು ಎಂದು ಕರೆಯುತ್ತಾರೆ.

ಪಂಚಮಿ ಕಲ್ಲು ವಿಶೇಷತೆ: ಪಂಚಮಿ ಕಲ್ಲು ಎಂಬ ಅಪರಿಚಿತ ಬೆಟ್ಟಗಳಲ್ಲಿ ಒಂದಾಗಿದೆ. ಎಲ್ಲೂ ತನ್ನ ವೈಭವಿಕತೆಯನ್ನು ಪಸರಿಸದೆ, ಹಚ್ಚ ಹಸಿರ ಬೆಟ್ಟ ಗುಡ್ಡಗಳಿಂದ ಸುತ್ತವರೆದು, ಅಗಾಧವಾದ ಐತಿಹಾಸಿಕ ಹಿನ್ನಲೆಯೊಂದಿಗೆ, ವೈವಿಧ್ಯಮಯ ವಿಶಾಲವಾದ ಭೂಪ್ರದೇಶದಿಂದ ತುಂಬಿದ ಉತ್ತಮ ಸ್ಥಳವಾಗಿದೆ. ಅದರಲ್ಲೂ ಸಂಜೆ ಹೊತ್ತಿಗೆ ಇಲ್ಲಿ ಚಾರಣೆ ಮಾಡಿದಾಗ ತಂಪಾದ ತಂಗಾಳಿಯೊಂದಿಗೆ ಸುಂದರವಾದ ಸೂರ್ಯಾಸ್ತವನ್ನು ಕಣ್ತುಂಬಿಕೊಳ್ಳಬಹುದು.

ಕ್ಯಾತಾಯಿನಿ ಮಕ್ಕಿ ಬೆಟ್ಟ: ಕುದುರೆಮುಖ ಪ್ರದೇಶದ ಸಮೀಪದಲ್ಲಿರುವ ಕ್ಯಾತನಮಕ್ಕಿಯು ನಗರದ ವೇಗದ ಜೀವನದಿಂದ ಪಾರಾಗುವ ಬಯಕೆಯೊಂದಿಗೆ ಬೆಂಗಳೂರಿನಿಂದ ವಾರಾಂತ್ಯದ ವಿಹಾರಕ್ಕೆ ಬಯಸುವವರಿಗೆ ಸೂಕ್ತವಾದ ಸ್ಥಳವಾಗಿದೆ. ಹಚ್ಚಹಸಿರಿನ ಹುಲ್ಲುಗಾವಲುಗಳಿಂದ ಅಲಂಕರಿಸಲ್ಪಟ್ಟ ಸುಂದರವಾದ ಭೂದೃಶ್ಯವು, ಮತ್ತು ಅಂಕುಡೊಂಕಾದ ತೊರೆಗಳು ನಿಮ್ಮನ್ನು ವಿಸ್ಮಯಗೊಳಿಸುತ್ತವೆ. ಇದಲ್ಲದೆ, ರೋಲಿಂಗ್ ಬೆಟ್ಟಗಳು ಸೂರ್ಯೋದಯ ಮತ್ತು ಸೂರ್ಯಾಸ್ತದ ಉಸಿರುಕಟ್ಟುವ ಸುಂದರ ನೋಟಕ್ಕಾಗಿ ಈ ಗಿರಿಧಾಮ ಅತೀ ಹೆಚ್ಚು ಜನಪ್ರಿಯವಾಗಿವೆ.

ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲ್ಲೂಕಿನ ಪ್ರವಾಸಿಗರ ಅಚ್ಚುಮೆಚ್ಚಿನ ತಾಣ ಕ್ಯಾತನಮಕ್ಕಿ. ಮೂಡಿಗೆರೆಯಿಂದ ಕ್ಯಾತನಮಕ್ಕಿ 72 ಕಿ.ಮೀ ದೂರದಲ್ಲಿದ್ದು ಮೊದಲು ಮೂಡಿಗೆರೆ ತಾಲ್ಲೂಕಿ ನಲ್ಲಿದ್ದು ಪ್ರಸ್ತುತ ಈ ಸ್ಥಳವು ನೂತನವಾಗಿ ಕಳಸ ತಾಲ್ಲೂಕನ್ನು ಹೊಂದಿದೆ. ಹೊರನಾಡು ಶ್ರೀಅನ್ನಪೂರ್ಣೇಶ್ವರಿ ದೇವಸ್ಥಾನ ಸಮೀಪವಿರುವ ಈ ತಾಣಕ್ಕೆ ಶೃಂಗೇರಿಗೆ ಸಂಪರ್ಕಿಸುವ ರಸ್ತೆಯಲ್ಲಿ ಸಾಗಬೇಕು, ಶೃಂಗೇರಿಯಿಂದ ಸಾಗಬೇಕಾದರೆ, ಗಡಿಕಲ್ಲು ಸಮೀಪ 20 ಕಿ.ಮೀ ದಾರಿ ಸಮೀಪ 'ಪಂಚಮಿಕಲ್ಲು ಬೆಟ್ಟವನ್ನು' ಜೈನ ಬಸದಿಯ ಸಮೀಪದಲ್ಲಿ ಈ ಸುಂದರ ಕ್ಯಾತನಮಕ್ಕಿ ಸುಂದರ ಪ್ರಕೃತಿ ತಾಣ ಸಿಗುತ್ತದೆ.

ಕ್ಯಾತಾಯಿನಿ ಮಕ್ಕಿ ಬೆಟ್ಟ ತಲುಪುವ ಮೊದಲು ಅರಣ್ಯ ಇಲಾಖೆಯ ತಪಾಸಣಾ ಕೇಂದ್ರ ಸಿಗುತ್ತದೆ.

ಅಲ್ಲಿ ಪ್ರತಿಯೊಬ್ಬರಿಗೂ 50 ರು. ಟಿಕೆಟ್ ನಿಗದಿತ ಮಾಡಲಾಗಿದೆ. ವಾಹನ ನಂಬರ್ ಮತ್ತು ಪ್ರವಾಸಿಗರ ಬಗ್ಗೆ ದಾಖಲೆ ಪುಸ್ತಕದಲ್ಲಿ ನಮೂದಿಸಿ ನಂತರ ನಮ್ಮನ್ನು ಮುಂದೆ ಬಿಡಲಾಗುತ್ತದೆ. ನಂತರ ಆರಂಭವಾಗುವುದೇ ಬಹಳ ಕಡಿದಾದ ರಸ್ತೆಯ ಯಾತ್ರೆ. ಮಳೆ ಬಂದರಂತೂ ಸಾಗಲು ಅಸಾಧ್ಯವಾದ ರಸ್ತೆ, ಕಲ್ಲು, ಕೆಸರಿನಿಂದ ಮತ್ತು ಇಳಿಜಾರಿನಿಂದ ಕೂಡಿದ್ದು, ಮುಂದೆ ವಾಹನ ಬಂದರೆ ಜಾಗ ಕೊಡಲು ಅಸಾಧ್ಯವಾದ ರಸ್ತೆಯಲ್ಲಿ ಬಹಳಷ್ಟು ಜಾಗ್ರತೆಯಿಂದ ಸಾಗಬೇಕು. ಇಲ್ಲಿ ಸಾಗಲು ಫೋರ್ ವೀಲ್ ವಾಹನಗಳಷ್ಟೆ ಸಾಧ್ಯ ಚಾಲನೆಯಲ್ಲಿ ಎಷ್ಟೇ ಹುಷಾರುಗಿದ್ದರೂ ಸಾಲದು, ಚಾಲಕ ಸ್ವಲ್ಪ ಮೈ ಮರೆತರೂ ದೊಡ್ಡ ಪ್ರಪಾತಕ್ಕೆ ಬೀಳುವ ಸಾಧ್ಯತೆಯೇ ಹೆಚ್ಚು.

ಸ್ವಂತ ವಾಹನದಲ್ಲಿ ಹೋಗುವುದಾದರೆ, ಟಾರ್ ರಸ್ತೆ ಮುಗಿಯುವ ಮುನ್ನವೇ ವಾಹನ ನಿಲುಗಡೆ ಮಾಡಬೇಕಾಗಿರುವುದರಿಂದ ಅಲ್ಲಿಂದ ರಸ್ತೆ ಸುಸ್ಥಿತಿಯಲ್ಲಿಲ್ಲ ಮತ್ತು ಮೇಲಕ್ಕೆ ತಲುಪಲು 4 ಅಡಿ ಬೇಕಾಗಬಹುದು. ಈ ಪಾರ್ಕಿಂಗ್ ಪ್ರದೇಶದಿಂದ, ಅಗ್ರ ಬಿಂದುವನ್ನು ತಲುಪಲು ಒಬ್ಬರು ಸುಮಾರು 3 ಕಿಮೀ ನಡೆಯಬೇಕು. ಇದು ಸಾಕಷ್ಟು ಸುಲಭವಾದ ನಡಿಗೆಯಾಗಿದೆ. ನೀವು ಅದರ ಮೇಲ್ಭಾಗವನ್ನು ತಲುಪಿದಾಗ ಇದು 360 ಡಿಗ್ರಿಗಳ ಸೊಗಸಾದ ದೃಶ್ಯಾವಳಿಗಳ ಜೊತೆ ತಂಪಾದ ತಂಗಾಳಿ ಬೀಸುವ ಸುಮಧುರಕ್ಷಣವನ್ನು ಆಹ್ಲಾದಕರ, ಹಾಗೇ ಶಿಖರವನ್ನು ತಲುಪಲು ನೀವು ಟ್ರೆಕ್

ಮಾಡಬಹುದು, ಅಥವಾ ಬೈಕು ಬಳಸಬಹುದು ಅಥವಾ ಜೀಪ್ ತೆಗೆದುಕೊಳ್ಳಬಹುದು. ಒಟ್ಟಾಲ್ಲಿ ಪ್ರಕೃತಿಯೊಂದಿಗೆ ಸಮಯ ಕಳೆಯಲು ಅದ್ಭುತವಾದ ಸ್ಥಳದಲ್ಲಿ ಈ ಗಿರಿಧಾಮವು ಒಂದು.

ಗುಡ್ಡದ ತುದಿಯಲ್ಲಿ ಸಿಗುವಂತಹ ಖುಷಿ ಮಲೆನಾಡಿನ ಸ್ವರ್ಗ ಎಂದೇ ಪ್ರಸಿದ್ದಿ ಪಡೆದ ಕ್ಯಾತನಮಕ್ಕಿಯಲ್ಲಿ ಸಿಗುತ್ತಿದೆ. ಮೊದಲು ಪ್ರವಾಸಿಗರು ವಾಹನವನ್ನು ವೀವ್ ಪಾಯಿಂಟ್ ಬಳಿ ತೆಗೆದುಕೊಂಡು ಹೋಗಿ ಅಲ್ಲಿನ ರಸ್ತೆ ಹಾಳು ಮಾಡುತ್ತಿದ್ದುದ್ದರಿಂದ ಅರಣ್ಯ ಇಲಾಖೆ ಸಂಪೂರ್ಣ ಬೇಲಿ ಹಾಕಿದ್ದು, ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಅಲ್ಲಿಂದ ನಡೆದು ಸಾಗಬೇಕು ಮುಖ್ಯ ರಸ್ತೆಯಿಂದ ಬಾಡಿಗೆಗೆ ಪಿಕಪ್, ಜೀಪ್ ಗಳಿದ್ದು ಇವರಿಗೆ ಇಲ್ಲಿಗೆ ಪ್ರವಾಸಿಗರನ್ನು ಕರೆತಂದು ಅವರನ್ನು ಪುನಃ ಬಿಡುವುದು ಕೆಲಸ . ಬೆಂಗಳೂರು ಬಾಗದ ಪ್ರವಾಸಿಗರಂತು ಬೈಕಿನಲ್ಲಿ ಬಂದು ಎದ್ದು ಬಿದ್ದು ನಿಸರ್ಗದ ಸೌಂದರ್ಯ ಸವಿಯಲು ಬರುತ್ತಿದ್ದಾರೆ. ಕಳಸದ ಸುತ್ತಮುತ್ತಲಿನ ಹೋಂ ಸ್ಟೇಗೆ ಬಂದ ಅತಿಥಿಗಳು ಇಲ್ಲಿಗೆ ಸಂದರ್ಶಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಇದು ರಾಜ್ಯಾದ್ಯಂತ ಪ್ರಖ್ಯಾತಿ ಪಡೆದಿದ್ದು, ಹೆಚ್ಚಿನ ಯಾತ್ರಿಕರು ಭೇಟಿ ನೀಡುತ್ತಿದ್ದಾರೆ.

ಇದು ಕುದುರೆಮುಖ ಅರಣ್ಯಕ್ಕೆ ಅಂಟಿಕೊಂಡಿದ್ದು, ಪಕ್ಕದ ಶೃಂಗೇರಿ, ಕೊಪ್ಪ ತಾಲ್ಲೂಕಿಗೆ ಸಮೀಪದಲ್ಲಿದೆ. ಇದು ಪ್ರವಾಸಿಗರ ಸ್ವರ್ಗ ಇದನ್ನು ಹಾಗೆ ಕಾಪಾಡಿಕೊಳ್ಳುವುದು ಸಹ ನಮ್ಮ ಕರ್ತವ್ಯ ಇಲ್ಲಿಗೆ ಬಂದಾಗ ಮೋಜು ಮಸ್ತಿಯಲ್ಲಿ ತೊಡಗದೆ ಬಾಟಲಿ ಪ್ಲಾಸ್ಟಿಕ್ ಬಿಸಡದೆ ಪರಿಸರವನ್ನು ಉಳಿಸಿ ಬೆಳೆಸುವ ಕಾರ್ಯ ,ಮಾಡಬೇಕಿರುವುದು ಪ್ರವಾಸಿಗರ ಕರ್ತವ್ಯವಾಗಬೇಕಿದೆ.

ಆಸ್ಪತ್ರೆಗಳು ಸ್ವ ಸಾಮರ್ಥ್ಯದಿಂದ ಚಿಕಿತ್ಸೆ ನೀಡಲಿ

ಆರೋಗ್ಯ ಇಲಾಖೆ ಪ್ರಗತಿ ಪರಿಶೀಲನಾ ಸಭೆ | ಜನಸಂಖ್ಯೆಗನುಗುಣವಾಗಿ ಸೌಲಭ್ಯ | ಸಚಿವ ದಿನೇಶ್ ಆರ್.ಗುಂಡೂರಾವ್

ಹೊಸಪೇಟೆ: ಸರಕಾರಿ ಆಸ್ಪತ್ರೆಗಳು ಎಬಿಆರ್‌ಕೆಯಿಂದ ಪಡೆಯುವ ಅನುದಾನ ಸಮರ್ಪಕವಾಗಿ ಬಳಕೆ ಮಾಡಿಕೊಂಡು ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಗಂಗಾವತಿ ಸಾರ್ವಜನಿಕ ಆಸ್ಪತ್ರೆಯ ರೀತಿ ಎಲ್ಲಾ ಆಸ್ಪತ್ರೆಗಳು ಸ್ವಸಾಮರ್ಥ್ಯದ ಮೇಲೆ ಕಾರ್ಯನಿರ್ವಹಿಸುವಂತಾಗಬೇಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್.ಆರ್.ಗುಂಡೂರಾವ್ ಹೇಳಿದರು.

ಹೊಸಪೇಟೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿಜಯನಗರ ಹಾಗೂ ಕೊಪ್ಪಳ ಜಿಲ್ಲೆಗಳ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಜಯನಗರ ಜಿಲ್ಲೆಯು ಆರೋಗ್ಯ ಸುಧಾರಣೆಯಲ್ಲಿ ಬಹಳ ಹಿಂದುಳಿದಿದೆ, ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡಿದರೆ ಜಿಲ್ಲೆಯ ಪ್ರಗತಿ ಸಾಧ್ಯ. ಮಕ್ಕಳ ರೋಗ ಪ್ರತಿರೋಧಕ ಶಕ್ತಿ ಹೆಚ್ಚಿಸಲು ಲಸಿಕಾ ಕಾರ್ಯಕ್ರಮಗಳು ಬಹಳ ಪ್ರಮುಖವಾಗಿದ್ದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ನಿಟ್ಟಿನಲ್ಲಿ ಆರೋಗ್ಯ ಇಲಾಖಾ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಲು ತಿಳಿಸಿದರು.

ರೆಫರಲ್ ಗೊಂದಲ: ಎಬಿಆರ್‌ಕೆ ಯಡಿ ಚಿಕಿತ್ಸೆ ಪಡೆಯಲು ರೆಫರಲ್ ಬೇಕಾಗಿದೆ, ಆನ್‌ಲೈನ್‌ನಲ್ಲಿ ದಾಖಲು ಮಾಡಬೇಕಾಗಿರುವುದರಿಂದ ಇದು ಗೊಂದಲಕ್ಕೆ ಕಾರಣವಾಗಿದೆ ಎಂದು ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್ ಸಭೆಯಲ್ಲಿ ಪ್ರಸ್ತಾಪಿಸಿದಾಗ ಚಿಕಿತ್ಸೆ ಪಡೆಯುವ ರೋಗಿಯ ವ್ಯಾಪ್ತಿಯ ಆಸ್ಪತ್ರೆಯಲ್ಲಿ ಮೊದಲು ಚಿಕಿತ್ಸೆ ಪಡೆಯಬೇಕು ಎಂದು ಹೇಳಿದರು.

ವಿಜಯನಗರ ಹಾಗೂ ಕೊಪ್ಪಳ ಜಿಲ್ಲೆಗಳ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ದಿನೇಶ್ ಆರ್.ಗುಂಡೂರಾವ್ ಮಾತನಾಡಿದರು.

ಪಾರದರ್ಶಕ ಆಡಳಿತಕ್ಕೆ ಕೌನ್ಸಿಲಿಂಗ್: ಆರೋಗ್ಯ ಇಲಾಖೆ ಹೆಚ್ಚು ಮಾನವ ಸಂಪನ್ಮೂಲ ಹೊಂದಿದ ಇಲಾಖೆಯಾಗಿದ್ದು ರಾಜ್ಯದಲ್ಲಿ 70 ಸಾವಿರದಷ್ಟು ಅಧಿಕಾರಿ, ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಎಲ್ಲಾ ಸಿಬ್ಬಂದಿಗಳು ಉತ್ತಮ ಸೇವೆ ನೀಡಲು ಮತ್ತು ಪಾರದರ್ಶಕವಾದ ಆಡಳಿತಕ್ಕಾಗಿ ವರ್ಗಾವಣೆಗಾಗಿ ಯಾವುದೇ ಒತ್ತಡ, ಶಿಫಾರಸು ಇಲ್ಲದ ರೀತಿಯಲ್ಲಿ ಕೌನ್ಸಿಲಿಂಗ್ ಮೂಲಕವೇ ವರ್ಗಾವಣೆ ಮಾಡಲು ಉದ್ದೇಶಿಸಲಾಗಿದ್ದು ವೈದ್ಯರು ಮತ್ತು ಸಿಬ್ಬಂದಿಯವರು ಯಾವುದೇ ಪಕ್ಷಪಾತವಿಲ್ಲದೇ ಕೆಲಸ ಮಾಡಲು ತಿಳಿಸಿದರು.

ಜನಸಂಖ್ಯೆಗನುಗುಣವಾಗಿ ಆರೋಗ್ಯ ಸೌಲಭ್ಯ: ಇತ್ತೀಚಿನ ದಿನಗಳಲ್ಲಿ ನಗರೀಕರಣ ಹೆಚ್ಚುತ್ತಿದ್ದು 2027 ರ ವೇಳೆಗೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಜನಸಂಖ್ಯೆಗನುಗುಣವಾಗಿ ಆಸ್ಪತ್ರೆಗಳಲ್ಲಿನ ಹಾಸಿಗೆ ಸಾಮರ್ಥ್ಯಗಳನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ. ಅದಕ್ಕಾನು ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆ ಸೇರಿದಂತೆ ಈಗಿರುವ ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿನ ಹಾಸಿಗೆ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ನಮ್ಮ ಕ್ಲಿನಿಕ್‌ಗಳನ್ನು ಹೆಚ್ಚಿಸಲಾಗುತ್ತದೆ ಎಂದರು.

ಎಬಿಆರ್‌ಕೆ ಸಮರ್ಪಕ ಬಳಕೆಗೆ ಸೂಚನೆ

ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಕಾರ್ಯಕ್ರಮಗಳಲ್ಲಿ ಸರಕಾರಿ ಆಸ್ಪತ್ರೆಗಳು ನೊಂದಾಯಿತ ಆಸ್ಪತ್ರೆಗಳಾಗಿದ್ದು, ಈ ಯೋಜನೆಯಡಿ ಚಿಕಿತ್ಸೆ ನೀಡಿದಲ್ಲಿ ಅಂತಹ ಆಸ್ಪತ್ರೆಗಳಿಗೆ ಚಿಕಿತ್ಸಾ ವೆಚ್ಚ ಬರುತ್ತದೆ. ಈ ಅನುದಾನದಲ್ಲಿ ಆಸ್ಪತ್ರೆಗೆ ಬೇಕಾದ ವೈದ್ಯಕೀಯ ಪರಿಕರ, ಔಷಧಗಳು, ಸೇವೆಗಳಿಗೆ ವೆಚ್ಚ ಸೇರಿದಂತೆ ಆಸ್ಪತ್ರೆಯ ಅಭಿವೃದ್ಧಿಗೆ ಬಳಕೆ ಮಾಡಿಕೊಂಡು ಸ್ವ ಸಾಮರ್ಥ್ಯ ಬೆಳೆಸಿಕೊಳ್ಳಬಹುದಾಗಿದೆ.

ವಿಜಯನಗರ ಶಾಸಕ ಎಚ್.ಆರ್.ಗವಿಯಪ್ಪ ಮಾತನಾಡಿ, ಜಿಲ್ಲಾ ಆಸ್ಪತ್ರೆ ಆರಂಭ ವಿಳಂಬವಾಗುವುದರಿಂದ ಹೃದ್ರೋಗ ಚಿಕಿತ್ಸಾ ಕೇಂದ್ರ ಆರಂಭಿಸಲು, ಇದಕ್ಕಾಗಿ ಕೆಕೆಆರ್‌ಡಿಬಿಯಿಂದ ಔಷಧ ಮತ್ತು ವೈದ್ಯರ ಸೇವೆಯನ್ನು ಸಿಎಸ್‌ಆರ್ ಅಡಿ ಒದಗಿಸಲಿದ್ದು ಸರಕಾರದಿಂದ ಅನುಮತಿ ನೀಡಲು ಮನವಿ ಮಾಡಿದಾಗ ಸಚಿವರು ಅನುಮೋದನೆ ನೀಡಲಾಗುತ್ತದೆ ಎಂದರು.

ಹಡಗಲಿ ಶಾಸಕ ಕೃಷ್ಣನಾಯ್ಕ ಮಾತನಾಡಿ, ವೈದ್ಯಕೀಯ ಪರಿಕರಣಗಳ ನಿರ್ವಹಣೆಗೆ ತಾಂತ್ರಿಕ ಸಿಬ್ಬಂದಿಗಳ ಕೊರತೆಯ ಕಾರಣ ಸಮರ್ಪಕ ಬಳಕೆಯಾಗುತ್ತಿಲ್ಲ, ಇದಕ್ಕೆ ಇಲಾಖೆಯಿಂದಲೇ ಜಿಲ್ಲೆಗೊಬ್ಬರನ್ನು ತಾಂತ್ರಿಕ ಸಿಬ್ಬಂದಿಗಳ ಸೇವೆ ಒದಗಿಸಲು ಮನವಿ ಮಾಡಿದಾಗ ಎಬಿಆರ್‌ಕೆಯಡಿ ದುರಸ್ತಿ ಮಾಡಿದಲು ಆಡಳಿತ ವೈದ್ಯಾಧಿಕಾರಿಗಳೆ ಕ್ರಮ ಕೈಗೊಳ್ಳಬಹುದಾಗಿದೆ ಎಂದರು.

ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮಾತನಾಡಿ, ಜಿಲ್ಲಾ ಆಸ್ಪತ್ರೆ ಇಲ್ಲದಿರುವುದರಿಂದ ಭಾಗದ ಜನರು ಹೆಚ್ಚುವರಿ ಚಿಕಿತ್ಸೆಗಾಗಿ ಹತ್ತಿರದ ಕೊಪ್ಪಳಕ್ಕೆ ಹೋಗುವರು, ಅಲ್ಲಿನ ಆರೋಗ್ಯ ಇಲಾಖೆ ಅಧಿಕಾರಿಗಳು ಚಿಕಿತ್ಸೆಗೆ ಸ್ಪಂದಿಸಬೇಕೆಂದು ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿ ಹರ್ಷಗುಪ್ತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತ ಶಿವಕುಮಾರ.ಕೆ.ವಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೊಹಮ್ಮದ್ ಅಲಿ ಅಕ್ರಮ್ ಷಾ, ಕೊಪ್ಪಳ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಮತ್ತು ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಹಲವಡೆ ವಿದ್ಯುತ್ ವ್ಯತ್ಯಯ ಇಂದು

ಬಳ್ಳಾರಿ: ನಗರದ ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ 110/11ಕೆ.ವಿ ಕುಡುತಿನಿ ಉಪ-ಕೇಂದ್ರದ ಆವರಣದಲ್ಲಿರುವ ಶಿಥಿಲಗೊಂಡ ಜಿ.ಒ.ಎಸ್ ಬದಲಾಯಿಸುವ ಕಾರ್ಯವನ್ನು ತುರ್ತಾಗಿ ಕೈಗೊಳ್ಳುತ್ತಿರುವುದರಿಂದ ಅ.24 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರಗೆ 110/11ಕೆ.ವಿ ಕುಡುತಿನಿ ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ 11ಕೆವಿ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಬಳ್ಳಾರಿ ಗ್ರಾಮೀಣ ಕಾರ್ಯ ಮತ್ತು ಪಾಲನಾ ಉಪವಿಭಾಗ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರಾಜೇಂದ್ರ ಪ್ರಾಸಾದ್ ತಿಳಿಸಿದ್ದಾರೆ. ವಿದ್ಯುತ್ ವ್ಯತ್ಯವಾಗುವ ಪ್ರದೇಶಗಳು: ಎಫ್-6 ದರೋಜಿ ಐಪಿ ಮಾರ್ಗದ ಏಳುಬೆಂಚಿ, ಸಿದ್ದಮ್ಮನಹಳ್ಳಿ, ರ್ರಂಗಳಿ, ಬಸವಣ್ಣ ಕ್ಯಾಂಪ್, ಭೂಲಕ್ಷ್ಮೀ ಕ್ಯಾಂಪ್ ಕೃಷಿ ಪ್ರದೇಶಗಳು. ಎಫ್-2 ತಿಮ್ಮಲಾಪುರ ಎನ್‌ಜೆವೈ ಮಾರ್ಗದ ಸಿದ್ದಮ್ಮನಹಳ್ಳಿ, ತಿಮ್ಮಲಾಪುರ, ಏಳುಬೆಂಚಿ, ಬಸವಣ್ಣ ಕ್ಯಾಂಪ್ ಗ್ರಾಮಗಳು. ಎಫ್-3, 400 ಕೆಪಿಟಿಸಿಎಲ್ ಮತ್ತು ಬಿಪಿಎಸ್ ಮಾರ್ಗದ 400 ಕೆವಿಎ ಬಿಪಿಎಸ್ ಕುಡುತಿನಿ. ಎಫ್-4 ಕುಡುತಿನಿ ನಗರ ಮಾರ್ಗದ ಕುಡುತಿನಿ ನಗರ, ವೇಣಿವೀರಾಪುರ ಗ್ರಾಮಗಳು. ಎಫ್-5 ವೇಣಿವೀರಾಪುರ ಕೈಗಾರಿಕೆ ಪ್ರದೇಶ ಮಾರ್ಗದ ವೇಣಿವೀರಾಪುರ ಕೈಗಾರಿಕೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಮೀನುಗಾರಿಕೆ ಇಲಾಖೆ: ನೋಂದಣಿಗೆ ಆಹ್ವಾನ

ಬಳ್ಳಾರಿ: ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯ ಉಪ ಯೋಜನೆಯಾದ ಪ್ರಧಾನಮಂತ್ರಿ ಮತ್ಸ್ಯ ಕಿಸಾನ್ ಸಮೃದ್ಧಿ ಸಹ ಯೋಜನೆ ರೂಪಿಸಲಾಗಿದೆ. ಈ ಯೋಜನೆಯು 2023-24 ರಿಂದ 2026-27 ರ ವರೆಗೆ ಚಾಲ್ತಿಯಲ್ಲಿದ್ದು, ಈ ಯೋಜನೆಯಡಿ ಮೀನುಗಾರಿಕೆ ವಲಯದಲ್ಲಿ ತೊಡಗಿಸಿಕೊಂಡಿರುವ ಮೀನುಗಾರರು, ಮೀನುಗಾರರ ಸಹಕಾರ ಸಂಘಗಳು, ದೋಣಿ ಮಾಲಿಕರು, ಮೀನು ಸಂಸ್ಕರಣ ಉದ್ಯಮಿಗಳು, ಮಂಜುಗಡ್ಡೆ ಕಾರ್ಖಾನೆ ಉದ್ದಿಮಿಗಳು, ಮೀನು ಮಾರಟಗಾರರು, ಮಧ್ಯಸ್ಥಗಾರರು ಹಾಗೂ ಇತರರನ್ನು ರಾಷ್ಟ್ರೀಯ ಮೀನುಗಾರಿಕೆ ಡಿಜಿಟಲ್ ವೇದಿಕೆ (ಎನ್‌ಎಫ್‌ಡಿಪಿ) ತಂತ್ರಾಂಶದಲ್ಲಿ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ, ಸಿರುಗುಪ್ಪ, ಕಂಪ್ಲಿ, ಮತ್ತು ಕುರುಗೋಡು ತಾಲೂಕುಗಳಿಗೆ ಸಂಬಂಧಿಸಿದಂತೆ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬಳ್ಳಾರಿ ಮತ್ತು ಸಂಡೂರು ತಾಲೂಕಿಗೆ ಸಂಬಂಧಿಸಿದಂತೆ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಸಂಡೂರು ವಿಳಾಸಕ್ಕೆ ಸಂಪರ್ಕಿಸಬಹುದು ಎಂದು ಮೀನುಗಾರಿಕೆ ಉಪನಿರ್ದೇಶಕ ಶಿವಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಹುದ್ದೆಗಳಿಗೆ ಸಂದರ್ಶನ ಇಂದು

ಬಳ್ಳಾರಿ: ಜಿಲ್ಲಾ ಚವಿನಿಮಯ ಕಚೇರಿ ವತಿಯಿಂದ ನಗರದ ಹಳೇ ತಾಲೂಕು ಕಚೇರಿ ಹಿಂಭಾಗದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಅ.24 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ. ಸಂದರ್ಶನದಲ್ಲಿ ಎಲ್ ಮತ್ತು ಟಿ ಫೈನಾನ್ಸ್ ಪ್ರವೇಟ್ ಲಿಮಿಟೆಡ್ ಇವರು ತಮ್ಮಲ್ಲಿನ ಖಾಲಿ ಇರುವ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳುವರು. ಸಂದರ್ಶ ನದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಆಧಾರ್‌ಕಾರ್ಡ್ ಪ್ರತಿ ಮತ್ತು ಸ್ವ-ವಿವರಗಳೊಂದಿಗೆ ಅಂದು ನಡೆಯುವ ನೇರ ಸಂದರ್ಶನದಲ್ಲಿ ಆಸಕ್ತ ಅಭ್ಯರ್ಥಿಗಳು ಭಾಗವಹಿಸಬಹುದು. ಹೆಚ್ಚಿನ ಮಾಹಿತಿ ಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ಮೊ.9742718891, 9663263086, 9900827768, 6360408094 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಪಿ.ಎಸ್.ಹಟ್ಟಪ್ಪ ತಿಳಿಸಿದ್ದಾರೆ.

ಇ-ಕೆವೈಸಿಗೆ ಪಡಿತರ ಚೀಟಿದಾರರಿಗೆ ಸೂಚನೆ

ಬಳ್ಳಾರಿ: ಜಿಲ್ಲೆಯ ಪಡಿತರ ಚೀಟಿದಾರರು ತಮ್ಮ ಗುರುತು ನೋಂದಣಿ ಅಥವಾ ಮರುನೋಂದಣಿ ಮಾಡಿಸದೇ ಇರುವ ಎಲ್ಲಾ ಸದಸ್ಯರು ನವೆಂಬರ್ 30 ರೊಳಗೆ ತಮ್ಮ ಹತ್ತಿರದ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ತಮ್ಮ ಬೆರಳಚ್ಚು ನೀಡಿ ಭಯೋಸಂಗ್ರಹಣೆ (ಇ-ಕೆವೈಸಿ) ಸಂಗ್ರಹಣೆ ಕಾರ್ಯ ಮಾಡಿಸಿಕೊಳ್ಳಬೇಕು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕಿ ಸಕೀನಾ ತಿಳಿಸಿದ್ದಾರೆ. ಆಧಾರ್ ದೃಢೀಕರಣ(ಇ-ಕೆವೈಸಿ) ಮಾಡಿಸದೇ ಇರುವ ಫಲಾನುಭವಿಗಳಿಗೆ ಡಿಸೆಂಬರ್ ಮಾಹೆಯಲ್ಲಿ ಪಡಿತರ ಹಂಚಿಕೆ ಸ್ಥಗಿತಗೊಳಿಸಲು ಕ್ರಮವಹಿಸಲಾಗುವುದು. ಹಾಗಾಗಿ ಇ-ಕೆವೈಸಿ ಮಾಡಿಸಿಕೊಳ್ಳದೇ ಇರುವ ಪಡಿತರ ಚೀಟಿಯಲ್ಲಿರುವ ಪ್ರತಿಯೊಬ್ಬ ಸದಸ್ಯರೂ ಸಹ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ತಮ್ಮ ಹೆಬ್ಬೆರಳು ನೀಡಿ ಹೆಸರು ಮರು ನೋಂದಾವಣೆ (ಇ-ಕೆವೈಸಿ) ಮಾಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಪರಿಸರ ಸ್ನೇಹಿ ದೀಪಾವಳಿ ಆಚರಣೆಗೆ ಡಿಸಿ ಸೂಚನೆ

ಬಳ್ಳಾರಿ: ದೀಪಾವಳಿ ಹಬ್ಬದ ಸಮಯದಲ್ಲಿ ಸಾರ್ವಜನಿಕರು ನಿಷೇಧಿತ ಪಟಾಕಿ, ಸಿಡಿಮದ್ದುಗಳನ್ನು ಬಿಟ್ಟು ಹಸಿರು ಪಟಾಕಿಯನ್ನು ಬಳಸುವ ಮೂಲಕ ಪರಿಸರ ಸ್ನೇಹಿ ದೀಪಾವಳಿ ಹಬ್ಬವನ್ನು ಆಚರಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಮನವಿ ಮಾಡಿದ್ದಾರೆ. ಜಿಲ್ಲೆಯಲ್ಲಿ ದೀಪಾವಳಿ ಹಬ್ಬದ ಸಮಯದಲ್ಲಿ ಹಸಿರು ಪಟಾಕಿಗಳನ್ನು ಹೊರತುಪಡಿಸಿ ಉಳಿದ ಯಾವುದೇ ರೀತಿಯ ಇತರೆ ಪಟಾಕಿಗಳ ಮಾರಾಟ ಮತ್ತು ಬಳಕೆ ನಿಷೇಧಿಸಲಾಗಿದೆ. ಹಸಿರು ಪಟಾಕಿಗಳನ್ನು ದೀಪಾವಳಿ ಹಬ್ಬದ ದಿನದ ರಾತ್ರಿ 8 ಗಂಟೆಯಿಂದ 10 ಗಂಟೆಯವರೆಗೆ ಮಾತ್ರ ಬಳಸಿ ಪರಿಸರ ಸ್ನೇಹಿ ಹಬ್ಬವನ್ನು ಆಚರಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆಪ್

{ ಬಸವರಾಜ ಬೊಮ್ಮಾಯಿ } ಸಂಸದ

ವಿನಯ್ ಕುಲಕರ್ಣಿ ಪುತ್ರಿಗೆ ಕಾಂಗ್ರೆಸ್ ಟಿಕೆಟ್ ಘೋಷಣೆ ಸಾಧ್ಯತೆ ಬಗ್ಗೆ ಪ್ರತಿಕ್ರಿಯಿಸಿ, ಯಾರೇ ಆಗಲಿ ಕಾಂಗ್ರೆಸ್ ಅಭ್ಯರ್ಥಿ ಕಾಂಗ್ರೆಸ್ ಅಭ್ಯರ್ಥಿನೇ. ಚುನಾವಣೆಯನ್ನು ಅತ್ಯಂತ ಸ್ಪರ್ಧಾತ್ಮಕವಾಗಿಯೇ ಎದುರಿಸುತ್ತೇವೆ. ಸೌಹಾರ್ದ ಚುನಾವಣೆ ಮಾಡುತ್ತೇವೆ. ಅಸಮಾಧಾನ ಪ್ರತಿ ಚುನಾವಣೆಯಲ್ಲಿ ಇರುತ್ತದೆ.



ಡಿಸಿ ವಿಡಿಯೋ ಕಾನ್ಫರೆನ್ಸ್ ಪರಿಶೀಲನಾ ಸಭೆ

ಹೊಸಪೇಟೆ: ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಬೆಳೆ ಹಾನಿ ಕುರಿತು ಮೊಬೈಲ್ ಆಧಾರಿತ ಸಮೀಕ್ಷಾ ಕಾರ್ಯ ಪೂರ್ಣಗೊಳಿಸಿ ನಿಗಧಿತ ಅವಧಿಯೊಳಗೆ ವರದಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದರು.

ಮಳೆಯಿಂದಾದ ಹಾನಿಗೆ ಸಂಬಂಧಿಸಿದಂತೆ ಜಿಲ್ಲಾಡಳಿತ ಭವನದ ಕೆಸ್ವಾನ್ ಹಾಲ್‌ನಲ್ಲಿ ನಡೆದ ವಿಡಿಯೋ ಸಂವಾದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆಯವರು ಜಂಟಿಯಾಗಿ ಆಯಾ ಭಾಗಗಳಿಗೆ ತಕ್ಷಣವೇ ಭೇಟಿ ನೀಡಿ ಹಾನಿಯಾದ ಬೆಳೆಗಳ ವರದಿ ತೆಗೆದುಕೊಂಡು ನಿಯಮಾನುಸಾರ ಕ್ರಮವಹಿಸಬೇಕು ಎಂದು ಹೇಳಿದರು.

ನಿರಂತರ ಮಳೆಯಿಂದಾಗಿ ಹೊಲದ ತುಂಬೆಲ್ಲಾ ನೀರು ನಿಂತು ರೈತರು ಸಂಕಷ್ಟ ಎದುರಿಸುವ ಪರಿಸ್ಥಿತಿ ಬಂದಿದೆ. ಅದೇ ರೀತಿ ಕೆಲವು ಕಡೆ ಈರುಳ್ಳಿ ಬೆಳೆಯು ಮಳೆಗೆ ಸಿಲುಕಿದ್ದು, ಕೃಷಿ ಇಲಾಖೆ ಅಧಿಕಾರಿಗಳು ಹೊಲಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿ ರೈತರಿಗೆ ಸಲಹೆ ನೀಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ಹಿಂದೆ 267 ಮನೆಗಳು ಬಿದ್ದ ಬಗ್ಗೆ ವರದಿಯಾಗಿತ್ತು. ಬಾಕಿ ಮನೆಗಳಿಗೆ ಪರಿಹಾರ ಕೊಡಲು ಕ್ರಮವಹಿಸಬೇಕು. ದಾಖಲೆಗಳನ್ನು ಪರಿಶೀಲಿಸಿ ಬಿದ್ದ ಮನೆಗಳಿಗೆ ಪರಿಹಾರ ಧನ ದೊರಕಿಸಲಾಗಿದೆ ಎಂದು ಅಧಿಕಾರಿಗಳಿಗೆ, ಸಭೆಗೆ ಮಾಹಿತಿ ನೀಡಿದರು. ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಮಾತನಾಡಿ, ಮುಂಗಾರು ಹಂಗಾಮಿನಲ್ಲಿ ಉಂಟಾದ ಮಳೆ ಹಾನಿಯ ಹಿನ್ನೆಲೆಯಲ್ಲಿ ಸಿಬ್ಬಂದಿಗೆ ವಹಿಸಿದ ಕಾರ್ಯ ಅಚ್ಚುಕಟ್ಟಾಗಿ ನಿರ್ವಹಿಸಲು ಸೂಚಿಸಿದರು. ಜಿಲ್ಲೆಯ ಪ್ರತಿ ತಾಲೂಕಿನ ಮನೆಗಳಿಗೆ ಭೇಟಿ ನೀಡಿ ಕಂದಾಯ ಅಧಿಕಾರಿಗಳು ಮಾಹಿತಿ ಪಡೆದುಕೊಳ್ಳಬೇಕು ಎಂದರು.

ಸಭೆಯಲ್ಲಿ ಹೊಸಪೇಟೆ ತಾಲೂಕಿನ ತಹಸೀಲ್ದಾರ ಶೃತಿ ಎಂ.ಎರಡು ಹಾಗೂ ಕಂದಾಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆಸ್ವಾನ್‌ಹಾಲ್‌ನಲ್ಲಿ ವಿಡಿಯೋ ಸಂವಾದ ಸಭೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್ .ದಿವಾಕರ ಮಾತನಾಡಿದರು.

ಜಿಲ್ಲೆಯ ಹಲವು ಕಡೆ 60 ರಿಂದ 70 ಮಿ.ಮೀ ನಷ್ಟು ಮಳೆ ನಿರಂತರವಾಗಿ ಸುರಿಯುತ್ತಿದೆ. ಜಿಲ್ಲೆಯ ಒಟ್ಟು 16 ಹೊಬಳಿಯಲ್ಲಿ ನಿರಂತರವಾಗಿ ಮಳೆ ಸುರಿದು ಕೆರೆ, ಕಟ್ಟೆಗಳೆಲ್ಲಾ ತುಂಬಿವೆ. ಇನ್ನೂ ಒಂದು ವಾರ ಮಳೆ ಬರುವ ಸಂಭವವಿದ್ದು ಅಧಿಕಾರಿಗಳು ಮುಂಜಾಗ್ರತಾ ಕ್ರಮ ವಹಿಸಬೇಕಾಗುತ್ತದೆ.
-ಎಂ.ಎಸ್.ದಿವಾಕರ ಜಿಲ್ಲಾಧಿಕಾರಿ

ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಒತ್ತಾಯ

ಹರಪನಹಳ್ಳಿ: ತಾಲೂಕಿನ ಟಿ.ತುಂಬಿಗೇರಿ ಗ್ರಾಮದಲ್ಲಿನ ವಾಂತಿ ಬೇಧಿ ಪ್ರಕರಣದಿಂದಲೇ ಇಬ್ಬರು ಸಾವನ್ನಪ್ಪಿರುವುದು ಎಂದು ಗ್ರಾಮಸ್ಥರು ಆರೋಪಿಸಿದ ಹಿನ್ನಲೆಯಲ್ಲಿ ವಿಜಯನಗರ ಜಿಲ್ಲಾ ಪಂಚಾಯಿತಿ ಸಿಇಒ ಅವರು ತುಂಬಿಗೇರಿ ಗ್ರಾಮ ಒಳಪಡುವ ರಾಗಿಮಸಲವಾಡ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಎಸ್.ಶ್ರೀನಿವಾಸ ಅವರನ್ನು ಸಸ್ಪೆಂಡ್ ಮಾಡಿ ಆದೇಶ ಹೊರಡಿಸಿದ್ದಾರೆ.

ಮಂಗಳವಾರ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ ಕೂಡಲೇ ಗ್ರಾಮಕ್ಕೆ ಶುದ್ದ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಸಂಬಂಧ ಪಟ್ಟ ಅಧಿಕಾರಿಗಳ ಬಳಿ ಚರ್ಚೆ ನಡೆಸಿದ ಹಿನ್ನಲೆಯಲ್ಲಿ ಶುದ್ದ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಸಾಮಾಗ್ರಿಗಳು ಗ್ರಾಮಕ್ಕೆ ಆಗಮಿಸಿದವು.

ಬ್ಲಿಚೀಂಗ್‌ಪೌಡರ ಸಿಂಪರಣೆ, ತಿಪ್ಪೆಗಳನ್ನು ತೆಗೆಸಲು ಗ್ರಾಮ ಪಂಚಾಯಿತಿಯವರಿಗೆ ಸೂಚಿಸಿದರು.

ಮೃತ ವ್ಯಕ್ತಿಗಳ ಕುಟುಂಬಕ್ಕೆ ಪರಿಹಾರ ನೀಡುವಂತೆ ಗ್ರಾಮಸ್ಥರು ಮನವಿ ಮಾಡಿದಾಗ ಶಾಸಕರು ವೈದ್ಯಕೀಯ ವರದಿ ನೋಡಿ ಅಧಿಕಾರಿಗಳ ಬಳಿ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಬ್ಲಾಕ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಪುರಸಭಾ ಸದಸ್ಯ ವೆಂಕಟೇಶ, ಗಣೇಶ, ಲಾಟಿದಾದಾಪೀರ, ಮುಖಂಡರಾದ ವಸಂತಪ್ಪ, ಎಲ್. ಮಂಜನಾಯ್ಕ ತಹಸೀಲ್ದಾರ ಗಿರೀಶಬಾಬು, ತಾ.ಪಂ ಇಒ ಚಂದ್ರಶೇಖರ, ಪೊಲೀಸ್ ನಿರೀಕ್ಷಕ ನಾಗರಾಜ ಎಂ.ಕಮ್ಮಾರ, ಕುಡಿಯುವ ನೀರು ನೈರ್ಮಲ್ಯ ಇಲಾಖೆಯ ಎಇಇ ಕಿರಣಕುಮಾರನಾಯ್ಕ, ಪಿಎಸ್‌ಐಾದ ಶಂಭುಲಿಂಗ ಹಿರೇಮಠ, ಕಿರಣಕುಮಾರ, ನರೇಗಾ ಸಹಾಯಕ ನಿರ್ದೇಶಕ ಸೋಮಶೇಖರ ಶಾಸಕರ ಜತೆ ಉಪಸ್ಥಿತರಿದ್ದರು.

ಪೈಪು ಲೈನ್ ಬದಲಾವಣೆಗೆ ಸೂಚಿಸಿದ ಶಾಸಕರು 2-3 ಕಡೆ ಸಿಸಿ ರಸ್ತೆ, ಚರಂಡಿ ಕಾಮಗಾರಿಗಳನ್ನು ಅತಿ ಶೀಘ್ರದಲ್ಲಿ ಮಾಡಿಸಿಕೊಡುವುದಾಗಿ ಭರವಸೆ ನೀಡಿದರು. ಹೊಸ ಸಾರಿಗೆ ಬಸುಗಳನ್ನು ಈ ಗ್ರಾಮಕ್ಕೆ ಬಿಡಿಸಲಾಗುವುದು. ಆಶಾ, ಅಂಗನವಾಡಿ ಕಾರ್ಯಕರ್ತೆಯರಿಗೆ ಮನೆ ಮನೆಗೆ ತೆರಳಿ ಜನರಿಗೆ ಸ್ವಚ್ಛತೆ ಕುರಿತು ಅರಿವು ಮೂಡಿಸಬೇಕು.
-ಎಂ.ಪಿ.ಲತಾ ಮಲ್ಲಿಕಾರ್ಜುನ ಶಾಸಕಿ

ಹರಪನಹಳ್ಳಿ ತಾಲೂಕಿನ ಟಿ.ತುಂಬಿಗೇರಿ ಗ್ರಾಮಕ್ಕೆ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು.

ರಾಣಿ ಚೆನ್ನಮ್ಮ ಸ್ಫೂರ್ತಿದಾಯಕ ಮಹಿಳೆ: ಮೇಯರ್

ಬಳ್ಳಾರಿ: ಬ್ರಿಟಿಷರ ವಿರುದ್ಧ ಹೋರಾಡಿದ ಕೆಚ್ಚೆದೆಯ ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚೆನ್ನಮ್ಮ ಅವರು ಸ್ಫೂರ್ತಿಧಾಯಕ ಮಹಿಳೆಯಾಗಿದ್ದು, ಅನೇಕ ವೀರ ಮಹಿಳೆಯರಿಗೆ ಪ್ರೇರಣೆಯಾಗಿದ್ದಾರೆ ಎಂದು ಮಹಾನಗರ ಪಾಲಿಕೆಯ ಮೇಯರ್ ನಂದೀಶ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಬಿ ಸಿದ್ದಲಿಂಗಪ್ಪ ವಿಶೇಷ ಉಪನ್ಯಾಸ ಮಾತನಾಡಿ, ಕಿತ್ತೂರು ಸಂಸ್ಥಾನವು ಭಾರತದಲ್ಲಿ ಮೊಟ್ಟ ಮೊದಲು ಸ್ವಾತಂತ್ರ್ಯದ ಕಹಳೆ ಮೊಳಗಿಸಿದ್ದು, ಇಲ್ಲಿನ ಮಣ್ಣು ವೀರಾ ಸೇನಾನಿಗಳ ರಕ್ತದಿಂದ ಪಾವಿತ್ರ್ಯತೆಗೊಂಡಿದೆ ಎಂದರು.

ಇತಿಹಾಸದ ಧೃವತಾರೆ ಕಿತ್ತೂರು ರಾಣಿ ಚೆನ್ನಮ್ಮ ಅವರು ತನ್ನ ಸಾಮ್ರಾಜ್ಯದ ರಕ್ಷಣೆಗಾಗಿ ಸಮರ್ಪಣಾ ಮನೋಭಾವ ಹೊಂದಿದ್ದರು. ಅವರ ದೇಶಪ್ರೇಮ, ಆತ್ಮವಿಶ್ವಾಸ ಕುರಿತು ಮುಂದಿನ ಪೀಳಿಗೆಗೆ ಮಾರ್ಗದರ್ಶನ ನೀಡುವ ಕೆಲಸವಾಗಬೇಕು ಎಂದು ಕಿತ್ತೂರು ರಾಣಿ ಚೆನ್ನಮ್ಮ ಅವರ ಜೀವನ ಸ್ವಾರಸ್ಯವನ್ನು ವಿವರಿಸಿದರು.

ಇದೇ ವೇಳೆ ಕಿತ್ತೂರು ರಾಣಿ ಚೆನ್ನಮ್ಮ ಅವರ ಭಾವಚಿತ್ರಕ್ಕೆ ಗಣ್ಯರೆಲ್ಲರೂ ಪುಷ್ಪನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಕಂಪ್ಲಿಯ ಶೈಲಾ ದೇವರಮನೆ ಅವರು ದೇಶಭಕ್ತಿ ಗೀತೆಗಳು ಪ್ರಸ್ತುತ ಪಡಿಸಿದರು.

ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಮೆರವಣಿಗೆಯು ಕಿತ್ತೂರು ರಾಣಿ ಚೆನ್ನಮ್ಮ ಭಾವಚಿತ್ರದೊಂದಿಗೆ ವಿವಿಧ ಕಲಾ ವಾದ್ಯಗಳ ಮೂಲಕ ನಗರದ ಎಚ್.ಆರ್.ಗವಿಯಪ್ಪ ವೃತ್ತದಿಂದ ಆರಂಭಗೊಂಡು ಬಸವೇಶ್ವರ ಪುತ್ಥಳಿ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರಲ್ಲಿನ ವೇದಿಕೆ ಕಾರ್ಯಕ್ರಮದವರೆಗೆ ತಲುಪಿ ಸಂಪನ್ನಗೊಂಡಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಿ.ನಾಗರಾಜ, ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಅಧ್ಯಕ್ಷ ಜಿ.ನೀಲಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ಉಪನಿರ್ದೇಶಕ ಡಿ.ಕೊಟ್ರಪ್ಪ, ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಎನ್.ಎಂ ರಾಜೇಶ್ವರಿ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ನಾಗವೇಣಿ, ಬ್ರೂಸ್‌ಪೇಟೆ ಪೊಲೀಸ್ ಠಾಣೆಯ ಪಿಎಸ್‌ಐ ಸಿಂಧೂರು.ಎಂ, ಪಾಲಿಕೆಯ ಸದಸ್ಯ ಸುರೇಖಾ ಮಲ್ಲನಗೌಡ, ಈರಮ್ಮ ಸುರೇಂದ್ರ ಸೇರಿದಂತೆ ಸಮಾಜದ ಮುಖಂಡರು, ಸಾರ್ವಜನಿಕರು ಇತರರಿದ್ದರು.

ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮವನ್ನು ಮೇಯರ್ ನಂದೀಶ್ ಉದ್ಘಾಟಿಸಿದರು.

ಶ್ರೇಷ್ಠ ವೀರನಾರಿ ಕಿತ್ತೂರು ರಾಣಿ ಚೆನ್ನಮ್ಮ ಅವರು ತಮ್ಮ ಏಳನೇ ವಯಸ್ಸಿನಲ್ಲಿಯೇ ಕುದುರೆ ಸವಾರಿ, ಬಿಲ್ಲು ವರಸೆ, ಕತ್ತಿ ವರಸೆಯಲ್ಲಿ ನಿಪುಣೆ ಹೊಂದಿದ್ದವರು. ಚಿಕ್ಕಂದಿನಿಂದಲೇ ವೀರತ್ವವನ್ನು ಮೈಗೂಡಿಸಿಕೊಂಡಿದ್ದವರು. ಚೆನ್ನಮ್ಮ ಅವರ ಧೈರ್ಯ, ಶೌರ್ಯವೂ ವಿಶ್ವಕ್ಕೆ ಮಾದರಿಯಾಗಿದೆ. ಅವರ ಆದರ್ಶ ತತ್ವ ಪ್ರತಿಯೊಬ್ಬರೂ ಪಾಲಿಸೋಣ.
-ನಂದೀಶ್ ಮೇಯರ್

ಆರೋಗ್ಯ ಸಚಿವರಿಂದ ಕನ್ನಡ ರಥಕ್ಕೆ ಪುಷ್ಪ ನಮನದ ಸ್ವಾಗತ

ಹೊಸಪೇಟೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಆರ್. ಗುಂಡೂರಾವ್ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡ ರಥಯಾತ್ರೆಗೆ ಹೊಸಪೇಟೆ ನಗರದ ವಾಲ್ಮೀಕಿ ವೃತ್ತದಲ್ಲಿ ರಥಕ್ಕೆ ಪುಷ್ಪ ನಮನ ಸಲ್ಲಿಸುವುದರ ಮೂಲಕ ವಿಜಯನಗರ ಜಿಲ್ಲೆಗೆ ಸ್ವಾಗತಿಸಿದರು.

ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಈ ಕನ್ನಡ ರಥವು ನಾಡಿನಾದ್ಯಂತ ಸಂಚರಿಸುತ್ತಿದ್ದು ವಿಜಯನಗರ ಜಿಲ್ಲೆಯ ಹೊಸಪೇಟೆಗೆ ಆಗಮಿಸಿತು.

ರಥಯಾತ್ರೆಯು ಹೊಸಪೇಟೆಗೆ ಆಗಮಿಸುತ್ತಿದ್ದಂತೆ ಶಾಸಕ ಎಚ್.ಆರ್.ಗವಿಯಪ್ಪ, ಡಾ. ಎನ್.ಟಿ.ಶ್ರೀನಿವಾಸ್ ಮತ್ತು ಜಿಲ್ಲಾಧಿಕಾರಿ ದಿವಾಕರ್ ಎಂ.ಎಸ್ ನೇತೃತ್ವದಲ್ಲಿ ನಗರದ ವಿವಿಧ ಕನ್ನಡ ಪರ ಸಂಘಟನೆಗಳ ಪ್ರಮುಖರು ಅದ್ದೂರಿಯಾಗಿ ಸ್ವಾಗತ ಕೋರಿದರು. ಡೊಳ್ಳು ಕುಣಿತ ಮತ್ತು ಕೋಲಾಟ, ಕನ್ನಡಾಂಭೆಯ ವಿವಿಧ ಘೋಷವಾಕ್ಯಗಳನ್ನು ಮೊಳಗಿಸುವ ಮೂಲಕ ಅದ್ದೂರಿಯಾಗಿ ರಥಯಾತ್ರೆಗೆ ಸ್ವಾಗತಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳು ಹೋಬಳಿ ಘಟಕದ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರು ಮತ್ತು ಕನ್ನಡಪರ ಸಂಘಟನೆಗಳ ಪ್ರಮುಖರು ರಥಯಾತ್ರೆ ಮೆರವಣಿಗೆ ಯಶಸ್ವಿಗೊಳಿಸಿದರು.

ಮೆರವಣಿಗೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ.ಕೆ ರಂಗಣ್ಣನವರ, ಹೊಸಪೇಟೆ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕ ಅಧ್ಯಕ್ಷ ಡಾ.ಗುಂಡಿ ಮಾರುತಿ ಸೇರಿದಂತೆ ವಿವಿಧ ಅಧಿಕಾರಿಗಳು ಮತ್ತು ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಹಾಗೂ ಶಾಲಾ ವಿದ್ಯಾರ್ಥಿಗಳು ಇದ್ದರು.

ಭಾರತಕ್ಕೆ ಸಂಸ್ಕೃತಿ ಕೊಟ್ಟ ವಾಲ್ಮೀಕಿ

ಹರಪನಹಳ್ಳಿ: ಮಹರ್ಷಿ ವಾಲ್ಮೀಕಿ ಯವರ ಕೊಡೆಗೆಗಳು ಧಾರ್ಮಿಕ ಕ್ಷೇತ್ರವನ್ನುಮೀರಿ ಭಾರತದ ಕಲೆ, ಸಂಸ್ಕೃತಿ ಮತ್ತು ಸಮಾಜಿಕ ಮೌಲ್ಯಗಳನ್ನು ಆಳವಾಗಿ ಪ್ರಭಾವಿಸುತ್ತವೆ ಭಾರತಕ್ಕೆ ಸಂಸ್ಕೃತಿ ಕೊಟ್ಟ ಏಕಮೇವ ಕವಿ ವಾಲ್ಮೀಕಿ ಮನಕುಲ ಇರುವವರೆಗೂ ವಾಲ್ಮೀಕಿ ಚಿಂತನೆ ಜೀವಂತವಾಗಿರುತ್ತದೆ ಎಂದು ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಚಾರ್ಯ ಸ್ವಾಮಿಜೀ ಹೇಳಿದರು. ತಾಲೂಕಿನ ಹಾರಕನಾಳು ಗ್ರಾಮದ ಕಲಾಮಂದಿರದಲ್ಲಿ ಜರುಗಿದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಜಯಂತಿಗಳು ಪುರಾಣಗಳು ಜನರನ್ನು ಪರಿವರ್ತನೆ ಮಾಡುವ ಮೂಲಕ ಉತ್ತಮ ಸಮಾಜ ನಿರ್ಮಿಸುವ ಕೆಲಸಗಳು ಆಗಬೇಕು. ಮಹರ್ಷಿ ವಾಲ್ಮೀಕಿ ಈ ದೇಶಕ್ಕೆ ನಾಡಿಗೆ ಬಹುಮುಖ್ಯವಾದ ಕೋಡಿಗೆಯನ್ನು ನೀಡಿದ್ದಾರೆ ಜಯಂತಿಗಳ ಆಚರಣೆಯಲ್ಲಿ ಉಪನ್ಯಾಸ ಮಾಡುವುದು ಉತ್ತಮ ಸಂದೇಶವಾಗಿದೆ. ಹಿರೆಹಡಗಲಿಯ ಮಾನಿಹಳ್ಳಿ ಪುರವರ್ಗ ಮಠದ ಶ್ರೀ ಷ.ಬ್ರ ಮಳೆಯೋಗಿಶ್ವರ ಸ್ವಾಮಿಜೀ ಮಾತನಾಡಿ, ಜಗತ್ತಿನಲ್ಲಿ ಒಳ್ಳೆಯವರು ಕೆಟ್ಟವರು ಹುಟ್ಟಿ ಹೋಗಿದ್ದಾರೆ ಸೂರ್ಯ ಚಂದ್ರ ಇರುವವರೆಗೆ ಶಾಶ್ವತವಾದ ಕೆಲಸ ಮಾಡಿ ಹೋಗಿದ್ದಾರೆ. ಕಾರ್ಯಕ್ರಮದಲ್ಲಿ ತಾಲೂಕು ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಕಾರ್ಯದರ್ಶಿ ಜಿಟ್ಟಿನಕಟ್ಟಿ ಎಚ್.ಕೆ. ಮಂಜು ನಾಥ, ಪುರಸಭೆ ಸದಸ್ಯ ಲಾಟಿ ದಾದಪೀರ್, ಮುಖಂಡ ಪ್ರಕಾಶಗೌಡ, ಎಚ್. ಟಿ.ಶಿವಯೋಗಿ,ರಾಜಶೇಖರ್, ಬಿ.ಪಕ್ಕೀರಪ್ಪ,ಕೆ.ಅಶೋಕ, ಚಿಕ್ಕೇರಿ ಬಸಪ್ಪ, ಡಿ.ಪರಸಪ್ಪ, ಕೃಷ್ಣನಾಯ್ಕ, ವೀರನಾಯ್ಕ ಇದ್ದರು.

ಬ್ರಿಟೀಷರ ವಿರುದ್ಧ ಹೋರಾಡಿದ ವೀರ ವನಿತೆ

ಹೂವಿನಹಡಗಲಿ : ಸ್ವಾತಂತ್ರ್ಯ ಪೂರ್ವದಲ್ಲೇ ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಮಹಿಳೆ, ಕಿತ್ತೂರು ರಾಣಿ ಚೆನ್ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿ ಚುಕ್ಕಿಯಾಗಿದ್ದಾಳೆಂದು ಶಾಸಕ ಕೃಷ್ಣನಾಯ್ಕ ಹೇಳಿದರು.

ಪಟ್ಟಣದ ತಾಲೂಕ ಪಂಚಾಯಿತಿ ಸಭಾಂಗಣದಲ್ಲಿ ತಾಲೂಕ ಆಡಳಿತದಿಂದ ಆಯೋಜಿಸಿದ್ದ, ವೀರ ಕಿತ್ತೂರು ರಾಣಿ ಚೆನ್ನಮ್ಮನ ಜಯಂತಿ ವಿಜಯೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಚಿಕ್ಕ ವಯಸ್ಸಿನಲ್ಲೇ ಯುದ್ಧಕ್ಕೆ ಸಿದ್ದರಾಗಲು ಎಲ್ಲ ರೀತಿಯ ವಿದ್ಯೆಗಳನ್ನು ಕಲಿತಿದ್ದ ಚೆನ್ನಮ್ಮ ನಮಗೆಲ್ಲಾ ಸ್ಫೂರ್ತಿ ಸೆಲೆಯಾಗಿದ್ದಾಳೆ. ಅವರ ಹೋರಾಟದ ಆದರ್ಶಮಯ ಬದುಕಿನ ಇತಿಹಾಸವನ್ನು ಅರಿತು, ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಸಮಾಜದ ಮುಖಂಡರ ಒತ್ತಾಸೆಯಂತೆ ಪಟ್ಟಣದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲೇ, ಚೆನ್ನಮ್ಮನ ಪುತ್ಥಳಿಯನ್ನು ನಿರ್ಮಾಣ ಮಾಡುತ್ತೇನೆಂದು ಭರವಸೆ ನೀಡಿದರು. ಶಿಕ್ಷಕ ಎಚ್.ಜಿ.ಪಾಟೀಲ್ ಉಪನ್ಯಾಸ ನೀಡಿದರು. ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ ಮಾತನಾಡಿದರು. ತಾಪಂ ಎಡಿ ಹೇಮಾದ್ರಿ ನಾಯ್ಕ, ಪಂಚಮಸಾಲಿ ಸಮಾಜದ ತಾಲೂಕ ಅಧ್ಯಕ್ಷ ಕೆ.ಎಸ್.ಶಾಂತ ನಗೌಡ, ಪಂಚಮಸಾಲಿ ನೌಕರರ ಸಂಘದ ಅಧ್ಯಕ್ಷ ವಿ.ಬಿ.ಜಗದೀಶ, ವೀರಶೈವ ಮಹಾ ಸಭಾದ ತಾಲೂಕ ಅಧ್ಯಕ್ಷ ಸಿ.ಕೆ.ಎಂ.ಬಸಲಿಂ ಗಸ್ವಾಮಿ, ಕಾರ್ಯದರ್ಶಿ ಮುಂಡ ವಾಡ ಉಮೇಶ ಉಪಸ್ಥಿತರಿದ್ದರು. ಪಟ್ಟಣದಲ್ಲಿ ರುವ ಕಿತ್ತೂರು ರಾಣಿ ಚೆನ್ನಮ್ಮನ ವೃತ್ತದಲ್ಲಿ ಶಾಸಕ ಕೃಷ್ಣನಾಯ್ಕ ಮಾಲಾರ್ಪಣೆ ಮಾಡಿದರು.

ಪಟ್ಟಣದಲ್ಲಿ ನಿರ್ಮಾಣ ಹಂತದಲ್ಲಿರುವ ಪಂಚಮಸಾಲಿ ಸಮುದಾಯ ಭವನಕ್ಕೆ ಬಂದಿದ್ದ, 78 ಲಕ್ಷ ರು.ಗಳನ್ನು ಕೆಆರ್ ಐಡಿಎಲ್ ಇಲಾಖೆ ಅಧಿಕಾರಿಗಳು ಬೇರೆ ಕೆಲಸಕ್ಕೆ ಬಳಕೆ ಮಾಡಿದ್ದರು. ನಾನು ನನ್ನ ಸ್ವಂತ ಹಣದಲ್ಲಿ, ಸಮುದಾಯ ಭವನದ ಸಿಸಿ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಿದ್ದೇವೆ. ಇನ್ನು ಬಾಕಿ ಇರುವ ಕಾಮಗಾರಿ ಬೇಗನೆ ಪೂರ್ಣಗೊಳಿಸಿ ಒಂದು ತಿಂಗಳೊಳಗೆ ಭವನವನ್ನು ಲೋಕಾರ್ಪಣೆ ಮಾಡುತ್ತೇವೆ.
-ಕೃಷ್ಣನಾಯ್ಕ ಶಾಸಕ

ಕಿತ್ತೂರು ರಾಣಿ ಚೆನ್ನಮ್ಮನ ಜಯಂತಿ ಕಾರ್ಯಕ್ರಮಕ್ಕೆ ಶಾಸಕ ಕೃಷ್ಣನಾಯ್ಕ ಚಾಲನೆ ನೀಡಿದರು.

ನಿಷೇಧಿತ ಪಟಾಕಿ ಮಾರಾಟ ಇಲ್ಲ

ಹೊಸಪೇಟೆ: ದೀಪಾವಳಿ ಆರಂಭವಾಗುತ್ತಿದ್ದು ಹಬ್ಬ ಆಚರಣೆಯ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ನಿಷೇಧಿತ ಪಟಾಕಿಗಳ ಉತ್ಪಾದನೆ, ಸಂಗ್ರಹ ಮತ್ತು ಮಾರಾಟವನ್ನು ಸಂಪೂರ್ಣ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಎಂ.ಎಸ್.ದಿವಾಕರ ಆದೇಶದಲ್ಲಿ ತಿಳಿಸಿದ್ದಾರೆ. ದೀಪಾವಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು. ನಿಷೇಧಿತ ಪಟಾಕಿಗಳನ್ನು ದಾಸ್ತಾನು ಮಾಡಿದ್ದಲ್ಲಿ ಗೋದಾಮನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಸಂಬಂ ಧಿತ ವ್ಯಕ್ತಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗು ವುದು. ಪಟಾಕಿಗಳನ್ನು ಬಳಸುವಾಗ ಯಾವುದೇ ಪ್ರಾಣಿ, ಪಕ್ಷಿ, ಮಕ್ಕಳು ಹಾಗೂ ವೃದ್ಧರಿಗೆ ತೊಂದರೆಯಾಗದಂತೆ ರಾತ್ರಿ 8 ಗಂಟೆಯಿಂದ 10 ಗಂಟೆಯವರೆಗೆ ಮಾತ್ರ ಹಸಿರು ಪಟಾಕಿ ಸಿಡಿಸಲು ಅವಕಾಶವಿರುತ್ತದೆ. ಈ ಆದೇಶವನ್ನು ಅನುಷ್ಠಾನಕ್ಕೆ ತರಲು ತಹಸೀಲ್ದಾರರು, ತಾಲೂಕುಗಳಲ್ಲಿ ಜಿಲ್ಲಾ ಅಗ್ನಿ ಶಾಮಕ ಪಡೆ ಅಧಿಕಾರಿ, ಸ್ಥಳೀಯ ಸಂಸ್ಥೆಯ ಅಧಿಕಾರಿಗಳು, ಜಿಲ್ಲಾ ಪರಿಸರ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಆಸಕ್ತ ನಾಗರಿಕರು ಹಾಗೂ ಸ್ಥಳೀಯ ಸರಕಾರೇತರ ಸಂಘ, ಸಂಸ್ಥೆಗಳ ಪ್ರತಿನಿಧಿಗಳ ನ್ನೊಳಗೊಂಡ ಕಾರ್ಯಪಡೆ ರಚಿಸಿ, ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಪಟಾಕಿ ಮಾರಾಟಗಾರರ ಗೋದಾಮುಗಳನ್ನು ಪರಿಶೀ ಲಿಸಲು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಆಸ್ಟ್ರೇಲಿಯಾ ಪ್ರವಾಸ: ಶಮಿ ಫಿಟ್

ಬೆಂಗಳೂರು: ಪಾದದ ಶಸ್ತ್ರಚಿಕಿತ್ಸೆಗೆ ಒಳಗಾಗಿ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಪುನಶ್ಚೇತನ ಶಿಬಿರದಲ್ಲಿರುವ ಭಾರತದ ಪ್ರಧಾನ ವೇಗಿ ಮೊಹಮ್ಮದ್ ಶಮಿ ಸಂಪೂರ್ಣವಾಗಿ ಫಿಟ್ ಆಗಿದ್ದೇನೆ ಎಂದು ಹೇಳಿದ್ದಾರೆ. ಒಂದೆರಡು ದೇಶಿ ಕ್ರಿಕೆಟ್ ಪಂದ್ಯಗಳನ್ನಾಡಿ ಮುಂದಿನ ತಿಂಗಳ ಆಸ್ಟ್ರೇಲಿಯಾ ಪ್ರವಾಸಕ್ಕೆ ಸಜ್ಜಾಗಲಿದ್ದೇನೆ ಎಂದಿದ್ದಾರೆ. ಭಾನುವಾರ ಬೆಂಗಳೂರು ಟೆಸ್ಟ್ ಮುಗಿದ ಬಳಿಕ ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ನೇತೃತ್ವದಲ್ಲಿ ಶುಭಮನ್ ಗಿಲ್ ಸೇರಿ ಕೆಲ ಬ್ಯಾಟರ್‌ಗಳಿಗೆ ಶಮಿ ನೆಟ್‌ನಲ್ಲಿ ಸಂಪೂರ್ಣ ದೈಹಿಕ ಕ್ಷಮತೆಯೊಂದಿಗೆ ಬೌಲಿಂಗ್ ನಡೆಸಿ ಗಮನ ಸೆಳೆದಿದ್ದರು. ಈ ವೇಳೆಯೇ ಶಮಿ ಶೀಘ್ರದಲ್ಲಿ ಭಾರತ ತಂಡ ಸೇರಲಿದ್ದಾರೆ ಎನ್ನಲಾಗಿತ್ತು. ಇದೀಗ ತಮ್ಮ ಪುನರಾಗಮನದ ಬಗ್ಗೆ ಸ್ವತಃ ಶಮಿಯೇ ಉತ್ತರ ನೀಡಿದ್ದಾರೆ. ನಾನು ಬೌಲಿಂಗ್ ನಡೆಸಿದ ರೀತಿಯಿಂದ ನನಗೆ ಸಮಾಧಾನವಾಗಿದೆ. ಇದಕ್ಕೂ ಮುನ್ನ ಅರ್ಧ ರನ್‌ಅಪ್‌ನಿಂದ ಬೌಲಿಂಗ್ ಆರಂಭಿಸುತ್ತಿದ್ದೆ. ಆದರೆ ಈಗ ಎಂದಿನಂತೆ 100 ಪ್ರತಿಶತ ಸಾಮರ್ಥ್ಯದೊಂದಿಗೆ ಬೌಲಿಂಗ್ ನಡೆಸುತ್ತಿದ್ದೇನೆ. ನಾನೀಗ ನೋವಿನಿಂದ 100 ಪ್ರತಿಶತ ಮುಕ್ತನಾಗಿದ್ದೇನೆ. ಯಾವುದೇ ಸಮಸ್ಯೆ ಇಲ್ಲ. ವರ್ಷಾಂತ್ಯದಲ್ಲಿ ನಡೆಯುವ ಆಸ್ಟ್ರೇಲಿಯಾ ಪ್ರವಾಸಕ್ಕೆ ಲಭ್ಯನಾಗುತ್ತೇನೋ ಇಲ್ಲವೋ ಎಂಬುದನ್ನು ಅರಿಯಲು ಎಲ್ಲರೂ ಕುತೂಹಲಗೊಂಡಿದ್ದಾರೆ. ಇದಕ್ಕೆ ಶೀಘ್ರದಲ್ಲೇ ಉತ್ತರ ಸಿಗಲಿದೆ ಎಂದು ಶಮಿ ಹೇಳಿದರು.

ಈ ಸರಣಿಯನ್ನು ಗೆಲ್ಲಲೇಬೇಕಾದ ಒತ್ತಡದಲ್ಲಿರುವ ಭಾರತ | ಈ ಪಂದ್ಯಕ್ಕಾಗಿ ಸ್ಪಿನ್ ಸ್ನೇಹಿ ಪಿಚ್ ನಿರ್ಮಾಣ

ಇಂದಿನಿಂದ ಭಾರತ-ನ್ಯೂಜಿಲೆಂಡ್ ಎರಡನೇ ಟೆಸ್ಟ್ ಪಂದ್ಯ

ಪುಣೆ: ನ್ಯೂಜಿಲ್ಯಾಂಡ್ ವಿರುದ್ಧದ ಮೊದಲ ಪಂದ್ಯದಲ್ಲಿ ಬೌನ್ಸಿ ಪಿಚ್ ನಿರ್ಮಿಸಿ ಸೋಲು ಕಂಡಿದ್ದ ಭಾರತ ಪುಣೆಯಲ್ಲಿ ನಡೆಯುವ 2ನೇ ಪಂದ್ಯದಲ್ಲಿ ಸ್ಪಿನ್ ಸ್ನೇಹಿ ಪಿಚ್‌ನಲ್ಲಿ ಆಡಲಿದೆ ಎಂದು ವರದಿಯಾಗಿದೆ. ಇತ್ತಂಡಗಳ ನಡುವಿನ ಟೆಸ್ಟ್ ಪಂದ್ಯ ಇಂದಿನಿಂದ ಆರಂಭವಾಗಲಿದೆ.

ವರ್ಷಾಂತ್ಯದಲ್ಲಿ ನಡೆಯುವ ಆಸ್ಟ್ರೇಲಿಯಾ ಪ್ರವಾಸಕ್ಕೆ ಪೂರ್ವಭಾವಿಯಾಗಿ ಭಾರತ ತಂಡ ವೇಗದ ಬೌಲಿಂಗ್ ಸ್ನೇಹಿ ಪಿಚ್‌ಗಳಲ್ಲಿ ಆಡಲು ಬಯಸಿತ್ತು. ಬಾಂಗ್ಲಾದೇಶ ವಿರುದ್ಧ ಇದು ಕ್ಲಿಕ್ ಆದರೂ ಕಿವೀಸ್ ವಿರುದ್ಧ ವಿಫಲವಾಯಿತು. ಮೊದಲ ಪಂದ್ಯದ ಸೋಲಿನಿಂದಾಗಿ ಸರಣಿ ಸೋಲಿನ ಭೀತಿಯಲ್ಲಿರುವ ಭಾರತ ಉಳಿದೆರಡು ಪಂದ್ಯಗಳಲ್ಲಿ ಗೆದ್ದು ಸರಣಿಯನ್ನು ವಶಪಡಿಸಿಕೊಳ್ಳುವ ಒತ್ತಡದಲ್ಲಿದೆ. ಇದೇ ಕಾರಣಕ್ಕೆ ಸ್ಪಿನ್ ಪಿಚ್ ಮೊರೆ ಹೋದಂತಿದೆ. ಇದೇ ಕಾರಣಕ್ಕೆ ಪಂದ್ಯಕ್ಕೂ ಮುನ್ನ ಚೆನ್ನೈಯ ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ಅವರನ್ನು ದಿಢೀರ್ ಆಗಿ ತಂಡಕ್ಕೆ ಸೇರ್ಪಡೆಗೊಳಿಸಿದ್ದು.

ಕಪ್ಪು ಮಣ್ಣಿನಿಂದ ತಯಾರಿಸಲಾದ ಪಿಚ್ ಇದಾಗಿರುವ ಕಾರಣ ಪಿಚ್ ನಿಧಾನಗತಿಯಲ್ಲಿ ವರ್ತಿಸುವ ಸಾಧ್ಯತೆ ಇದೆ. ಬೆಂಗಳೂರಿನಲ್ಲಿ ಬೌನ್ಸಿ ಪಿಚ್ ಮಾಡಿದರೂ ಕೂಡ ಮೂವರು ಸ್ಪಿನ್ನರ್‌ಗಳನ್ನು ಆಡಿಸಲಾಗಿತ್ತು. ಇದೇ ಕಾರಣದಿಂದ ಭಾರತ ಎಡವಿತ್ತು. ಆದರೆ ಪುಣೆಯಲ್ಲಿ ಸ್ಪಿನ್ ಟ್ರ್ಯಾಕ್ ಆದ ಕಾರಣ ಮತ್ತೆ ಮೂವರು ಸ್ಪಿನ್ನರ್‌ಗಳು ಕಾಣಿಸಿಕೊಳ್ಳುವುದು ಖಚಿತ.

ಪುಣೆಯಲ್ಲಿ ಭಾರತ ಈವರೆಗೆ ಕೇವಲ 2 ಟೆಸ್ಟ್ ಪಂದ್ಯಗಳನ್ನು ಆಡಿದ್ದು ತಲಾ ಒಂದು ಸೋಲು ಮತ್ತು ಗೆಲುವು ಕಂಡಿದೆ. 2017 ರಲ್ಲಿ ಆಸ್ಟ್ರೇಲಿಯಾ ವಿರುದ್ಧ 333 ರನ್‌ಗಳ ಹೀನಾಯ ಸೋಲನ್ನು ಅನುಭವಿಸಿದ್ದ ಭಾರತ, 2019 ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಇನ್ನಿಂಗ್ಸ್ ಗೆಲುವು ಸಾಧಿಸಿತ್ತು.

ಆಯ್ಕೆ ಗೊಂದಲ: ಅನುಭವಿ ಆರ್.ಅಶ್ವಿನ್ ಮತ್ತು ರವೀಂದ್ರ ಜಡೇಜಾ ಜತೆ ಮೂರನೇ ಸ್ಪಿನ್ನರ್ ಸ್ಥಾನಕ್ಕೆ ಮೂರು ಮಂದಿಯಾದ ಕುಲ್ದೀಪ್, ಅಕ್ಷರ್ ಮತ್ತು ವಾಷಿಂಗ್ಟನ್ ಮಧ್ಯೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಬ್ಯಾಟಿಂಗ್‌ನಲ್ಲಿ ನೆರವಾಗಬಲ್ಲರು ಎಂಬ ಕಾರಣಕ್ಕೆ ವಾಷಿಂಗ್ಟನ್ ಸುಂದರ್ ಅಥವಾ ಅಕ್ಷರ್‌ಗೆ ಸ್ಥಾನ ಸಿಗಬಹುದು. ಕುಲ್ದೀಪ್‌ಗೆ ಬೆಂಗಳೂರು ಟೆಸ್ಟ್‌ನಲ್ಲಿ ಅವಕಾಶ ನೀಡಿದ್ದರೂ ಕೂಡ ನಿರೀಕ್ಷಿತ ಪ್ರದರ್ಶನ ಕಂಡು ಬಂದಿರಲಿಲ್ಲ.

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಜಸ್ಪ್ರೀತ್ ಬುಮ್ರಾ (ಉಪನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಕೆಎಲ್ ರಾಹುಲ್, ಸರ್ಫರಾಜ್ ಖಾನ್, ರಿಷಭ್ ಪಂತ್ (ವಿಕೆಟ್ ಕೀಪರ್), ಧ್ರುವ್ ಜುರೆಲ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಆಕಾಶ್ ದೀಪ್, ವಾಷಿಂಗ್ಟನ್ ಸುಂದರ್.

ನ್ಯೂಜಿಲೆಂಡ್: ಟಾಮ್ ಲ್ಯಾಥಮ್ (ನಾಯಕ), ಟಾಮ್ ಬ್ಲಂಡೆಲ್ (ವಿಕೆಟ್ ಕೀಪರ್), ಡೆವೊನ್ ಕಾನ್ವೆ, ಡೆರಿಲ್ ಮಿಚೆಲ್, ವಿಲ್ ಓರೋರ್ಕ್, ಅಜಾಜ್ ಪಟೇಲ್, ಗ್ಲೆನ್ ಪಿಲಿಪ್ಸ್, ರಚಿನ್ ರವೀಂದ್ರ, ಮಿಚೆಲ್ ಸ್ಯಾಂಟ್ನರ್, ಬೆನ್ ಸೀರ್ಸ್, ಟಿಮ್ ಸೌಥಿ, ವಿಲ್ ಯಂಗ್, ಐಶ್ ಸೋಧಿ, ಮಾರ್ಕ್ ಚಾಪ್ಮನ್.

ರಾಹುಲ್ ಮೇಲೆ ನಿರೀಕ್ಷೆ

ಪುಣೆ: ಬ್ಯಾಟರ್ ಕೆ.ಎಲ್. ರಾಹುಲ್ ಅವರ ಮೇಲೆ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರಿಗೆ ಅಪಾರ ವಿಶ್ವಾಸವಿದೆ. ರಾಹುಲ್ ಅವರಿಗೆ ಇನ್ನೂ ಹೆಚ್ಚು ಅವಕಾಶಗಳನ್ನು ನೀಡುವ ಮನಸ್ಸು ಅವರಿಗೆ ಇದೆ. ಕೌಶಲದ ದೃಷ್ಟಿಯಿಂದ ನೋಡಿದರೆ ಅವರು ಉತ್ತಮವಾಗಿಯೇ ಬ್ಯಾಟಿಂಗ್ ಮಾಡುತ್ತಿದ್ದಾರೆ ಎಂದು ಭಾರತ ತಂಡದ ಸಹಾಯಕ ಕೋಚ್ ರಿಯಾನ್ ಟೆನ್ ಡಾಶಿ ಹೇಳಿದರು.

ಇಂದು ನಡೆಯಲಿರುವ ನ್ಯೂಜಿಲೆಂಡ್ ಎದುರಿನ ಸರಣಿಯ ಎರಡನೇ ಟೆಸ್ಟ್ ಕ್ರಿಕೆಟ್ ಪಂದ್ಯಕ್ಕೆ ಕಣಕ್ಕಿಳಿಯುವ 11 ಮಂದಿಯ ಆಯ್ಕೆಯ ಕುರಿತು ಈಗ ಕುತೂಹಲ ಗರಿಗೆದರಿದೆ. ಏಕೆಂದರೆ ಬೆಂಗಳೂರಿನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ 8 ವಿಕೆಟ್‌ಗಳಿಂದ ಸೋತಿತ್ತು. ಅದರಲ್ಲಿ ಸರ್ಫ್‌ರಾಜ್ ಖಾನ್ ಅವರು ಎರಡನೇ ಇನಿಂಗ್ಸ್‌ನಲ್ಲಿ ಶತಕ ದಾಖಲಿಸಿದ್ದರು. ಆದರೆ ರಾಹುಲ್ ಎರಡೂ ಇನಿಂಗ್ಸ್‌ಗಳಲ್ಲಿ ವೈಫಲ್ಯ ಅನುಭವಿಸಿದ್ದರು.

ಈ ಕುರಿತು ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ರಿಯಾನ್ ಟೆನ್, ಪ್ರಸ್ತುತ ಬಹಳ ತುರುಸಿನ ಸ್ಪರ್ಧಾತ್ಮಕವಾದ ವಾತಾವರಣ ಇದೆ. ಸರ್ಫ್‌ರಾಜ್ ಕಳೆದ ಟೆಸ್ಟ್‌ನಲ್ಲಿ 150 ಮತ್ತು ಇರಾನಿ ಟ್ರೋಫಿಯಲ್ಲಿ (ಅಜೇಯ 222) ದ್ವಿಶತಕ ಗಳಿಸಿದ್ದರು. ರಾಹುಲ್ ಬಗ್ಗೆ ಯಾವುದೇ ತಕರಾರು ಇಲ್ಲ. ಅವರು ಮಾನಸಿಕವಾಗಿ ಬಹಳ ಸಬಲರಾಗಿದ್ದಾರೆ. ಬ್ಯಾಟಿಂಗ್ ಕೂಡ ಉತ್ತಮವಾಗಿ ಮಾಡುತ್ತಿದ್ದಾರೆ. ಆದರೆ ನಾವು ಏಳು ಮಂದಿಯನ್ನು ಆರು ಸ್ಥಾನಗಳಲ್ಲಿ ಹೊಂದಿಸುವ ಸವಾಲು ಇದೆ ಎಂದರು. ಗೌತಮ್ ಅವರು ಕಳೆದ ಮೂರು ತಿಂಗಳುಗಳಿಂದ ತಂಡದಲ್ಲಿದ್ದಾರೆ. ಎಲ್ಲವನ್ನೂ ಸೂಕ್ಷ್ಮವಾಗಿ ಅರಿತುಕೊಂಡಿದ್ದಾರೆ. ತಂಡದ ಹಿತದೃಷ್ಟಿಯಿಂದ ನಿರ್ಧಾರ ತೆಗೆದುಕೊಳ್ಳುತ್ತೇವೆ. ಆದರೆ ನಮ್ಮ ಎಲ್ಲ ಆಟಗಾರರನ್ನೂ ಬೆಂಬಲಿಸುತ್ತೇವೆ ಎಂದರು.

ರಿಷಬ್, ಗಿಲ್ ಆಡುವ ನಿರೀಕ್ಷೆ

ಬೆಂಗಳೂರು ಟೆಸ್ಟ್‌ನಲ್ಲಿ ಮೊಣಕಾಲಿಗೆ ಚೆಂಡು ಬಡಿದು ಗಾಯಗೊಂಡಿದ್ದ ರಿಷಭ್ ಪಂತ್ ವಿಕೆಟ್‌ಕೀಪಿಂಗ್ ಮಾಡಿರಲಿಲ್ಲ. ಶುಭಮನ್ ಗಿಲ್ ಅವರು ಕತ್ತು ನೋವಿನ ಕಾರಣ ಪಂದ್ಯದಲ್ಲಿ ಆಡಿರಲಿಲ್ಲ. ಈ ಕುರಿತು ಪ್ರತಿಕ್ರಿಯಿಸಿದ ಅವರು, ರಿಷಭ್ ಚೆನ್ನಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಈ ಕುರಿತು ರೋಹಿತ್ (ಶರ್ಮಾ) ಈಚೆಗೆ ಹೇಳಿದ್ದಾರೆ ಅನಿಸುತ್ತದೆ. ಮೊಣಕಾಲಿನ ಚಲನೆಯಲ್ಲಿ ಸ್ವಲ್ಪಮಟ್ಟಿಗೆ ಅವರು ನೋವು ಅನುಭವಿಸುತ್ತಿದ್ದರು. ಅವರ ಚೇತರಿಕೆಗಾಗಿ ಹಾರೈಸುತ್ತಿದ್ದೇವೆ. ಗಿಲ್ ಕೂಡ ಫಿಟ್ ಆಗಿದ್ದಾರೆ. ಅವರು ಟೆಸ್ಟ್ ಪಂದ್ಯದ ಆಯ್ಕೆಗೆ ಲಭ್ಯರಾಗಲಿದ್ದಾರೆ ಎಂದರು.

ಟೆಸ್ಟ್ ರ‍್ಯಾಂಕಿಂಗ್: 6 ಸ್ಥಾನಕ್ಕೆ ಪಂತ್

ದುಬೈ: ಭಾರತದ ವಿಕೆಟ್ ಕೀಪರ್ ಬ್ಯಾಟರ್ ರಿಷಭ್ ಪಂತ್ ಅವರು, ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ಪಟ್ಟಿಯಲ್ಲಿ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಅವರನ್ನು ಹಿಂದೆ ಹಾಕಿ ಆರನೇ ಸ್ಥಾನಕ್ಕೆ ಏರಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಮೊದಲ ಕ್ರಿಕೆಟ್ ಟೆಸ್ಟ್‌ನಲ್ಲಿ ಪಂತ್, ಎರಡನೇ ಇನಿಂಗ್ಸ್‌ನಲ್ಲಿ ಆಕ್ರಮಣಕಾರಿ ಆಟವಾಡಿ 99 ರನ್ ಹೊಡೆದಿದ್ದರು. ಅವರು ಮೂರು ಸ್ಥಾನ ಬಡ್ತಿ ಪಡೆದಿದ್ದಾರೆ. ಆ ಪಂದ್ಯದಲ್ಲಿ 70 ರನ್ ಗಳಿಸಿದ್ದ ವಿರಾಟ್ ಕೊಹ್ಲಿ ಒಂದು ಸ್ಥಾನ ಹಿಂಬಡ್ತಿ ಪಡೆದು ಎಂಟನೇ ಸ್ಥಾನದಲ್ಲಿದ್ದಾರೆ. ನಾಲ್ಕನೇ ಸ್ಥಾನ ಕಾಯ್ದುಕೊಂಡಿರುವ ಯಶಸ್ವಿ ಜೈಸ್ವಾಲ್ ಭಾರತದ ಆಟಗಾರರಲ್ಲಿ ಮುಂಚೂಣಿಯಲ್ಲಿದ್ದಾರೆ.

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಶ್ರೀಲಂಕಾದ 15ನೇ ದಿಮುತ್ ಕರುಣಾರತ್ನೆ ಜೊತೆ 15ನೇ ಸ್ಥಾನ ಹಂಚಿಕೊಂಡಿದ್ದಾರೆ.

ಇಂಗ್ಲೆಂಡ್‌ನ ಪ್ರಮುಖ ಬ್ಯಾಟರ್ ಜೊ ರೂಟ್ ಅವರು ಅಗ್ರಸ್ಥಾನದಲ್ಲಿದ್ದಾರೆ. ನ್ಯೂಜಿಲೆಂಡ್‌ನ ರಚಿನ್ ರವೀಂದ್ರ 36 ಸ್ಥಾನ ಮೇಲೇರಿ 18ನೇ ಸ್ಥಾನದಲ್ಲಿ ನೆಲಸಿದ್ದಾರೆ.

ನ್ಯೂಜಿಲೆಂಡ್ ತಂಡದ ವೇಗದ ಬೌಲರ್ ಮ್ಯಾಟ್ ಹೆನ್ರಿ ಕ್ರಮಾಂಕದಲ್ಲಿ ಜೀವನ ಶ್ರೇಷ್ಠ ಸಾಧನೆ ತೋರಿದ್ದು, ಎರಡು ಸ್ಥಾನ ಬಡ್ತಿಯೊಡನೆ 9ನೇ ಸ್ಥಾನಕ್ಕೇರಿದ್ದಾರೆ. ಬೆಂಗಳೂರು ಟೆಸ್ಟ್‌ನಲ್ಲಿ ಅವರು 8 ವಿಕೆಟ್ ಕಬಳಿಸಿದ್ದರು. ಆ ಪಂದ್ಯದಲ್ಲಿ 7 ವಿಕೆಟ್ ಪಡೆದಿದ್ದ ವಿಲ್ ಓ ರೂರ್ಕಿ 39ನೇ ಸ್ಥಾನಕ್ಕೇರಿದ್ದಾರೆ.

ಟೆಸ್ಟ್ ಬೌಲರ್‌ಗಳ ಪಟ್ಟಿಯಲ್ಲಿ ಬೂಮ್ರಾ ಅಗ್ರಸ್ಥಾನದಲ್ಲಿದ್ದಾರೆ. ಭಾರತದ ಸ್ಪಿನ್ ತಾರೆ ರವಿಚಂದ್ರನ್ ಅಶ್ವಿನ್ ಎರಡನೇ ಸ್ಥಾನದಲ್ಲಿದ್ದಾರೆ. ರವೀಂದ್ರ ಜಡೇಜ ಏಳನೇ ಕಾಪಾಡಿಕೊಂಡಿದ್ದಾರೆ.

ಹಾಕಿ: ಜರ್ಮನಿ ವಿರುದ್ಧ ಭಾರತಕ್ಕೆ 2 ಗೋಲುಗಳ ಸೋಲು

ದೆಹಲಿ: ಕೆಲವು ಉತ್ತಮ ಗೋಲು ಅವಕಾಶಗಳನ್ನು ವ್ಯರ್ಥಪಡಿಸಿಕೊಂಡ ಭಾರತ ತಂಡ, ಎರಡು ಟೆಸ್ಟ್‌ಗಳ ಹಾಕಿ ಸರಣಿಯ ಮೊದಲ ಪಂದ್ಯದಲ್ಲಿ ಬುಧವಾರ ಜರ್ಮನಿ ಎದುರು 0–2 ಗೋಲುಗಳಿಂದ ಪರಾಜಯ ಅನುಭವಿಸಿತು.

ಪ್ಯಾರಿಸ್ ಒಲಿಂಪಿಕ್ಸ್ ಬೆಳ್ಳಿ ವಿಜೇತ ಜರ್ಮನಿ, ಈ ಸರಣಿಗೆ ಯುವ ತಂಡವನ್ನು ಕಣಕ್ಕಿಳಿಸಿತ್ತು. ಅವರು ಮೊದಲ ಪಂದ್ಯದಲ್ಲೇ ನಿರೀಕ್ಷೆಗೆ ತಕ್ಕಂತೆ ಆಡಿದರು. ಹೆನ್ರಿಕ್ ಮೆರ್ಟ್ಜೆನ್ಸ್ (4ನೇ ನಿಮಿಷ) ಮತ್ತು ನಾಯಕ ಲ್ಯುಕಾಸ್ ಮಿಡ್ಫೆರ್ಡ (30ನೇ ನಿಮಿಷ) ಗೋಲುಗಳನ್ನು ಗಳಿಸಿದರು.

ರಾಷ್ಟ್ರ ರಾಜಧಾನಿಯಲ್ಲಿ ಹತ್ತು ವರ್ಷಗಳ ನಂತರ ಅಂತಾರಾಷ್ಟ್ರೀಯ ಪಂದ್ಯ ನಡೆಯುತ್ತಿರುವ ಕಾರಣ ಕುತೂಹಲ ಮೂಡಿತ್ತು. ಮೇಜರ್ ಧ್ಯಾನ್ ಚಂದ್ ಕ್ರೀಡಾಂಗಣದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪ್ರೇಕ್ಷಕರೂ ಸೇರಿದ್ದರು. ಆದರೆ ಕೊನೆಯಲ್ಲಿ ನಿರಾಶೆ ಅನುಭವಿಸಬೇಕಾಯಿತು. ಕಳೆದ ಒಂದು ವರ್ಷದಿಂದ ಉತ್ತಮ ಲಯದಲ್ಲಿದ್ದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಕೂಡ ಸ್ವಲ್ಪ ಮಸುಕಾದಂತೆ ಕಂಡರು.

ಸರಣಿಯ ಎರಡನೇ ಪಂದ್ಯ ಗುರುವಾರ ನಡೆಯಲಿದೆ: ಪ್ಯಾರಿಸ್ ಒಲಿಂಪಿಕ್ಸ್ ನಂತರ ಇದೇ ಮೊದಲ ಬಾರಿ ಉಭಯ ತಂಡಗಳು ಮುಖಾಮುಖಿಯಾಗಿದ್ದವು. ಮೊದಲ ಕ್ವಾರ್ಟರ್‌ನಲ್ಲಿ ಜರ್ಮನಿಯ ಆಟಗಾರರೇ ಚೆಂಡಿನ ಮೇಲೆ ಹಿಡಿತ ಸಾಧಿಸಿದರು. ಭಾರತದ ದುರ್ಬಲ ರಕ್ಷಣೆಯ ಲಾಭ ಪಡೆದ ಜರ್ಮನಿಯ ತಂಡ ನಾಲ್ಕನೇ ನಿಮಿಷ ಮೆರ್ಟ್ಜೆನ್ಸ್ ಮೂಲಕ ಮುನ್ನಡೆಯನ್ನೂ ಪಡೆಯಿತು.

ಭಾರತ ಆಟಗಾರರು ಕೆಲವು ಬಾರಿ ಎದುರಾಳಿ ಆವರಣದತ್ತ ಮುನ್ನುಗ್ಗಿದರೂ, ಜರ್ಮನಿಯ ರಕ್ಷಣಾ ವಿಭಾಗಕ್ಕೆ ಗಂಭೀರ ಸವಾಲು ಎದುರಾಗಲಿಲ್ಲ. ಒಂಬತ್ತನೇ ನಿಮಿಷ ಮೊದಲ ಪೆನಾಲ್ಟಿ ಕಾರ್ನರ್ ಗಳಿಸಿದರು, ಹರ್ಮನ್‌ಪ್ರೀತ್ ಗೈರಿನಲ್ಲಿ ಆ ಅವಕಾಶದ ಲಾಭ ದೊರೆಯಲಿಲ್ಲ. ಹರ್ಮನ್ ಬದಲು ಆಗ ಬೇರೆ ಆಟಗಾರ ಅಂಕಣದಲ್ಲಿದ್ದರು.

ಎರಡನೇ ಕ್ವಾರ್ಟರ್‌ನಲ್ಲಿ ಭಾರತ ಹೋರಾಟ ತೋರಿ, ಚೆಂಡಿನ ಮೇಲೆ ನಿಯಂತ್ರಣ ಹೊಂದಿತು. 22ನೇ ನಿಮಿಷ ಎರಡನೇ ಪೆನಾಲ್ಟಿ ಕಾರ್ನರ್‌ನಲ್ಲಿ ಸಂಜಯ್ ಅವರ ಯತ್ನ ಗೋಲುಪೆಟ್ಟಿಗೆಯ ಬದಿಯಿಂದ ಆಚೆಹೋಯಿತು. ಮೂರು ನಿಮಿಷಗಳ ನಂತರ ಮತ್ತೊಂದು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಅಮಿತ್ ರೋಹಿದಾಸ್ ಅವರ ಫ್ಲಿಕ್ ಯತ್ನವನ್ನು ಜರ್ಮನಿ ಆಟಗಾರರು ತಡೆದರು. ಮತ್ತೆ ಒಂದರ ಹಿಂದೆ ಒಂದರಂತೆ ದೊರೆತ ಅವಕಾಶಗಳಲ್ಲಿ ಹರ್ಮನ್‌ಪ್ರೀತ್ ಎಡವಿದರು.

ವಿರಾಮಕ್ಕೆ ಕೇವಲ 14 ಸೆಕೆಂಡುಗಳಿದ್ದಾಗ ಜರ್ಮನಿ ತನಗೆ ದೊರೆತ ಎರಡನೇ ಪೆನಾಲ್ಟಿ ಕಾರ್ನರ್‌ನಲ್ಲಿ ನಾಯಕ ವಿಂಡ್‌ಫೆಡರ್ ಅವರ ಹೊಡೆತವು, ಭಾರತ ಗೋಲಿ ಕೃಷನ್ ಬಹಾದೂರ್ ಪಾಠಕ್ ಅವರನ್ನು ವಂಚಿಸಿ ಗುರಿತಲುಪಿತು.

ಉತ್ತರಾರ್ಧದಲ್ಲಿ (41ನೇ ನಿಮಿಷ) ಭಾರತಕ್ಕೆ ದೊರೆತ ಏಳನೇ ಪೆನಾಲ್ಟಿ ಕಾರ್ನರ್ ಮತ್ತು ನಂತರ ಇನ್ನೊಂದು ಅವಕಾಶದಲ್ಲಿ ಹರ್ಮನ್‌ಪ್ರೀತ್ ಯಶ ಪಡೆಯಲಿಲ್ಲ.

ಕೊನೆಯ ಐದು ನಿಮಿಷಗಳಲ್ಲಿ ಭಾರತ ಗೋಲ್ ಕೀಪರ್ ಹಿಂಪಡೆದು, ಹೆಚ್ಚುವರಿ ಆಟಗಾರನನ್ನು ಬಳಸಿತು. ಆದರೆ ಅದರಿಂದ ಪರಿಣಾಮವೇನೂ ಆಗಲಿಲ್ಲ. ಜರ್ಮನಿ ಸರಣಿಯಲ್ಲಿ 1–0 ಮುನ್ನಡೆ ಪಡೆಯಿತು.

ಪುಷ್ಪ ತಂಡ ಸೇರಿದ ಶ್ರದ್ಧಾ

ಪುಷ್ಪರಾಜ್ ಡಿಸೆಂಬರ್‌ನಲ್ಲಿ ಸದ್ದು ಮಾಡಲು ಸಿದ್ಧವಾಗಿದ್ದಾನೆ. ಎಲ್ಲರೂ ಪುಷ್ಪರಾಜನನ್ನು ಕಣ್ತುಂಬಿಕೊಳ್ಳಲು ಕಾತರರಾಗಿದ್ದಾರೆ. ಫಸ್ಟ್ ಲುಕ್ ಪೋಸ್ಟರ್ ಹಾಗೂ ಹಾಡಿನಲ್ಲಿಯೇ ಪುಷ್ಪ 2 ಕ್ರೇಜ್ ಹೆಚ್ಚಿಸಿದೆ. ಈ ಚಿತ್ರದ ಮೊಲದ ಭಾಗದಲ್ಲಿ ಐಟಂ ಸಾಂಗ್ ಸಿನಿಪ್ರಿಯರ ಮನಗೆದ್ದಿತ್ತು. ನಟಿ ಸಮಂತಾ ಹುಂ ಅಂತಿಯಾ ಮಾಮ.. ಅಂತ ಹಾಡಿನಲ್ಲಿ ಸೊಂಟ ಬಳುಕಿಸಿದ್ದರು. ಆ ಹಾಡು ನೋಡಿ ಎಲ್ಲರೂ ಬಹುಪರಾಕ್ ಎಂದಿದ್ದರು. ಅಂತೆಯೇ ಈಗ ಈ ಚಿತ್ರದಲ್ಲಿಯೂ ಐಟಂ ಸಾಂಗ್ ಇದೆಯೇ, ಮತ್ತೆ ಸಮಂತಾ ಹಾಡಿನಲ್ಲಿ ಹೆಜ್ಜೆ ಹಾಕುತ್ತಾರಾ ಎಂದು ಸಿನಿಪ್ರಿಯರು ಕಾಯುತ್ತಿದ್ದಾರೆ. ಪುಷ್ಪ 2ನಲ್ಲಿಯೂ ಐಟಂ ಸಾಂಗ್ ಇರುವುದು ಖಚಿತವಾಗಿದೆ. ಈ ಹಾಡಿನಲ್ಲಿ ನಟಿ ಸಮಂತಾ ಕಾಣಿಸಿಕೊಳ್ಳುತ್ತಿಲ್ಲ, ಬದಲಾಗಿ ಬಾಲಿವುಡ್ ನಟಿ ಶ್ರದ್ಧಾ ಕಪೂರ್ ಹೆಜ್ಜೆ ಹಾಕಲಿದ್ದಾರೆ.

ಹೌದು, ಸ್ತ್ರೀ ಚಿತ್ರದಲ್ಲಿ ನಟಿಸಿ ಮನಗೆದ್ದ ಶ್ರದ್ಧಾ ಸ್ತ್ರೀ ಬಳಿಕ ಬಾಲಿವುಡ್‌ನ ಬೇಡಿಕೆಯ ನಟಿಯಾಗಿದ್ದಾರೆ. ಹಾಗಾಗಿ ಅವರನ್ನು ಈ ಸ್ಪೆಷಲ್ ಹಾಡಿಗಾಗಿ ಕರೆತರಲಾಗಿದೆ. ಇದು ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ಪುಷ್ಪ 2 ಚಿತ್ರದ ಐಟಂ ಸಾಂಗ್ ಇನ್ನೂ ಅದ್ಭುತವಾಗಿ ಮೂಡಿಬರಲಿದೆಯಂತೆ. ಬರೋಬ್ಬರಿ ಹತ್ತು ಕೋಟಿ ವೆಚ್ಚದಲ್ಲಿ ಈ ಹಾಡು ಸಿದ್ಧವಾಗುತ್ತಿದೆ. ಸುಕುಮಾರ್ ನಿರ್ದೇಶನದ ಪುಷ್ಪ 2 ಮೈತ್ರಿ ಮೂವೀ ಮೇಕರ್ಸ್‌ನಲ್ಲಿ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ.

ವಜ್ರಮುನಿ ಪಾತ್ರಕ್ಕೆ ಕೋಮಲ್ ತಕ್ಕ ಆಯ್ಕೆ

ಶಿವಣ್ಣ ಅಭಿನಯದ ಮಾಸ್ ಲೀಡರ್‌ನಂತಹ ಮಾಸ್ ಸಿನಿಮಾ ನಿರ್ದೇಶಿಸಿ ಸೈ ಎನಿಸಿಕೊಂಡ ಸಹನ ಮೂರ್ತಿ ಈಗ ನಿರ್ಮಾಪಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಯಲಾ ಕುನ್ನಿ ಚಿತ್ರದ ನಿರ್ಮಾಣಕ್ಕೆ ಸಹ ನಿರ್ಮಾಪಕರಾಗಿ ಬಂಡವಾಳ ಹೂಡಿದ್ದಾರೆ. ತಮ್ಮ ಚಿತ್ರದ ಕುರಿತಂತೆ ಸಹನ ಮೂರ್ತಿ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ : ನಿರ್ದೇಶನದಿಂದ ನಿರ್ಮಾಣದತ್ತ ಒಲವು ತಾಳಿದ್ದು ?

ಸಹನ ಮೂರ್ತಿ: ನಾನು ಈ ಹಿಂದೆ ನಿರ್ದೇಶನ ಮಾಡಿದ್ದ ಮಾಸ್ ಲೀಡರ್ ಸಿನಿಮಾದಲ್ಲಿ ಪ್ರದೀಪ್ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಅವರ ಕೆಲಸ ನೋಡಿ ನನಗೂ ಮೆಚ್ಚುಗೆಯಾಗಿತ್ತು. ಅವರ ಮೊನಚಾದ ಸಂಭಾಷಣೆ ಮನಸಿಗೆ ಹಿಡಿಸಿತ್ತು. ಆ ಬಳಿಕ ಪ್ರದೀಪ್ ಒಂದು ಕಥೆ ಬರೆದು ನನಗೆ ಹೇಳಿದರು, ಆ ಕಥೆ ಕೇಳಿ ತುಂಬಾ ಇಂಪ್ರೆಸ್ ಆಯಿತು. ನಿರ್ಮಾಣ ಮಾಡಲು ನಿರ್ಧರಿಸಿದೆ. ಕೋಮಲ್ ಅವರು ಕೂಡ ಕಥೆ ಕೇಳಿ ನಟಿಸಲು ಸಮ್ಮತಿಸಿದರು ಜತೆಗೆ ನಿರ್ಮಾಣಕ್ಕೆ ಬಂಡವಾಳ ಹೂಡಲು ಒಪ್ಪಿದರು.

ವಿ.ಸಿ : ಯಲಾ ಕುನ್ನಿ ವಜ್ರಮುನಿ ಅವರ ಯಶೋಗಾಥೆಯೆ ?

ಸಹನ: ಇದು ವಜ್ರಮುನಿ ಅವರ ನಟನೆಯನ್ನು ಮೆಲುಕು ಹಾಕುವ, ಆಸ್ವಾಧಿಸುವ ಒಂದು ಪ್ರಯತ್ನ. ನಾನು ವಜ್ರಮುನಿ ಅವರ ಅಭಿಮಾನಿ. ಅವರ ಎಲ್ಲಾ ಸಿನಿಮಾಗಳನ್ನು ನೋಡಿದ್ದೇನೆ. ಅವರ ಪಾತ್ರವನ್ನು ಮತ್ತೆ ತೆರೆಯಲ್ಲಿ ತರಬೇಕು ಎಂದುಕೊಂಡಾಗ ನಿರ್ದೇಶಕರು ಈ ಕಥೆ ಹೇಳಿದರು. ಅಂದುಕೊಂಡಂತೆ ಸಿನಿಮಾವು ಸಿದ್ಧವಾಯಿತು.

> **ಯಲಾ ಕುನ್ನಿ ಅಪ್ಪಟ ಕನ್ನಡದ ಸಿನಿಮಾ, ಕನ್ನಡಿಗರಿಗಾಗಿಯೇ ನಿರ್ಮಿಸಿದ ಸದಭಿರುಚಿಯ ಚಿತ್ರ. ಕನ್ನಡ ಚಿತ್ರರಂಗದಲ್ಲಿ ಖಳನಟನಾಗಿ, ದಂತಕಥೆಯಾಗಿರುವ ನಟರ ಕುರಿತಂತೆ ಸಿನಿಮಾ ನಿರ್ಮಿಸಿರುವುದು ಖುಷಿ ಕೊಟ್ಟಿದೆ.**

ವಿ.ಸಿ : ಈ ಕಥೆಗೆ ಕೋಮಲ್ ಅವರನ್ನೇ ಆಯ್ದುಕೊಳ್ಳಲು ಕಾರಣ ?

ಸಹನ : ನಿರ್ದೇಶಕರು ಚಿತ್ರೀಕರಣಕ್ಕೆ ಹೋಗುವ ಮುನ್ನ ಲುಕ್ ಟೆಸ್ಟ್ ಮಾಡಿದರು. ಕೋಮಲ್ ಅವರು ಹೊಸ ಗೆಟಪ್‌ನಲ್ಲಿ ಥೇಟ್ ವಜ್ರಮುನಿ ಅವರಂತೆಯೇ ಕಂಗೊಳಿಸಿದರು. ಈ ಪಾತ್ರಕ್ಕೆ ಕೋಮಲ್ ಅವರೇ ಸರಿ ಎಂದು ನಿರ್ಧರಿಸಿದರು. ಕೋಮಲ್ ಅವರು ಈ ಪಾತ್ರವನ್ನು ಅದ್ಭುತವಾಗಿ ನಿರ್ವಹಿಸಿದ್ದಾರೆ. ಉಳಿದಂತೆ ಹಾಸ್ಯ ನಟರ ದಂಡೇ ಈ ಚಿತ್ರದಲ್ಲಿದೆ.

ವಿ.ಸಿ : ನಿಮ್ಮ ಮುಂದಿನ ನಿರ್ದೇಶನದ ಸಿನಿಮಾ?

ಸಹನ : ಮುಂದಿನ ಸಿನಿಮಾ ಡಿಸೆಂಬರ್‌ನಲ್ಲಿ ಸೆಟ್ಟೇರಲಿದ್ದು, ಹೊಸಬರ ತಂಡವೇ ಚಿತ್ರದಲ್ಲಿರಲಿದೆ. ಎಲ್ಲರಿಗೂ ಹಿಡಿಸುವ ಒಳ್ಳೆಯ ಕಂಟೆಂಟ್ ಸಿನಿಮಾದ ಲ್ಲಿರಲಿದ್ದು, ಅದಕ್ಕೆ ಪೂರಕ ವಾದ ಕಾರ್ಯ ಗಳು ನಡೆಯುತ್ತಿವೆ.

ಹಾರರ್ ಕಥೆಯಲ್ಲಿ ಪ್ರಭಾಸ್

ಟಾಲಿವುಡ್‌ನ ಸ್ಟಾರ್ ನಟ ಪ್ರಭಾಸ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಸದ್ಯ ಪ್ರಭಾಸ್ ದಿ ರಾಜಾ ಸಾಬ್ ಚಿತ್ರದಲ್ಲಿ ನಟಿಸುತ್ತಿದ್ದು, ರಾಜಾ ಸಾಬ್ ಚಿತ್ರತಂಡ ಹೊಸ ಮೋಷನ್ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಪ್ರಭಾಸ್ ಹುಟ್ಟುಹಬ್ಬಕ್ಕೆ ಶುಭಕೋರಿದೆ. ಈಗ ಬಿಡುಗಡೆಯಾಗಿರುವ ಪೋಸ್ಟರ್‌ನಲ್ಲಿ ಪ್ರಭಾಸ್ ಹೊಸ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ವೈಭವೋಪೇತ ಬಂಗಲೆಯಲ್ಲಿ ಸಿಗರ್ ಹಿಡಿದು ಕುಳಿತ ಪ್ರಭಾಸ್ ಗಮನಸೆಳೆಯತ್ತಾರೆ. ಈ ಹಿಂದೆ ರಿಲೀಸ್ ಆದ ಪೋಸ್ಟರ್‌ನಲ್ಲಿ ಪ್ರಭಾಸ್ ರೊಮ್ಯಾಂಟಿಕ್ ಅವತಾರದಲ್ಲಿ ಕಂಗೊಳಿಸಿದ್ದರು.



ಹಾಗಾಗಿ ರಾಜಾಸಾಬ್ ಅಪರೂಪದ ಪ್ರೇಮಕಥೆಯ ಸಿನಿಮಾ ಎನ್ನಲಾಗುತ್ತಿತ್ತು. ಸದ್ಯ ಬಿಡುಗಡೆಯಾಗಿರುವ ಪೋಸ್ಟರ್ ನೋಡಿದರೆ ಇಲ್ಲಿ ಹಾರರ್ ಸ್ಟೋರಿಯೂ ಬೆರೆತಿದೆ ಎಂಬುದು ಸ್ಪಷ್ಟವಾಗಿದೆ. ಆ್ಯಕ್ಷನ್ ಫ್ಯಾಂಟಸಿ, ಲವ್ ಸ್ಟೋರಿಯ ಸಿನಿಮಾದಲ್ಲಿ ನಟಿಸಿ ಮನಗೆದ್ದಿದ್ದ ಪ್ರಭಾಸ್ ಇದೇ ಮೊದಲ ಬಾರಿಗೆ ಹಾರರ್ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಮಾರುತಿ ನಿರ್ದೇಶನದ ಈ ಚಿತ್ರವನ್ನು ಟಿ.ಜಿ.ವಿಶ್ವನಾಥ್ ಪ್ರಸಾದ್ ನಿರ್ಮಿಸಿದ್ದಾರೆ. ಪ್ರಭಾಸ್‌ಗೆ ಜತೆಯಾಗಿ ನಿಧಿ ಅಗರವಾಲ್, ಮಾಳವಿಕಾ ಮೋಹನ್ ನಟಿಸಿದ್ದಾರೆ. ಕಲ್ಕಿ, ಸಲಾರ್ ಗೆಲುವಿನ ಖುಷಿಯಲ್ಲಿರುವ ಪ್ರಭಾಸ್, ರಾಜಾ ಸಾಬ್ ಮೂಲಕ ಮತ್ತೊಂದು ಹಿಟ್ ಸಿನಿಮಾ ನೀಡಲಿದ್ದಾರೆ ಎಂಬ ನಿರೀಕ್ಷೆಯೂ ಇದೆ. ದಿ ರಾಜಾ ಸಾಬ್ ಚಿತ್ರದ ಚಿತ್ರೀಕರಣ ಭರದಿಂದ ಸಾಗಿದ್ದು ಮುಂದಿನ ವರ್ಷದ ಏಪ್ರಿಲ್‌ನಲ್ಲಿ ತೆರೆಗೆ ಬರಲಿದೆ.

ರಾವಣನಾಗಲಿದ್ದಾರೆ ರಾಕಿಬಾಯಿ

ಕೆಜಿಎಫ್ ಚಿತ್ರದಿಂದ ಭರ್ಜರಿ ಯಶಸ್ಸು ಪಡೆದ ನಟ ಯಶ್ ಪ್ಯಾನ್ ಇಂಡಿಯಾ ಸ್ಟಾರ್ ಆಗಿ ಹೊರಹೊಮ್ಮಿದ್ದಾರೆ. ಯಶ್‌ಗೆ ಭಾರತೀಯ ಚಿತ್ರರಂಗದಲ್ಲಿ ಬಲು ಬೇಡಿಕೆ ಇದೆ. ಸದ್ಯ ಟಾಕ್ಸಿಕ್ ಚಿತ್ರದಲ್ಲಿ ಬ್ಯುಸಿಯಾಗಿರುವ ಯಶ್ ಈ ಸಿನಿಮಾದ ಬಳಿಕ ಬಾಲಿವುಡ್ ಅಂಗಳಕ್ಕೂ ಕಾಲಿಡಲಿದ್ದಾರೆ. ಹಿಂದಿಯಲ್ಲಿ ಹೈಬಜೆಟ್‌ನಲ್ಲಿ ಸೆಟ್ಟೇರಲಿರುವ ರಾಮಾಯಣ ಚಿತ್ರದಲ್ಲಿ ರಾಕಿಬಾಯಿ ರಾವಣನ ಅವತಾರದಲ್ಲಿ ಮಿಂಚಲಿದ್ದಾರೆ. ಈ ಬಗ್ಗೆ ಸ್ವತಃ ಯಶ್ ಸ್ಪಷ್ಟಪಡಿಸಿದ್ದಾರೆ. ಈ ಚಿತ್ರಕ್ಕಾಗಿ ಯಶ್ ಭರ್ಜರಿಯಾಗಿ ಸಿದ್ಧತೆ ನಡೆಸಲಿದ್ದು, ಲಂಕೇಶ್ವರನಾಗಿ ಅಬ್ಬರಿಸಲಿದ್ದಾರೆ. ಮಾತ್ರವಲ್ಲ ರಾಮಾಯಣ ಚಿತ್ರದ ನಿರ್ಮಾಣದಲ್ಲಿ ಯಶ್ ಕೂಡ ಕೈ ಜೋಡಿಸುತ್ತಿದ್ದಾರೆ. ನಿತೀಶ್ ತಿವಾರಿ ನಿರ್ದೇಶನದಲ್ಲಿ ಮೂಡಿಬರಲಿರುವ ರಾಮಾಯಣ ಪ್ಯಾನ್ ವರ್ಲ್ಡ್ ಸಿನಿಮಾವಾಗಿ ನಿರ್ಮಾಣವಾಗಲಿದೆ. ಈ ಚಿತ್ರ ಎರಡು ಭಾಗದಲ್ಲಿ ಚಿತ್ರ ಮೂಡಿಬರಲಿದ್ದು, ಎರಡನೇ ಭಾಗದಲ್ಲಿ ರಾಮ–ರಾವಣರ ಯುದ್ಧವನ್ನು ರೋಚಕವಾಗಿ ಕಟ್ಟಿಕೊಡಲಾಗುತ್ತದೆ. ರಾಮನಾಗಿ ರಣಬೀರ್ ಕಪೂರ್ ನಟಿಸುತ್ತಿದ್ದು, ಸೀತೆಯಾಗಿ ಸಾಯಿಪಲ್ಲವಿ ಅಭಿನಯಿಸಲಿದ್ದಾರೆ. ಮುಂದಿನ ವರ್ಷದ ಆರಂಭದಲ್ಲಿ ಚಿತ್ರ ಸೆಟ್ಟೇರುವ ಸಾಧ್ಯತೆ ಇದೆ.